

ಕಸ್ತೂ
೧-೯೫
ಏಪ್ರಿಲ್ ೧೯



ನಮ್ಮ ಡಾಕ್ಟರರು ಹೇಳಿದ್ದಾರೆ: "3 ತಿಂಗಳಾದ ಮೇಲೆ ಹಾಲು ಒಂದೇ ಸಾಕಾಗುವುದಿಲ್ಲ. ಅವನಿಗೆ ಫೆರೆಕ್ಸ್ ಕೊಡಬೇಕು."

ಡಾಕ್ಟರರು 'ಫೆರೆಕ್ಸ್ ಮೊದಲು' ಎನ್ನುವುದೇಕೆ?
ಮಗುವಿಗೆ 3 ತಿಂಗಳು ತುಂಬಿದ ಮೇಲೆ, ಕೇವಲ ಹಾಲು ಎಲ್ಲ ಪೌಷ್ಟಿಕಾಂಶಗಳನ್ನು ಕೊಡಲಾರದು. ಮಗುವಿಗೆ ಬೇಕಾಗುವುದು ಅವನ ಕೋಮಲ ಜೀರ್ಣಶಕ್ತಿಗೆ ತಕ್ಕುದಾದ ವಿಶಿಷ್ಟವಾಗಿ ಸಿದ್ಧಪಡಿಸಿದ ಘನ ಆಹಾರ—ಫೆರೆಕ್ಸ್‌ನಂತಹದು

ಮಗುವಿನ ಅಗತ್ಯಗಳನ್ನು ಫೆರೆಕ್ಸ್ ಇನ್ನೂ ಅದೇತು ಪೂರೈಸುವುದು?
ಫೆರೆಕ್ಸ್ ಮಗುವಿನ ಮಿದುಳು ಮತ್ತು ದೇಹದ ಬೆಳವಣಿಗೆಗೆ ಬೇಕಾಗುವ, ಸೂಕ್ತವಾಗಿ ಸಂತುಲಿತಗೊಳಿಸಿದ, ಸುಲಭವಾಗಿ ಜೀರ್ಣಿಸಬರುವ ಪ್ರೋಟೀನ್‌ಗಳನ್ನು ಪೂರೈಸುತ್ತದೆ. ಫೆರೆಕ್ಸ್‌ನಲ್ಲಿ ಮಗುವಿನ ಬೇಡಿಕೆಗಳನ್ನು ಸಂಪೂರ್ಣವಾಗಿ ಪೂರೈಸುವಷ್ಟು ಮತ್ತು ಅವನ ರಕ್ತವನ್ನು ಆರೋಗ್ಯಪೂರ್ಣವನ್ನಾಗಿ ಇಡಲು ಸಾಕಷ್ಟು ಕಬ್ಬಿಣ ಸತ್ವವು ಇರುತ್ತದೆ. ಅವನು ಗಟ್ಟಿಯಾದ ಎಲುಬು ಮತ್ತು ಹಲ್ಲುಗಳನ್ನು ಪಡೆಯಲು ಫೆರೆಕ್ಸ್‌ನಲ್ಲಿ ಸಾಕಷ್ಟು ಕ್ಯಾಲ್ಸಿಯಮ್, ಫಾಸ್ಫರಸ್ ಮತ್ತು ವಿಟಮಿನ್ D2 ಇವೆ.

3 ತಿಂಗಳ ಮೇಲೆ ಏಕೆ?
ಮಗು ತನ್ನ ಆಹಾರವನ್ನು ಸೂಕ್ತವಾಗಿ ಜೀರ್ಣಿಸಿಕೊಳ್ಳಲು ಅಗಿದು ತಿನ್ನುವ ರೂಢಿ ಮಾಡಿಕೊಳ್ಳಬೇಕು. ಇಲ್ಲದಿದ್ದರೆ, ನುಂಗುವುದರಿಂದ ಅವನ ಬೆಳವಣಿಗೆಗೆ ಅಡ್ಡಿಯಾಗುವುದು ಮತ್ತು ಹೊಟ್ಟೆನೋಯುವುದು.

ಮಗುವಿಗೆ 'ದೊಡ್ಡವರ' ಆಹಾರಗಳನ್ನು ಎಂದಿನಿಂದ ಕೊಡಬೇಕು?
ಅವನು ತನ್ನ ಮೊದಲಿನ ಹೆಜ್ಜೆಗಳನ್ನು ಇಡಲಾರಂಭಿಸಿದಂದಿನಿಂದ ಹಣ್ಣು, ತರಕಾರಿ, ಬೇಳೆ, ತತ್ತಿಗಳನ್ನು ಕೊಡಿರಿ. ಆದರೆ ಮಗುವಿಗೆ 3 ವರ್ಷ ತುಂಬುವವರೆಗೂ ಫೆರೆಕ್ಸ್‌ನ ಅಗತ್ಯವಿದೆ. ಆದ್ದರಿಂದ, ಅವನ ಎಲ್ಲ ಉಣಿಸು-ತಿನಿಸುಗಳಲ್ಲಿ ಅದನ್ನು ಬೆರೆಸಿರಿ.



ಮಗುವಿನ ಪ್ರಥಮ ಘನ ಆಹಾರ–ಶೀಘ್ರ, ಸರ್ವಾಂಗೀಣ ಬೆಳವಣಿಗೆಗಾಗಿ.

ಲಿಂಟಾಸ್.GF.58-1510 KN

ಕಸ್ತೂರಿ

ವ್ಯವಸ್ಥಾಪಕ ಸಂಪಾದಕ :
ಎಚ್. ಆರ್. ಬಸವರಾಜ್

✡

ಪ್ರಧಾನ ಸಂಪಾದಕ :
ಖಾದ್ರಿ ಶಾಮಣ್ಣ

✡

ಸಂಪಾದಕ :
ಪ. ಸು. ಭಟ್ಟ

✡

ಕಲೆ :
ಕೆ. ಬಿ. ಕುಲಕರ್ಣಿ

✡

ಮುಖಪುಟ :
ಬರುತಲಿದೆ ವಸಂತ
ಎಂ. ವೈ. ಘೋರ್ಪಡೆ

✡

ಚಂದಾ ದರ:

೩ ವರ್ಷ (ಅಂಚೆ ಸೇರಿ)		ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧ ವರ್ಷ	,,	ರೂ. ೭-೫೦

ಬೆಳಕಿಂಡಿ

ಪೃಥ್ವಿಯನ್ನುಳಿದು ಇತರ ಗ್ರಹಗಳಲ್ಲಿ ಜೀವಿಸುವುದು ಅಸಾಧ್ಯವೆನ್ನುವುದು ಸರಿಯೆ. ಆದರೆ ಭೂಮಿಯ ಮೇಲಾದರೂ ಈ ಕಾರ್ಯ ಸರಳವಾಗಿದೆಯೇ? -ಜ್ಯಾಂಕಿಂಗ್

ಮಗುವಿನ ಹಾಗೆ ನಿದ್ರಿಸುತ್ತೇನೆಂದು ಹೇಳುವ ಜನಗಳಿಗೆ ಸಾಮಾನ್ಯವಾಗಿ ಮಗುವಿರುವುದೇ ಇಲ್ಲ. -ಲಿಯೋ ಬರ್ಕ್

ಯಾವ ಸಮಸ್ಯೆಯೂ ಅಷ್ಟು ಘನವಾದುದಲ್ಲ. ಸಮಸ್ಯೆಯಿಂದ ವಿಮುಖರಾಗುವ ಬದಲು ಅದನ್ನೆದುರಿಸಲು ಸಿದ್ಧರಾಗಿ; ಆ ಸಮಸ್ಯೆ ತಂತಾನೇ ಕುಗ್ಗಿ ಹೋಗುತ್ತದೆ. ಮುಳ್ಳಿನ ಪೊದೆಯನ್ನು ಅಳುಕುತ್ತಾ ಹಿಡಿದರೆ ಮುಳ್ಳು ಚುಚ್ಚುವುದು ಸ್ವಾಭಾವಿಕವೆ. ಆದರೆ ಅದನ್ನು ಗಟ್ಟಿಯಾಗಿ ಹಿಡಿದೆಳೆಯಿರಿ; ಮುಳ್ಳುಗಳ ಗೊಂಚಲವೇ ನಿಮ್ಮ ಕೈಯಲ್ಲಿ ಕಿತ್ತು ಬರುತ್ತದೆ. -ವಿಲಿಯಂ ಹಾಸ್ಲಿ

ಅಂಕಿಸಂಖ್ಯೆಗಳು ಮಿನಿಸ್ಕರ್ಟ್ ಇದ್ದ ಹಾಗೆ. ಅವು ಹೊರಗೆ ತೋರ್ಪಡಿಸಿದ್ದು ಸೂಚನಾತ್ಮಕವಾಗಿರಬಹುದು; ಆದರೆ ಅವು ಮುಚ್ಚಿಟ್ಟಿದ್ದು ಮಾತ್ರ ತುಂಬಾ ಮಹತ್ವದ್ದು. -ಆರೋನ್ ಲ್ಯಾವೆನ್‌ಸ್ಟೈನ್

✡

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು, ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಜಾತಿಪದ್ಧತಿ

ಮಾರ್ಚ್ ತಿಂಗಳ 'ಕಸ್ತೂರಿ'ಯ 'ಸಹ ಚಿಂತನ'ದಲ್ಲಿ ಪ್ರಕಟವಾದ ಬಿ. ಲಕ್ಕಣ್ಣನವರ ಪತ್ರವನ್ನೋದಿದಾಗ ಅಳಬೇಕೋ ನಗಬೇಕೋ ತಿಳಿಯಲಿಲ್ಲ.

"ಬ್ರಾಹ್ಮಣರೇ ವರ್ಣ, ಜಾತಿ, ಪದ್ಧತಿಗಳಿಗೆಲ್ಲಾ ಕಾರಣ ಎಂದು ಅವರನ್ನು ತೆಗಳುವುದು ತಪ್ಪು" ಎಂದು ಚಿದಂಬರಾನಂದರು ಫೆಬ್ರುವರಿ ಸಂಚಿಕೆಯ ತಮ್ಮ ಲೇಖನದಲ್ಲಿ ಸೂಚಿಸಿರುವುದು ಅವಾಸ್ತವವೆಂದು ಲಕ್ಕಣ್ಣನವರ ಆರೋಪ; ಆದರೆ ಅದಕ್ಕೆ ತಕ್ಕುದಾದ ಸಮರ್ಥನೆ ನೀಡದಿರುವುದು ಶೋಚನೀಯ.

ಹಿಂದಿನ ಕಾಲದ ಪರಿಸ್ಥಿತಿ ಹೇಗಿದ್ದರೂ, ಪ್ರಕೃತ ವಿದ್ಯಾವಂತ ಬ್ರಾಹ್ಮಣರಾರೂ "ನಾನು ಬ್ರಾಹ್ಮಣ; ಮೇಲ್ವರ್ಗದವ; ನನ್ನನ್ನು ಬ್ರಾಹ್ಮಣೇತರರೆಲ್ಲರೂ ದೇವರೆಂದೇ ಪೂಜಿಸಬೇಕು; ಪೌರೋಹಿತ್ಯಕ್ಕೆ ನಮ್ಮನ್ನೇ ಕರೆಯಬೇಕು. ಜಗತ್ತಿನಲ್ಲಿ ಬ್ರಾಹ್ಮಣರಿಗಿಂತ ಶ್ರೇಷ್ಠರಾದವರು– ಶ್ರೀಮಂತಿಕೆ, ಬುದ್ಧಿವಂತಿಕೆ, ರೂಪಲಾವಣ್ಯ ಇತ್ಯಾದಿಗಳಲ್ಲಿ– ಯಾರೂ ಇಲ್ಲ" ಎಂಬುದಾಗಿ ಡಂಗುರ ಸಾರುತ್ತಿರುವುದನ್ನು ಯಾರೂ ಕಂಡಿರಲಾರರು ಎಂಬುದು ಅಪ್ಪಟ ಸತ್ಯ. ಬ್ರಾಹ್ಮಣರಿಗೆ ಜಾತಿಯ ದೃಷ್ಟಿಯಲ್ಲಿ ಯಾವ ಮೇಲ್ಮೆಯೂ ಬೇಕಿಲ್ಲ; ದೇವಸ್ಥಾನದಲ್ಲಿ ಪೂಜೆ ಮಾಡಲು ಅವರೇ ಆಗಬೇಕೆಂದಿಲ್ಲ; ಅವರನ್ನು ಹಿಂದುಳಿದ ವರ್ಗಕ್ಕೆ ಸೇರಿಸಿದರೂ ಅಡ್ಡಿಯಿಲ್ಲ. ಬೇಕಾದರೆ 'ಭೂಸುರರು' ಎಂಬ ಪದವನ್ನೇ ನಿಘಂಟಿನಿಂದ ಅಳಿಸಿ ಹಾಕುವುದಿದ್ದರೂ ಯಾರೂ ಆಕ್ಷೇಪಿಸುವುದೂ ಇಲ್ಲ. ಇದು ಬ್ರಾಹ್ಮಣರಾಗಿ ಜನಿಸಿ ಇಂದು ಅವಹೇಳನಕ್ಕೂ ಅಪಹಾಸ್ಯಕ್ಕೂ ಗುರಿಯಾಗುತ್ತಿರುವ ಹೆಚ್ಚಿನವರ ಅಭಿಮತ.

"ಬ್ರಾಹ್ಮಣರು ತಮ್ಮ ಬುದ್ಧಿವಂತಿಕೆಯ ಚಾಕಚಕ್ಯತೆಯಿಂದ ವಿದ್ಯೆಯನ್ನು ಹಲವಾರು ಶತಮಾನಗಳಿಂದ ತಮ್ಮ ಸ್ವತ್ತಾಗಿರಿಸಿಕೊಂಡು ಅದು ಇತರರಿಗೆ ಸಿಗದಂತೆ ಮಾಡುತ್ತಾರೆ" ಎನ್ನುವ ಲಕ್ಕಣ್ಣನವರ ಮತ್ತೊಂದು ಆರೋಪ ತೀರಾ ಹಾಸ್ಯಾಸ್ಪದ. ವಿದ್ಯೆ ಯಾರ ಸೊತ್ತೂ ಅಲ್ಲ. 'ಶ್ರದ್ಧಾವಾನ್ ಲಭತೇ ಜ್ಞಾನಂ' ಎಂಬಂತೆ ವಿದ್ಯೆಯನ್ನು ಶ್ರದ್ಧಾಪೂರ್ವಕ ಪರಮ ಆಸಕ್ತಿಯಿಂದ ಯಾರು ಅದರ ಉಪಾಸನೆ ಮಾಡುವರೋ ಅವರ ಸೊತ್ತಾಗಿದೆ ವಿನಾ ಅದು ಹಣ ಕೊಟ್ಟು ಪಡೆಕೊಳ್ಳುವಂಥದಲ್ಲ. ವಿದ್ಯೆಯು ಇತರರಿಗೆ ದಕ್ಕದಂತೆ ಮಾಡಲು ಬ್ರಾಹ್ಮಣರು ಕೈಗೊಂಡ ಅಥವಾ ಕೈಗೊಳ್ಳುತ್ತಿರುವ ಉಪಾಯಗಳಾವವು ಎಂಬುದನ್ನು ಶ್ರೀಯುತರು ಕೊಂಚ ವಿವರಿಸಿದರೆ ಅದಕ್ಕೆ ತಕ್ಕ ಕಾನೂನು ಕ್ರಮಗಳನ್ನಾದರೂ ಕೈಗೊಳ್ಳಬಹುದಿತ್ತು. ಹೇಗಿದ್ದರೂ ಲಕ್ಕಣ್ಣನವರ ಇಂತಹ ಆರೋಪಗಳು ಪೂರ್ವಾಗ್ರಹಪೀಡಿತವೆನ್ನದೆ ವಿಧಿಯಿಲ್ಲ.

ನಿಜವಾಗಿಯೂ ಜಾತಿಯ ಭೂತವನ್ನು ಬಡಿದೆಬ್ಬಿಸುತ್ತಿರುವುದು ಸರಕಾರವೇ. ಸುಲಭದಲ್ಲಿ ಮತ ಗಳಿಸಿ, ತಮ್ಮ ಅಧಿಕಾರದಾಹವನ್ನು ಅಡಗಿಸುವ ಸಲುವಾಗಿ ಜಾತೀಯ ಭಾವನೆಗಳನ್ನು ಕೆರಳಿಸುವುದರಲ್ಲಿ ರಾಜಕಾರಣಿಗಳಷ್ಟು ಅಗ್ರಗಣ್ಯರು ಯಾರೂ ಇಲ್ಲ. ವಾಸ್ತವದ ಸಂಗತಿ ಎಂದರೆ ಬ್ರಾಹ್ಮಣರಷ್ಟು ಕಡೆಗಣಿಸಲ್ಪಟ್ಟ ವರ್ಗ ಬೇರಾವುದೂ ಇಲ್ಲ. ಹಿಂದುಳಿದ ವರ್ಗ(ಆರ್ಥಿಕವಾಗಿ ಅಲ್ಲ, ಜಾತಿಯ ದೃಷ್ಟಿಯಲ್ಲಿ)ದವರಿಗಾಗಿ ಮೀಸಲಾಗಿರುವ ಯಾವುದೇ ಆರ್ಥಿಕ ನೆರವು ಪಡೆಯಲೂ ಬ್ರಾಹ್ಮಣರು ಅರ್ಹರಲ್ಲ (ಆ ಬ್ರಾಹ್ಮಣ ಭಿಕ್ಷೆ ಬೇಡುವವನಾದರೂ ಸರಿ), ಎಂತಹ ಹಾಸ್ಯಾಸ್ಪದ ವಿಚಾರ! ಹಿಂದುಳಿದ ವರ್ಗ ಯಾವುದು, ಮುಂದುವರಿದ ವರ್ಗ ಯಾವುದೆಂದು ಅವರವರ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳಿಂದ ನಿರ್ಣಯಿಸಲ್ಪಡಬೇಕೇ ವಿನಾ ಜಾತಿಯಿಂದಲ್ಲ ಎಂಬುದನ್ನು ನಮ್ಮ ಸರಕಾರ ಮನಗಾಣಲಿ. ಆಗಲೇ ಅದು ನಿಜವಾದ ಜಾತ್ಯತೀತ ರಾಷ್ಟ್ರವೆನಿಸಿ ಜಾತಿಮತ ಭೇದಗಳಿಂದುದ್ಭವಿಸುವ ದ್ವೇಷ, ಅಸೂಯೆ ಹಾಗೂ ತನ್ಮೂಲಕ ಸಂಭವಿಸುವ ರಕ್ತಕ್ರಾಂತಿಗಳನ್ನು ದೂರಮಾಡಿ ಪ್ರಗತಿಪಥದಲ್ಲಿ ಮುನ್ನಡೆಯಲು ಸಾಧ್ಯ.

ಪೆರ್ಲ –ಸಿ. ಎಚ್. ಗೋಪಾಲಕೃಷ್ಣ ಭಟ್ಟ

ಜಾತ್ಯತೀತತೆ ಬರೀ ಘೋಷಣೆಯಾಗುಳಿದು ಜಾತೀಯತೆಯು ಪೂರ ಕಳಚಿ ಹೊಸ ರೂಪ ಪಡೆಯುತ್ತಿರುವ ಈ ದಿನಗಳಲ್ಲಿ 'ಕಸ್ತೂರಿ' ಪ್ರಕಟಿಸಿದ ಜಾತಿ ಪದ್ಧತಿಯ ಮೇಲಿನ ಲೇಖನಗಳ ಸಾಲು ತುಂಬ ರೆಲೆವೆಂಟಾಗಿದೆ. ಇಂಥ ವಿಚಾರಮಂಥನ ಜಾತಿ ಪದ್ಧತಿಯ ಬಗೆಗಿನ ಮೌಢ್ಯ ಹರಿಸಲು ಬಹಳ ಸಹಾಯಕಾರಿ. ಟಿ. ಎಸ್. ಸಂಜೀವರಾಯರು ಹಾಗೂ ಪಾಟೀಲರು ಒಂದು ಜನಾಂಗದ ಪರ ಹಾಗೂ ವಿರೋಧವಾಗಿ ಸೀಮಿತ ವಾದ ಮಾಡಲು ಪ್ರಯತ್ನಪಟ್ಟರೆ ಪಾವೆಂ ಹಾಗೂ ಚಿದಂಬರಾನಂದರು ಜಾತಿಪದ್ಧತಿಯನ್ನು ಐತಿಹಾಸಿಕ ಪ್ರಜ್ಞೆಯಿಂದ ಹಾಗೂ ವೈಜ್ಞಾನಿಕ ದೃಷ್ಟಿಯಿಂದ ವಿಶ್ಲೇಷಿಸಿದ್ದಾರೆ. ಮೊದಲಿನಿಬ್ಬರ ಲೇಖನಗಳಲ್ಲಿ ಕಂಡುಬರುವ ಅಂಶವೆಂದರೆ ತಮ್ಮದೇ ಆದ ನಂಬಿಕೆಯ ಕಡೆಗೆ ರಾಷನಲೈಸ್ ಮಾಡುತ್ತ ಹೋಗುವ ಪೂರ್ವಾಗ್ರಹಪೀಡಿತವಾದ ವೈಖರಿ. ಆದರೆ ಪಾವೆಂ ಮತ್ತು ಚಿದಂಬರಾನಂದರ ಲೇಖನಗಳಲ್ಲಿ ಸಮಸ್ಯೆಯನ್ನು ಮುಕ್ತ ಮನಸ್ಸಿನಿಂದ ನೋಡುವ ಪ್ರಾಮಾಣಿಕ ಪ್ರಯತ್ನವಿದೆ. ಪಾವೆಂರವರ ಲೇಖನಗಳಲ್ಲಿ, ಜಗತ್ತಿನ ಧರ್ಮಗಳ ಸೃಷ್ಟಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಕ್ರೈಸ್ತ–ಇಸ್ಲಾಂ ಧರ್ಮಗಳಂತೆ 'ಏಕಜಾತೀಯ ಸಮಾಜ' ರಚನೆ ಮಾಡಲು ಭಾರತೀಯ ಧರ್ಮಗಳು ಹೇಗೆ ಸೋತವು ಎಂಬುದನ್ನು ತೋರಿಸುವ ಪ್ರಯತ್ನವಿದೆ. 'ಬ್ರಾಹ್ಮಣ್ಯ'ದ ಅತಿರೇಕಗಳನ್ನು ಎತ್ತಿ ಖಂಡಿಸುವ ಹಾಗೂ ನಮ್ಮಲ್ಲಿನ ಜಾತೀಯ ವಾತಾವರಣಕ್ಕೆ ಆಗಿನ ಕಾಲದ ಸಾಮಾಜಿಕ ರಾಜಕೀಯ ವಾತಾವರಣವೇ ಕಾರಣ ಎಂದು ತೋರಿಸುವ ಕಾಳಜಿ ಇದೆ. ಚಿದಂಬರಾನಂದರು ಜಾತಿಪದ್ಧತಿಯ ಮೂಲ ಕ್ಕಿಳಿದು ಅದು ಬೆಳೆದುಬಂದುದರ ಅವಶ್ಯಕತೆ ಕುರಿತು ಶೋಧನೆ ನಡೆಸಿದ್ದಾರೆ. ಜಾತಿಪದ್ಧತಿ ಶೋಷಣೆಗಿಂತ ಹೆಚ್ಚಾಗಿ ಅನುಕೂಲಕ್ಕಾಗಿ ಮೂಲಭೂತವಾಗಿ ರೂಪುಗೊಂಡು ಯಂತ್ರಯುಗದ ನಂತರ ಹೇಗೆ ಅಧ್ವಾನವಾಗುತ್ತ ಬಂತೆಂಬುದನ್ನು ವಿಶ್ಲೇಷಿಸಿದ್ದಾರೆ. ಇದರಿಂದ ನಮ್ಮಲ್ಲಿಷ್ಟೊ ಜನರು ತಮ್ಮ ತಪ್ಪು ತಿಳುವಳಿಕೆಯನ್ನು ತಾವೇ ಗ್ರಹಿಸಿಕೊಳ್ಳುವ ಸಾಧ್ಯತೆ ಇದೆ. ಮೊದಲಿಂದಲೂ ಶುದ್ಧ ವಿಚಾರ ಪರಂಪರೆಯನ್ನು ಬೆಳೆಸಿಕೊಂಡು ಬಂದು ಸಮಸ್ಯೆಗಳ ಚಿಂತನೆಗೆ ತೊಡಗುವ 'ಕಸ್ತೂರಿ'ಗೆ ಧನ್ಯವಾದಗಳು.

ಮೇಗರವಳ್ಳಿ —ಫಾಲ್ಗುಣ

ಶಂಬಾ ಅವರ ಬೆಳಕು

ಚಿದಂಬರಾನಂದರು ಶಂಬಾ ಅವರ ಮೇಲೆ ನಾನು ಬರೆದ ಲೇಖನದ ಬಗ್ಗೆ ಎತ್ತಿದ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುವ ಕೆಲಸ ನಾನು ಮಾಡುವುದಿಲ್ಲ. ಆದರೆ ಶಂಬಾ ಅವರಿಂದ ನಾನು ಬೆಳಕು ಕಂಡೆ ಎನ್ನುವ ಅವರ ವ್ಯಂಗ್ಯಕ್ಕಷ್ಟೇ ನಾನು ಉತ್ತರಿಸುತ್ತೇನೆ. ಶಂಬಾ ಅವರ ಈಚೆಗಿನ ಸಂಶೋಧನಾತ್ಮಕ ಬರೆಹಗಳ ಸಾರವನ್ನು ನನಗೆ ತಿಳಿದಂತೆ ನಾನು ವಿವರಿಸಿದೇನೇ ಹೊರತು ಅವರ ಶಿಷ್ಯತ್ವ ಅಥವಾ ಕೈಂಕರ್ಯವನ್ನು ನಾನು ಕೈಕೊಂಡಿಲ್ಲ. ಯಾರ ಗುರುವಾಗಲಿ, ಶಿಷ್ಯನಾಗಲಿ ಆಗದಿರುವುದೇ ನನ್ನ ಸ್ವಭಾವ ಮತ್ತು ಕಷ್ಟ ಕೂಡ. ಬುದ್ಧ ಹೇಳಿದ ಹಾಗೆ ಮನುಷ್ಯ ತನಗೆ ತಾನೇ ಬೆಳಕು ಹಚ್ಚಿಕೊಳ್ಳಬಲ್ಲನೆಂದು ನಾನು ಮನಗಂಡಿದ್ದೇನೆ. ನನಗೂ ಅವರಿಗೂ ಇರುವ ಅಂತರವನ್ನೂ ನಾನು ಲೇಖನದಲ್ಲಿ ಸ್ಪಷ್ಟಪಡಿಸಿದ್ದೇನೆ. ಇಷ್ಟೂ ಮೀರಿ ಚಿದಂಬರಾನಂದರು ಬಯಸಿದರೆ ನಾನು ಬೆಳಕನ್ನೋ ಕತ್ತಲನ್ನೋ ಕಂಡಿದ್ದೇನೆಂದು ಭಾವಿಸುವುದಕ್ಕೆ ಸ್ವತಂತ್ರರಾಗಿದ್ದಾರೆ.

—ಪಾ. ವೆಂ. ಆಚಾರ

ಅರಿಕೆ: ಕಳೆದ ಫೆಬ್ರುವರಿ ಸಂಚಿಕೆಯಲ್ಲಿ ಬಂದ 'ಹೃದಯರೋಗವೋ ಮನೋವೇದನೆಯೋ?' ಲೇಖನ ಬರೆದವರು ಡಾ. ಕೆ. ಎಂ. ಧ್ರುವಕುಮಾರ. 'ಕೆ.' ಇರಬೇಕಾದಲ್ಲಿ 'ಜೆ.' ಬಿದ್ದಿತ್ತು. ಈ ಮುದ್ರಣ ದೋಷಕ್ಕಾಗಿ ವಿಷಾದಿಸುತ್ತೇವೆ. ಸಂ.]

ಕಸ್ತೂರಿ

ಸಂಚಿಕೆ : ೪ ಕಸ್ತೂರಿ, ಏಪ್ರಿಲ್ ೧೯೭೪ ವರ್ಷ : ೨೨

ಇದು ಭೂತ

ಖಾ. ಶಾ.

"ಕೋಮುವಾದಿಗಳನ್ನು ಸ್ವಲ್ಪ ಕೆರೆದು ನೋಡಿ ; ಸಾಮಾಜಿಕ ಪ್ರತಿಗಾಮಿಗಳನ್ನು ಕಾಣುತ್ತೀರಿ"— ಎಂದು ಹೇಳಿದರು ಜವಾಹರಲಾಲ್ ನೆಹರು. ಈ ಮಾತು ಬ್ರಿಟಿಷರ ಕಾಲಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಇಂದಿಗೂ ಅದು ಸಲ್ಲುತ್ತದೆ. ಈ ಜಾತಿಯ ಭೂತಕ್ಕೆ ಒಂದೊಂದು ಚುನಾವಣೆಯೂ ಮತ್ತಷ್ಟು ಜೀವದಾನ ಮಾಡಿದೆ. ಜಾತಿಯ ಆಧಾರದ ಮೇಲೆ ಹುರಿಯಾಳುಗಳ ಆಯ್ಕೆ. ಜಾತಿಯ ಜನರಿಂದಲೇ ಮತದ ಬೇಡಿಕೆ. ಜಾತಿಯವರಿಗೇ ಮತದ ಬೆಂಬಲ. ಕೊನೆಗೆ ಗೆದ್ದು ಸರಕಾರ ರಚಿಸಿದ ಮೇಲೂ ಜಾತಿವಾರು ಮಂತ್ರಿಪದದ ಹಂಚಿಕೆ. ತಮ್ಮ ಜಾತಿಯವರಿಗೆ ಸಿಕ್ಕರೆ ಸಂತೋಷ, ಸಿಕ್ಕದಿದ್ದರೆ ಆಕ್ರೋಶ.

ರಾಜಾ ರಾಮಮೋಹನರಾಯರಿಂದ ಹಿಡಿದು ಮಹಾತ್ಮಾ ಗಾಂಧೀಜಿಯ ವರೆಗೆ ಜಾತಿಪದ್ಧತಿಯ ಮೇಲೆ ಏಕಪ್ರಕಾರ ಪ್ರಹಾರ ನಡೆಯಿತು. ಸ್ವತಂತ್ರ ಭಾರತದಲ್ಲಿ ಜಾತಿಪದ್ಧತಿ ನಾಶವಾಗಿ ಹೋದೀತೆಂದು ನಾವೆಲ್ಲ ಕನಸು ಕಂಡಿದ್ದೆವು, ಅದು ನನಸಾಗಲಿಲ್ಲ. ಅದರ ಬದಲು ಜಾತಿವಾ-

ದದ ಬೇರು ಆಳವಾಯಿತು. ಎಲ್ಲೆಲ್ಲೂ ಇಂದು ಜಾತಿಯ ಭೂತದ ತಾಂಡವ. ಜಾತಿ ನಾಶವಾಗಬೇಕೆಂದು ಹೇಳುವವರೇ ಇಲ್ಲ.

ಒಂದೊಂದು ಜಾತಿಯವರೂ ಸಮ್ಮೇಳನ ಕರೆಯುತ್ತಾರೆ ಜಾತಿಯ ಆಧಾರದ ಮೇಲೆ ಪ್ರಾತಿನಿಧ್ಯಕ್ಕೆ ತಗಾದೆ ಹೂಡುತ್ತಾರೆ. ಮಂತ್ರಿ ಮಹೋದಯರೂ ಅದರಲ್ಲಿ ಭಾಗವಹಿಸುತ್ತಾರೆ. ಒಂದೊಂದು ಜಾತಿಯವರನ್ನೂ ಪುಸಲಾಯಿಸುತ್ತಾರೆ. ಇದೆಲ್ಲ ರಾಜಕೀಯ ತಂತ್ರ. ಇವರಿಗೆ ನಮ್ಮ ಸಮಾಜ ಆಧುನಿಕಗೊಳ್ಳುವುದು ಬೇಕಿಲ್ಲ. ಜನ ಮುಂದುವರಿಯುವ ವಿಷಯದಲ್ಲೂ ಉತ್ಸಾಹವಿಲ್ಲ. ಹಿಂದೆ ಬಿದ್ದಿದ್ದರೆ ಇವರ ಘೋಷಣೆಗಳಿಗೆಲ್ಲ ಗ್ರಾಸ.

ಸ್ವಾತಂತ್ರ್ಯ ಸಂಗ್ರಾಮದ ಒಬ್ಬ ವಿಚಾರವಂತ ಮುಂದಾಳು ಕೆ. ಸಂತಾನಂ ಇತ್ತೀಚೆಗೆ ಒಂದು ಲೇಖನ ಬರೆದಿದ್ದರು. ಅಸ್ಪೃಶ್ಯತೆ ಅಥವಾ ಹರಿಜನ-ಗಿರಿಜನ ಎಂಬ ಪ್ರಭೇದ ಹೇಗೆ ರಾಜಕೀಯ ಬಂಡವಾಳ ಆಗಿದೆ ಎಂಬುದನ್ನು ತೋರಿದರು. ಹರಿಜನ-ಗಿರಿಜನರು ಇಂದು ಇರುವಂತೆಯೇ ಇದ್ದರೆ ಮುಂದಾಳುಗಳಿಗೆ ಸಂತೋಷ. ಅವರು ಸಮಾಜದಲ್ಲಿ ಏಕರಸವಾಗಿಬಿಟ್ಟರೆ ಇವರ ಬಂಡವಾಳವೇ ಕರಗಿಹೋಗುತ್ತದೆ. ಅದಕ್ಕಾಗಿ ಅವರ ದುರವಸ್ಥೆ ಹಾಗೆಯೇ ಇರಬೇಕು. ಈ ಮನೋಭಾವ ತೊಲಗದೆ ಜಾತಿಪದ್ಧತಿ ನಿರ್ನಾಮ ಆಗದು.

ಜಾತಿಯನ್ನು ಮುರಿಯಬೇಕು. ಜಾತಿಸೂಚಕ ಸಂಕೇತಗಳನ್ನೆಲ್ಲ ತೊಡೆಯಬೇಕು. ಜಾತಿ ಬಿಟ್ಟು ಸಹಭೋಜನ ನಡೆಯಬೇಕು. ಅಂತರ್ಜಾತೀಯ ವಿವಾಹಗಳು ಹೆಚ್ಚು ಹೆಚ್ಚಾಗಿ ನಡೆಯಬೇಕು. ಹಿಂದೆ ಪ್ರೊ. ಹುಮಾಯೂನ ಕಬೀರ್ ಎಂಬ ವಿದ್ವಾಂಸರಿದ್ದರು. ಅವರ ಹೆಂಡತಿ ಶಾಂತಿದೇವಿ ಹಿಂದೂ ಧರ್ಮೀಯರು. ಅವರ ಮಗಳು ಲೈಲಾ ಈಗಿನ ಉದ್ಯಮಮಂತ್ರಿ ಜಾರ್ಜ್ ಫರ್ನಾಂಡಿಸ್ ಅವರ ಮಡದಿ. ಇವರಿಬ್ಬರ ಮಗ ಪ್ರಶಾಂತ. ಈ ಹುಡುಗನಿಗೆ ಜಾತಿ ಯಾವುದು? ಧರ್ಮ ಯಾವುದು? ಈತ ಮನುಷ್ಯಜಾತಿ. ಅವನ ಧರ್ಮ ಮಾನವಧರ್ಮ, ರಾಷ್ಟ್ರೀಯತೆಯ ದೃಷ್ಟಿಯಿಂದ ಭಾರತೀಯ. ಇಂಥ ಮಕ್ಕಳು ನಮ್ಮ ದೇಶದಾದ್ಯಂತ ಹೆಚ್ಚಬೇಕು.

ಇನ್ನು ಮುಂದೆ ಜಾತೀಯ ಸಮ್ಮೇಳನಗಳನ್ನು ನಡೆಸುವ ಬದಲು ಪ್ರತಿ ಜಿಲ್ಲೆಯಲ್ಲಿ, ಪ್ರತಿ ತಾಲ್ಲೂಕು ಕೇಂದ್ರದಲ್ಲಿ ಜಾತಿ ಮುರಿಯುವ ಸಮ್ಮೇಳನಗಳನ್ನು ನಡೆಸಬೇಕು. ಮೂವತ್ತೈದು ವರ್ಷಗಳ ಹಿಂದೆ ಜಾತಿವಿನಾಶದ ಕಿಚ್ಚು ನಮ್ಮನ್ನೆಲ್ಲ ಆವರಿಸಿತ್ತು. ಅದೇ ಕಿಚ್ಚನ್ನು ನಮ್ಮ ಯುವಜನರಲ್ಲಿ ಮತ್ತೊಮ್ಮೆ ಹಚ್ಚಬೇಕು. ವಿದ್ಯಾರ್ಥಿ ಸಂಘಗಳ ಚುನಾವಣೆಯೂ ಜಾತಿಯ ಆಧಾರದ ಮೇಲೆ ನಡೆಯುತ್ತದೆ. ಈ ಹಂತದಲ್ಲಿ ಮೊಟ್ಟಮೊದಲು ಜಾತಿಭಾವನೆಗೆ ಹೊಡೆತ ಬೀಳಬೇಕು. ಇದು ದೊಡ್ಡ ಆಂದೋಲನ ಆಗಬೇಕು. ಪಕ್ಷಗಳ ಎಲ್ಲೆ ಕಟ್ಟು ಬೇಕಿಲ್ಲ. ಪಂಥಗಳನ್ನು ಮೀರಬೇಕು. ಪ್ರಚಂಡ ರಾಷ್ಟ್ರಶಕ್ತಿ ಮೂಡಿಬರಬೇಕು. ★

ತಕ್ತಿ(ಮೊಟ್ಟೆ)ಯನ್ನು ಬೇಯಿಸುವ ಪ್ರಥಮ ದಾಖಲೆಯುಳ್ಳ ವಿಧಾನ ಪ್ರಕಾರ ಈಜಿಪ್ಟಿನ ಕುರುಬರು ಬೆಂಕಿಯನ್ನು ಬಳಸುತ್ತಿರಲಿಲ್ಲ. ಅವರು ತಮ್ಮ ಬಳಿಯಿದ್ದ ಕವಣೆಗಳನ್ನು ಜೋರಾಗಿ ವೃತ್ತಾಕಾರದಲ್ಲಿ ತಿರುಗಿಸಿದಾಗ ವಾಯುವಿನೊಂದಿಗೆ ಘರ್ಷಣೆ ಏರ್ಪಡುತ್ತಿತ್ತು. ಇದರಿಂದ ಉಂಟಾದ ಉಷ್ಣತೆಯಿಂದಾಗಿ ಕವಣೆಗಳಲ್ಲಿಟ್ಟ ತತ್ತಿಗಳು ಬೇಯುತ್ತಿದ್ದವು.

ಭ್ರಷ್ಟಾಚಾರ ಸ್ವಾಭಾವಿಕ ದೌರ್ಬಲ್ಯವೆ?

ವಿಚಾರಿ

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಕರುಣಾನಿಧಿಯವರು ಹಾಲಿ ಮಂತ್ರಿಯೊಬ್ಬರ ತಾಯಿ ಸರಕಾರಿ ಕಾರಿನಲ್ಲಿ ರೇಸ್ ಕೋರ್ಸಿಗೆ ಹೋದರೆಂದು ತಮಿಳುನಾಡಿನ ವಿಧಾನಸಭೆಯಲ್ಲಿ ಸಚಿತ್ರ ಆರೋಪ ಮಾಡಿದರಂತೆ. ಸ್ವತಃ ಅಧಿಕಾರದಲ್ಲಿದ್ದಾಗ ಸಾರ್ವಜನಿಕ ನಡವಳಿಕೆ ಅಷ್ಟು ನಿಷ್ಕಲಂಕವಾಗಿದ್ದಿಲ್ಲೆಂಬ ಆಕ್ಷೇಪಕ್ಕೊಳಗಾದ ಕರುಣಾನಿಧಿಯವರಿಂದ ಬಂದಾಗ ಈ ಆರೋಪ ತೂಕ ಕಳೆದುಕೊಳ್ಳುತ್ತದಾದರೂ ಅಧಿಕಾರಸ್ಥ ಜನರ ಸಾರ್ವಜನಿಕ ನಡವಳಿಕೆಯ ಪ್ರಶ್ನೆಯನ್ನು ಅದು ಪುನರಪಿ ಮುನ್ನೆಲೆಗೆ ತರುತ್ತದೆ.

ಸರಕಾರಿ ಅಥವಾ ಹತ್ತು ಸಮಸ್ತರ ಸೊತ್ತುಗಳ ಉಸ್ತುವಾರಿಯನ್ನು ಹೊಂದಿದವರು ಆ ಸೊತ್ತುಗಳನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳುವುದು ಹೊಸ ಸಂಗತಿಯಲ್ಲ. ಮಂತ್ರಿಮಾನ್ಯರೇ ಮೊದಲಾದವರು ಹೀಗೆ ಮಾಡಿದಾಗ ಅವರ ರಾಜಕೀಯ ವಿರೋಧಿಗಳು ಅದನ್ನು ಬಯಲಿಗೆಳೆದ ಪ್ರಸಂಗಗಳಲ್ಲಿ ಅದು "ಸುದ್ದಿ"ಯಾಗುತ್ತದೆ. ಬೇರೆ ಹಂತಗಳಲ್ಲಿ ಜನಸಾಮಾನ್ಯರಿಗೆ ಇಂಥ ನಡವಳಿಕೆಯನ್ನು ನೋಡಿ ನೋಡಿ ಅದೊಂದು ಸಹಜ ವಿಷಯವೆಂದುಕೊಳ್ಳುವಷ್ಟು ಮಟ್ಟಿಗೆ ವಾಡಿಕೆಯಾಗಿಬಿಟ್ಟಿದೆ.

ನಾನೇ ನೋಡಿದ ಕೇಳಿದ ಕೆಲ ಉದಾಹರಣೆಗಳು ಹೀಗೆ: ಸರಕಾರಿ ಆಸ್ಪತ್ರೆಗಳ — ಅದೂ ವಿದೇಶಗಳಿಂದ ದಾನ ಬಂದ-- ಆಂಬ್ಯುಲೆನ್ಸ್ ವಾಹನಗಳಲ್ಲಿ ಆಸ್ಪತ್ರೆ ಅಧಿಕಾರಿಗಳ ಸಂಬಂಧಿಕರು ಸವಾರಿ ಹೋಗುತ್ತಾರೆ, ಮುನಸಿಪಲ್

ಮತ್ತು ಪಿ. ಡಬ್ಲ್ಯು. ಡಿ. ಜೀಪುಗಳಲ್ಲಿ ಆಯಾ ಸಂಸ್ಥೆಗಳ ಸಂಬಂಧಪಟ್ಟವರು ಶಾಪಿಂಗಿಗೆ ಹೋಗುತ್ತಾರೆ. ಖಾದಿ ಬೋರ್ಡಿಗೆ ಸೇರಿದ ಒಂದು ವಾಹನದಲ್ಲಿ ಅನೇಕ ವರ್ಷಗಳ ಹಿಂದೆ ಸ್ವಂತ ಕಟ್ಟಡಕ್ಕೆ ಕಲ್ಲು ಸಾಗಿಸುತ್ತಿದ್ದುದುಂಟು. ನೀರಿನ ಕೊರತೆಯಿದ್ದಾಗ ಮುನಸಿಪಲ್ ನೀರಿನ ಇಲಾಖೆಯ ವಾಹಕರು ಸದಸ್ಯರೊಬ್ಬರ ಮನೆಗೆ ಒಂದಿಡೀ ವ್ಯಾನ್ ತುಂಬ ನೀರನ್ನು ಒದಗಿಸಿದ್ದೂ ಅಲ್ಲದೆ, ಉಳಿದವರು ಮಿಕಿಮಿಕಿ ನೋಡುತ್ತಿದ್ದಂತೆ ನೀರನ್ನು ಅವರ ಓವರ್‌ಹೆಡ್ ಟ್ಯಾಂಕಿನಲ್ಲಿ ತುಂಬಿದರು. ಸರಕಾರಿ ಸ್ಟೇಶನರಿ, ಅಧಿಕಾರಿ ಅಥವಾ ಉದ್ಯೋಗಸ್ಥರ ಸ್ವಂತಕ್ಕೆ ನಿರ್ಭಯದಿಂದ ಉಪಯೋಗಿಸಲ್ಪಡುತ್ತದೆ. ಇಂಥ ಉದಾಹರಣೆಗಳನ್ನು ನೂರಲ್ಲ ಸಾವಿರಗಟ್ಟಳೆಯಲ್ಲಿ ಕೊಡಬಹುದು.

ಇದು ಅಯೋಗ್ಯ ನಡವಳಿಯೆಂದು ಗೊತ್ತಿಲ್ಲದೆ ಇಲ್ಲ. ಆದರೆ ಅದು ಬಲು ದೊಡ್ಡ ಪ್ರಮಾಣದಲ್ಲಿ ನಡೆಯುವುದನ್ನು ಯಾಕೆ ಸಹಿಸಲಾಗುತ್ತಿದೆ? ಜೇನು ತೆಗೆಯುವವ ಕೈ ನೆಕ್ಕದೆ ಇರುತ್ತಾನೆಯೆ ಎಂಬ ಗಾದೆಯ ಮೂಲಕ ಮನುಷ್ಯನ ಸ್ವಾಭಾವಿಕ ದೌರ್ಬಲ್ಯವೆಂದು ಅದನ್ನು ದುರ್ಲಕ್ಷಿಸುವುದಾಗಿದೆ. ಯಾರ ತಲೆಯ ಮೇಲಾದರೂ ಗೂಬೆ ಕೂಡಿಸಬೇಕಾದಾಗ ಮಾತ್ರ ಇಂಥ ಪ್ರಕರಣಗಳಲ್ಲಿ ನಿಯಮಗಳನ್ನು ಧೂಳು ಜಾಡಿಸಿ ಹೊರಗೆ ತರಲಾಗುತ್ತದೆ. ನನಗೆ ತಿಳಿದಂತೆ ಒಂದು ಅರೆಸರಕಾರಿ ಸಂಸ್ಥೆಯಲ್ಲಿ ಸಂಸ್ಥೆಯ ಕಾಗದ, ಮಸಿ ಮೊದಲಾದ್ದನ್ನು ಖಾಸಗಿ ಸಂಶೋಧನೆಯ ಬಗ್ಗೆ ಉಪಯೋಗಿಸಿದರೆಂದು ಒಬ್ಬರಮೇಲೆ ವಿಚಾರಣೆ ಹೂಡಲಾಯಿತು. ಮೇಲಿನವರಿಗೆ ಅವರನ್ನು ಹೊರದೂಡಬೇಕಾಗಿದ್ದದ್ದು ಈ ವಿಚಾರಣೆಯ ಮುಖ್ಯ ಉದ್ದೇಶವಾಗಿತ್ತು.

ಬ್ರಿಟನ್ನಿನಲ್ಲಾದರೆ ಸ್ವತಃ ಮಂತ್ರಿಯಾದವನು ಕೂಡ ಸರಕಾರಿ ಕಾರಿನಲ್ಲಿ ಸಿನೇಮಾಕ್ಕೆ ಹೋದರೆ ಎಷ್ಟು ಕಿಲೋಮಿಟರ್ ಎಂದು ಲೆಕ್ಕ ಮಾಡಿ ಅವನ ಲೆಕ್ಕಕ್ಕೆ ಖರ್ಚು ಹಾಕಿ ತಿಂಗಳ ಸಂಬಳದಲ್ಲಿ ಮುರಿದುಕೊಳ್ಳುತ್ತಾರೆ. ನಮ್ಮಲ್ಲಿ ಮೇಲಿನಿಂದ ಕೆಳತನಕ ಸಾರ್ವಜನಿಕ ಸೊತ್ತುಗಳ ಖಾಸಗಿ ಉಪಯೋಗ ಯಾಕೆ ಸಹ್ಯವಾಗುತ್ತದೆ?

ನಮ್ಮ ಪ್ರಜ್ಞೆ ಇನ್ನೂ ಅನೇಕ ಸಾರ್ವಜನಿಕ ವಿಷಯಗಳಲ್ಲಿ ಹೇಗೋ ಹಾಗೆಯೇ ಈ ಅನೀತಿಗಳ ವಿಷಯದಲ್ಲಿಯೂ ಸರಿಯಾಗಿ ಜಾಗರಿಸಲ್ಪಟ್ಟಿಲ್ಲ. ನಾವು ಮನಃಪೂರ್ವಕವಾಗಿ ಅನೀತಿಯೆಂದು ಎಣಿಸುವುದು ಲೈಂಗಿಕ ಅತಿಚಾರ ಮತ್ತು ಖಾಸಗಿ ಸೊತ್ತುಗಳ ಕಳವು- ಇವುಗಳನ್ನು ಮಾತ್ರ. ಹತ್ತು ಜನರ ಸೊತ್ತು ಎತ್ತಿ ಹಾಕುವುದು ನಿಯಮಕ್ಕೆ ವಿರುದ್ಧ ಇದ್ದೀತು, ಆದರೆ ಅನೀತಿ ಅಥವಾ ಪಾಪವಲ್ಲ!

ಯಾರು ಈ ಪ್ರಜ್ಞೆಯನ್ನು ಜಾಗರಿಸಬಹುದಾಗಿತ್ತೋ ಅವರು ಪ್ರಾರಂಭದಲ್ಲೇ ಅದನ್ನು ಕ್ಷಮಾದೃಷ್ಟಿಯಿಂದ ಕಂಡರು. ಅನೇಕ ವರ್ಷಗಳ ಹಿಂದೆ ಸಂಸತ್ತಿನಲ್ಲಿ ಸದಸ್ಯರೊಬ್ಬರು, ಸರಕಾರಿ ವಾಹನಗಳನ್ನು ಅಧಿಕಾರಿಗಳ ಹೆಂಡರುಮಕ್ಕಳ ಸವಾರಿಗೆ ಬಳಸಲಾಗುತ್ತದೆಂದು ದೂರಿದಾಗ, ಪಂಡಿತ ನೆಹರು ಅವರೇ ಕೆರಳಿ ಇಂಥ ಕ್ಷುಲ್ಲಕ ಸಂಗತಿಗಳನ್ನು ಗುಡ್ಡ ಮಾಡುವುದನ್ನು ಟೀಕಿಸಿದರು.

ನಮ್ಮ ಸಾಮಂತಶಾಹಿ ಗತಕಾಲದ ಅವಶೇಷವಾಗಿ ಸಾರ್ವಜನಿಕ ಮತ್ತು ಖಾಸಗಿ ಸೊತ್ತುಗಳ ನಡುವಣ ಸೀಮಾರೇಖೆ ನಮ್ಮ ಚಿತ್ತಗಳಲ್ಲಿ ನಿರ್ದಿಷ್ಟವಾಗಿ ಗುರುತಿಸಲ್ಪಟ್ಟಿಲ್ಲ.

ಒಂದು ವೃಥಾ ಪ್ರತಿಷ್ಠೆ ನಮ್ಮನ್ನು ಬೇಕೆಂದೇ ಇಂಥ ಅತಿಚಾರಗಳಿಗೆ ಪ್ರೇರಿಸುತ್ತದೆ. ಸರಕಾರಿ ಅಥವಾ ಅಧಿಕೃತ ವಾಹನಗಳನ್ನು ಖಾಸಗಿಗೆ ಬಳಸಿ ದಕ್ಕಿಸಿಕೊಳ್ಳುವುದು ಸಂಬಂಧಪಟ್ಟವರ ಅಧಿಕಾರ ಮತ್ತು ಜಬರಿನ ಸಂಕೇತವೆಂದು ಅನೇಕರು ಭಾವಿಸುತ್ತಾರೆ. ಹೀಗೆ ಮಾಡಲೊಲ್ಲದವನು ಪುಕ್ಕನೆಂದೋ ಅವನಿಗೆ ಕಚೇರಿಯಲ್ಲಿ "ವಜನು" ಇಲ್ಲವೆಂದೋ ಎಣಿಸಲ್ಪಡುತ್ತದೆ.

ನಮ್ಮ ಸಾರ್ವಜನಿಕ ನೌಕರಶಾಹಿ ಚೌಕಟ್ಟಿನ ಆಧುನಿಕೀಕರಣ ಆಗಿಯೇ ಇಲ್ಲ. ನೌಕರಶಾಹಿ ನಿಚ್ಚಣಿಕೆಯಲ್ಲಿ ಮೇಲು ಮೇಲಿನವರು ಕೆಳ ಕೆಳಗಿನವರನ್ನು "ಒದೆಯುವುದೂ" "ಶಿಸ್ತಿನಲ್ಲಿಡುವುದೂ" ಒಂದೇ ಎಂದು ಎಲ್ಲಾ ಹಂತಗಳಲ್ಲಿ ಭಾವಿಸಲಾಗುತ್ತದೆ. ನಿಯಮಗಳೇನೇ ಇರಲಿ, ಮೇಲಿನವರ ಅಪ್ಪಣೆ ಪಾಲಿಸುವುದೇ ಅಧಿನಿಯಮವೆಂದು ಭಾರತದ ಅತ್ಯಂತ ಸಂರಕ್ಷಿತ

ನೌಕರ ವರ್ಗವಾದ ಐ. ಎ. ಎಸ್. ಮತ್ತು ತತ್ಸಮಾನವಾದ ಉಚ್ಚಾಧಿಕಾರಿಗಳು ಕೂಡ ಭಾವಿಸುತ್ತಾರೆಂದು ಶಾ ಆಯೋಗದ ಮುಂದೆ ಬಂದ ಸಾಕ್ಷ್ಯಗಳಿಂದಲೇ ಸಿದ್ಧವಾಗಿದೆ. ನಿಯಮ ವಿರುದ್ಧವಾದ ಕೆಲಸಕ್ಕೆ ವಾಹನವನ್ನು ಒಯ್ಯ-ಲಾರೆನೆಂಬ ಧೈರ್ಯ ಡ್ರೈವರನಿಗೆ ಇದ್ದರೆ ವಾಹನ ದುರುಪಯೋಗ ಅಸಾಧ್ಯವಾ-ದೀತು. ವ್ಯಕ್ತಿನಿಷ್ಠೆಯ ಬದಲು ನಿಯಮ ನಿಷ್ಠೆಯನ್ನೂ ನ್ಯಾಯನಿಷ್ಠೆಯನ್ನೂ ಸ್ಥಾಪಿಸುವ ಕೆಲಸ ಆಗದೆ ಇಂಥಾ ಅತಿಚಾರಗಳನ್ನು ತಡೆಯುವುದು ಆಗದ ಕೆಲಸ. ಆದರೆ ನಮಗೆ ಇನ್ನೂ ವ್ಯಕ್ತಿನಿಷ್ಠೆ ಮಾತ್ರ ಅರ್ಥವಾಗುತ್ತದೆ, ಬೇರಾವ ನಿಷ್ಠೆಯಿಲ್ಲ- ಎಂಬುದು ಈಚೆಗಿನ ರಾಜಕೀಯ ಬೆಳವಣಿಗೆಗಳಿಂದ ವ್ಯಕ್ತವಾಗುತ್ತದೆ. ವ್ಯಕ್ತಿನಿಷ್ಠೆಯ ಆಧಾರ ಪ್ರತಿಷ್ಠೆಯ ರಕ್ಷಣೆ, ಪ್ರತಿಷ್ಠೆಯ ಆಧಾರ ಜರ್ಬು, ಜರ್ಬಿನ ಆಧಾರ ಸ್ವಚ್ಛಂದ ಅಧಿಕಾರ ಚಲಾವಣೆ ಆಗಿರು-ವುದರಿಂದ ಆಜ್ಞೆ ಮತ್ತು ಪಾಲನೆ ನಿಯಮಾ-ಗತವಾಗುವ ಬದಲು ಅಂಥ ಪರಂಪರೆಯಾಗಿದೆ. ಈ ಗೋಣಸನ್ನು ಎಲ್ಲಾದರೂ ಮುರಿದು ಹೊಸ ತರ್ಕಬದ್ಧ, ವಿವೇಕಬದ್ಧ ಆಜ್ಞಾಪರಿಪಾಟಿ-ಯನ್ನು ರೂಪುಗೊಳಿಸಬೇಕು.

ಈ ದೇಶದಲ್ಲಿ ಯಾವಾಗಲೂ ಈಗಿನ ರೀತಿಯ ನಡವಳಿಕೆಯೇ ಇತ್ತೆಂದಲ್ಲ. ವಿಶ್ವೇಶ್ವರಯ್ಯ-ನವರು ಮೈಸೂರು ದಿವಾನರಾಗಿದ್ದಾಗ ಅವರು ಸರಕಾರಿ ಕೆಲಸಕ್ಕಾಗಿ ಪರಸ್ಥಳದಲ್ಲಿ ಮುಕ್ಕಾಂ ಮಾಡಿದ ಸಂದರ್ಭದಲ್ಲಿ ರಾತ್ರಿ ಕೆಲಸಕ್ಕೆ ಎರಡು ಕಟ್ಟು ಮೇಣದ ಬತ್ತಿ ಇಟ್ಟುಕೊಳ್ಳುತ್ತಿದ್ದ-ರಂತೆ. ಒಂದು ಸರಕಾರಿ ಕೆಲಸ ಮಾಡಬೇಕಾ-ದಾಗ ಉಪಯೋಗಿಸುವುದಕ್ಕೆ; ಇನ್ನೊಂದು ಸ್ವಂತ ಅಧ್ಯಯನ ಮಾಡುವಾಗ ಹಚ್ಚುವುದಕ್ಕೆ. ಒಂದು ಸರಕಾರಿ ಖರ್ಚಿನಲ್ಲಿ, ಇನ್ನೊಂದು ಸ್ವಂತದ ಖರ್ಚಿನಲ್ಲಿ. ಕೊನೆಯಲ್ಲಿ ಅವರು ರಾಜೀನಾಮೆ ಕೊಡಲು ಹೋಗುವಾಗ ಸರಕಾರಿ ಕಾರಿನಲ್ಲಿ ಹೋಗಿ ಹಿಂದಿರುಗುವಾಗ ಸ್ವಂತ ಕಾರಿನಲ್ಲೇ ಬಂದರಂತೆ. ಈ ತರದ ನಾಜೂಕು ಹಾಸ್ಯಾಸ್ಪದವೆಂದು ಇಂದಿನ ನಾವು ಭಾವಿಸು-ವಷ್ಟು ಪರಿಸ್ಥಿತಿ ಹದಗೆಟ್ಟಿದೆ. ಇದಕ್ಕೆ ಮೇಲಿನ ಸ್ತರಗಳಲ್ಲಿದ್ದವರು ಮೇಲ್ಪಂಕ್ತಿ ಹಾಕಬೇಕೇ ಹೊರತು ಕೆಳಗಿನವರಿಂದ ಅದನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

ಸಾರ್ವಜನಿಕ ಸೊತ್ತುಗಳ ವಿಚಾರದಲ್ಲಿ ನಾಜೂಕಿನ ನಡವಳಿಕೆಯ ಪರಂಪರೆ ಶಿಥಿಲ-ಗೊಳ್ಳುವುದಕ್ಕೆ ಒಂದು ಮಹತ್ವದ ಕಾರಣ-ವೆಂದರೆ, ನಮ್ಮ ರಾಜಕಾರಣಿಗಳು ಬಹುತರವಾಗಿ ಸಾಮಾನ್ಯ ಆದಾಯದ, ಅಥವಾ ಆದಾಯವೇ ಇಲ್ಲದ ವರ್ಗಗಳಿಂದ ಮೇಲೆದ್ದು ಬಂದವರು. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಇದು ಇಷ್ಟ-ವಾದದ್ದೇ ಸೈ. ಆದರೆ ಇದರಲ್ಲೊಂದು ಗೂಢ ತೊಡಕು ಇದೆ. ಸ್ವಂತದ ಆದಾಯ ಕಡಿಮೆಯಾಗಿದ್ದು ದೊಡ್ಡ ಪಟ್ಟಣಗಳಲ್ಲಿ ಒಂದು ಅಂತಸ್ತಿನ ಜೀವನ ಮಾಡಬೇಕಾದ ಪ್ರಸಂಗ-ವನ್ನು ಅವರು ಎದುರಿಸುತ್ತಾರೆ. ಆಗ ಅನೇಕ ಖಾಸಗಿ ಖರ್ಚು ವೆಚ್ಚಗಳನ್ನು ಹೇಗಾದರೂ ಸಾರ್ವಜನಿಕ ಲೆಕ್ಕಕ್ಕೆ ವರ್ಗಾಯಿಸುವ ಅಲ್ಪ



"ಸಾರ್, ನೀವು ಕೊಟ್ಟ ಇಲಿಬೋನಿನಲ್ಲಿ ಬಿದ್ದ ಒಂದು ಇಲಿಯೊಡನೆ ಎರಡು ಬೆಕ್ಕುಗಳೂ ಬಿದ್ದಿವೆಯಲ್ಲ ?"

ಬುದ್ಧಿಗೆ ಅವಕಾಶವೊದಗುತ್ತದೆ. ವಿಶ್ವೇಶ್ವರಯ್ಯನವರಿಗೆ ೬೦ ವರ್ಷ ಹಿಂದಿನ ಕಾಲದಲ್ಲೇ ನಾಲ್ಕೈದು ಸಾವಿರ ಸಂಬಳವಿದ್ದಿರಬೇಕು. ನಮ್ಮ ಮುಖ್ಯ ಮಂತ್ರಿಗಳಿಗೆ ಈಗ ಕೂಡ ಅಷ್ಟು ಸಂಬಳವಿಲ್ಲ. ಗಾಂಧೀ ಆದರ್ಶದಂತೆ ಮಂತ್ರಿಗಳು ಬಡತನದಲ್ಲಿ ಬಾಳಬೇಕೆಂದು ನಮ್ಮ ನಿರೀಕ್ಷೆ. ಇದು ಒಂದು ಉಪಚಾರದ ಮಾತಾಗಿಯೇ ಉಳಿದಿದ್ದು ವಾಸ್ತವಿಕದಲ್ಲಿ ನಮ್ಮ ಆರಿಸಿದ ಪ್ರತಿನಿಧಿಗಳೂ ಅವರ ಬಂಧು ಬಾಂಧವರೂ ನಿಮ್ಮ-ನಮ್ಮಂತೆ ಸಾಕಷ್ಟು ಸುಖ ಸೌಕರ್ಯಗಳನ್ನು ಅಪೇಕ್ಷಿಸುವವರಾಗಿದ್ದಾರೆ. ನಾವು ದಂಭದ ಬಡತನಕ್ಕೆ ವಿರಾಮ ಕೊಟ್ಟು ನಮ್ಮ "ಸೇವಕ"ರಿಗೆ ಯೋಗ್ಯ ಸಂಬಳ ಕೊಡುವುದಾದರೆ ಅವರಿಗೆ ಕ್ಷುಲ್ಲಕ ಆಮಿಷಗಳಿಗೆ ಬಲಿ ಬೀಳುವ ಅಗತ್ಯ ಉಳಿಯದು. ಏನಿಲ್ಲೆಂದರೂ ಅದೊಂದು ನೆಪವನ್ನಾದರೂ ಅವರ ಕೈಯಿಂದ ನಾವು ಕಸಿದುಕೊಂಡಂತಾದೀತು. ಮಂತ್ರಿಗಳಿಗಾಗಲಿ ಇತರ ಉಚ್ಚಾಧಿಕಾರಿಗಳಿಗಾಗಲಿ, ಸಂಬಳವನ್ನು ಆದಷ್ಟು ಹೆಚ್ಚಿಸಿ ಇತರ ಉಪಾದೇಯಗಳನ್ನು ಆದಷ್ಟು ಕಡಿಮೆ ಮಾಡುವುದು ಒಳ್ಳೇದು.

ಇಂಥ ಅನಾಚಾರಗಳ ಮಾತಾಡುವಾಗ ನಾವು ಸರಕಾರಿ ಸೊತ್ತುಗಳ ದುರುಪಯೋಗವನ್ನಷ್ಟೇ ಲಕ್ಷ್ಯದಲ್ಲಿಟ್ಟುಕೊಳ್ಳುತ್ತೇವೆ. ಖಾಸಗಿಯೆನಿಸುವ ಸಂಸ್ಥೆಗಳಿಗೆ ಈ ನಿಯಮಗಳು ಅನ್ವಯಿಸಬೇಕಿಲ್ಲವೆಂದು ಬಗೆಯುತ್ತೇವೆ. ಖಾಸಗಿ ಕಂಪನಿಗಳಲ್ಲಿನ ವಾಹನಾದಿ ಸೊತ್ತುಗಳೂ ಅವುಗಳು ಏತಕ್ಕಾಗಿ ಗೊತ್ತುಪಡಿಸಲ್ಪಟ್ಟವೆಯೋ ಆ ಕೆಲಸಕ್ಕೆ ಸಂಬಂಧಪಡದ ಖಾಸಗಿ ಕೆಲಸಗಳಿಗೆ ಉಪಯೋಗಿಸಲ್ಪಟ್ಟರೆ ಅದರ ಬೆಲೆಯನ್ನೂ ಕೊನೆಯಲ್ಲಿ ಸಾರ್ವಜನಿಕರೇ ತರಬೇಕಾಗುತ್ತದೆ. ಮಠ ಮಾನ್ಯಗಳು ಧರ್ಮ ಸಂಸ್ಥೆಗಳು ಮೊದಲಾದೆಡೆಯಲ್ಲಿಯೂ ಸಾರ್ವಜನಿಕ ಸೊತ್ತಿನ ದುರುಪಯೋಗ ಆಗುತ್ತ ಇದೆ ಅದರ ಮೇಲೂ ಸಾರ್ವಜನಿಕರ ಆಗ್ರಹ ದೃಷ್ಟಿ ತಿರುಗಬೇಕು. ಏಕೆಂದರೆ ಇದೆಲ್ಲ ಒಂದೇ ಮನೋವೃತ್ತಿಯಿಂದ ಉದ್ಭವಿಸುವ ದುರ್ವ್ಯಾಪಾರಗಳು.

ಒಂದು ಮಹತ್ವದ ಅಂಶವೆಂದರೆ, ಮಂತ್ರಿ ಮಾನ್ಯರ ಅಥವಾ ಇತರ ಆಯ್ಕೆ ಹೊಂದಿದ ವ್ಯಕ್ತಿಗಳ ಮೇಲೆ ಆರೋಪಗಳನ್ನು ಲಘುವಾಗಿ ಮಾಡದೆ ಗಂಭೀರವಾಗಿ ಮಾಡಬೇಕು. ಸಾಕಷ್ಟು ಆಧಾರವಿಲ್ಲದ ಆರೋಪಗಳನ್ನು ಮಾಡುವುದೂ ಅನಂತರ ಅವುಗಳ ಬೆಂಬತ್ತಿ ಸತ್ಯಾಸತ್ಯ ನಿರ್ಣಯಕ್ಕೆ ಒತ್ತಾಯ ಮಾಡದೆ ಹಾಗೆಯೆ ಬಿಡುವುದೂ ನಮ್ಮ ರಾಜಕಾರಣಗಳ ಚಾಳಿಯಾಗಿಬಿಟ್ಟಿದೆ ಹೀಗೆ ಲಘು ಆರೋಪಗಳನ್ನು ಮಾಡುತ್ತ ಹೋಗುವುದರಿಂದ ಜನಸಾಮಾನ್ಯರ ನೈತಿಕ ಭಾವನೆ ಸವೆದು ಮೊಂಡಾಗಿಬಿಡುತ್ತದೆ. ಯಾವುದೊಂದು ಸಾರ್ವಜನಿಕ ದುರ್ವ್ಯವಹಾರವನ್ನು ಬಯಲಿಗಿಡುವುದರಿಂದ ಜನರಲ್ಲಿ ಗಹನವಾದ ನೈತಿಕ ಕ್ರೋಧ ಜಾಗ್ರತವಾದರೆ ಮಾತ್ರ ಅದು ಸಾರ್ಥಕವಾಗುತ್ತದೆ. ಅದನ್ನು ದಿನನಿತ್ಯದ ರಾಜಕೀಯ ಉಪ್ಪಿನಕಾಯಿಯಾಗಿ ಮಾಡಿದರೆ ಅದು ಜನರನ್ನು ಉದ್ರೇಕಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತ ಹೋಗುತ್ತದೆ. ಆರೋಪ ಮಾಡಿದರೆ ಅದು ವಜ್ರಲೇಪವಾಗಬೇಕು—ನಾಟಕದ ಬಣ್ಣವಾಗಬಾರದು. ತಮಾಷೆಯಾಗಬಾರದು.

ಮಾನವನ ಹೆಚ್ಚಿನ ನೈತಿಕ ನಿಯಮಾನುಷ್ಠಾನ ಸುತ್ತಲ ಸಮಾಜದ ಒತ್ತಡಗಳಿಂದ ನೆಲೆಗೊಂಡ ಒಂದು ಸಮತೋಲವಾಗಿರುತ್ತದೆ. ಆ ಒತ್ತಡಗಳನ್ನು ನಿರ್ಮಿಸಬೇಕಾದವರು ವಿಚಾರವಂತರು. ರಾಜಕಾರಣಿಗಳೂ ಅಧಿಕಾರ ಚಲಾಯಿಸುವವರೂ ಈ ಒತ್ತಡದಿಂದಲೇ ನೇರ ದಾರಿಯಲ್ಲಿ ನಡೆದಾರು. ಅನಿರ್ವಾಹ ವಾತಾವರಣ ಉಂಟಾಗದೆ ಜನರು ತಮ್ಮ ಚಾಳಿ ಬಿಡುವುದು ಕಷ್ಟ. ✿



ದೈಹಿಕ ರೋಗಲಕ್ಷಣಗಳ ಮೂಲ ಮಾನಸಿಕವಾಗಿರಲೂಬಹುದು

ಲಕ್ವ ಹೊಡೆಯಿತು

ಡಾ. ಕೆ. ಎಂ. ಧ್ರುವಕುಮಾರ

ಮನೋವೇದನೆಗಳಿಂದ ದೈಹಿಕ ಬೇನೆಗಳುಂಟಾಗಬಹುದು ಎಂಬುದಕ್ಕೆ ಲಕ್ಷ್ಯಯು ತೊಂದರೆ ಒಂದು ಒಳ್ಳೆಯ ಉದಾಹರಣೆ. ಲಕ್ಷ್ಯಯು ಕಾಯಿಲೆಯನ್ನು ಮನಃಶಾಸ್ತ್ರದಲ್ಲಿ ಹಿಸ್ಟೀರಿಯಾ ಎಂದು ಕರೆಯುತ್ತೇವೆ. ಗ್ರೀಕ್ ಭಾಷೆಯಲ್ಲಿ ಇದರ ಅರ್ಥ ಗರ್ಭಕೋಶ ಎಂದು. ಒಂದಾನೊಂದು ಕಾಲದಲ್ಲಿ ಈ ಕಾಯಿಲೆ ಗರ್ಭಕೋಶದಿಂದ ಉಂಟಾಗುತ್ತದೆಂಬ ಪ್ರತೀತಿಯಿತ್ತು. ಹಿಸ್ಟೀರಿಯದಲ್ಲಿ ಲಕ್ವ ಹೊಡೆಯುವುದು, ಶರೀರದ ವಿವಿಧ ಭಾಗಗಳಲ್ಲಿ ನೋವುಂಟಾಗುವುದು, ಅಪಸ್ಮಾರವುಂಟಾಗುವುದು, ಸ್ಪರ್ಶಜ್ಞಾನ ಹೊರಟುಹೋಗುವುದು, ನಿದ್ದೆಯಲ್ಲಿ ನಡೆಯುವುದು, ಕಿವುಡಾಗುವುದು, ಕಣ್ಣು ಕಾಣಿಸದಿರುವುದು, ಮರೆವು ಮುಂತಾದವುಗಳು ಆಗಬಹುದು. ಹಿಸ್ಟೀರಿಯಾದಿಂದ ಒಂದೇ ವ್ಯಕ್ತಿಯಲ್ಲಿ ಒಂದಕ್ಕಿಂತ ಹೆಚ್ಚಿನ ವ್ಯಕ್ತಿತ್ವ ಕೂಡ ಕಂಡುಬರಬಹುದು. ಇಂತಹ ಸಂದರ್ಭಗಳಲ್ಲಿ ಒಂದು ವ್ಯಕ್ತಿತ್ವ ಮಾಡುವ ಕೆಲಸದ ಅರಿವು ಇನ್ನೊಂದಕ್ಕಿರುವುದಿಲ್ಲ. ಕೆಲವು ವೇಳೆ ದೈಹಿಕರೋಗಗಳೂ ಹಿಸ್ಟೀರಿಯಾವೂ ಒಟ್ಟಿಗೇ ಇರುತ್ತವೆ. ಆಗ ಎಂತಹ ಒಳ್ಳೆಯ ಚಿಕಿತ್ಸೆ ಕೊಟ್ಟರೂ ದೈಹಿಕ ಬೇನೆ ವಾಸಿಯಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಕೇವಲ ದೈಹಿಕ ಬೇನೆಗಳಿಗೆ ಚಿಕಿತ್ಸೆ ಕೊಡುವುದಲ್ಲದೆ ಮನೋರೋಗಕ್ಕೂ ಚಿಕಿತ್ಸೆ ಕೊಡಬೇಕು. ಮಾನಸಿಕ ಅಸ್ವಸ್ಥತೆಯೆಂದರೆ ಹುಚ್ಚು ಎನ್ನುವುದು ತಪ್ಪು. ಹಿಸ್ಟೀರಿಯಾ ಕಾಯಿಲೆಯಿರುವವರು ಸಾಮಾನ್ಯವಾಗಿ ಬಹಳ ಬುದ್ಧಿವಂತರು. ಹಿಸ್ಟೀರಿಯಾ ಗುಣವಾಗುವಂತಹ ಕಾಯಿಲೆ. ಸಕಾಲದಲ್ಲಿ ಚಿಕಿತ್ಸೆಗೊಳಪಡಿಸದಿದ್ದಲ್ಲಿ ಶಾಶ್ವತ ಕುಂದುಂಟಾಗುವ ಸಾಧ್ಯತೆಯೂ ಇದೆ.

ಅಂದು ಸೋಮವಾರ, ಸೋಮವಾರ ಸಾಮಾನ್ಯವಾಗಿ ಕ್ಲಿನಿಕ್ಕಿನಲ್ಲಿ ಬಹಳ ಕೆಲಸವಿರುತ್ತದೆ. ಎರಡು ನರ್ಸಿಂಗ್ ಹೋಮುಗಳ ಭೇಟಿ ಮುಗಿಸಿ ಬೆಳಿಗ್ಗೆ ಹತ್ತು ಗಂಟೆಗೆ ಯಥಾಪ್ರಕಾರ ನನ್ನ ಕ್ಲಿನಿಕ್ಕಿಗೆ ಹೋದೆ. ಹೋದ ಕೂಡಲೇ ನನ್ನ ರಿಸೆಪ್ಷನಿಸ್ಟ್ ನನಗಾಗಿ ಕಾಯುತ್ತಿದ್ದ ರೋಗಿಗಳ ಪಟ್ಟಿಯನ್ನು ತಂದುಕೊಟ್ಟಳು. ಆ ಪಟ್ಟಿಯನ್ನು ನೋಡಿ ನನಗೆ ಸ್ವಲ್ಪ ದಿಗಿಲಾಯಿತು. ಮೊದಲನೇ ರೋಗಿಯನ್ನು ಒಳಕ್ಕೆ ಕರೆದು ನನ್ನ ಕೆಲಸ ಪ್ರಾರಂಭಿ

ಸಿದೆ. ಸ್ವಲ್ಪ ಸಮಯ ಕಳೆದಿರಬಹುದು. ನನ್ನ ಫೋನ್ "ಟ್ರಿಣ್" ಎಂದಿತು. ರಿಸೀವರ್ ಕೈಗೆತ್ತಿಕೊಂಡಾಗ ರಿಸೆಪ್ಷನಿಸ್ಟ್, "ಸಾರ್, ನಿಮಗೆ ಡಾ. ರಾಜು ರೆಡ್ಡಿಯವರು ಫೋನ್ ಮಾಡಿದ್ದಾರೆ," ಎಂದು ಹೇಳಿದಳು. ಡಾ. ರಾಜು ರೆಡ್ಡಿಯವರು ನನ್ನ ಮಿತ್ರರು ಮತ್ತು ಲಿಂಗರಾಜಪುರದ ರಾಜು ನರ್ಸಿಂಗ್ ಹೋಮಿನ ಒಡೆಯರು. ನನ್ನನ್ನು ಸಲಹೆಗೋಸ್ಕರ ಆಗಿಂದಾಗ್ಗೆ ಕರೆಯುವುದುಂಟು. ಅವರ ಕರೆಯೆಂದು ತಿಳಿದಾಗಲೇ ಏನೋ ಕಾದಿದೆಯೆಂದು ಊಹಿಸಿದೆ. ಡಾ. ರಾಜು ರೆಡ್ಡಿಯವರು ಫೋನಿನಲ್ಲಿ ಲಕ್ವ (Paralysis) ಹೊಡೆದ ರೋಗಿಯೊಬ್ಬರಿದ್ದಾರೆಂದೂ ಅವರನ್ನು ಪರೀಕ್ಷಿಸಲು ಬರಬೇಕೆಂದೂ ವಿಜ್ಞಾಪಿಸಿಕೊಂಡರು.

ಲಕ್ವ ತೊಂದರೆಯು ಮಿದುಳಿನ ನ್ಯೂನ್ಯತೆಯಿಂದಾಗಬಹುದು, ಮಾನಸಿಕ ತೊಂದರೆಗಳಿಂದಲೂ ಆಗಬಹುದು. ಇದು ಮಾನಸಿಕ ಎಂದುಕೊಳ್ಳುವ ಮುಂಚೆ ಮಿದುಳಿನ ನ್ಯೂನತೆಯಿಲ್ಲವೆನ್ನುವುದನ್ನು ಖಾತ್ರಿ ಮಾಡಿಕೊಳ್ಳಬೇಕು. ನನ್ನ ಕ್ಲಿನಿಕ್ಕಿನ ಕೆಲಸ ಮುಗಿಸಿ ಮಧ್ಯಾಹ್ನ ಎರಡು ಗಂಟೆಗೆ ರಾಜು ನರ್ಸಿಂಗ್ ಹೋಮಿಗೆ ಹೋದೆ. ರೋಗಿ ೨೨ ವರ್ಷದ ಲಕ್ಷ್ಮಿ—ನೋಡಲು ಹಳ್ಳಿಯ ಹೆಂಗಸಿನಂತಿದ್ದರೂ ಬುದ್ಧಿವಂತಳೆಂದು ತಿಳಿದುಕೊಳ್ಳಲು ಬಹಳ ಸಮಯವಾಗಲಿಲ್ಲ. ಆಕೆ ಬೇಕೋ ಬೇಡವೋ ಎನ್ನುವ ರೀತಿಯಲ್ಲಿ ಮಾತನಾಡಿದಳು. ಮುಖದಲ್ಲಿ ಏನೋ ಚಿಂತೆಯಿರುವಂತೆ ಕಾಣುತ್ತಿತ್ತು. ಕೈಗಳು ನಡುಗುತ್ತಿದ್ದವು. ಅವಳು ಒಬ್ಬ ನೊಂದ ಜೀವಿ ಎಂದು ಸುಲಭವಾಗಿ ಹೇಳಬಹುದಾಗಿತ್ತು. ಲಕ್ಷ್ಮಿಯ ಪ್ರಕಾರ ಅವಳ ತೊಂದರೆಗಳು ಪ್ರಾರಂಭವಾದದ್ದು ಸುಮಾರು ಒಂದು ತಿಂಗಳ ಹಿಂದೆ. ಆಗ ಮುಟ್ಟು ಸರಿಯಾಗಿ ಆಗುತ್ತಿರಲಿಲ್ಲವಾದುದರಿಂದ ಗರ್ಭಕೋಶದಲ್ಲಿ ಒಂದು ಸಣ್ಣ ಶಸ್ತ್ರಕ್ರಿಯೆ ಮಾಡಿಸಿದ್ದರು. ಈ ಶಸ್ತ್ರಕ್ರಿಯೆಯಾದ ಎರಡು ದಿನಗಳ ನಂತರ ಅವಳ ಬಲ ತೊಡೆಯಲ್ಲಿ ನೋವು ಮತ್ತು ಊತ ಕಾಣಿಸಿತು. ಯಾರದೋ ಸಲಹೆಯ ಪ್ರಕಾರ ಎಣ್ಣೆ ತೀಡಿ, ಬಿಸಿ ನೀರು ಹಾಕಿದ ನಂತರ ಊತ ಕಡಿಮೆಯಾಯಿತು, ನೋವು ಮಾತ್ರ ಹಾಗೆಯೇ ಉಳಿದುಕೊಂಡಾಗ ವೈದ್ಯರ ಬಳಿ ಕರೆದುಕೊಂಡು ಹೋಗಿ ಎರಡು ಚುಚ್ಚುಮದ್ದನ್ನು ಕೊಡಿಸಲಾಯಿತು. ಮೂರು ದಿನಗಳ ನಂತರ ಬೆಳಗ್ಗೆ ಎಚ್ಚರವಾದಾಗ ಹಾಸಿಗೆ ಬಿಟ್ಟೇಳಲು ಆಗಲಿಲ್ಲ, ಬಲಗಾಲನ್ನು ಅಲ್ಲಾಡಿಸಲೂ ಆಗಲಿಲ್ಲ. ಆಗ ಒಬ್ಬ ವೈದ್ಯರ ಬಳಿ ತೋರಿಸಿದಾಗ ಅವರು ಇದು ಲಕ್ವ ಎಂದು ಹೇಳಿ ಆಸ್ಪತ್ರೆಗೆ ಕರೆದೊಯ್ಯಬೇಕೆಂದು ಸಲಹೆಯಿತ್ತರು. ಅದರಂತೆ ಆಕೆಯನ್ನು ಬೆಂಗಳೂರಿನ ಒಂದು ಪ್ರಸಿದ್ಧ ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿ ಒಂದು ವಾರ ಚಿಕಿತ್ಸೆ ಕೊಟ್ಟ ನಂತರ ಅಲ್ಲಿನ ವೈದ್ಯರು ಇನ್ನು ಮೂರು ತಿಂಗಳು ಬಿಟ್ಟು ಮತ್ತೆ ಬರಬೇಕೆಂದೂ ಆಗಲೂ ವಾಸಿಯಾಗದಿದ್ದಲ್ಲಿ ಮಿದುಳಿನ ಮೇಲೆ ಒಂದು ಶಸ್ತ್ರಕ್ರಿಯೆ ನಡೆಸಬೇಕಾಗುವುದೆಂದೂ ಹೇಳಿ ಅವಳನ್ನು ಮನೆಗೆ ಕಳುಹಿಸಿದರು. ಇದಾದ ಹದಿನೈದು ದಿನಗಳ ವರೆಗೆ ಲಕ್ಷ್ಮಿಯ ಮನೆಯಲ್ಲಿ ಪೂಜೆ ಪುನಸ್ಕಾರ ನಡೆದುದಲ್ಲದೆ ಮಂತ್ರವಾದಿಯನ್ನೂ ಸಂಪರ್ಕಿಸಲಾಯಿತು. ಒಬ್ಬ ಮಂತ್ರವಾದಿಯಂತೂ ಗುಣಪಡಿಸುವೆನೆಂದು ನಂಬಿಸಿ ಮಂತ್ರ ಮಾಡುವುದಕ್ಕೆ ೫೦೦ ರೂಪಾಯಿಗಳನ್ನು ಕಸಿದುಕೊಂಡನಾದರೂ ಲಕ್ವ ಮಾತ್ರ ವಾಸಿಯಾಗಲಿಲ್ಲ. ಹೀಗಿರುವಾಗ ಒಂದು ದಿನ ಯೋನಿಯಿಂದ ಹೆಚ್ಚು ರಕ್ತಸ್ರಾವವಾಗಲು ಪ್ರಾರಂಭವಾಯಿತು. ಕೂಡಲೇ ಡಾ. ರೆಡ್ಡಿಯವರನ್ನು ಮನೆಗೆ ಕರೆಸಲಾಯಿತು. ರೆಡ್ಡಿಯವರು ಅವಳನ್ನು ನರ್ಸಿಂಗ್ ಹೋಮಿಗೆ ಸೇರಿಸಿ ಚಿಕಿತ್ಸೆ ನಡೆಸಿದ ನಂತರ ರಕ್ತಸ್ರಾವ ನಿಂತುಹೋಯಿತು. ಅವರಿಗೆ ತಮ್ಮ ರೋಗಿಗಳ ಮೇಲೆ ಬಹಳ ಅನುಕಂಪ. ಹೀಗಾಗಿ ಲಕ್ಷ್ಮಿಯ ಲಕ್ವದ ಬಗ್ಗೆ ಏನಾದರೂ ಮಾಡಲು ಸಾಧ್ಯವೇ ಎಂಬ ಕುತೂಹಲದಿಂದ ನನ್ನನ್ನು ಸಲಹೆಗೆ ಕರೆದರು.

ಈಗ ನನ್ನ ಮುಂದಿದ್ದ ಪ್ರಶ್ನೆ ಈ ಲಕ್ವ ಮಿದುಳಿನ ನ್ಯೂನತೆಯಿಂದಲೋ ಅಥವಾ ಮಾನಸಿಕವೋ ಎಂಬುದು. ಈ ದೃಷ್ಟಿಯಿಂದ ಪರೀಕ್ಷೆ ಮಾಡಲು ಪ್ರಾರಂಭಿಸಿದೆ. ಲಕ್ಷ್ಮಿಯ ಕಾಲನ್ನು ಮುಟ್ಟಿದರೆ ಅಥವಾ ಚುಚ್ಚಿದರೆ

ಆದರ ಅರಿವೂ ಕೂಡ ಅವಳಿಗ ಆಗಲಿಲ್ಲ. ಎರಡು ಕಾಲಿನ ರಿಫ್ಲೆಕ್ಸಸ್ (Reflexes) ಗಳನ್ನು ಹೋಲಿಸಿದರೂ ಏನೂ ತಿಳಿಯಲಿಲ್ಲ. ಮಿದುಳಿನ ನ್ಯೂನತೆಯಿಂದ ಕೇವಲ ಒಂದು ಕಾಲಿಗೆ ಲಕ್ವ ಹೊಡೆಯುವುದು ಅತಿ ವಿರಳ, ಆದರೆ ಹೀಗಾಗುವ ಸಾಧ್ಯತೆಯೂ ಇಲ್ಲದಿಲ್ಲ. ಪರೀಕ್ಷೆ ಮುಗಿಸಿದ ನಂತರ ಇದು ಮಾನಸಿಕ ಎಂದು ಹೇಳುವುದಕ್ಕೆ ಹೆಚ್ಚು ಕಾರಣಗಳಿವೆ ಯೆಂಬ ಅಭಿಪ್ರಾಯಕ್ಕೆ ಬಂದೆ, ಆದರೆ ಇದು ಮಿದುಳಿನ ನ್ಯೂನತೆಯಿಂದಾಗಿಲ್ಲ ಎನ್ನುವುದು ಇನ್ನೂ ಖಾತ್ರಿಯಾಗಿರಲಿಲ್ಲ. ಅನುಮಾನವನ್ನು ಪರಿಹರಿಸಿಕೊಳ್ಳಲು ಲಕ್ಷ್ಮಿಯನ್ನು ನಾರ್ಕೋ ಅನಾಲಿಸೀಸ್ ಎಂಬ ಪರೀಕ್ಷೆಗೆ ಒಳಪಡಿಸಲು ನಿರ್ಧರಿಸಿದೆ. ನಾರ್ಕೋ ಅನಾಲಿಸಿಸ್‌ನಲ್ಲಿ ಪೇಟೋಥಾಲ್ ಎಂಬ ಔಷಧವನ್ನು ರಕ್ತ-ನಾಳದ ಮೂಲಕ ಕೊಟ್ಟು ರೋಗಿಯ ಹೊರ ಮನಸ್ಸು ನಿದ್ರೆ ಹೋಗುವಂತೆ ಮಾಡು-ತ್ತೇವೆ. ಅಂತಹ ಸಮಯದಲ್ಲಿ ಒಬ್ಬ ವ್ಯಕ್ತಿಯ ಸುಪ್ತ ಮನಸ್ಸನ್ನು ಭೇದಿಸಲು ಸಾಧ್ಯ. ಆಗ ರೋಗಿಗೆ ಕಾಲು ಚಲಿಸುವಂತೆ ಸಲಹೆ ಕೊಡು-ತ್ತೇವೆ. ಈ ಕಾಂ. ' ಮಾನಸಿಕವಾಗಿದ್ದರೆ ಆಗ ರೋಗಿಯು ಕಾಲನ್ನು ಚಲಿಸುವನು. ಒಂದು ವೇಳೆ ಈ ಕಾಯಿಲೆ ಮಿದುಳಿನ ನ್ಯೂನತೆಯಿಂದ ಆಗಿದ್ದರೆ ರೋಗಿಗೆ ಕಾಲನ್ನು ಚಲಿಸಲು ಸಾಧ್ಯ-ವಾಗುವುದಿಲ್ಲ. ಈ ಪರೀಕ್ಷೆಯನ್ನು ಖಾಲಿ ಹೊಟ್ಟೆಯಲ್ಲಿ ಮಾಡಬೇಕಾದುದರಿಂದ ಮಾರನೇ ದಿನ ಬೆಳಿಗ್ಗೆ ಮಾಡಲು ನಿರ್ಧರಿಸಿದೆ.

ಮಾರನೆಯ ದಿನ ನರ್ಸಿಂಗ್ ಹೋಮಿಗೆ ಬಂದಾಗ ಅಲ್ಲಿನ ದಾಯಿಯರು ರೋಗಿಯು ರಾತ್ರಿ ನಿದ್ದೆಯಲ್ಲಿ ಕಾಲು ಚಲಿಸಿದಳೆಂಬ ವರದಿ-ಯನ್ನೊಪ್ಪಿಸಿದರು, ಈಗ ನಾರ್ಕೋ ಅನಾ-ಲಿಸಿಸ್ಸಿನ ಅವಶ್ಯಕತೆ ಇರಲಿಲ್ಲ. ರೋಗದ ಮೂಲ ಕಾರಣ ಮಾನಸಿಕವೆಂದು ಖಚಿತ-ವಾಯಿತು.

ನಾವು ನಿದ್ರೆ ಮಾಡುವಾಗ ನಮ್ಮ ಬಾಹ್ಯ-ಪ್ರಜ್ಞೆಯು ಹಿಡಿತ ಸಡಿಲವಾಗುತ್ತದೆ. ಆಗ ನಮ್ಮ ಸುಪ್ತ ಬಯಕೆಗಳು ಕನಸಿನ ಮೂಲಕ ಹೊರಬರುತ್ತವೆ. ನಮಗೆ ಎಚ್ಚರವಾದ ನಂತರ ಮತ್ತೆ ಬಾಹ್ಯ ಪ್ರಜ್ಞೆಯ ಹಿಡಿತ ಬಿಗಿಯಾಗು-ತ್ತದೆ, ಅಲ್ಲದೆ ರಾತ್ರಿ ನಡೆದದ್ದೆಲ್ಲ ನಮಗೆ ಜ್ಞಾಪಕವಿರುವುದಿಲ್ಲ. ಲಕ್ಷ್ಮಿಯ ಈ ಕಾಯಿಲೆ ಮಾನಸಿಕ ಎಂದು ಖಚಿತವಾದ ಮೇಲೆ ಅವಳ ಸುಪ್ತ ಮನಸ್ಸನ್ನು ಯಾವ ರೀತಿ ಭೇದಿಸಬೇಕು ಎಂಬ ಪ್ರಶ್ನೆ ಸ್ವಾಭಾವಿಕವಾಗಿಯೆ ನನ್ನ ಮುಂದೆ ನಿಂತಿತು. ಲಕ್ಷ್ಮಿಗೆ ಚಿಂತೆಯೇನಾದರೂ ಇದೆಯೇ ಎಂದು ಕೇಳಿದಾಗ ಏನೂ ಇಲ್ಲವೆಂದು ಒಂದೇ ಬಾರಿಗೆ ಹೇಳಿಬಿಟ್ಟಳು. ಇವನ್ನು ಬೇರೆ ರೀತಿ ಭೇದಿಸಬೇಕೆಂದು ನಿರ್ಧರಿಸಿ ಅಲ್ಲಿಯೇ ಹತ್ತಿರದಲ್ಲಿದ್ದ ಕುರ್ಚಿಯಲ್ಲಿ ಕುಳಿತೆ.

ಮನೋವಿಶ್ಲೇಷಣೆಯೆನ್ನುವುದು ಒಂದು ರೀತಿಯ ಮಾನಸಿಕ ಚಿಕಿತ್ಸೆ. ಇದರಲ್ಲಿ ಮಾತ-ನಾಡುವುದೇ ಬಹಳ ಮುಖ್ಯ. ಸುಪ್ತ ಮನ-ಸ್ಸನ್ನು ಅರಿತುಕೊಳ್ಳುವುದೇ ಈ ಚಿಕಿತ್ಸೆಯ ಉದ್ದೇಶ. ಲಕ್ಷ್ಮಿಯ ಸುಪ್ತ ಮನಸ್ಸು ಅವ ಳನ್ನು ಈ ರೀತಿ ಏತಕ್ಕೋಸ್ಕರ ತೊಂದರೆಗೀಡು ಮಾಡುತ್ತಿದೆಯೆಂದು ಅರಿತುಕೊಂಡರೆ ಅವಳ ಕಾಯಿಲೆ ವಾಸಿಯಾಗುವುದು. ಇದು ಬಹಳ ಸೂಕ್ಷ್ಮವಾದ ಚಿಕಿತ್ಸೆ. ಅಮೇರಿಕದ ಆಡುಮಾತಿ ನಲ್ಲಿ ಇದು ಮಾತಿನ ಚಿಕಿತ್ಸೆ (Talk-Therapy) ಎಂದು ಪ್ರಸಿದ್ಧಿಯಾಗಿದೆ. ಕೆಲವು ಜನರು ಮಾತನಾಡಲು ಹಣವನ್ನು ಏತಕ್ಕೋ-ಸ್ಕರ ಖರ್ಚು ಮಾಡಬೇಕೆಂದು ಕೇಳುವುದು ಸಹಜ. ಆದರೆ ಇದು ಒಂದು ಚಿಕಿತ್ಸಾ ವಿಧಾನ ಮಾತನಾಡುವುದು ಮಾತ್ರವೇ ಅಲ್ಲ, ಮಾತಿ-ನಿಂದ ಸುಪ್ತ ಮನಸ್ಸನ್ನು ಅರ್ಥ ಮಾಡಿಕೊಂಡು ಕಾಯಿಲೆ ವಾಸಿ ಮಾಡುವ ವಿಧಾನ. ಕುರ್ಚಿ-ಯಲ್ಲಿ ಕುಳಿತು ಸುಮಾರು ಒಂದು ಗಂಟೆಯ-ವರೆಗೆ ಲಕ್ಷ್ಮಿಯ ಜೀವನದ ವಿಷಯಗಳನ್ನೆಲ್ಲ ಕೂಲಂಕಷವಾಗಿ ತಿಳಿದುಕೊಂಡೆ.

ಆಕೆಯು ಮದುವೆಯಾಗಿ ಏಳು ವರ್ಷಗಳಾ-ಗಿತ್ತು. ಅವಳಿಗೆ ಎರಡು ಗಂಡು ಮಕ್ಕಳು ಸಹ ಇದ್ದರು. ದಾಂಪತ್ಯ ಜೀವನದಲ್ಲಿ ಏನೂ ತೊಂದರೆ ಇರಲಿಲ್ಲವೆಂದು ಆಕೆ ಹೇಳಿದಳು. ಲಕ್ಷ್ಮಿ ಪಿ. ಯು. ಸಿ. ವರೆಗೆ ಓದಿದ್ದಳು. ತಾಯಿ ತೀರಿದಾಗ ಆಕೆಗೆ ಕೇವಲ ಮೂರು ತಿಂಗಳು. ಎರಡು ವರ್ಷಗಳ ಹಿಂದೆ ತಂದೆಯೂ ತೀರಿ-

ಕೊಂಡ. ತಾಯಿ ಕಾಲವಾದ ನಂತರ ತಂದೆ ಮರುಮದುವೆಯಾದ. ಮಲತಾಯಿ ಲಕ್ಷ್ಮಿಗೂ ಅವಳ ಸಹೋದರರಿಗೂ ಬಹಳ ಕಿರುಕುಳ ಕೊಟ್ಟಳು. ಒಂದು ಬಾರಿ ಲಕ್ಷ್ಮಿ ಕೇಳದೆ ತಿಂಡಿಯನ್ನು ತಿಂದಳೆಂದು ಬಲಗೈಯ ಎರಡು ಬೆರಳುಗಳ ತುದಿಗಳನ್ನೇ ಕತ್ತರಿಸಿದ್ದಾಳೆ. ಲಕ್ಷ್ಮಿಗೆ ಏಳು ಜನ ಸಹೋದರರು; ಸಹೋದರಿಯರು ಇಲ್ಲ. ಸಹೋದರರಿಗೆಲ್ಲ ಲಕ್ಷ್ಮಿಯನ್ನು ಕಂಡರೆ ಬಹಳ ಮಮತೆಯಿತ್ತು. ಆ ದಿನದ ಭೇಟಿ ಅಲ್ಲಿಗೇ ಮುಕ್ತಾಯವಾಯಿತು.

ಅಲ್ಲಿಂದ ನನ್ನ ಕ್ಲಿನಿಕ್ಕಿಗೆ ಹೊರಟೆ, ನನ್ನ ಮನಸ್ಸು ದಾರಿಯುದ್ದಕ್ಕೂ ಲಕ್ಷ್ಮಿಗೆ ಯಾತಕ್ಕೋಸ್ಕರ ಆ ರೀತಿ ಆಗುತ್ತಿದೆಯೆಂಬುದನ್ನೇ ಯೋಚಿಸುತ್ತಿತ್ತು. ಚಿಕ್ಕಂದಿನಲ್ಲೇನೋ ಲಕ್ಷ್ಮಿ ಮಲತಾಯಿಯಿಂದ ತೊಂದರೆ ಅನುಭವಿಸಿರುವುದು ನಿಜ. ಅವಳಿಗೆ ಈಗಿನ ತೊಂದರೆ ಪ್ರಾರಂಭವಾದದ್ದು ಕೇವಲ ಒಂದು ತಿಂಗಳಿಂದ, ನಿಜವಾಗಿಯೂ ಮಲತಾಯಿಯ ತೊಂದರೆಯೇ ಇದಕ್ಕೆ ಕಾರಣವಾಗಿದ್ದಲ್ಲಿ ಈ ಲಕ್ಷಣ ಮೊದಲೇ ಬಾರದೆ ಈಗೇಕೆ ಬಂದಿತು ? ಎಂಬುದು ಬಗೆಹರಿಯಲಾಗದ ಸಮಸ್ಯೆಯಾಯಿತು. ಕಡೆಗೆ ಈಗಿನ ತೊಂದರೆಗೆ ಬೇರೆ ಕಾರಣವಿರಬೇಕು ಎಂಬ ನಿರ್ಧಾರಕ್ಕೆ ಬಂದೆ.

ಅಂದು ನನ್ನ ಮೂರನೇ ಭೇಟಿ. ಲಕ್ಷ್ಮಿಯ ಕಾಯಿಲೆಯಲ್ಲಿ ಏನೂ ವ್ಯತ್ಯಾಸವಿರಲಿಲ್ಲ. ಒಂದು ತಿಂಗಳ ಹಿಂದೆ ಮನಸ್ಸಿಗೆ ಬೇಸರವಾಗುವಂತಹುದೇನಾದರೂ ಆಯಿತೇ ಎಂದು ತಿಳಿಯಲು ಪ್ರಯತ್ನಿಸಿ ವಿಫಲನಾದೆ. ಇದು ಮೂರನೇ ಭೇಟಿಯಾಗಿದ್ದರೂ ಸಹ ಒಂದು ಬಾರಿಯಾದರೂ ಅವಳ ಪತಿ ನನ್ನನ್ನು ಬಂದು ಕಾಣಲಿಲ್ಲ, ಇದು ವಿಚಿತ್ರವಾಗಿತ್ತು. ಇದರಿಂದ ದಾಂಪತ್ಯ ಜೀವನದಲ್ಲಿ ಅವಳಿಗೆ ತೊಂದರೆಯೇನಾದರೂ ಇರಬಹುದೇ ಎಂಬ ಸಂಶಯ ಬಂದಿತು. ಅದರ ಬಗ್ಗೆ ಪ್ರಶ್ನಿಸಲು ಪ್ರಾರಂಭಿಸಿದ್ದೇ ತಡ, ಲಕ್ಷ್ಮಿಯ ದುಃಖದ ಕಟ್ಟೆ ಒಡೆಯಿತು. ಅವಳ ಕಥೆ ಮುಗಿಯುವ ಹೊತ್ತಿಗೆ ಲೆಕ್ಕವಿಲ್ಲದಷ್ಟು ಬಾರಿ ಆಕೆ ಮಧ್ಯೆ ಮಧ್ಯೆ ಅತ್ತಿದ್ದಳು.

ಏಳು ವರ್ಷದ ಹಿಂದಿನ ಮಾತಿದು. ಲಕ್ಷ್ಮಿ ಓದಿನಲ್ಲಿ ಬಹಳ ಮುಂದಿದ್ದರಿಂದ ಚಿಕ್ಕ ವಯಸ್ಸಿನಲ್ಲೇ ಕಾಲೇಜು ಮೆಟ್ಟಿಲನ್ನೇರಿದ್ದಳು. ಅವಳ ಸಹೋದರರೊಬ್ಬರು ಪ್ರತಿದಿನ ಸ್ಕೂಟರಿನಲ್ಲಿ ಅವಳನ್ನು ಕಾಲೇಜಿಗೆ ಬಿಟ್ಟು ಬರುವುದು ಮತ್ತು ಮನೆಗೆ ಕರೆದುಕೊಂಡು ಹೋಗುವುದು ವಾಡಿಕೆಯಾಗಿತ್ತು. ಆ ದಿನ ಲಕ್ಷ್ಮಿಯ ಸಹೋದರ ಕತ್ತಲಾದರೂ ಬರಲಿಲ್ಲ. ಕಾಲೇಜಿನಲ್ಲಿ ಎಲ್ಲರೂ ಹೊರಟುಹೋಗಿದ್ದರು. ಅಲ್ಲಿ ಗಾರೆಯ ಕೆಲಸ ಮಾಡುವವನು ಮಾತ್ರ ಇನ್ನೂ ಕೆಲಸ ಮಾಡುತ್ತಲೇ ಇದ್ದ. ಲಕ್ಷ್ಮಿಯ ಅಸಹಾಯಕತೆಯನ್ನು ಗಮನಿಸಿ ಬಲಾತ್ಕಾರದಿಂದ ಅವಳ ಶೀಲವನ್ನು ಹಾಳು ಮಾಡಿದ. ಅಲ್ಲಿಂದ ಲಕ್ಷ್ಮಿಯ ಜೀವನ ಬಹಳ ಕಷ್ಟವಾಯಿತು. ತಂದೆಯವರು ಪೋಲೀಸ್ ದೂರು ಕೊಟ್ಟು ಗಾರೆಯವನನ್ನು ಜೈಲಿಗೆ ಕಳುಹಿಸಿದರು.

ಈ ಘಟನೆಯ ನಂತರ ಮನೆಯವರೆಲ್ಲ ಲಕ್ಷ್ಮಿಯನ್ನು ತುಚ್ಛವಾಗಿ ಕಾಣಲು ಪ್ರಾರಂಭಿಸಿದರು. ಅವರಿಗೆ ಮನೆಯ ಗೌರವ ಮುಖ್ಯವಾಗಿತ್ತೇ ಹೊರತು ಲಕ್ಷ್ಮಿಗೆ ಇದರಿಂದೇನಾಗಬಹುದು ಎಂಬ ಭಾವನೆ ಬಂದಂತೆ ಕಾಣಲಿಲ್ಲ. ತಂದೆ ಮತ್ತು ಸಹೋದರರು ಆ ಗಾರೆಯವನನ್ನು ಜೈಲಿನಿಂದ ಬಿಡಿಸಿ, ಬೆದರಿಸಿ ಅವನೊಬ್ಬನಿಗೆ ಮದುವೆ ಮಾಡಿದರು. ಲಕ್ಷ್ಮಿಯ ಇಚ್ಛೆಯಿದೆಯೋ ಇಲ್ಲವೋ ಎಂದು ಕೇಳುವವರಾದರೂ ಯಾರು ?

ಮದುವೆಯ ನಂತರ ತೌರಿನವರಾರೂ ಲಕ್ಷ್ಮಿಯೊಡನೆ ಮಾತನಾಡಲೂ ಹೇಸುವರು. ಅವಳು ಮನೆಗೆ ಅಪ್ಪಿತಪ್ಪಿಯೂ ಬರಕೂಡದೆಂದು ವಿಧಿಸಿದರು. ತಂದೆ ಅಥವಾ ಸಹೋದರರನ್ನು ಮಾತನಾಡಿಸಬೇಕಾದರೆ ಎಲ್ಲೋ ನಿರ್ಜನ ಪ್ರದೇಶದಲ್ಲಿ ಸಂಧಿಸಬೇಕಾಗುತ್ತಿತ್ತು; ಅವರಿಗೆಲ್ಲ ಲಕ್ಷ್ಮಿಯ ಜೊತೆಗೆ ಮಾತನಾಡುತ್ತಿರುವುದನ್ನು ಯಾರಾದರೂ ನೋಡುವರೋ ಎಂಬ ಭಯ. ಲಕ್ಷ್ಮಿಗೆ ಬೇಕಾದಾಗ ಅವರು ಹಣವನ್ನೇನೋ ಕೊಡುತ್ತಿದ್ದರು. ಆದರೆ ನಿಜವಾಗಿಯೂ ಲಕ್ಷ್ಮಿಗೆ ಬೇಕಾದುದು

ಒಂದು ಪ್ರೀತಿಯ, ಧೈರ್ಯದ ಮಾತು.

ಅಂದು ನನ್ನ ನಾಲ್ಕನೆಯ ಭೇಟಿಯ ದಿನ. ಹಿಂದಿನ ದಿನ ಮನಸ್ಸಿನಲ್ಲಿದ್ದುದೆಲ್ಲ ಹೊರಗೆ ಬಂದುದರ ಪರಿಣಾಮವಾಗಿ ಲಕ್ಷ್ಮಿ ಸ್ವಲ್ಪ ಉಲ್ಲಾಸದಿಂದಿದ್ದಳು. ಹಿಂದಿನ ದಿನ ನಿದ್ರೆಯೂ ಚೆನ್ನಾಗಿಯೇ ಬಂತೆಂದು ಹೇಳಿದಳು. ಇದು ವರೆಗೂ ಹೊಟ್ಟೆ ಹಸಿಯದೇ ಇದ್ದುದು ಈಗ ಸ್ವಲ್ಪ ಹಸಿಯಲು ಪ್ರಾರಂಭವಾಗಿತ್ತು. ಇವೆಲ್ಲ ಒಳ್ಳೆಯ ಲಕ್ಷಣಗಳೆಂದು ನನ್ನ ಮನಸ್ಸಿನಲ್ಲಿಯೇ ಅಂದುಕೊಂಡೆ. ಆದರೆ ಅವಳ ಕಾಲು ಮಾತ್ರ ಮೊದಲಿದ್ದ ಹಾಗೆಯೇ ಇತ್ತು.

ಇದುವರೆವಿಗೂ ವಿಷಯಗಳನ್ನು ಮಾತ್ರ ಸಂಗ್ರಹಿಸುತ್ತಿದ್ದೆ. ಆ ದಿನ ಲಕ್ಷ್ಮಿಗೆ ಕೆಲವು ವಿಷಯಗಳನ್ನು ತಿಳಿಸಲು ಪ್ರಾರಂಭಿಸಿದೆ. ಅವಳಿಗೆ ಮಿದುಳಿನ ನ್ಯೂನತೆಯೇನೂ ಇಲ್ಲವೆಂದೂ ಅವಳ ಲಕ್ವ ಕೇವಲ ಮಾನಸಿಕವೆಂದೂ ಬಿಂಬಿಸಿದೆ. ಈ ಅಭಿಪ್ರಾಯವನ್ನು ಸಮರ್ಥಿಸಿ ನಿದ್ರೆಯಲ್ಲಿ ಅವಳು ಕಾಲನ್ನು ಚಲಿಸುವುದು ಮತ್ತು ನಾನು ಮಾಡಿದ ಪರೀಕ್ಷೆಯಿಂದ ಮಿದುಳಿನ ದೋಷವಿರುವ ಚಿಹ್ನೆಗಳಾವುದೂ ಕಂಡುಬರಲಿಲ್ಲವೆಂದೂ ಹೇಳಿದೆ. ಅವಳ ಸುಪ್ತ ಮನಸ್ಸು ಅವಳಿಗರಿವಿಲ್ಲದಂತೆ ಲಕ್ವ ಹೊಡೆದಂತೆ ಮಾಡಿದೆಯೆಂದೂ ಮತ್ತು ಆ ಸುಪ್ತ ಮನಸ್ಸು ಬೇಕೆಂದೇ ಈ ರೀತಿ ಮಾಡಲು ಯಾವುದೋ ಪ್ರಬಲವಾದ ಕಾರಣವಿರಬೇಕೆಂದೂ ಹೇಳಿದೆ. ಇದಕ್ಕೆ ಲಕ್ಷ್ಮಿಯು, "ನಾನು ಹೊಲಿಗೆ ಕೆಲಸ ಮಾಡಿ ತಿಂಗಳಿಗ ೨೦೦ ರೂಪಾಯಿಗಳವರೆವಿಗೂ ಸಂಪಾದಿಸುತ್ತಿದ್ದೆ" ಎಂದಳು.

ಮನೋರೋಗ ನಿದಾನ ಅತಿ ಸೂಕ್ಷ್ಮವಾದ ವಿಧಾನ ಎಂದು ಹಿಂದೆಯೇ ಹೇಳಿದೆ. ಮನೋರೋಗ ತಜ್ಞರು ತಾಳ್ಮೆ ಇರುವವರಾಗಿರಬೇಕು, ರೋಗಿಯು ಹೇಳುವ ಪ್ರತಿಯೊಂದು ವಿಷಯವನ್ನೂ ಏತಕ್ಕೋಸ್ಕರ ಹೇಳುತ್ತಿರುವನು ಎಂಬುದನ್ನು ಅರಿತುಕೊಳ್ಳಲು ಪ್ರಯತ್ನಿಸಬೇಕು. ವಾಚಕರಿಗೆ ನನ್ನ ಹೇಳಿಕೆಗೆ ಲಕ್ಷ್ಮಿಯ ಉತ್ತರ ಸಮಂಜಸವಲ್ಲವೆನ್ನಿಸಬಹುದು. ಲಕ್ಷ್ಮಿಯ ಸುಪ್ತ ಮನಸ್ಸು ನಾನು ಕೇಳಿದ ಪ್ರಶ್ನೆಗೂ ಮತ್ತು ಅವಳು ಕೊಟ್ಟ ಉತ್ತರಕ್ಕೂ ಸಂಬಂಧ ಕಲ್ಪಿಸಿಕೊಡುತ್ತದೆ. ಇದನ್ನು ಸೂಕ್ಷ್ಮ ಮತ್ತು ಅನುಭವಶಾಲಿಗಳಾದ ಮನೋರೋಗ ತಜ್ಞರಿಗೆ ಮಾತ್ರ ಅರಿತುಕೊಳ್ಳಲು ಸಾಧ್ಯ. ಇಲ್ಲಿ ಲಕ್ಷ್ಮಿಯ ಸುಪ್ತ ಮನಸ್ಸು ಕಾಲಿನ ಲಕ್ವಕ್ಕೂ ಮತ್ತು ತನ್ನ ಹೊಲಿಗೆ ಉದ್ಯೋಗಕ್ಕೂ ಸಂಬಂಧವಿದೆಯೆಂದು ತನ್ನದೇ ಆದ ರೀತಿಯಲ್ಲಿ ಹೇಳುತ್ತದೆ, ಇಂತಹ ಸಂದರ್ಭದಲ್ಲಿ ನುರಿತ ಮನೋರೋಗ ತಜ್ಞರು ಇನ್ನೂ ಹೆಚ್ಚಿನ ವಿಷಯಗಳನ್ನು ಸಂಗ್ರಹಿಸಿ, ಅವು ಹೇಗೆ ಎರಡಕ್ಕೂ ಸಂಬಂಧವಿದೆಯೆಂಬುದನ್ನು ಅರಿತುಕೊಳ್ಳಲು ಪ್ರಯತ್ನಿಸಬೇಕು.

ಕಾಲಿಗೆ ಲಕ್ವ ಹೊಡೆದಿರುವುದರಿಂದ ಅವಳಿಗೆ ಹೊಲಿಗೆ ಯಂತ್ರವನ್ನು ತುಳಿಯಲಾಗುತ್ತಿರಲಿಲ್ಲ. ಇದರಿಂದ ಅವಳಿಗೆ ಯಾವ ಸಂಭಾವನೆಯೂ ಇಲ್ಲದಂತಾಯಿತು. ಅವಳ ಪತಿ ಮನೆಗೆ ಬೇಕಾದ ಯಾವ ಪದಾರ್ಥಗಳನ್ನೂ ತರುತ್ತಿರಲಿಲ್ಲ. ಬದಲು ಲಕ್ಷ್ಮಿಯಿಂದಲೇ ಹಣವನ್ನು ದೋಚಿಕೊಂಡು ಹೋಗುತ್ತಿದ್ದ. ಅಣ್ಣಂದಿರಿಂದ ಹಣ ಕೇಳುವುದನ್ನು ಆಕೆ ಸ್ವಾಭಿಮಾನದಿಂದ ಬಹಳ ಹಿಂದೆಯೇ ನಿಲ್ಲಿಸಿ ಬಿಟ್ಟಿದ್ದಳು. ವರಮಾನ ನಿಂತುಹೋದುದರ ಪರಿಣಾಮ ಹೊಟ್ಟೆಗಿಲ್ಲದೆ ನರಳಿ, ಕಡೆಗೆ ಸಾಯುವುದು. ಅಂದರೆ ಅವಳ ಸುಪ್ತಮನಸ್ಸು ಲಕ್ವದಿಂದ ಲಕ್ಷ್ಮಿಯನ್ನು ಸಾವಿಗೀಡುಮಾಡುತ್ತಿದೆಯೆಂದು ಖಚಿತವಾಯಿತು, ಇದು ಕೂಡ ಒಂದು ರೀತಿಯ ಪರೋಕ್ಷವಾದ ಆತ್ಮಹತ್ಯೆ. ಇದನ್ನು ಲಕ್ಷ್ಮಿ ಸಮರ್ಥಿಸಿ, ತನಗೆ ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ಬಯಕೆ ಬಹುದಿನಗಳಿಂದಲೂ ಇದೆಯೆಂದಳು. ಮಕ್ಕಳಿಲ್ಲದಿದ್ದರೆ ಎಂದೋ ತನ್ನ ಜೀವನವನ್ನು ಕೊನೆಗಾಣಿಸುತ್ತಿದ್ದಳೆಂದೂ ಹೇಳಿದಳು.

ಲಕ್ಷ್ಮಿಯು ಮದುವೆಯಾದ ಕೆಲವು ದಿನಗಳಲ್ಲೇ ತನ್ನ ಪತಿಗೆ ಮೊದಲೇ ಮದುವೆಯಾಗಿದೆಯೆಂದೂ ಅವಳ ಮೊದಲನೇ ಪತ್ನಿ ಇನ್ನೂ ಬದುಕಿದ್ದಾಳೆಂದೂ ತಿಳಿಯಿತು, ಲಕ್ಷ್ಮಿಯ ಪತಿ ಎಲ್ಲದಕ್ಕೂ ಹೀಯಾಳಿಸುವುದು ಮತ್ತು ಕೋಪಿಸಿಕೊಂಡು ಮೊದಲನೇ ಪತ್ನಿಯ ಬಳಿ ಹೋಗುವುದು ಸರ್ವೇ ಸಾಮಾನ್ಯವಾಗಿತ್ತು.

ಕಡೆಕಡೆಗಂತೂ ಆತ ಮನೆಗೆ ಬರುವುದೇ ವಿರಳವಾಯಿತು. ಮನೆಗೆ ಬಂದರೆ ಕಿರುಕುಳ ಕೊಡುವುದು, ತೆಗಳುವುದು, ಹೊಡೆಯುವುದು ಮತ್ತು ಹಣ ದೋಚಿಕೊಂಡು ಹೋಗುವುದು.

ಲಕ್ಷ್ಮಿ ಸಮಾಜದಲ್ಲಿ ಬಾಳಲು ಹೆಸರಿಗೊಬ್ಬ ಪತಿಯೆಂದಾದರೂ ಇರಲಿ ಎಂದು ಎಲ್ಲವನ್ನೂ ಸಹಿಸಿಕೊಂಡಳು. ಕಿರುಕುಳ ತಾಳಲಾರದೇ ಆತ್ಮಹತ್ಯೆ ಮಾಡಿಕೊಳ್ಳಲು ಆಗಾಗ ಯೋಚನೆ ಮಾಡಿದಳು. ಕೂಲಿಗೆಯ ವರಮಾನದಲ್ಲಿ ಆಗಾಗ ಒಂದೋ ಎರಡೋ ರೂಪಾಯಿಗಳನ್ನು ಮುಂದೆ ಮಕ್ಕಳಿಗಾಗಲಿ ಎಂದು ಕೂಡಿಸಿ ಒಂದು ಡಬ್ಬಿಯಲ್ಲಿ ಹಾಕಿ ನೆಲದಲ್ಲಿ ಹೂತಿಟ್ಟಿದ್ದಳು; ಅವಳ ಪತಿಗೆ ಇದು ಹೇಗೋ ತಿಳಿದು ಅಷ್ಟು ವರ್ಷಗಳಿಂದ ಕೂಡಿಟ್ಟಿದ್ದ ಎಲ್ಲಾ ಹಣವನ್ನೂ ದೋಚಬಿಟ್ಟ;

ಈ ಘಟನೆ ತಿಳಿದ ನಂತರವೇ ಲಕ್ಷ್ಮಿಗೆ ಲಕ್ವ ಹೊಡೆದದ್ದು. ಈ ನಾಲ್ಕು ದಿನಗಳಲ್ಲಿ ಆಕೆ ಎಷ್ಟು ಕಣ್ಣೀರು ಸುರಿಸಿದ್ದಳೆಂದು ಹೇಳಲು ಅಸಾಧ್ಯ. ಅವಳನ್ನು ಮಂಚದ ತುದಿಯಲ್ಲಿ ಕುಳ್ಳಿರಿಸಿ ಎರಡೂ ಕಾಲುಗಳನ್ನು (ಮೊಣಕಾಲಿನ ಕೆಳಗೆ ಮಂಚದ ತುದಿಯಿಂದ ಕೆಳಗೆ ನೇತಾಡುವಂತೆ) ಬಿಡಲು ಸಲಹೆ ಕೊಟ್ಟೆ. ಅನಂತರ ಅವಳು ತನ್ನ ಬಲಗಾಲನ್ನು ನೋಡಿಕೊಂಡು ಎಡಗಾಲನ್ನು ರಭಸವಾಗಿ ಹಿಂದಕ್ಕೆ ಮತ್ತೆ ಮುಂದಕ್ಕೆ ಒದೆಯುತ್ತಿರುವಂತೆ ಹೇಳಿದೆ. ಆ ರೀತಿ ಎಡಗಾಲನ್ನು ರಭಸವಾಗಿ ಒದ್ದಾಗ ಬಲಗಾಲು ಸ್ವಲ್ಪ ಅಲುಗಾಡಿತು. ಅದೇ ರೀತಿ ನಾನು ಮಾರನೆಯ ದಿನ ಬರುವುದರೊಳಗೆ ನಾಲ್ಕೈದು ಬಾರಿ ಮಾಡಲು ಹೇಳಿದೆ.

ಅಂದು ಐದನೆಯ ಭೇಟಿ. ಲಕ್ಷ್ಮಿಯ ಮನಸ್ಸು ಕ್ರಮೇಣವಾಗಿ ಉಲ್ಲಸಿತಗೊಳ್ಳುತ್ತಿತ್ತು. ಅವಳ ಬಲಗಾಲು ಸುಮಾರಾಗಿ ಅಲುಗಾಡಲು ಪ್ರಾರಂಭಿಸಿತ್ತು. ಈ ದಿನ ಅವಳಿಗೆ ಮಂಚದ ತುದಿಯಲ್ಲಿ ಕುಳಿತು ಎಡಗಾಲನ್ನು ಒದೆಯದೇ ಬಲಗಾಲನ್ನು ಮಾತ್ರ ಒದೆಯಲು ಹೇಳಿದೆ. ಪದೆ ಪದೆ ಆ ರೀತಿ ಮಾಡಿದ ನಂತರ ಬಲಗಾಲನ್ನು ಎಡಗಾಲಿನ ಸಮಕ್ಕೇ ಒದೆಯಲು ಸಾಧ್ಯವಾಯಿತು. ಅನಂತರ ಮಂಚವನ್ನು ಹಿಡಿದು ಓಡಾಡಲು ಸಲಹೆ ಕೊಟ್ಟೆ.

ಅಂದು ಆರನೆಯ ಭೇಟಿ. ಲಕ್ಷ್ಮಿ ಕುರ್ಚಿಯನ್ನು ಹಿಡಿದು ತಳ್ಳಿಕೊಂಡು ನರ್ಸಿಂಗ್ ಹೋಮಿನಲ್ಲೆಲ್ಲ ನಡೆದಾಡುತ್ತಿದ್ದಳು. ನಾನು ಕುರ್ಚಿಯನ್ನು ಅವಳಿಂದ ಕಸಿದುಕೊಂಡು ಕುರ್ಚಿಯಿಲ್ಲದೆಯೆ ನಡೆಯಬೇಕೆಂದು ಹೇಳಿದೆ. ಹಾಗೂ ಹೀಗೂ ವಾಲುತ್ತಾ ಲಕ್ಷ್ಮಿ ನಡೆದೇಬಿಟ್ಟಳು. ಈಗ ಅವಳ ಕಾಲಿಗೆ ಸ್ಪರ್ಶಜ್ಞಾನ ಬಂದಿತ್ತು. ಅದನ್ನು ಚುಚ್ಚಿದರೆ ನೋವಾಗುತ್ತಿತ್ತು. ಪತಿಯನ್ನು ಬಿಟ್ಟವಳು ಎಂಬ ಸಮಾಜದ ನಿಂದೆಯನ್ನು ಎದುರಿಸಲಾರದೆ ಎಲ್ಲವನ್ನೂ ಇದುವರೆವಿಗೂ ಸಹಿಸಿಕೊಂಡು ತನ್ನ ಮತ್ತು ತನ್ನ ಮಕ್ಕಳ ಜೀವನವನ್ನೇ ತಾನು ಹಾಳುಮಾಡುತ್ತಿದ್ದೇನೆಂಬ ಅರಿವು ಮೂಡಿತು. ತನ್ನ ಪತಿ ಇನ್ನು ಸರಿಯಾದ ದಾರಿಗೆ ಬಾರದಿದ್ದರೆ ತಾನು ಅವನಿಂದ ದೂರವಿದ್ದು ಜೀವನ ನಡೆಸಬೇಕೆಂಬ ನಿರ್ಧಾರಕ್ಕೆ ಲಕ್ಷ್ಮಿ ಬಂದಿದ್ದಳು.

ಅಂದು ಏಳನೆಯ ಭೇಟಿ. ನಾನು ನರ್ಸಿಂಗ್ ಹೋಮಿಗೆ ಕಾಲಿಟ್ಟಾಗ ಡಾ. ರಾಜು ರೆಡ್ಡಿ ಮತ್ತು ದಾದಿಯರು ಬಹಳ ಸಂತೋಷದಲ್ಲಿದ್ದರು. ಬಹುಶಃ ಅಲ್ಲಿ ಕೆಲಸ ಮಾಡುವವರ ಪೈಕಿ ಯಾರದೋ ಹುಟ್ಟಿದ ಹಬ್ಬವಿರಬಹುದು ಅಂದುಕೊಂಡೆ. ಲಕ್ಷ್ಮಿಯು ಸ್ವಲ್ಪವೂ ವಾಲಾಡದೆ ಎಲ್ಲರಂತೆ ನಡೆಯಲು ಪ್ರಾರಂಭಿಸಿದ್ದಳೆಂಬುದೆ ಅವರ ಸಂತೋಷಕ್ಕೆ ಕಾರಣವೆಂದು ತಿಳಿಯಲು ಬಹಳ ವೇಳೆ ಹಿಡಿಯಲಿಲ್ಲ. ನಾನೂ ಸಂತೋಷದಲ್ಲಿ ಭಾಗಿಯಾಗದೆ ಇರಲಿಲ್ಲ.

ಮಾರನೆಯ ದಿನ ಲಕ್ಷ್ಮಿಯನ್ನು ಮನೆಗೆ ಕಳುಹಿಸಿ ಕೊಟ್ಟೆ. ಸುಮಾರು ಮೂರು ತಿಂಗಳು ಕಳೆದಿರಬಹುದು. ಡಾ. ರಾಜು ರೆಡ್ಡಿಯವರಿಂದ ಫೋನ್ ಬಂದಿತು. ಅವರು ಲಕ್ಷ್ಮಿ ಬೇರೆ ಯಾವುದೋ ಕಾರಣದಿಂದ ಅಲ್ಲಿಗೆ ಬಂದಿದ್ದಾಳೆಂದೂ ಈಗ ಯಾವ ತೊಂದರೆಯೂ ಇಲ್ಲದೇ ಚೆನ್ನಾಗಿದ್ದಾಳೆಂದೂ ಹೇಳಿ. "ಥ್ಯಾಂಕ್ಸ್," ಅಂದರು.

ಇದು ಮಂದಾರ ಪರ್ವತವೆ?

ಬಿಹಾರಿನ ಭಾಗಲಪುರದಿಂದ ೪೫ ಕಿಲೋಮೀಟರ್ ದೂರದಲ್ಲಿ ಮಂದಾರ ವಿದ್ಯಾಪೀಠ ವೆಂಬ ರೈಲು ನಿಲ್ದಾಣವಿದೆ. ಇದಕ್ಕೆ ಸಮೀಪದಲ್ಲಿರುವ ಪರ್ವತವೇ ತುಂಬಾ ಪ್ರಸಿದ್ಧವಾದ ಮಂದಾರ ಪರ್ವತವೆಂದು ಹೇಳಲಾಗುತ್ತಿದೆ. ಇದು ಹದಿನೈದು ಕೋಟಿ ವರ್ಷಗಳಷ್ಟು ಪುರಾತನವಾದದ್ದು. ಈ ಪರ್ವತ ಸೃಷ್ಟಿಯಾದಾಗ ಅಲ್ಲಿ ಸಮುದ್ರವಿರಲಿಲ್ಲ. ಕೋಟ್ಯಂತರ ವರ್ಷಗಳ ನಂತರ ಅಲ್ಲಿ ಸಮುದ್ರ ಕಾಣಿಸಿಕೊಂಡಿತು. ಅಮೃತಪ್ರಾಪ್ತಿಗಾಗಿ ದೇವಾಸುರರು ಈ ಪರ್ವತವನ್ನೇ ಕಡೆಗೋಲನ್ನಾಗಿ ಮಾಡಿಕೊಂಡು ಸಮುದ್ರವನ್ನು ಕಡೆದ ವೃತ್ತಾಂತ ಎಲ್ಲರಿಗೂ ಗೊತ್ತಿದ್ದದ್ದೇ. ಇದಾದ ಕೋಟ್ಯಂತರ ವರ್ಷಗಳ ನಂತರ ಯಾವಾಗಲೋ ಒಮ್ಮೆ ಭೂಖಂಡಗಳು ಚಲಿಸಲು ಪ್ರಾರಂಭವಾಗಿ ಕಾಲಾಂತರದಲ್ಲಿ ಆಸ್ಟ್ರೇಲಿಯಾವು ಭಾರತದಿಂದ ಬೇರ್ಪಟ್ಟಿತು. ಹಿಮಾಲಯ ಉದ್ಭವಗೊಂಡು ಗಂಗಾನದಿಯ ಜನ್ಮಕ್ಕೆ ಕಾರಣವಾಯಿತು. ಈ ಎಲ್ಲ ಪರಿವರ್ತನೆಗಳನ್ನೂ ಮಂದಾರ ಪರ್ವತ ದೃಢವಾಗಿ ಎದುರಿಸಿತು.

ಇದರ ತಳ ಸಮುದ್ರ ಮಟ್ಟಕ್ಕಿಂತ ೭೫ ಮೀಟರು ಎತ್ತರದಲ್ಲಿದೆ. ಶಿಖರ ಸಮುದ್ರ ಮಟ್ಟದಿಂದ ೩೦೫ ಮೀಟರು ಎತ್ತರಕ್ಕಿದೆ. ಈ ಪರ್ವತಕ್ಕೆ ಐದು ಶಿಖರಗಳಿವೆ. ಇವು ಪಶ್ಚಿಮದಿಂದ ಪೂರ್ವಕ್ಕೆ ಕ್ರಮವಾಗಿ ಎತ್ತರವಾಗುತ್ತ ಹೋಗಿವೆ. ಪೂರ್ವದ ಕಡೆ ಇರುವ ಶಿಖರವನ್ನು ಹತ್ತಲು ದಕ್ಷಿಣಕ್ಕೊಂದು ದಾರಿಯಿದೆ. ಐದು ಮೀಟರು ಆಳವಾದ ಹಾಗೂ ಇಪತ್ತೈದು ಮೀಟರು ಅಗಲವಾದ ಕಂದಕ ಮಂದಾರ ಪರ್ವತವನ್ನು ಕಡೆಗೋಲಿಗೆ ಸುತ್ತಿದಹಾಗೆ ಸುತ್ತಿಕೊಂಡಿದ್ದು ಅದು ವಾಸುಕಿಯ ಚಿಹ್ನವೆಂದು ಭಾವುಕರು ನಂಬುತ್ತಾರೆ. ಪರ್ವತದ ಬಂಡೆಗಲ್ಲುಗಳ ಮೇಲೆ ಅನೇಕ ರೀತಿಯ ಕತ್ತನೆಗಳಿದ್ದು. ಅವುಗಳಲ್ಲಿ ಪುರಾಣ ವ್ಯಕ್ತಿಗಳ ಕಲಾಕೃತಿಗಳೇ ಹೆಚ್ಚು. ತ್ರಿಮುಖ ಬ್ರಹ್ಮ, ಕ್ಷೀರಸಾಗರದಲ್ಲಿ ಮಲಗಿರುವ ವಿಷ್ಣು, ನಟರಾಜ, ಶಿವಲಿಂಗ, ನರಸಿಂಹ, ಗಣೇಶ, ಸರಸ್ವತಿ, ಹನುಮಂತ ಹೀಗೆ ಒಟ್ಟು ಇನ್ನೂರಕ್ಕೂ ಹೆಚ್ಚು ಪ್ರತಿಮೆಗಳು ಅಲ್ಲಿವೆ.

ಅಲ್ಲಿಯ ಜಲಾಶಯಗಳಲ್ಲಿ ಪಾಪಹಾರಿಣಿ, ಸೀತಾಕುಂಡ, ಶಂಖಕುಂಡ ಮತ್ತು ಆಕಾಶಗಂಗೆ ಮುಖ್ಯವಾದವು. ಗಿರಿಯ ಶಿಖರದ ಮೇಲೆ ಜೈನ ದೇವಾಲಯವಿದೆ. ಅದರ ಸಮೀಪದಲ್ಲಿಯೇ ಒಂದು ಸುರಂಗ ಮಾರ್ಗವೂ ಇದ್ದು ಅದು ಸುಲ್ತಾನಗಂಜ್ ಪಟ್ಟಣದ ವರೆಗೆ ಹೋಗಿದೆ ಎಂದು ಹೇಳಲಾಗುತ್ತಿದೆ. ಇಂದು ಮಂದಾರ ಪರ್ವತ ಯಾವುದೋ ಒಂದು ದೊಡ್ಡ ಅರಮನೆಯ ಭಗ್ನಾವಶೇಷದಂತೆ ಕಾಣುತ್ತದೆ. ಅಲ್ಲಿಯ ಶಿಲ್ಪಗಳನ್ನು ರಕ್ಷಿಸುವ ಕೆಲಸ ಕೂಡ ನಿರ್ಲಕ್ಷಿಸಲ್ಪಟ್ಟಿದೆ.

—ಆನಂದ ದಂಡಾಪುರ

ಇದು ಉದ್ಯಮಕ್ಕೆ ವರದಾನವೇ?

ಚುಂಬಕಪ್ರೇರಿತ

ಚುಂಬಕ ಪ್ರೇರಿತ ಜಲವನ್ನು (Magnetised water) ತಯಾರಿಸುವುದು ಬಹು ಸುಲಭ. ಕಾಂತಕ್ಷೇತ್ರದ ಮೂಲಕ ಸ್ವಲ್ಪ ಕಾಲದವರೆಗೆ ನೀರನ್ನು ಪ್ರವಹಿಸಿದರೆ ನೀರಿನ ಭೌತಿಕ ಹಾಗೂ ರಾಸಾಯನಿಕ ಗುಣಲಕ್ಷಣಗಳಲ್ಲಿ ಬದಲಾವಣೆಯಾಗಿ ಚುಂಬಕಜಲ ರೂಪುಗೊಳ್ಳುವುದು. ಆಗ ನೀರಿನ ಮೇಲ್ಮೈ ಸೆಳೆತ, (Surface tension), ಸ್ನಿಗ್ಧತೆ, ವಿದ್ಯುತ್‌ವಾಹಕ ಶಕ್ತಿ, ಕುದಿಯುವ ಬಿಂದು ಹಾಗೂ ಸಾಂದ್ರತೆಗಳಲ್ಲಿ ಗಣನೀಯ ಮಾರ್ಪಾಟಾಗುವುದು. ಎರಡು ಮೂರು ದಿನಗಳಾದರೂ ಈ ಹೊಸ ಗುಣಲಕ್ಷಣಗಳು ಹಾಗೇ ಇರುವುದೊಂದು ಚುಂಬಕಜಲದ ವೈಶಿಷ್ಟ್ಯ. ಕೊಳವೆಯ ಮುಖಾಂತರ ಅದನ್ನು ಹಲವು ಕಿಲೋಮೀಟರ್‌ಗಳ ವರೆಗೆ ರವಾನಿಸಿದರೂ ಗುಣಲಕ್ಷಣಗಳಲ್ಲಿ ಬದಲಾವಣೆಯಿಲ್ಲ. ಇದಕ್ಕೆ ಕಾರಣವೇನೆಂಬುದಕ್ಕೆ ವೈಜ್ಞಾನಿಕ ವಿವರಣೆಯಿಲ್ಲ. ಈ ಚುಂಬಕ ಪ್ರೇರಿತ ಜಲ ಕೈಗಾರಿಕೋದ್ಯಮಿಗಳಿಗೆ ಒಂದು ವರ. ಈ ಜಲವನ್ನು ಪ್ರಥಮತಃ ರೂಪಿಸಿದವರು ರಶಿಯದ ಖಾರ್‌ಕೋವ್ ಎಂಜಿನಿಯರಿಂಗ್ ಸಂಸ್ಥೆಯ ತಂತ್ರಜ್ಞರು.

ಥರ್ಮಲ್ ವಿದ್ಯುತ್‌ಕೇಂದ್ರಗಳ ಬಾಯಿಲರ್ ಹಾಗೂ ಕೊಳವೆಗಳ ಮೇಲೆ ಬಿಳಿಯ ಹೊದಿಕೆಯುಂಟಾಗಿ ಶಾಖ ಪ್ರವಹಿಸುವುದಕ್ಕೆ ಅಡ್ಡಿಯಾಗುತ್ತದೆ. ಇದರಿಂದಾಗಿ ಯಂತ್ರದ ಕಾರ್ಯಸಾಮರ್ಥ್ಯಕ್ಕೂ ಧಕ್ಕೆ. ಅಂತೆಯೇ ಪೊಟಾಶಿಯಂ, ಮೆಗ್ನೀಶಿಯಂ ಮತ್ತು ಕಬ್ಬಿಣಗಳನ್ನು ನೀರಿನಿಂದ ಅಗಲಿಸಿ, ಶುದ್ಧಗೊಳಿಸಲು ಅನುಸರಿಸುವ ರಾಸಾಯನಿಕ ಸಂಸ್ಕರಣ ಬೃಹತ್ ಥರ್ಮಲ್ ವಿದ್ಯುತ್ ಕೇಂದ್ರಗಳಲ್ಲಿ ಮಾತ್ರ ಸಾಧ್ಯ. ಆದರೆ ಸಣ್ಣ ಹಾಗೂ ಮಧ್ಯಮ ಪ್ರಮಾಣದ ಯಂತ್ರೋಪಕರಣಗಳಲ್ಲಿ ಈ ಲವಣಗಳನ್ನು ನೀರಿನಿಂದ ಬೇರ್ಪಡಿಸಲು ಪರಿಣಾಮಕಾರಿಯಾದ ಹಾಗೂ ಆರ್ಥಿಕವಾಗಿ ಸುಸಾಧ್ಯವಾದ ವಿಧಾನಗಳಿಲ್ಲ, ಎಂತಲೇ ಉಗಿಹಡಗಗಳ ಬಾಯಿಲರುಗಳಲ್ಲಿ ಶೇಖರವಾಗುವ ಹೊದಿಕೆಯನ್ನು ಲೋಹದ ಬ್ರಷ್‌ಗಳಿಂದ ಉಜ್ಜಿ ತೆಗೆಯುವುದನ್ನು ಬಿಟ್ಟು ಬೇರೆ ದಾರಿಯಿಲ್ಲ. ಆದರೆ ಚುಂಬಕಪ್ರೇರಿತ ಜಲ ಉಪಯೋಗಿಸಿದರೆ ಈ ತೆರನಾದ ಸಮಸ್ಯೆಗಳನ್ನು ಎದುರಿಸುವ ಪ್ರಮೇಯವೇ ಇಲ್ಲ. ಬಾಯಿಲರುಗಳಿಗೆ ನೀರು ಪೂರೈಸುವ ಕೊಳವೆಗಳನ್ನು ಅಯಸ್ಕಾಂತ ಕ್ಷೇತ್ರದ ಮೂಲಕ ಹಾಯಿಸಿದರೆ ಬಾಯಿಲರುಗಳಲ್ಲಿ ಲವಣದ ಹೊದಿಕೆಯುಂಟಾಗುವುದಿಲ್ಲ. ಹೀಗೆ ಮಾಡಿದಾಗ ಅಲ್ಲಿ ಶೇಖರವಾಗುವುದು ಕಾರ್ಯವಿಧಾನಕ್ಕೆ ಯಾವ ತಡೆಯೂ ಇಲ್ಲದೆ ನಿರಾಯಾಸವಾಗಿ ತೆಗೆಯಬಹುದಾದ ಕಂದು ಬಣ್ಣದ ಪುಡಿ ಮಾತ್ರ. ಚುಂಬಕಪ್ರೇರಿತ ಜಲವನ್ನು ಥರ್ಮಲ್ ವಿದ್ಯುತ್ ಕೇಂದ್ರಗಳಲ್ಲಿ ಉಪಯೋಗಿಸಿದರೆ ಲಕ್ಷಾಂತರ ರೂಪಾಯಿ ಉಳಿತಾಯವಾಗುವುದೆಂಬುದು ರಶಿಯದ ಅರ್ಥಶಾಸ್ತ್ರಜ್ಞರ ಅಭಿಪ್ರಾಯ.

ಈ ಹೊದಿಕೆಯು ಅಂತರ್ದಹನ ಯಂತ್ರಗಳ ಪಾಲಿಗೆ ಒಂದು ಶಾಪವೇ ಸರಿ. ಒಂದೂವರೆ ಮಿಲಿ

ಮಾಯಾಜಲ

ಎಚ್. ಎಂ. ಮುನಿಯಪ್ಪ

ಮೀಟರಿನಷ್ಟು ದಪ್ಪವಾದ ಹೊದಿಕೆ ಕಾರಿನ ಎಂಜಿನ್ನಿನ ಶಕ್ತಿಯನ್ನು ೫ ಅಶ್ವಶಕ್ತಿಯಷ್ಟು ಕಡಿಮೆಗೊಳಿಸುತ್ತದೆ. ಇದರಿಂದ ಇಂಧನಕ್ಕೆ ತಗಲುವ ವೆಚ್ಚದಲ್ಲಿ ಶೇಕಡಾ ೧೩ ರಷ್ಟು ಹಾಗೂ ಕೀಲೆಣ್ಣೆಯ ವೆಚ್ಚದಲ್ಲಿ ಶೇಕಡಾ ೩೦ ರಷ್ಟು ಹೆಚ್ಚಳವಾಗುವುದು. ಅಷ್ಟೇ ಅಲ್ಲ, ಸಿಲಿಂಡರಿನ ಉಷ್ಣತೆ ಇಮ್ಮಡಿ ಮುಮ್ಮಡಿಯಾಗಿ ಎಂಜಿನ್ನಿನ ಅನೇಕ ಭಾಗಗಳ ಯಾಂತ್ರಿಕ ಶಕ್ತಿಯು ಕ್ಷೀಣಿಸುವುದು. ಇವೆಲ್ಲ ಆತಂಕಗಳನ್ನು ನಿವಾರಿಸಲು ಆಟೋಮೊಬೈಲ್ ಎಂಜಿನಿಯರುಗಳ ನೆರವಿಗೆ ಬಂದುದು ಚುಂಬಕ ಪ್ರೇರಿತ ಜಲವೇ! ರೇಡಿಯೇಟರ್‌ನೊಳಗೆ ಚುಂಬಕಪ್ರೇರಿತ ಜಲವನ್ನು ಹಾಕುವುದರಿಂದ ಒಳಗಡೆ ಈ ಹೊದಿಕೆಯುಂಟಾಗದಂತೆ ತಡೆಯುವುದಲ್ಲದೆ, ಈ ಜಲವು ಕೊಳವೆಗಳಲ್ಲಿ ಉಳಿಯುವ ಲವಣಗಳನ್ನೂ ನಿವಾರಿಸುವುದು.

ಚುಂಬಕಪ್ರೇರಿತಜಲದ ಉಪಯುಕ್ತತೆ ಇಷ್ಟಕ್ಕೇ ಸೀಮಿತವಾಗಿಲ್ಲ. ಅದರ ಬಳಕೆ ಗೃಹ ನಿರ್ಮಾಣ ಕಾರ್ಯಗಳಲ್ಲಿಯೂ ಉಂಟು. ಅದರ ಉಪಯೋಗದಿಂದ ಕಾಂಕ್ರೀಟಿನ ಸಾಮರ್ಥ್ಯ ಹೆಚ್ಚುವುದೆಂಬುದಕ್ಕೆ ನಡೆದಿರುವ ಪ್ರಯೋಗಗಳೇ ಸಾಕ್ಷಿ. ಚುಂಬಕಪ್ರೇರಿತಜಲದಿಂದಾದ ಲಘು ಕಾಂಕ್ರೀಟ್ (Light–Concrete) ಒಂದು ತಿಂಗಳಲ್ಲಿ ಗಳಿಸುವ ಶಕ್ತಿ, ಸಾಧಾರಣ ನೀರಿನಿಂದಾದ ಕಾಂಕ್ರೀಟಿನ ಶಕ್ತಿಗಿಂತ ಶೇಕಡಾ ೫೦ರಷ್ಟು ಹೆಚ್ಚು. ಅಲ್ಲದೆ, ಅದು ಎರಕದಚ್ಚುಗಳಿಗೆ ಸುರಿಯಲು ಬಹು ಸುಲಭ.

ಚುಂಬಕಪ್ರೇರಿತಜಲವನ್ನು ಸಾಗುವಳಿಗೂ ಉಪಯೋಗಿಸಲಾಗುತ್ತಿದೆ. ಅದರ ಬಳಕೆಯಿಂದ ಬೆಳೆಗಳ ಬೆಳವಣಿಗೆ ಶೇಕಡಾ ೨೦–೪೦ ರಷ್ಟು ತ್ವರಿತವಾಗುತ್ತದೆ ಅಷ್ಟೇ ಅಲ್ಲ, ಅದು ಔಷಧಿಯೂ ಹೌದು. ಲೆನಿನ್‌ಗ್ರಾಡ್ ಆಸ್ಪತ್ರೆಯೊಂದರಲ್ಲಿ ಮೂತ್ರಕೋಶ ರೋಗಿಗಳು ಚುಂಬಕಪ್ರೇರಿತಜಲವನ್ನು ಸೇವಿಸಿದಾಗ ಅವರ ಮೂತ್ರಕೋಶದಲ್ಲಿರುವ ಲವಣ ಹಾಗೂ ಸಣ್ಣ ಕಲ್ಲು ಚೂರುಗಳನ್ನು ಶರೀರದಿಂದ ಹೊರಬಿದ್ದು ಅವರು ಗುಣಮುಖರಾದರು.

ತೈಲೋದ್ಯಮ ಹಾಗೂ ಗಣಿ ಕೆಲಸದಲ್ಲಿಯೂ ಆಯಸ್ಕಾಂತ ಚಿಕಿತ್ಸೆಯ ಪಾತ್ರ ಉಲ್ಲೇಖನೀಯ. ತೈಲವನ್ನು ಭೂಮಿಯ ಅಂತರಾಳದಿಂದ ಹೊರಸಾಗಿಸುವ ಕೊಳವೆಗಳಲ್ಲಿ ಲವಣದ ಉಳಿಕೆಗಳು ಪ್ರತಿಬಂಧಕ ಒಡ್ಡುವುದು ಸರ್ವೇಸಾಧಾರಣ. ಆ ಲವಣಗಳ ನಿವಾರಣೆಗಾಗಿ ಕೊಳವೆಗಳನ್ನು ಹೊರ ತೆಗೆಯುವುದು ತ್ರಾಸದಾಯಕ. ತೈಲ ಸಾಗಿಸುವ ಕೊಳವೆಗಳು ಆಯಸ್ಕಾಂತಗಳಿಂದ ಆವೃತವಾದರೆ ಲವಣದುಳಿಕೆಗಳ ಪ್ರಮಾಣ ತಗ್ಗುವುದು. ಕೊಳವೆಗಳ ಆಯುಸ್ಸು ಆರು ಪಟ್ಟು ಅಧಿಕಗೊಳ್ಳುವುದು. ಈ ವಿಧಾನವನ್ನು ಬಳಸಿರುವುದು ರಶಿಯದ ಆಜರ್‌ಬೈಜನ್‌ನಲ್ಲಿ.

ಅಂತೂ ಬಹೂಪಯೋಗಿ ಚುಂಬಕಪ್ರೇರಿತ ಜಲದ ಸಾರ್ವತ್ರಿಕ ಬಳಕೆಯಿಂದ ಕೈಗಾರಿಕೆಗಳಲ್ಲಿ ಹೊಸ ಚೈತನ್ಯವುಂಟಾಗುವುದರಲ್ಲಿ ಸಂಶಯವಿಲ್ಲ. ✡

ಸರಳತೆಯಿಂದ ಸಂಕೀರ್ಣತೆಗೆ....

ಆರ್. ಬಸವರಾಜ

ಕನ್ನಡ ಕಾವ್ಯಪ್ರಪಂಚದಲ್ಲಿ ನಿತ್ಯ ಕಂಪೊಗೆವ 'ಮೈಸೂರು ಮಲ್ಲಿಗೆ' ಕವಿಗೆ ಕೀರ್ತಿ ತಂದ ಹಾಗೂ ಜನಪ್ರಿಯ ಕೃತಿ. "ಮೈಸೂರು ಮಲ್ಲಿಗೆ ಕಸ್ತೂರಿ ನೆಲದಲ್ಲಿ ಕಾಮನಬಿಲ್ಲನ್ನು ಬಿತ್ತಿ ಬೆಳೆಯುತ್ತಿರುವ ಹೂದೋಟ" (ಡಿ. ಎಲ್. ಎನ್.). ಮುಗ್ಧಪ್ರಣಯಿಗಳ ಸರಸಸಲ್ಲಾಪಗಳ, ವಿರಹವೇದನೆಗಳ, ಎಳೆವರೆಯದ ಪತಿ-ಪತ್ನಿಯರ ಸಕ್ಕರೆಯ ಸವಿಗನಸುಗಳ, ಪ್ರಣಯದ ಫಲವಾದ ಪುಟ್ಟ ಕಂದನ ಆಟಪಾಟಗಳ ಹೃದಯಂಗಮವಾದ ಚಿತ್ರಣ.

"ಮೈಸೂರು ಮಲ್ಲಿಗೆಯನ್ನು ತಂಗಾಳಿಗೊಡ್ಡಿದ ನರಸಿಂಹಸ್ವಾಮಿಯವರ ಪ್ರತಿಭೆ ಅಪ್ಸರೆಯಂತೆ, ಈ ಲಾವಣ್ಯವು ಮಣ್ಣು ನೆಲದಿಂದ ಬಂದುದಲ್ಲ ಎನಿಸಿಬಿಟ್ಟಿದೆ." (ದ.ರಾ. ಬೇಂದ್ರೆ). ಕವಿಯ ಸ್ವಾಭಾವಿಕ ಸುಕುಮಾರ ಸಂವೇದನೆ ಇಲ್ಲಿ ಕಾವ್ಯಸೌಂದರ್ಯವಾಗಿ ಅರಳಿರುವುದೊಂದು ಸೋಜಿಗ. "ಕನ್ನಡದಲ್ಲಿ ಪ್ರಣಯವೊಂದನ್ನೇ ಪ್ರಮುಖ ವಸ್ತುವಾಗಿ ಸ್ವೀಕರಿಸಿ ಗೆದ್ದ ಕವಿ ಕೆ.ಎಸ್.ನ ಅವರೊಬ್ಬರೇ." ಅನಂತ ಮುಖವಾದ ಪ್ರಣಯ ಸತ್ವಪೂರ್ಣ ಹಿನ್ನೆಲೆಯಲ್ಲಿ ಹಲವು ಹತ್ತು ಬಗೆಯ ಸೊಬಗಿನ ಲೋಕವನ್ನು ಸೃಷ್ಟಿಸಿದೆ. "ಮೈಸೂರು ಮಲ್ಲಿಗೆಯ ತರುಣ ದಂಪತಿಗಳು ಗಂಧರ್ವರು. ಎಲ್ಲ ಕಾಲದ, ಎಲ್ಲ ಬದುಕಿನ ಸಂತೋಷ ಕಣ್ಣಲ್ಲಿ ತುಂಬಿಕೊಂಡು, ಗಂಡು-ಹೆಣ್ಣಿನ ಜೋಡಿಗಳು ಕಣ್ಣೆದುರಿಗೆ ಹಾದು ಹೋಗುತ್ತವೆ"(ದ. ರಾ. ಬೇಂದ್ರೆ). "ಮೈಸೂರು ಮಲ್ಲಿಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲೆಲ್ಲ ತನ್ನ

ಸುವಾಸನೆಯನ್ನು ಬೀರಿ ಮರುಳುಗೊಳಿಸುತ್ತಿದೆ. ಇದು ಅರೆಬಿರಿದ ಮೊಗ್ಗಲ್ಲ; ಪ್ರಫುಲ್ಲ ಪುಷ್ಪ." (ಕ. ಸಾ. ಪ. ಪತ್ರಿಕೆ). "ಬದುಕಿನ ನಿರ್ಮಲವಾದ ಆನಂದ ಕೆ. ಎಸ್. ನ ಅವರ ಕಾವ್ಯದ ಜೀವಾಳವಾಗಿ ಯಾವಾಗಲೂ ನಿಲ್ಲುತ್ತದೆ" (ಕೆ. ಡಿ. ಕುರ್ತಕೋಟಿ).

—ಹೀಗೆ ಕವಿ ವಿಮರ್ಶಕರಿಂದ 'ಮೈಸೂರು ಮಲ್ಲಿಗೆ'ಗೆ ಪ್ರಶಂಸೆಯ ಪ್ರಶಸ್ತಿ.

ಇಲ್ಲಿಯ ಕವನಗಳಲ್ಲಿ ಯೌವನದ ತೀವ್ರ ಸುಖ ಸ್ಫುರಣಗಳನ್ನೂ ಸಂವೇದನೆಗಳನ್ನೂ ಜನಮನದಲ್ಲಿ ಉಕ್ಕಿಸಿದ ಕವಿ ಕೆ. ಎಸ್. ನ. ಹೀಗೆ ದಾಂಪತ್ಯದ ಸವಿ ಸೊಗಗಿಗೆ ಒಲಿದ ಕವಿಹೃದಯ ಸಾಂಸಾರಿಕ ಸಂಕಟಗಳ ಇನ್ನೊಂದು ಮುಖವನ್ನು ದರ್ಶಿಸಲಿಲ್ಲ ಎಂಬುದು ಹಲವು ವಿಮರ್ಶಕರ ಅಭಿಪ್ರಾಯ. ಆದರೆ ಸಂಸಾರದ ಇನ್ನೊಂದು ಮುಖ ಕವಿಗೆಗೋಚರಿಸದೆ ಇಲ್ಲ.

"ಸಾವಿಗಂಜುವ ಬದುಕಿಗಿಲ್ಲಿ ನೆಲೆಯಿಲ್ಲ! ನೋವಿರದೆ ಚೆಲುವಿರುವುದು-ಬದುಕಿನೊಳಗೆಲ್ಲ" ಎಂದು ಹೇಳಿದ ಕವಿಗೆ ಸಾವು ನೋವಿನ ಪ್ರಜ್ಞೆ ಜಾಗೃತವಾಗಿಯೇ ಇದೆ, ಆದರೆ ಜೀವನದ ಆನಂದಕ್ಕೆ ಒಲಿದುದು ಕವಿ ಹೃದಯದ ಸಹಜ ಪ್ರತಿಕ್ರಿಯೆ. ದರ್ಶನದಂತೆ ಪ್ರದರ್ಶನ; ದೃಷ್ಟಿಯಂತೆ ಸೃಷ್ಟಿ. ಬಾಳನ್ನು ಒಡೆಯದೆ ಇಡಿಗೊಳಿಸುವ ಪ್ರೇಮದ ಬೆಸುಗೆಯೇ ಆ ಕಾಲಕ್ಕೆ ಕವಿಗೆ ಮಾನ್ಯವಾಯಿತು.

ವಿಸ್ತರಿಸಿದ ಅನುಭವ ಪ್ರಪಂಚ

ಕೇವಲ ಇಷ್ಟಕ್ಕೇ ನಿಂತಿದ್ದರೆ ಕೆ. ಎಸ್. ನ ಅವರನ್ನು 'ಪ್ರಣಯಗೀತೆಗಳ ಕವಿ' ಎಂಬ ಲೇಬಲ್ ಹಚ್ಚಿ ನಿಷ್ಕ್ರಮಿಸಬಹುದಿತ್ತು. ಆದರೆ 'ಸುಕುಮಾರ ಸಂವೇದನೆ'ಯ ಸಂಕೋಲೆಯಿಂದ ಪಾರಾಗಿ 'ಹೊರಳು ದಾರಿಯಲ್ಲಿ' ಹೊರಟದ್ದು ಕವಿ ಬೆಳೆದುದರ ನಿದರ್ಶನ. ಸುಕುಮಾರ ಭಾವಗಳ ಸಂಕೋಲೆಯಿಂದ ಕಳಚಿಕೊಂಡು ತಮ್ಮ ಕಾವ್ಯವನ್ನು ಕಸಿಗೊಳಿಸಿಕೊಂಡದ್ದು ಅವರ ಮಹತ್ತರ ಸಾಧನೆ, ಅವರ ನವ ನಿರ್ಮಾಣ ಶಕ್ತಿ ಅತಿಶಯವಾಗುತ್ತ ನಡೆದದ್ದು 'ಇದಮಿತ್ಥಂ' ಎಂದು ನಿರ್ಧರಿಸಿದ್ದ ವಿಮರ್ಶಕರಿಗೊಂದು ಸವಾಲಾಯಿತು. ಪ್ರಣಯ ಜೀವನದ ಪರಿಮಿತಿ ಸೀಮೋಲ್ಲಂಘನ ಮಾಡಿ ಅನುಭವದ ಪರಿಧಿಯನ್ನು ವಿಸ್ತರಿಸಿಕೊಂಡರು. ಜೀವನದ ಸಾವು-ನೋವುಗಳಿಗೆ, ನಿಗೂಢ ಸಮಸ್ಯೆಗಳಿಗೆ ಕವಿ ಹೃದಯ ತೆರೆದ ಬಾಗಿಲಾಯಿತು. ಸ್ವೀಕರಿಸಿದ ಹೊಸ ವಸ್ತು, ವಿಚಾರವಾಗಿ ಅರ್ಥ ಪಡೆಯಿತು. ಸಂಕೀರ್ಣ ಅನುಭವಗಳಿಗೆ ತಕ್ಕಂತೆ ಕಾವ್ಯದ ಭಾಷೆಯೂ ಬದಲಾಯಿತು. ನಗರ ಜೀವನದ ಸಂಘರ್ಷ, ಆಡಂಬರ, ಅಸೂಯೆ, ಅವ್ಯವಸ್ಥೆಗಳನ್ನು ಸಮರ್ಥ ರೀತಿಯಲ್ಲಿ ಮೂರ್ತಗೊಳಿಸಿದ್ದು, ವಿಮರ್ಶಕರು ಮತ್ತೆ ಅವರ ಬಗ್ಗೆ ಚಿಂತನ ಮಾಡುವಂತಾಯಿತು. ಶಿಲಾಲತೆ, ಮನೆಯಿಂದ ಮನೆಗೆ, ಬೆಳಗಿನ ಮಂಜು ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ, ಬಿಳಿಯ ಹೂಗಳ ಕವಿತೆ, ಗೋರಿಗಳ ಮೇಲೆ, ಶಿಲೆಗೆ ಹೂವಿನ ವಂಕಿ, ಉಂಗುರ, ತೆರೆದ ಬಾಗಿಲು, ಗಡಿಯಾರದಂಗಡಿಯ ಮುಂದೆ ಮುಂತಾದ ಪ್ರಣಯೇತರ ಕವಿತೆಗಳಲ್ಲಿ ಅವರ ಕಾವ್ಯದ ಹೊಸ ಜಾಡನ್ನು ಸ್ಪಷ್ಟವಾಗಿ ಗುರುತಿಸಬಹುದು. ಸರಳತೆಯಿಂದ ಸಂಕೀರ್ಣತೆಗೆ, ವಾಚ್ಯದಿಂದ ಸೂಚ್ಯಕ್ಕೆ ಕವಿ ಪ್ರತಿಕ್ರಿಯೆ ತೋರಿದ್ದಾರೆ. 'ಇರುವ ತಳಹದಿಯಿಂದ ದಿಟದ ದರ್ಶನವರಳಿ, ಹಂಬಲಿಸಿ ಹಾಡಾಗಬೇಕು' ಎಂಬ ಮಾತು ಕವಿ, ಭೂಮಿಯಲ್ಲಿ ಭದ್ರವಾಗಿ ಬೇರೂರಿ ಸತ್ಯ ದರ್ಶನಕ್ಕೆಳಸಿದುದನ್ನು ಸ್ಪಷ್ಟಪಡಿಸುತ್ತದೆ.

ಹೆಚ್ಚು ಕ್ರಿಯಾಶೀಲವಾದ ಹೊಸ ಶೈಲಿ

ಹೊಸ ವಸ್ತುವಿಗೆ ಹೊಸ ಬಗೆಯ ಭಾಷೆ ಅನಿವಾರ್ಯವಾಯಿತು, ಜಾನಪದ ಶೈಲಿಯ ಸತ್ವವನ್ನು ಒಗ್ಗಿಸಿಕೊಂಡ ಕವಿ ಕ್ರಮೇಣ ಗದ್ಯದ ಸಮರ್ಥ ಶೈಲಿಗೆ ಹರಿದದ್ದು ಗಮನಿಸಬೇಕಾದ ಅಂಶ. ಅವರ ಶಿಲಾಲತೆಯಲ್ಲಿ ಗದ್ಯ, ಪದ್ಯಗಳ ಕೃತಕ ವಿಂಗಡನೆಯನ್ನು ಕಷ್ಟವಾಗಿಸುವಷ್ಟು ಸಹಜವಾಗಿ ಹೊಸ ಶೈಲಿಯ ಬಳಕೆಯಾಗಿದೆ, ಮೊದಲಿನ ಅತಿ ಮಾಧುರ್ಯ, ಅತಿ ಸ್ಪಷ್ಟತೆ ಕ್ರಮೇಣ ವಸ್ತುವಿಗೆ ಹೊಂದಿಕೊಂಡು ಸಂಕೀರ್ಣವಾಗುತ್ತ ಬಂದಿದೆ. 'ಶಿಲಾಲತೆ'ಯ

ಭಾಷೆ ಹೆಚ್ಚು ಕ್ರಿಯಶೀಲವಾಗುತ್ತದೆ". ಬಳಕೆಯ ಅರ್ಥಕ್ಕೆ ಬದಲು ಸಾಂದರ್ಭಿಕ ಅರ್ಥಕ್ಕೆ, ಗೇಯತೆಯಿಂದ ಧ್ವನಿಪೂರ್ಣತೆಗೆ ಕವಿ ಬದಲಾಗಿದ್ದಾರೆ. ಮುಚ್ಚಿದ ಕಿಟಕಿ, ತೆರೆದ ಬಾಗಿಲು, ಭೂತಕನ್ನಡಿ— ಈ ಕವನಗಳ ಭಾಷೆಯು ಲಯ, ತಂತ್ರ, ಪ್ರತಿಮಾಸೃಷ್ಟಿ "ಪ್ರಶಂಸಾರ್ಹ, ಜೀವನದ ಗಹನತೆ, ನಿಗೂಢತೆ, ಸಂಕೀರ್ಣತೆಗಳ ಪ್ರತಿರೂಪವಾಗಿ ಅವರ ಶೈಲಿ ಪ್ರಬುದ್ಧವಾಗಿದೆ. ರಮ್ಯ ಮತ್ತು ನವ್ಯ ಪಂಥಗಳ ಸುವರ್ಣಮಾಧ್ಯಮವಾಗಿ ಕವಿ ಮಾನ್ಯರಾಗುತ್ತಾರೆ.

ಕೆಲವು ಮುಖ್ಯ ಕವನಗಳು

ಕೆ. ಎಸ್. ನ ಅವರ 'ಮನೆಯಿಂದ ಮನೆಗೆ' ಕವನದಲ್ಲಿ ಬದುಕು–ಸಾವುಗಳ ಸಂಗತಿಯಿದೆ. ಪ್ರತಿ ವರ್ಷವೂ ವರ್ಗವಾಗಿ ಬೇರೊಂದು ಮನೆ ಹುಡುಕುವ ಅಗತ್ಯವಿರುವ ಸಾಧಾರಣ ಸಂಸಾರದ ಚಿತ್ರ ಇಲ್ಲಿದೆ.

"ವರುಷ ತುಂಬಿದರೆ ಹೊಸ ಮನೆಯಿಂದ
ಹೊಸ ಮನೆಗೆ
ವರ್ಗ-"
"-ವರ್ಗವೆಂದರೆ ಮತ್ತೆ
ಗಂಟು ಮೂಟೆಯ ಬಿಗಿತ; ಇನ್ನೆಷ್ಟು
ಆಯಾಸ,
ತಿರುಪಿರದ ಲಾಂದ್ರಗಳು, ತಳವಿರದ
ಗೂಡೆಗಳು,
ಜರಡಿ, ತೊಟ್ಟಿಲು, ಒನಕೆ- ಇವುಗಳದೆ
ಮೆರವಣಿಗೆ"

'ಬಾಳಿನಲ್ಲಿ ಹೊಸದು ಹಳೆಯದು ಎಲ್ಲ ಮನೆಯ ಕಡೆಗೆ ಯಾತ್ರೆ' ಎಂಬಲ್ಲಿ ಕವನ ಇನ್ನೊಂದು ಅರ್ಥದ ಮಟ್ಟಕ್ಕೆ ವಿಸ್ತರಿಸುತ್ತದೆ.

'ಮುಚ್ಚಿದ ಕಿಟಕಿ' ಸಾವಿನ ಸ್ವರೂಪದ ಸಮರ್ಥ ಚಿತ್ರಣ, 'ರೈಲ್ವೆ ನಿಲ್ದಾಣದಲ್ಲಿ' ಕಿರಿದರಲ್ಲಿ ಹಿರಿದರ್ಥ ತುಂಬುವ ಸಾರ್ಥಕ ರಚನೆ. ತಾಯಿ–ಮಗಳ ಬೀಳ್ಕೊಡುಗೆಯ ಸಂದರ್ಭದ ಹೃದಯಂಗಮ ಚಿತ್ರಣ.

'ಸಂಧ್ಯಾರಾಗ' ಉನ್ನತಾಧಿಕಾರಿಯೊಬ್ಬ ನಿವೃತ್ತನಾದಾಗ ಅದುವರೆಗೆ ಕ್ರಮಿಸಿದ ದಾರಿಗೇ ಅಂಟಿಕೊಳ್ಳಲು ಪ್ರಯತ್ನಿಸಿ ವಿಫಲನಾಗುವ ಸಫಲ ಚಿತ್ರಣ.

ಸಾವಿನ ಅರಿವಿಲ್ಲದ ಮಾನವ ಸ್ವಭಾವದ ಚಿತ್ರಣ 'ತೆರೆದ ಬಾಗಿಲು'.

"ಸಂಜೆಯೂ ಆಯಿತು ನೀನೂ ಬಂದೆ
ಬಸ್ಸು ಸಿಕ್ಕಿತೆ ನಿನಗೆ ಸಂತೆಯ ದಿನ?"
"ಹಿಡಿದ ಮಳೆ ಬಿಟ್ಟಿದೆ! ಈಗ ಚಳಿ
ಹುಟ್ಟಿದೆ
ಈ ಹಳೆಯ ಕುರ್ಚಿ! ಈ ಚಾಪೆ ಎರಡೂ
ಕೊಳೆಯೇ!?"

'ಕವನದ ವಸ್ತು ಸಮಸ್ತವೂ ಇಲ್ಲಿ ಅಖಂಡ ಪ್ರತಿಮೆಯಾಗಿ ಅರ್ಥಾಂತರಗಳನ್ನು ಸ್ಫುರಿಸುವ ರೀತಿ' ಗಮನಾರ್ಹ. ಬದುಕು–ಸಾವಿನ ಚಿಂತನ ಮಂಥನ ಕವನದ ಮಹತ್ವದ ಅಂಶವಾಗಿದೆ,

'ಬರಿಗೊಡಗಳಿಗೆ ಸಮಾಧಾನ' ಕೇವಲ ಬೇಸಿಗೆಯ ಚಿತ್ರಣವಷ್ಟೇ ಆಗಿರದೆ ಸ್ವಾತಂತ್ರ್ಯೋತ್ತರ ಪರಿಸ್ಥಿತಿಯ ಮಾರ್ಮಿಕ ಚಿತ್ರಣವಾಗಿದೆ. (ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ). ಅರ್ಥವಿಲ್ಲದ ಆಚಾರ, ಎಂದಿನದೋ ಆದ ಜೀವನ ಮೌಲ್ಯಗಳ ನಿರರ್ಥಕತೆಗೆ ಇಲ್ಲಿನ 'ಮುದಿ ಮರ' ಸಂಕೇತವಾಗುತ್ತದೆ.

'ಬಿಳಿಯ ಹೂಗಳ ಕವಿತೆ', 'ಗೋರಿಗಳ ಮೇಲೆ' 'ಪ್ರಪಂಚದ ನಿಯಂತ್ರಕ ಶಕ್ತಿ ಮತ್ತು ತನಗಿರುವ ಸಂಬಂಧಗಳನ್ನು ಕುರಿತು, ಕವಿ ಸಾಮಾನ್ಯನಾಗಿ ವರ್ತಿಸಿದ ರೀತಿಯನ್ನು ಹೇಳುತ್ತದೆ, ಇಲ್ಲಿ ನಿಯಂತ್ರಕ–ನಿಯಂತ್ರಿತರ ನಡುವಿನ ಸಂಬಂಧ ಮತ್ತು ಆ ಸಂಬಂಧ ಬರವಣಿಗೆಯಲ್ಲಿ ಪಡೆಯುವ ಸ್ವರೂಪ ಗಮನಾರ್ಹ.' 'ಚರಿತ್ರೆಯ ಪ್ರಶ್ನ ಪತ್ರಿಕೆ' ಇತಿಹಾಸ ಬದಲಿಸಲು ಪ್ರಯತ್ನಿಸುವ ಮಾನವನ ವ್ಯರ್ಥ ಸಾಹಸದ ವಿಡಂಬನೆ. ಇತಿಹಾಸ ಬದಲಾಗುವುದಿಲ್ಲ. ಅದು ನಡೆದದ್ದೇ ದಾರಿ ಎಂಬ ಸಮರ್ಥನೆ.

'ಗಡಿಯಾರದಂಗಡಿಯ ಮುಂದೆ'

'ಗಡಿಯಾರದಂಗಡಿಯ ಮುಂದೆ' ಕೆ. ಎಸ್. ನ ಅವರ ವೈಶಿಷ್ಟ್ಯಪೂರ್ಣ ರಚನೆ. ಬಹುಮಂದಿ ವಿಮರ್ಶಕರ ಗಮನ ಸೆಳೆದಿರುವ

ಕವನ, ಅದನ್ನು ಮೆಚ್ಚಿ ಪ್ರಶಂಸಿಸಿದವರೂ ಅಷ್ಟಾಗಿ ಮೆಚ್ಚದೆ ಸಾಮಾನ್ಯವೆಂದವರೂ. ಅದನ್ನು ಅರ್ಥೈಸುವಲ್ಲಿ ತೀವ್ರ ಚಿಂತನ ಮಂಥನ ನಡೆಸಿರುವುದಂತೂ ಸುಸ್ಪಷ್ಟ. 'ದೇಶ ಕಾಲ ಗಳ ಮಿತಿಯಲ್ಲಿ ಕಾಲ ದೇಶಾತೀತ. ಹಿಂದಿನದು ಕಾಲಗರ್ಭದಲ್ಲಿ ಅಡಗಿದೆ. ಮುಂದಿನದು ದೊತ್ತಿಲ್ಲ. ಒಂದೇ ದಿಕ್ಕಿಗೆ ಓಡುವ ಕುದುರೆ ಗಡಿಯಾರದಂಗಡಿಯ ಮುಂದೆ ಬೆದರಿ ನಿಲ್ಲು-ತ್ತದೆ. ಹುಟ್ಟಿದ್ದು ಬೆಳೆದದ್ದು ಕಾಲಗರ್ಭ-ದಲ್ಲಿ ಕರಗುತ್ತದೆ. ಕಾಲದ ಪ್ರಭಾವಕ್ಕೆ ಒಳ-ಗಾಗದಿರಲು ನಡೆಸಿದ ನಡೆಸುವ ಮಾನವ ಪ್ರಯತ್ನಗಳು ವ್ಯರ್ಥ.'

''ಬಾನ ಚಪ್ಪರದ ಕೆಳಗೆ ಹೆಬ್ಬಾವಿನುಬ್ಬಸದ
ಹತ್ತಿ ಬಿಲ್ಲಿನ ಗಸದ ಕತ್ತಲೆಯಲಿ
ನಿರ್ನಾಮವಾಗಿರುವ ನೀಲ ನಗರಾವಳಿಯ
ಕೋಳಿ ಕೂಗಿತು ಬಾಳ ಮುಂದಲೆಯಲಿ''

ಕಾಲದ ಹೆಬ್ಬಾವು ಸಾವಿರಾರು ವರ್ಷಗಳ ನಾಗರಿಕತೆಯನ್ನು ನುಂಗಿದೆ. ಬುಡೆಯೂ ಬಡಲಾಗಿದೆ. ಭೂತಕಾಲ ದೃಷ್ಟಿಸುವ ಕವಿಗೆ ಕಾಲದ ಅನಂತತೆಯ ಅರಿವಾದಾಗ ಭಯ, ವಿಷಾದ.


''ಹೊತ್ತ ಮೂಟೆಗಳೇನು? ಹಿಡಿದ
ಗಿಂಡಿಗಳೇನು?
ಹೆಜ್ಜೆ ಸಾಲಿನ ಪಯಣ ನಾರಾಯಣ''

ಗದ್ಯ ಕೃತಿಗಳು

'ಉಪವನ', 'ಮಾರಿಯ ಕಲ್ಲು' 'ದಮಯಂತಿ'- ಕೆ.ಎಸ್.ನ ಅವರ ಮೂರು ಗದ್ಯ ಕೃತಿಗಳು. "ಒಳ್ಳೆಯ ಗದ್ಯರಚನೆ ನನ್ನಿಂದ ಸಾಧ್ಯವಿಲ್ಲ" ಎಂದು ಸ್ವತಃ ಕೆ.ಎಸ್.ನ ಅವರೇ ಹೇಳಿ-ಕೊಂಡರೂ ಅದು ವಿನಯದ ಮಾತೇ ಹೊರತು ನಿಜ ಸಂಗತಿಯಲ್ಲ. 'ಗದ್ಯ ಲೇಖಕರೆಂದು ಹೇಳಿಕೊಳ್ಳುವ ಎಷ್ಟೋ ಲೇಖಕರಲ್ಲಿ ಕೆ. ಎಸ್, ನ ಅವರಂಥ ಗದ್ಯ ಅಪರೂಪ. 'ಉಪವನ' ವಿಮರ್ಶಾಲೇಖನ ಮತ್ತು ಪ್ರಬಂಧಗಳ ಸಂಕಲನ. ಏಳು ಪುಸ್ತಕಗಳ ಅವಲೋಕನ, ಆರು ಲಘುಪ್ರಬಂಧಗಳು, ಎರಡು ವ್ಯಕ್ತಿ ಚಿತ್ರಗಳು, ನವ್ಯಕಾವ್ಯದ ಬಗ್ಗೆ ಒಂದು ಲೇಖನ, ಜಾನಪದ ಸಾಹಿತ್ಯದ ಬಗ್ಗೆ ಒಂದು ಲೇಖನ, ಒಂದು ಚಿಕ್ಕ ಕತೆ, ಒಂದು ಪ್ರವಾಸಕಥನ 'ಉಪ-ವನ'ದಲ್ಲಿ ಸೇರಿವೆ. 'ಕುವೆಂಪು ಕರ್ಣನನ್ನು ಪ್ರಶಂಶಿಸಿದ್ದಾರೆಯೆ ಹೊರತು ದೋಷವನ್ನು ಗಮನಿಸಿಲ್ಲ.' 'ಕುವೆಂಪು ಸಣ್ಣ ಕತೆಗಳೊಂ-ದೊಂದೂ ಒಂದೊಂದೂ ಕವಿತೆ.' 'ಬೇಂದ್ರೆಯವರ ಕೃತಿಗಳು 'ಸಂತೋಷದ ಪುಣ್ಯಫಲ' 'ಪ್ರಜ್ವಲಿ-ಸುವ ನಾದರತ್ನ?' 'ಮಾಸ್ತಿಯವರು ಕವಿತೆಯಲ್ಲಿ ಕಷ್ಟಪಡುವವರೂ ಅಲ್ಲ; ಕಷ್ಟ ಕೊಡುವವರೂ ಅಲ್ಲ.' ಇದು ಅವರ ಸಾಹಿತ್ಯದ ಅಹಿಂಸಾ ಯೋಗ.'

—ಇಂಥ ಮಾತುಗಳಲ್ಲಿ ಕೆ. ಎಸ್. ನ. ಅವರ ವಿಮರ್ಶಾವಿಧಾನವನ್ನೂ ಗದ್ಯದ ಸೊಗಸನ್ನೂ ಗುರುತಿಸಬಹುದು.

'ದಮಯಂತಿ' ಮಹಾಭಾರತದ ನಳೋ-ಪಾಖ್ಯಾನದ ಸಂಕ್ಷಿಪ್ತ ಅನುವಾದ. 'ಹಕಲ್-ಬರಿ ಫಿನ್ನನ ಸಾಹಸಗಳು' ಮಾರ್ಕ್ ಟ್ವೇನನ ಆಂಗ್ಲ ಕಾದಂಬರಿಯ ಅನುವಾದ. 'ಕುಂಕುಮ ಭೂಮಿ,' 'ತೆರೆದ ಬಾಗಿಲು,' 'ಮುಚ್ಚಿದ ಕಿಟಕಿ,' 'ಅನುಮಾನ,' 'ಮೂರನೆಯ ಸಲಹೆ,' 'ಭೂತ ಕನ್ನಡಿ,' 'ಆರತಿಯ ಸಂಜೆ,' 'ಕುಶಲ ಪ್ರಶ್ನೆ'— ಈ ಎಂಟು ಕೆ. ಎಸ್, ನ ಅವರು ರಚಿಸಿರುವ ಸರ್ಗಗಳು ಅಮೇರಿಕದ ಕವಿ ಎಜ್ರಾ ಪೌಂಡ್ ಕೃತಿಗಳ ಸ್ಫೂರ್ತಿಯಿಂದ ಸೃಷ್ಟಿಯಾದವುಗಳು. ಇವಲ್ಲದೆ ಶ್ರೇಷ್ಠ ಆಂಗ್ಲ ಕವಿಗಳ ಶ್ರೇಷ್ಠ ಪದ್ಯಗಳು ಕೆಲವನ್ನು ಕೆ. ಎಸ್. ನ ಕನ್ನಡಕ್ಕೆ ತಂದಿದ್ದಾರೆ. ✡



ಮಲ್ಲಿಗೆಯ ಕವಿ ಕೆ. ಎಸ್. ನ


ವರದರಾಜ ಹುಯಿಲಗೋಳ

ಹೂಗಳ ಸುಂದರ ಜೀವನ ಕೆಲವೇ ಗಂಟೆಗಳದು ಎಂಬುದನ್ನು ಸುಳ್ಳುಗೈದ ಕವಿ ಕೆ. ಎಸ್. ನರಸಿಂಹಸ್ವಾಮಿಯವರು. ೧೯೪೨ ರಲ್ಲಿ ಪ್ರಕಟವಾದ ಅವರ 'ಮೈಸೂರು ಮಲ್ಲಿಗೆ' ಇಂದಿಗೂ ಪರಿಮಳಯುಕ್ತವಾಗಿ ಅರಳಿ ನಿಂತಿದೆ. ಅದು ಅನಂತ ಕಾಲಕ್ಕೂ ಸೌರಭ ಬೀರುವ ಸುಕೋಮಲ ಕೃತಿ. ಹಲವರಿಗೆ ಕೆ. ಎಸ್. ನರಸಿಂಹಸ್ವಾಮಿ ಅವರ ಹೆಸರು ಗೊತ್ತಿರದೇ ಇರಬಹುದು; ಆದರೆ 'ಮೈಸೂರು ಮಲ್ಲಿಗೆ' ಮಾತ್ರ ಓದು ಬಲ್ಲ ಪ್ರತಿ ಕನ್ನಡಿಗನ ಮನೆ-ಮಾತಾಗಿದೆ. ಮಾಸ್ತಿ ವೆಂಕಟೇಶ ಅಯ್ಯಂಗಾರ-ರಂಥವರು ಯಾವ ಸಾಹಿತ್ಯಕ್ಕೂ ಗೌರವ ತರುವ ಕೃತಿಯಿದು ಎಂದು ಪ್ರಶಂಸಿಸಿದ್ದಾರೆ.

'ಮೈಸೂರು ಮಲ್ಲಿಗೆ'ಯಂತೆಯೇ ಈ ವರುಷ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹು-ಮಾನವನ್ನು ದೊರಕಿಸಿದ ಕವನ ಸಂಕಲನ 'ತೆರೆದ ಬಾಗಿಲು' ಕೆ. ಎಸ್. ನ ಅವರ ಭಾಗ್ಯದ ಬಾಗಿಲನ್ನು ತೆರೆದಿದೆಯಲ್ಲದೇ, ಅವರ ಅನುಭವದ ಪರಿಪಕ್ವತೆ ಈ ಕೃತಿಯಲ್ಲಿ ಬಾಗಿಲು ತೆರೆದು ನಿಂತಿದೆ. ಸುಮಾರು ನಾಲ್ವತ್ತು ವರುಷ-ಗಳಿಂದ ನಡೆದುಬಂದಿದೆ ಕೆ. ಎಸ್. ನ ಅವರ ಕಾವ್ಯಕೃಷಿ, ಆ ಕಾವ್ಯರ್ಷಿಗೆ ಇದೀಗ ನಮ್ಮ ಜನತೆಯ, ನಮ್ಮ ನಾಡಿನ ಸನ್ಮಾನ ದೊರಕಿದೆ.

ಕೆ. ಎಸ್. ನರಸಿಹಸ್ವಾಮಿ ಅವರದು ಅತ್ಯಂತ ಸಹಜವಾದ ಕವಿತೆ; ಅವರ ಕಾವ್ಯ ಬದುಕಿ-ನಿಂದಲೇ ಹೊರಹೊಮ್ಮಿ ಬಂದುದು. ಅಂತೆಯೇ ಅವರ ಕವನಗಳು ಜನಮನಸ್ಕೆ ತೀರ ಹತ್ತಿರ-ವಾದವು.

ಅನೇಕ ರೋಮ್ಯಾಂಟಿಕ್ ಕವನಗಳನ್ನು ರಚಿಸಿದ, ಕೆ. ಎಸ್. ನರಸಿಂಹಸ್ವಾಮಿ ಅವರ ಬದುಕು ಬರಿ ರೋಮ್ಯಾಂಟಿಕ್ ಆಗಿರದೆ, ವಿವಿಧ ಕಷ್ಟ ಕಾರ್ಪಣ್ಯಗಳಿಂದ ಕೂಡಿಕೊಂಡಿದೆ. ಅಷ್ಟು ಆರ್ಥಿಕ ಅನುಕೂಲತೆಯಿರದ ಮಧ್ಯಮವರ್ಗದಲ್ಲಿ ಜನಿಸಿ ಬೆಳೆದವರು ಅವರು. ನರಸಿಂಹಸ್ವಾಮಿ ಅವರು ಸುಮಾರು ಹದಿನೈದು ವರುಷದವರಿರು-ವಾಗಲೇ, ತಮ್ಮ ತಂದೆಯನ್ನು ಕಳೆದು-ಕೊಂಡವರು; ಇದರಿಂದ ಮನೆತನದ ಜವಾಬ್ದಾರಿ-ಗಳನ್ನು ಕಿರಿ ವಯಸ್ಸಿನಲ್ಲೇ ವಹಿಸಿಕೊಳ್ಳ-ಬೇಕಾಯಿತು, ಕಾಲೇಜು ಶಿಕ್ಷಣವನ್ನು ಅರ್ಧಕ್ಕೆ



(ಶ್ರೀ ಕೆ. ಎಸ್. ನರಸಿಂಹಸ್ವಾಮಿ ಅವರ ಪುತ್ರ ಶ್ರೀ ಕೆ. ಎನ್. ಹರಿಹರ ಅವರ ಸಹಕಾರದಿಂದ)

ನಿಲ್ಲಿಸಿ, ನೌಕರಿ ಮಾಡಬೇಕಾಯಿತು.

ಈ ಸಹಜ, ಶ್ರೇಷ್ಠ ಕವಿಗೆ ನೌಕರಿಯಾದರೂ ದೊರೆತುದು ಎಂಥದು ? ರೆವಿನ್ಯೂ ಕಚೇರಿಯಲ್ಲಿ ಒಬ್ಬ ಗುಮಾಸ್ತ ! ತಿಂಗಳಿಗೆ ಇಪ್ಪತ್ತೆರಡು ರೂಪಾಯಿಗಳ ಅದ್ಭುತ ಸಂಬಳ ! ೧೯೩೭ ಆಗಸ್ಟ್ ತಿಂಗಳಲ್ಲಿ ನಂಜನಗೂಡಿನಲ್ಲಿ ಇವರ ಸರಕಾರಿ ನೌಕರಿ ಪ್ರಾರಂಭವಾಯಿತು. ಮುಂದೆ ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಗೆ; ಬಹಳ ವರುಷಗಳ ನಂತರ ಬೆಂಗಳೂರು ಸ್ಥಳೀಯ ಸಂಸ್ಥೆಗಳ ಇಲಾಖೆಗೆ ಇವರಿಗೆ ವರ್ಗ. ಇಲ್ಲಿಂದಲೇ ೧೯೭೦ ರ ಜನವರಿಯಲ್ಲಿ ನಿವೃತ್ತರಾದ ಕೆ. ಎಸ್. ನ ಅವರು ತಮ್ಮ ನೌಕರಿಯ ಅನೇಕ ವರುಷಗಳನ್ನು ಮೈಸೂರು, ಬೆಂಗಳೂರುಗಳಲ್ಲಿ ಕಳೆದುದುಂಟು. ಸಧ್ಯ ಬೆಂಗಳೂರಲ್ಲಿಯೇ ನಿವೃತ್ತ ಜೀವನ ಸಾಗಿಸುತ್ತಿದ್ದರೂ ಮೈಸೂರಿನ ಕಂಪು ಅವರಿಗೆ ಉಲ್ಲಾಸದಾಯಕ !

ಕಂದಾಯ ಖಾತೆಯ ನೌಕರಿಗೂ ಕಾವ್ಯ ಜೀವನಕ್ಕೂ ಸಾಮಾನ್ಯವಾಗಿ ಎಣ್ಣೆ ಸೀಗೇಕಾಯಿ ಸಂಬಂಧ. ಆದರೂ ಅತ್ಯಂತ ಮೃದುಸ್ವಭಾವದ ಕೆ. ಎಸ್. ನ ಅವರು ಇವೆರಡಕ್ಕೂ ಹೊಂದಿಕೊಂಡು ಬಾಳಿದ್ದು ಅಚ್ಚರಿಯ ಸಂಗತಿಯೆನ್ನಬೇಕು. ಒಮ್ಮೆ ಡಾ. ಆರ್. ಸಿ. ಹಿರೇಮಠರು ಬೆಂಗಳೂರಿನ ಹೌಸಿಂಗ್ ಬೋರ್ಡ್ ಕಚೇರಿಗೆ ಹೋದರಂತೆ. ಫೈಲುಗಳ ನಡುವೆ ಮಗ್ನರಾಗಿದ್ದ ಕೆ. ಎಸ್. ನ ಅವರನ್ನು ಅಲ್ಲಿ ಕಂಡು 'ಮೈಸೂರು ಮಲ್ಲಿಗೆ'ಯ ಕೆ. ಎಸ್. ನ ಇವರೇನೇ! " ಎಂದು ಆಶ್ಚರ್ಯಪಟ್ಟರಂತೆ. ನಿವೃತ್ತಿಯ ನಂತರ ಅವರು ಎರಡು ವರ್ಷ ರಾಜ್ಯ ಸಾಹಿತ್ಯ ಅಕಾಡೆಮಿಯ ಸಾಹಿತ್ಯಾಧಿಕಾರಿಯಾಗಿ, ಅನಂತರ ಸರಕಾರದ 'ಯುತ್ ಕರ್ನಾಟಕ'ದ ಸಂಪಾದಕರಾಗಿ ದುಡಿದರು.

ಕೆ. ಎಸ್. ನರಸಿಂಹಸ್ವಾಮಿ ಅವರ ತಂದೆ ಕಿಕ್ಕೇರಿ ಸುಬ್ಬರಾಯರು ಸರಕಾರಿ ನೌಕರಿ ಮಾಡಿದವರಲ್ಲ; ಅವರು ಮೈಸೂರಲ್ಲಿ ಚಿನ್ನ-ಬೆಳ್ಳಿ ಅಂಗಡಿಯೊಂದರ ಉದ್ಯೋಗದಲ್ಲಿದ್ದವರು. ಅವರು ಸಂಗೀತಪ್ರೇಮಿಯಾಗಿದ್ದರಲ್ಲದೆ, ಸ್ವತಃ ಸಂಗೀತಗಾರರೂ ಆಗಿದ್ದರು. ಆಗ ಮೈಸೂರಿನಲ್ಲಿದ್ದ ಖ್ಯಾತ ಸಂಗೀತ ವಿದ್ವಾಂಸರ ಸ್ನೇಹವನ್ನು ಸಂಪಾದಿಸಿದ್ದರು. ತಂದೆಯವರ ಈ ಸಂಗೀತಪ್ರೇಮ ಸಹಜವಾಗಿ ಕೆ. ಎಸ್. ನ ಅವರ ಮೇಲೆ ಪ್ರಭಾವ ಬೀರಿದ್ದು, ಅದು ಅವರ ಕಾವ್ಯದಲ್ಲಿ ಸ್ಫುಟವಾಗಿದೆ. ಕೆ. ಎಸ್. ನ ಅವರ ತಾಯಿ ಹೊಸಹೊಳಲು ನಾಗಮ್ಮನವರಂತೂ ವಾತ್ಸಲ್ಯಮಯಿ. ಈ ದಂಪತಿಗಳಿಗೆ ಹೆಣ್ಣು ಮಕ್ಕಳು ಹುಟ್ಟಿದರೂ ಉಳಿಯಲಿಲ್ಲವಂತೆ. ನರಸಿಂಹಸ್ವಾಮಿ ಮತ್ತು ಅವರ ತಮ್ಮ ಇಬ್ಬರೇ ಗಂಡು ಮಕ್ಕಳು ಇವರಿಗೆ. ಸುಬ್ಬರಾಯರು ಮತ್ತು ನಾಗಮ್ಮನವರು ತಮ್ಮ ಹೆಣ್ಣು ಮಕ್ಕಳಂತೆಯೇ ಇವರನ್ನು ಸಾಕಿ ಸಲಹಿದ್ದಾರೆ. ಆ ವಾತ್ಸಲ್ಯವೂ ಇವರ ಗೀತಗಳಲ್ಲಿ ಹರಿದು ಬಂದಿದೆಯೆಂದು ತೋರುತ್ತದೆ.

ಬಳಗದವರಲ್ಲಿ ಕೆ. ಎಸ್. ನ ಅವರ ಮೇಲೆ ಪ್ರಭಾವ ಬೀರಿದ ಇನ್ನೊಬ್ಬ ವ್ಯಕ್ತಿಯೆಂದರೆ ನಾಗಮ್ಮನವರ ತಂದೆಯವರು. ಅವರೂ ಕಂದಾಯ ಖಾತೆಯಲ್ಲಿ ಶಿರಸ್ತೇದಾರರಾಗಿದ್ದರು; ಅವರು ಮೇಧಾವಿ. ಅವರಿಗೆ ತ್ರಿಕಾಂಡ ಅಮರಕೋಶ ಕಂಠಪಾಠವಾಗಿತ್ತು. ಜೀವನದ ಎಲ್ಲಾ ಹಂತಗಳಲ್ಲಿ ಅವರು ಶಿಸ್ತನ್ನು ಪಾಲಿಸಿಕೊಂಡು ಬಂದಿದ್ದರು. ಅವರ ಕನ್ನಡ ಹಾಗೂ ಇಂಗ್ಲಿಷ್ ಬರವಣಿಗೆ ಮುತ್ತಿನಂತೆ!

ಕೆ. ಎಸ್. ನ ಅವರ ಅಚ್ಚಾದ ಕವನಗಳನ್ನು ಓದುವುದೂ ಒಂದೇ, ಅವರ ಹಸ್ತಪ್ರತಿ ಓದುವುದೂ ಒಂದೇ. ಅವರ ಬರೆಹ ಅಷ್ಟು ಸ್ಪಷ್ಟವಾಗಿರುತ್ತದೆ; ಅಕ್ಷರಗಳು ಅಷ್ಟು ಮುದ್ದಾಗಿರುತ್ತವೆ! ಮುದ್ರಣಾಲಯದಲ್ಲಿ ಮೊಳೆ ಜೋಡಿಸುವವನಿಗೆ ಏನೇನೂ ತೊಂದರೆಯಿಲ್ಲ.

ಕೆ. ಎಸ್. ನ ಅವರ ಸರಳತೆ, ಸ್ವಚ್ಛತೆ ಎದ್ದು ಕಾಣುವಂತಹದು. ನಿರ್ಮಲವಾಗಿರುವ ಒಂದು ಕಚ್ಚೆ ಪಂಚೆ ಉಟ್ಟು, ಒಂದು ಬುಶ್ ಶರ್ಟು ಧರಿಸಿ, ಹೆಗಲ ಮೇಲೆ ಶಲ್ಯವೊಂದನ್ನು ಹಾಕಿಕೊಳ್ಳುವ ವ್ಯಕ್ತಿ. ತಲೆಯ ಮೇಲೆ ಗುಂಗುರುಗೂದಲು, ನೀಳವಾದ ಮೂಗು, ಕನ್ನಡಕದ ತೆರೆಯೊಳಗಿಂದ ಹೊಳೆಯುವ ಕಣ್ಣುಗಳು. ಕಷ್ಟಪಟ್ಟು ಬೆಳೆದರೂ, ಕಷ್ಟದಲ್ಲಿಯೇ ಇದ್ದರೂ ಅವುಗಳ ಅರಿವೇ ಇಲ್ಲವೆಂಬಂತೆ ಮುಖದಲ್ಲಿ ಸೂಸುವ ಮಂದಹಾಸ.

ಆ ಮೋದಹಾಸವೇ ಹೊಸದಾಗಿ ಪರಿಚಯವಾದವರನ್ನು ಸ್ನೇಹಿತರನ್ನಾಗಿ ಪರಿವರ್ತಿಸುತ್ತದೆ.

ಸಿರಿವಂತರ ನೆಲೆಯೂರಾದ ಮಂಡ್ಯ ಜಿಲ್ಲೆಯ ಕಿಕ್ಕೇರಿಯಲ್ಲಿ ೧೯೧೫ ರ ಜನವರಿ ೨೬ ರಂದು ಜನಿಸಿದ ನರಸಿಂಹಸ್ವಾಮಿ ಅವರು ಆರ್ಥಿಕ ದೃಷ್ಟಿಯಿಂದ ಎಂದೂ ಧನವಂತರಾಗಲಿಲ್ಲ; ಆದರೆ ಉತ್ತಮ ಮಟ್ಟದ ಕಾವ್ಯ ರಚಿಸಿ ಸರಸ್ವತೀಮಂದಿರದಲ್ಲಿ ಶ್ರೀಮಂತರೆನಿಸಿಕೊಂಡರು. ವಿದ್ಯಾರ್ಥಿ-ದೆಸೆಯಲ್ಲಿದ್ದಾಗ ಭಾಷೆಯು ಅವರ ವಿಶೇಷ ಅಧ್ಯಯನದ ವಿಷಯವಾಗಿರದಿದ್ದರೂ ಅವರು ಕನ್ನಡ ಭಾಷೆಯ ಮೇಲೆ ಪ್ರಭುತ್ವ ಸಂಪಾದಿಸಿದ್ದಾರೆ.

ನರಸಿಂಹಸ್ವಾಮಿಯವರ ಶಿಕ್ಷಣವೆಲ್ಲ ಹೆಚ್ಚಾಗಿ ಮೈಸೂರಲ್ಲಿ. ಇಂಟರ್‌ಮಿಡಿಯೆಟ್ ಸೈನ್ಸ್‌ನಲ್ಲಿ ಅವರ ಅಭ್ಯಾಸದ ವಿಷಯ ಇಂಜಿನಿಯರಿಂಗ್! ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಜೂನಿಯರ್ ಬಿ. ಎ. ಯಲ್ಲಿರುವಾಗ ಅವರ ವಿಷಯ ಭೌತಶಾಸ್ತ್ರ ಮತ್ತು ಗಣಿತ! ಇಂಥ ವಿಷಯಗಳನ್ನು ಅಭ್ಯಸಿಸಿದ ವಿದ್ಯಾರ್ಥಿ ಕವಿಯಾಗಿ ಮಾರ್ಪಟ್ಟುದು ಕನ್ನಡಿಗರ ಸೌಭಾಗ್ಯವೇ.

ತಮ್ಮ ಪ್ರಥಮ ಕೃತಿ 'ಮೈಸೂರು ಮಲ್ಲಿಗೆ'-ಯಿಂದ ೧೯೪೨ ರಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟ ಕೆ. ಎಸ್. ನ ಅವರು ಅದೇ ಕೃತಿಯಿಂದ ಕಾಲೂರಿ ನಿಂತರು. ಈ ಕವನ ಸಂಕಲನ ಪ್ರಕಟವಾಗುವ ಮುನ್ನ, ೧೯೩೬ ಮಾರ್ಚ್ ತಿಂಗಳಲ್ಲಿ ವೆಂಕಮ್ಮನವರ ಜೊತೆಗೆ ತಿಪಟೂರಿನಲ್ಲಿ ಅವರ ಮದುವೆಯಾಗಿತ್ತು. ಈ ವರುಷಗಳಲ್ಲಿ ಅವರ ಪ್ರೇಮಗೀತಗಳ ಸಂಕಲನವಾಗಿ ಪ್ರಕಟವಾಗುವಂತೆ ಪ್ರೋತ್ಸಾಹಿಸಿದವರು ತೀ. ನಂ. ಶ್ರೀ ಮತ್ತು ಎ. ಆರ್. ಕೃಷ್ಣಶಾಸ್ತ್ರಿಗಳು.

"ಕವಿಗೆ ಹೆಂಡತಿಯಿಲ್ಲ; ಅವನು ಬರೆಯುವುದೆಲ್ಲ ರಸಗೀತ ಪ್ರೇಮಗೀತಗಳು" ('ಮೈಸೂರು ಮಲ್ಲಿಗೆ'ಪು.೬) ಎಂದು ಕೆ. ಎಸ್. ನ ಹಾಡಿದ್ದನ್ನು ಅನೇಕರು ಕವಿ ಅವಿವಾಹಿತರೆಂದು ಅಪಾರ್ಥ ಮಾಡಿಕೊಂಡವರೂ ಇದ್ದಾರೆ. ಹೆಂಡತಿಯಂತೆಯೆ ಕಾವ್ಯವೂ ಅವರಿಗೆ ಅಂದು ಪ್ರೇಯಸಿ, ಇಂದು ಸಂಗಾತಿ. 'ಮೈಸೂರು ಮಲ್ಲಿಗೆ' ಜನಮನದ ಹೃದಯವನ್ನು ಸೂರೆಗೊಂಡಿತು. ೧೯೪೩ರಲ್ಲಿಯೇ ಅದಕ್ಕೆ ದೇವರಾಜ ಬಹದ್ದೂರ ಬಹುಮಾನವೂ ದೊರಕಿತು.

'ಮೈಸೂರು ಮಲ್ಲಿಗೆ'ಯ ಅನಂತರ 'ಐರಾವತ,' 'ದೀಪದ ಮಲ್ಲಿ,' 'ಉಂಗುರ,' 'ಇರುವಂತಿಗೆ,' 'ಶಿಲಾಲತೆ,' 'ಮನೆಯಿಂದ ಮನೆಗೆ' ಮತ್ತು 'ತೆರೆದ ಬಾಗಿಲು' ಇವು ಇವರ ಪ್ರಕಟವಾದ ಕವನ ಸಂಕಲನಗಳು. ಇವುಗಳಲ್ಲಿ 'ಶಿಲಾಲತೆ'ಗೆ ನಮ್ಮ ರಾಜ್ಯದ ಸಂಸ್ಕೃತಿ ಪ್ರಸಾರ ಶಾಖೆಯ ಬಹುಮಾನ ಲಭಿಸಿದೆ.

ಹಿರಿಯ ಸಾಹಿತಿಗಳಾದ ವಿ. ಸೀ ಅವರನ್ನು ಕೆ. ಎಸ್. ನ ತಮ್ಮ ಅಣ್ಣನೆಂದೇ ಭಾವಿಸಿದ್ದಾರೆ ಅಣ್ಣ ತಮ್ಮಂದಿರಂತೆ ಅವರಿಬ್ಬರೂ ಎಷ್ಟೋ ವರುಷ ಬಾಳಿದ್ದಾರೆ. ಅರ್ಜುನ, ಕೃಷ್ಣರ ನಡುವಿದ್ದಂಥ ಸ್ನೇಹ ಸದಾಕಾಲ ನಮಗಿರಲಿ ಎಂದು ವಿ. ಸೀ ಯವರು ಒಮ್ಮೆ ಪ್ರಾರ್ಥಿಸಿಕೊಂಡಿದ್ದಾರೆ. ಪ್ರತಿಯೊಂದು ಕವನವನ್ನು ವಿ. ಸೀ. ಯವರಿಗೆ ಓದಿತೋರಿಸುವುದು, ಅವರಿಂದ ಅಭಿಪ್ರಾಯ ತಿಳಿದುಕೊಳ್ಳುವುದು ಕೆ. ಎಸ್. ನ ಅವರಿಗೆ ರೂಢಿಯಾಗಿಬಿಟ್ಟಿದೆ.

ಈ ಅಣ್ಣ-ತಮ್ಮಂದಿರ ಮಧುರ ಬಾಂಧವ್ಯ ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರ ಇರದೇ, ಅವರ ಬಾಳಿನ ಆಗು-ಹೋಗುಗಳಲ್ಲಿಯೂ ಇದೆ. ಕೆ. ಎಸ್. ನ ಅವರ ಮನೆಯ ಎಲ್ಲ ಸಮಾರಂಭಗಳಿಗೆ ವಿ. ಸೀ. ಇರಲೇಬೇಕು; ಅಂದರೇನೇ ಆ ಸಮಾರಂಭಕ್ಕೆ ಶೋಭೆ. ಕೆ. ಎಸ್. ನ ಅವರ ಸುಖದುಃಖಗಳನ್ನು ಸಹಾನುಭೂತಿಯಿಂದ ಕೇಳಿಕೊಂಡು ಸಮಾಧಾನ ನೀಡುವವರು ವಿ. ಸೀ. ಈ ದೃಷ್ಟಿಯಿಂದ ಇಂದಿಗೂ ಕೆ. ಎಸ್. ನ ಅವರ ಮನೆತನಕ್ಕೆ ಹಿರಿಯರೆಂದರೆ ವಿ. ಸೀ ಅವರೇ.

ದಿವಂಗತ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳೂ ಕೆ. ಎಸ್. ನ ಅವರ ಆಪ್ತಮಿತ್ರರಾಗಿದ್ದರು. ಅವರು ನರಸಿಂಹಸ್ವಾಮಿ ಅವರ ಕಾವ್ಯರಚನೆಯಲ್ಲಿ ವಿಶೇಷ ಆಸಕ್ತಿವಹಿಸಿದ್ದರು.

ಕೆ. ಎಸ್. ನ ಅವರ ಸಂಸಾರವೂ ದೊಡ್ಡದು; ಇವರಿಗೆ ನಾಲ್ಕು ಹೆಣ್ಣು ಮಕ್ಕಳು

ಮತ್ತು ನಾಲ್ಕು ಗಂಡುಮಕ್ಕಳು. ಹೀಗೆ ಸಂಸಾರದಲ್ಲಿ ಚಿಂತೆಗೆ ಯಥೇಷ್ಟವಾದ ಸ್ಥಾನ. ಆದರೂ ಕದಡುವ ಮನಸ್ಸು ಅವರದಲ್ಲ; ಚಿಂತೆಯಲ್ಲಿಯೂ ಶಾಂತಚಿತ್ತರಾಗಿ ಬಾಳಿದ್ದಾರೆ ಅವರು.

ಲಕ್ಷ್ಮೀ-ಸರಸ್ವತಿಯರಲ್ಲಿ, ಅತ್ತೆ-ಸೊಸೆಯರ ಸಂಬಂಧ ಎಂದು ಸಾಮಾನ್ಯವಾಗಿ ಜನ ಆಡಿಕೊಳ್ಳುವುದು ಕೆ.ಎಸ್. ನ ಮಟ್ಟಿಗೆ ಅನ್ವರ್ಥಕವೇ ಆಗಿತ್ತು. ಸಣ್ಣ ಸಂಬಳದಲ್ಲಿ ಮನೆತನದ ದೈನಂದಿನ ಖರ್ಚು-ವೆಚ್ಚಗಳನ್ನು ಸಾಗಿಸಿಕೊಂಡು ಹೋಗುವುದೇ ಕಷ್ಟವೆನಿಸಿದ್ದ ಅವರಿಗೆ ಹೆಚ್ಚಿನ ಹಣ ಸಂಗ್ರಹವಾಗಲಿ, ಗಳಿಕೆಯಾಗಲಿ ಅಸಾಧ್ಯವೇ ಆಗಿ ಪರಿಣಮಿಸಿತ್ತು. ೧೯೫೮ರಲ್ಲಿ ಅವರ ತಾಯಿ ತೀರಿಕೊಂಡಾಗ ವಿಪರೀತ ಹಣದ ಅಡಚಣೆಯಿಂದ ಅವರು ಬಳಲಬೇಕಾಯಿತು; ಮುಂದೆ ಹೆಣ್ಣುಮಕ್ಕಳ ಮದುವೆ ಮಾಡಬೇಕಾದಾಗ ಇಂಥವೇ ತಾಪತ್ರಯಗಳನ್ನು ಅವರು ಎದುರಿಸಬೇಕಾಯಿತು. ಇಂಥ ಸಮಯಗಳಲ್ಲಿ ವಿ. ಸೀಯವರಂಥ ಅವರ ಆಪ್ತಬಂಧುಗಳು ಅವರ ನೆರವಿಗೆ ಬಂದಿದ್ದಾರೆ. ಒಮ್ಮೆ ಮಗಳ ಮದುವೆಯ ವೆಚ್ಚ ತೂಗಿಸಲು ಬೆಂಗಳೂರಲ್ಲಿದ್ದ ಸ್ವಂತ ಮನೆಯನ್ನು ಕೈಗೆ ಬಂದಷ್ಟು ಹಣಕ್ಕೆ ಮಾರಿ ನಂತರದ ಹತ್ತು ವರ್ಷ ಆ ಮನೆಯಲ್ಲೇ ತಿಂಗಳಿಗೆ ನೂರು ರೂಪಾಯಿ ಬಾಡಿಗೆ ಕೊಟ್ಟು ಅವರು ವಾಸಿಸಬೇಕಾಯಿತಂತೆ. ಆದರೆ ಎಂಥ ಕಷ್ಟಪ್ರಸಂಗದಲ್ಲೂ ಸಮಾಧಾನದ ಚಿತ್ತ, ಮುಖದ ಮೇಲಿನ ನಸುನಗು ಅವರಿಂದ ಮಾಸಿಲ್ಲ.

ಮಕ್ಕಳ ಮೇಲೆ ಅಪಾರ ಪ್ರೀತಿ ಅವರದು. 'ವಿದ್ಯಾರ್ಥಿ ಇದ್ದಾಗ ಕಷ್ಟಪಡಬೇಕು' ಎಂಬುದು ಅವರ ಹಿತೋಪದೇಶ, ತಮ್ಮ ಮಕ್ಕಳಿಗೆ. ಸುಖದ ಕನಸನ್ನು ಕಾಣಬೇಕಾದರೂ, ಮಕ್ಕಳು ಶ್ರಮವಹಿಸಿ ಅಭ್ಯಸಿಸಬೇಕು.

ಅಲ್ಲದೆಯೇ ತಂದೆಯ ಪ್ರಭಾವದಿಂದ ಮಕ್ಕಳು ಮುಂದೆ ಬರಬೇಕೆಂಬ ಇಂದಿನ ಸಾಮಾನ್ಯ ನಿಯಮಕ್ಕೆ ಕೆ. ಎಸ್. ನ ಅಪವಾದವಾಗಿದ್ದಾರೆ. ತಮ್ಮ ಮಕ್ಕಳಿಗೆ ನೌಕರಿ ದೊರಕಿಸಲು ಯಾರಿಗೂ ಹೇಳಿದವರಲ್ಲ. ತಮ್ಮ ಹೆಸರನ್ನು ಬಳಸಿಕೊಳ್ಳಲು ಕೂಡ ಅವಕಾಶವಿತ್ತವರಲ್ಲ ಅವರು.

ಕವಿಗಳು ಸಾಮಾನ್ಯವಾಗಿ ತಮ್ಮ ಹೆಂಡತಿ, ಮಕ್ಕಳನ್ನು ಕುರಿತು ಹಲವಾದರೂ ಕವನ ಬರೆಯುವುದು ರೂಢಿ. ಆದರೆ ಕೆ. ಎಸ್. ನ ಅಂಥ ಕವನ ಬರೆದಿರುವುದು ತೀರ ವಿರಳ. ತಮ್ಮ ಮಗಳು ತುಂಗಭದ್ರೆಯನ್ನು ಕುರಿತು ಬರೆದ ಕವನದಲ್ಲಿ ಸಂಸಾರ ಒಂದು ಸಾಗರವೆಂದೂ ಗಂಡ ಹೆಂಡತಿಯ ದಡಗಳ ನಡುವೆ ತುಂಗಭದ್ರೆಯ ಹಡಗು ಚೆಂದಿರನ ಹೊತ್ತು ಓಡಾಡುವುದೆಂದೂ ಹಾಡಿದ್ದಾರೆ; 'ಇವಳೆನಗೆ ಸರ್ಪ ಕಾವಲು' ಎಂದು ತುಂಗಭದ್ರೆಯ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ನರಸಿಂಹಸ್ವಾಮಿ ಮತ್ತು ಸೌ. ವೆಂಕಮ್ಮ ಅವರಿಗೆ ದೇವರಲ್ಲಿ, ಧರ್ಮದಲ್ಲಿ ನಿಸ್ಸೀಮ ಭಕ್ತಿ; ಗೊಂದಾವಲೇಕರ ಶ್ರೀ ಬ್ರಹ್ಮಚೈತನ್ಯರಲ್ಲಿ ಸೌ. ವೆಂಕಮ್ಮನಲ್ಲಿರುವ ಶ್ರದ್ಧಾಭಕ್ತಿ, ನರಸಿಂಹಸ್ವಾಮಿಯವರಲ್ಲೂ ಇದೆ. ಅವರಿಗೆ ಅಕ್ಕಿ ಹೆಬ್ಬಾಳದಲ್ಲಿರುವ ಲಕ್ಷ್ಮೀನರಸಿಂಹ ದೇವರ ಮೇಲೆ ಭಕ್ತಿ. ಅಲ್ಲಿ ಜರುಗುವ ಲಕ್ಷ್ಮೀನರಸಿಂಹ ದೇವರ ರಥೋತ್ಸವಕ್ಕೆ ಪ್ರತಿ ವರುಷವೂ ಕೆ. ಎಸ್. ನ ಹೋಗಿಬರುತ್ತಾರೆ. ಈ ಶ್ರದ್ಧೆ ಅವರ ಚಿಂತನೆಗೆ ಮಹತಿಯನ್ನು ನೀಡಿದೆ.

ಏನೇ ಆದರೂ ನೆಲವೇ ದೇವರೆಂದು ನಂಬಿ ನುಡಿಯುವ ಕವಿ ನರಸಿಂಹಸ್ವಾಮಿ ಎಂದು ರಾಮಚಂದ್ರ ಶರ್ಮ ಹೇಳುವಲ್ಲಿ ಸತ್ಯಾಂಶವಿದೆ. 'ಇಹದ ತಳಹದಿಯಿಂದ ದಿಟದ ದರ್ಶನವರಳಿ ಹಂಬಲಿಸಿ ಹಾಡಾಗಬೇಕು' ಎಂದು ಕೆ. ಎಸ್. ನ ಅವರೇ ಹೇಳಿದ್ದಾರೆ.

ಮೊದಲಿನ ಹಲವು ಕವನ ಸಂಗ್ರಹಗಳಲ್ಲಿ ಕೆ. ಎಸ್. ನ. ಅವರ ದರ್ಶನ ಸರಳವಾದ ಜೀವನದ್ದು. 'ಶಿಲಾಲತೆ' ಪ್ರಕಟವಾದಾಗ ಈ ಸುಕುಮಾರ ಪ್ರಪಂಚದ ದರ್ಶನ ಒಂದು ಹಂತವನ್ನು ತಲುಪಿದೆ. ಇಲ್ಲಿಂದ ಮುಂದೆ ಅನುಭವ ಸಂಕೀರ್ಣವಾಗಿದೆ; ಕೆ.ಎಸ್.ನ ಅವರ ನುಡಿಯೂ ಸಂಕೀರ್ಣಗೊಂಡಿದೆ. ಅಂತೆಯೇ ಕೆ. ಎಸ್. ನ ಅವರು ನವ್ಯ ಕವಿಯೆಂದೂ ಹೆಸರು ಪಡೆದಿರುವರು. ಬದಲಾಗುತ್ತಿರುವ ಸಮಾಜದಲ್ಲಿ, ಕಾವ್ಯ ಮಾರ್ಗದಲ್ಲಿ ನೀರಿನಂತೆ ಸರಳವಾಗಿ ಅವರು

ಹೊಂದಿಕೊಂಡಿದ್ದಾರೆ. ಹಳತಾದುದೆಲ್ಲ ಹೊಸ್ತು ಎಂದು ಒಪ್ಪುವ ಜಾತಿಗೆ ಕೆ. ಎಸ್. ನ ಸೇರಿಲ್ಲವೆಂದೂ, ಇವರ ಚಿತ್ತವೃತ್ತಿ ನವ್ಯಕವಿಯದೆಂದೂ ನವ್ಯಕವಿಗಳು ಇವರನ್ನು ಶ್ಲಾಘಿಸಿದ್ದಾರೆ.

ಕೆ. ಎಸ್. ನ ಅವರಿಗೆ ಸಾಹಿತ್ಯ ಅಕಾದಮಿ ಬಹುಮಾನವೇ ಸಿಗಲಿ, ಯಾವುದೇ ರೀತಿಯ ಸನ್ಮಾನವೇ ದೊರೆಯಲಿ ಅವರಿಗೆ ಕೀರ್ತಿಯ ಅಭಿಮಾನವಿಲ್ಲ. 'ನನಗಿಲ್ಲ ಕೀರ್ತಿ ಕಾಮದ ಸೋಂಕು' ಎಂದು 'ಮೈಸೂರು ಮಲ್ಲಿಗೆ' ಕೃತಿಯಲ್ಲಿ ಸ್ಪಷ್ಟವಾಗಿ ನುಡಿದಿದ್ದಾರೆ. ಅವರಿಗೆ ಕೀರ್ತಿಯ ಸೋಂಕೂ ಇಲ್ಲ, ಯಾವ ಒಣ ಸೊಕ್ಕೂ ಇಲ್ಲ. ಅವರದು ಸರಳವಾದ ಮುಗ್ಧ ಸ್ವಭಾವ, ಕೋಪವಂತೂ ಅವರ ಮನದ ತಲಬಾಗಿಲಲ್ಲೂ ಸುಳಿದಿಲ್ಲ; ಒಮ್ಮೆಯಾದರೂ ಬಯ್ಯಿಸಿಕೊಂಡದ್ದು ತಮಗೆ ನೆನಪಿಲ್ಲವೆಂದು ಅವರ ಮಕ್ಕಳೇ ಹೇಳುತ್ತಾರೆ., ಅಷ್ಟು ಸಮಾಧಾನ ಸ್ವಭಾವ ಅವರದು.

ಅವರ ಜೊತೆಗೆ ಅವರ ಕಾವ್ಯದಲ್ಲಿ ಕಂಡು ಬರುವ ಹಾಸ್ಯದ ಪ್ರವೃತ್ತಿ ಅವರ ಸ್ವಭಾವದಲ್ಲೂ ಇದೆ. ಈ ಇಳಿವಯಸ್ಸಿನಲ್ಲಿಯೂ ಆ ಹುಟ್ಟುಗುಣ ಕಂಡಿಲ್ಲ, ಇತ್ತೀಚೆಗಾಗಿ ಅವರ ಸ್ನೇಹಿತರೊಬ್ಬರು, 'ಮೈಸೂರು ಮಲ್ಲಿಗೆ'ಯಲ್ಲಿಯ 'ರಾಯರು ಬಂದರು ಮಾವನ ಮನೆಗೆ' ಕವನವನ್ನು ಓದಲು ಒತ್ತಾಯಿಸಿದರು. ಕೆ. ಎಸ್. ನ ಅವರು ಮುಗುಳ್ನಗೆ ಸೂಸುತ್ತ, "ಆ ಕವಿತೆ ಬರೆದಾಗ ನಾನು ಅಳಿಯನಾಗಿದ್ದೆ, ಈಗ ನಾನೇ ಮಾವನಾಗಿದ್ದೇನೆ," ಎಂದು ಉತ್ತರಿಸಿದರು. ಒಮ್ಮೆ ಕಾರವಾರ ಜಿಲ್ಲೆಯಲ್ಲಿ ಪ್ರವಾಸದಲ್ಲಿದ್ದಾಗ, ಶಾನಭಾಗ ಎಂಬ ಪ್ರಸಿದ್ಧ ವ್ಯಕ್ತಿಗಳು ಕೆ. ಎಸ್. ನ ಅವರ ಮೇಲೆ ಕೋಪಗೊಂಡು, "ಏನ್ರೀ, ನೀವು ನಮ್ಮ ಮಗಳ ಮೇಲೆ ಕವಿತಾ ಬರೆದೀರಂತೆ?" ಎಂದು ಕೇಳಿದರಂತೆ. ಅವರ ಮಾತನ್ನು ಕೇಳಿ, ನಗುತ್ತಲೆ ಕೆ. ಎಸ್. ನ ಅವರು "ಅವಳು ಶಾನಭಾಗರ ಮಗಳಲ್ಲ, ಶಾನುಭೋಗರ ಮಗಳು," ಎಂದು ಅರ್ಥವಿವರಣೆ ನೀಡಿದರಂತೆ.

ಜೀವನಪನ್ನೆ ಹೀಗೆ ಹಗುರಾಗಿ ಕಂಡು, ಅದರ ಆಳವಾದ ಅರ್ಥವನ್ನು ತಿಳಿದುಕೊಳ್ಳುವುದರಲ್ಲಿಯೇ ಕೆ. ಎಸ್. ನ ಅವರ ಸರಳ ಸ್ವಭಾವದ ವೈಶಿಷ್ಟ್ಯವಿದೆ. ಆಡಂಬರವಿಲ್ಲದ ಸಹಜ ಜೀವನದ ರೀತಿಗಳನ್ನು ಮೆಚ್ಚಿಕೊಂಡ ಅವರು ಇಂದಿಗೂ ಚಾಪೆಯ ಮೇಲೆ ಕುಳಿತುಕೊಂಡೇ ಓದುವುದು, ಬರೆಯುವುದು. ಅವರಿಗೆ ಕುರ್ಚಿ, ಟೇಬಲ್ಲುಗಳ ಅವಶ್ಯಕತೆಯಿಲ್ಲ. ಅವರ ಮಕ್ಕಳೂ ಸಹ ಇದನ್ನೇ ರೂಢಿ ಮಾಡಿಕೊಂಡದ್ದುಂಟು.

ಕೆ. ಎಸ್. ನರಸಿಂಹಸ್ವಾಮಿ ಅವರು ಬರೆದ 'ಮೈಸೂರು ಮಲ್ಲಿಗೆ' ಇದೀಗ ೧೬ ಮುದ್ರಣಗಳನ್ನು ಪಡೆದಿದ್ದು ಸಾವಿರಾರು ಜನ ಆ ಪುಸ್ತಕವನ್ನು ಕೊಂಡು ಓದಿ ನಲಿದಿದ್ದಾರೆ. ಇದೊಂದೇ ಕೃತಿಯಿಂದ ಈ ಕವಿ ಬಹಳ ಶ್ರೀಮಂತನಾಗಿರಬೇಕೆಂದು ಲೆಕ್ಕ ಹಾಕಬೇಕಷ್ಟೇ? ಅದು ಸರ್ವಥಾ ಮಿಥ್ಯ. ಇದರದೊಂದು ಪ್ರತಿ ಬೇಕಾದರೆ ಕವಿ ಸ್ವತಃ ಬೆಲೆ ತೆತ್ತು ಕೊಂಡುಕೊಳ್ಳಬೇಕು! ಇದಕ್ಕೆ ಕಾರಣ? ಮೊದಲ ಮುದ್ರಣವಾಗುತ್ತಿರುವಾಗ, ಮನೆತನದ ತೊಂದರೆಗಳಿಗಾಗಿ ಪ್ರಕಾಶಕರಿಂದ ಸ್ವಲ್ಪ ಹಣ ಸ್ವೀಕರಿಸಿ ಎಲ್ಲ ಹಕ್ಕುಗಳನ್ನೂ ಪ್ರಕಾಶಕರಿಗೇ ಬಿಟ್ಟುಕೊಟ್ಟರಂತೆ!... ಬಹುತರ ಕೆ. ಎಸ್. ನ ರವರ ಎಲ್ಲ ಪುಸ್ತಕಗಳ ಅವಸ್ಥೆಯೂ ಇದೇ ಎಂದು ಹೇಳಲಾಗುತ್ತದೆ. ಇದು ಪ್ರಸಿದ್ಧ ಕನ್ನಡ ಕವಿಗಳ ಸ್ಥಿತಿ.

"ಬರವೇ ಇರಲಿ, ಸಮೃದ್ಧಿಯಿರಲಿ
ತಾಳುವ ಬಾಳಿನ ಬಾವುಟವಿರಲಿ"

ಕೆ. ಎಸ್. ನರಸಿಂಹಸ್ವಾಮಿ ಅವರ ಜೀವನದ ಗುಟ್ಟು ಈ ಸಾಲುಗಳಲ್ಲಿ ಅಡಕವಾಗಿದೆ. ಅಂಥ ತಾಳ್ಮೆಯನ್ನು ಅವರು ತಮ್ಮ ಕಾವ್ಯದಲ್ಲೂ ವ್ಯಕ್ತಮಾಡಿದ್ದಾರೆ.

"ನನಗೆ ಅಹಂಭಾವದ ಬದುಕು ಬೇಕಾಗಿಲ್ಲ... ಕಾವ್ಯ ನನ್ನ ಕ್ಷೇತ್ರ, ಕಲಿಯಬೇಕಾದ್ದು ಇನ್ನೂ ಬಹಳಿದೆ. ಬೆಟ್ಟದ ಬೆಳಕು ಬಹಳ ದೂರ; ಮೇಲೆ ಹತ್ತಿ ನೋಡಬೇಕು" ಎಂದು ನರಸಿಂಹಸ್ವಾಮಿ ಅವರು ತಮ್ಮ ಸಾಧನೆಯ ಹಿನ್ನೆಲೆಯನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಗಟ್ಟಿಮುಟ್ಟಾದ ವಾಸ್ತವ ಪ್ರಜ್ಞೆಯಿಂದ ಅವರ ಕಾವ್ಯ ಇನ್ನೂ ಬೆಳೆಯುತ್ತಲೇ ಇದೆ. ✡



ಕೊಡಾಂಪುಳಿ ಬೊಜ್ಜು ಕರಗಿಸಬಲ್ಲದೆ?

ಡಾ. ವೈ. ಎಸ್. ಲೂಯಿಸ್

ಊಟಕ್ಕೆ ಉಪ್ಪು, ಖಾರ, ಹುಳಿ ಸೇರದೆ ರುಚಿಸುವುದಿಲ್ಲ. ಹುಳಿ ರುಚಿ ಕೊಡಲು ಭಾರತದಲ್ಲಿ ಹಲವಾರು ಹಣ್ಣುಗಳು ಬಳಕೆಯಲ್ಲಿವೆ. ಉತ್ತರದಲ್ಲಿ ಒಣಗಿಸಿದ ಮಾವಿನಕಾಯಿ ಹೋಳು (ಆಮ್‌ಚೂರ್), ಹುಳಿ ದಾಳಿಂಬರ ಬೀಜ (ಅನಾರ್‌ದಾನ್), ನಿಂಬೆ ಹಣ್ಣು ಉಪಯೋಗಿಸಿದರೆ, ದಕ್ಷಿಣದಲ್ಲಿ ಹುಣಸೇ ಹಣ್ಣು, ಪುನಾರ್ ಪುಳಿ (ಕೋಕಮ್), ಎಪಳು ಹುಳಿ, ಕೊಡಾಂಪುಳಿ ಮುಂತಾದುವು ಅಡುಗೆಗಳಲ್ಲಿ ಸೇರುತ್ತವೆ. ಎಲ್ಲವೂ ಹುಳಿ ರುಚಿಯನ್ನೇ ಕೊಡುವುದಾದರೂ ಅವುಗಳಲ್ಲಿರುವ ಆಮ್ಲಗಳೂ ಇತರ ಪದಾರ್ಥಗಳೂ ಬೇರೆ ಬೇರೆಯಾಗಿರುವುದರಿಂದ ಪ್ರತಿ ಹಣ್ಣಿಗೂ ತನ್ನದೇ ವಿಶಿಷ್ಟ ರುಚಿಯಿದ್ದು ಊಟದ ಪದಾರ್ಥಕ್ಕೆ ತಮ್ಮದೇ ರುಚಿ ಕಟ್ಟುತ್ತವೆ. ಒಂದನ್ನು ಉಪಯೋಗಿಸುವ ಕಡೆ ಮತ್ತೊಂದು ಸರಿಬರುವುದಿಲ್ಲ.

ಹಣ್ಣುಗಳಲ್ಲಿ ಸಿಟ್ರಿಕ್, ಟಾರ್‌ಟಾರಿಕ್, ಮೇಲಿಕ್, ಆಕ್ಸಾಲಿಕ್ ಮುಂತಾದ ಆಮ್ಲಗಳಿರುತ್ತವೆ. ಮಾವಿನಕಾಯಿ, ನಿಂಬೇಹಣ್ಣು ಮುಂತಾದವುಗಳಲ್ಲಿ ಸಿಟ್ರಿಕ್ ಆಮ್ಲವೂ, ದ್ರಾಕ್ಷಿ ಮತ್ತು ಹುಣಸೇ ಹಣ್ಣಿನಲ್ಲಿ ಟಾರ್‌ಟಾರಿಕ್ ಆಮ್ಲವೂ, ಸೇಬಿನಹಣ್ಣಿನಲ್ಲಿ ಮೇಲಿಕ್ ಆಮ್ಲವೂ, ದ್ರಾಕ್ಷಿ ಹಣ್ಣಿನಲ್ಲಿ ಆಕ್ಸಾಲಿಕ್ ಆಮ್ಲವೂ ಇರುತ್ತವೆ. ಇವುಗಳ ಪೈಕಿ ಸಿಟ್ರಿಕ್ ಆಮ್ಲವನ್ನು ದೇಹ ಸುಲಭವಾಗಿ ಉಪಯೋಗಿಸಿಕೊಳ್ಳುತ್ತದೆ. ಟಾರ್‌ಟಾರಿಕ್ ಆಮ್ಲವನ್ನು

ದೇಹ ಹಾಗೇ ವಿಸರ್ಜಿಸುತ್ತದೆ. ಆಕ್ಸಾಲಿಕ್ ಆಮ್ಲ ವಿಷಗುಣವುಳ್ಳದ್ದು. ಫೋಲಿಕ್ ಆಮ್ಲವೂ ಅಷ್ಟು ಅಪೇಕ್ಷಿತವಲ್ಲ.

ಕೇರಳದಲ್ಲಿ ಕೊಡಾಂಪುಳಿ ಎನ್ನುವ ಹುಳಿ ಹಣ್ಣು ಮೀನಿನ ಸಾರು ಮಾಡುವಲ್ಲಿ ಹೆಚ್ಚು ಜನಪ್ರಿಯವಾದದ್ದು. ಇದೊಂದು ಸಣ್ಣ ಮರ. ಸಾಧಾರಣ ಎಲ್ಲರ ಮನೆಯ ಹಿತ್ತಲಲ್ಲಿ ೨-೩ ಗಿಡಗಳನ್ನು ಬೆಳೆಸಿರುತ್ತಾರೆ. ಇವಕ್ಕೆ ಶಾಸ್ತ್ರೀಯ ಹೆಸರು ಗಾರ್ಸೀನಿಯಾ ಕ್ಯಾಂಬೋಜಿಯ. ಮೇ ಜೂನ್ ತಿಂಗಳ ಹೊತ್ತಿಗೆ ಮರದ ತುಂಬ ಹಳದೀ ಬಣ್ಣದ ಕಿತ್ತಳೇ ಹಣ್ಣಿನ ಗಾತ್ರದ, ಹೀರೇಕಾಯಿಯಂತೆ ಏಣುಗಳಿರುವ ಹಣ್ಣುಗಳು ಬಿಡುತ್ತವೆ. ರಸಭರಿತವಾದ ಅತಿ ಹುಳಿ ರುಚಿಯ ಈ ಹಣ್ಣುಗಳನ್ನು ಹಾಗೇ ತಿನ್ನುವ ಹಾಗಿಲ್ಲ. ಇವುಗಳಲ್ಲಿ ಶರ್ಕರದ ಅಂಶ ಬಹಳ ಕಡಿಮೆ. ಜನರು ಇವುಗಳನ್ನು ಪಕ್ವವಾಗುತ್ತಲೇ ಕಿತ್ತು ಸ್ವಲ್ಪ ಉಪ್ಪು ಬೆರೆಸಿ, ಮಳೆಗಾಲವಾದುದರಿಂದ ತಮ್ಮ ಒಲೆಗಳ ಬಳಿಯಿಟ್ಟು ಒಣಗಿಸುತ್ತಾರೆ. ಹಳದೀ ಬಣ್ಣದ ತಿರುಳು ಒಣಗಿದ ಹಾಗೆ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಕೆಲವು ರಾಸಾಯನಿಕ ಬದಲಾವಣೆಗಳಿಂದ ಹೀಗಾಗುತ್ತದೆ. ಒಣಗಿಸಿದ ಕೊಡಾಂಪುಳಿ (ಕೊಡದ ಆಕಾರದಲ್ಲಿರುವುದರಿಂದ ಈ ಹೆಸರು), ಅಂಗಡಿಗಳಲ್ಲಿ ಮಾರಾಟವಾಗುತ್ತದೆ. ಜನರು ತಮಗೆ ಬೇಕಾದಷ್ಟನ್ನು ಮನೆಗಳಲ್ಲೂ ದಾಸ್ತಾನು ಮಾಡಿಕೊಳ್ಳುತ್ತಾರೆ. ಮೀನು (ಸಾರ್ಡಿನ್) ಹೆಚ್ಚಾಗಿ ದೊರೆಯುವ ಕಾಲದಲ್ಲಿ ಅದನ್ನು ಉಪ್ಪು ಮತ್ತು ಕೊಡಾಂಪುಳಿ ಬೆರೆಸಿ ಸಂಗ್ರಹಿಸಿಡುತ್ತಾರೆ.

ಈ ಹಣ್ಣಿನಲ್ಲಿರುವ ಆಮ್ಲ ಯಾವುದಿರಬಹುದು ಎನ್ನುವುದರ ಬಗ್ಗೆ ಕೇಂದ್ರ ಆಹಾರ ಮೈಸೂರಿನ ಸಂಶೋಧನಾಲಯದಲ್ಲಿ ಕೆಲವು ವರ್ಷಗಳ ಹಿಂದೆ ಸಂಶೋಧನೆಗಳು ನಡೆದುವು. ಹಿಂದೆ ಯಾರೋ ಅದು ಟಾರ್ಟಾರಿಕ್ ಆಮ್ಲ ಎಂದು ವರದಿ ಮಾಡಿದ್ದರು. ಆದರೆ ಆಧುನಿಕ ಪ್ರಯೋಗಗಳ ರೀತಿ ಪರೀಕ್ಷಿಸಿದಾಗ ಈ ಹಣ್ಣಿನಲ್ಲಿರುವ ಆಮ್ಲ ತಿಳಿದಿರುವ ಟಾರ್ಟಾರಿಕ್, ಸಿಟ್ರಿಕ್, ಮೇಲಿಕ್ ಮುಂತಾದ ಆಮ್ಲಗಳ ಗುಂಪಿಗೆ ಸೇರಿಲ್ಲವೆಂದು ಖಚಿತವಾಯಿತು. ಕೊನೆಗೆ ಅದು ಇದುವರೆಗೆ ಸಸ್ಯಗಳಲ್ಲಿ ಕಾಣದೆ ಇರುವ ಒಂದು ಹೊಸ ಆಮ್ಲ–ಹೈಡ್ರಾಕ್ಸಿ ಸಿಟ್ರಿಕ್ ಆಮ್ಲ– ಎಂದು ಪರೀಕ್ಷೆಗಳಿಂದ ಕಂಡುಬಂದಿತು. ಇದರ ಅಸ್ತಿತ್ವ ವಿಜ್ಞಾನ ಜಗತ್ತಿಗೆ ಪ್ರಥಮ ಬಾರಿಗೆ ಮೈಸೂರಿನ ಆಹಾರ ಸಂಶೋಧನಾಲಯದಿಂದ ತಿಳಿದುಬಂದಿತು. ರಾಸಾಯನಿಕ ಸಂಯೋಜನೆಯ ರೀತಿಯಂತೆ ಈ ಆಮ್ಲವು ನಾಲ್ಕು ವಿಧಗಳಲ್ಲಿರುವುದು (isomers) ಸಾಧ್ಯ. ಇವುಗಳಲ್ಲಿ ಇನ್ನೊಂದು ಕೆಂಪು ಪುಂಡಿ ಸೊಪ್ಪಿನ (Hibiscus sub-dariffe) ಪುಷ್ಪಪಾತ್ರಗಳಲ್ಲಿದೆಯೆಂದು ತಿಳಿದು



“ಗಾಂಧೀಭಕ್ತರಿಗೆ! ಅಂತ...ನಾನು ಇದನ್ನು ಒಪನ್ ಮಾಡಿದ್ದು...ಸಾರ್.”

ಬಂದಿದೆ. ಉಳಿದೆರಡು ಇದುವರೆಗೆ ನಿಸರ್ಗದಲ್ಲಿ ಕಂಡುಬಂದಿಲ್ಲ.

ಕೊಡಾಂಪುಳಿಯಿಂದ ಹೈಡ್ರಾಕ್ಸಿ ಸಿಟ್ರಿಕ್ ಆಮ್ಲವನ್ನು ಸ್ಫಟಿಕ ರೂಪದಲ್ಲಿಯೂ ಪಡೆಯಲಾಯಿತು. ಈ ಆಮ್ಲವು ದೇಹವು ಸುಲಭವಾಗಿ ಉಪಯೋಗಿಸಿಕೊಳ್ಳುವ ಸಿಟ್ರಿಕ್ ಆಮ್ಲಕ್ಕೆ (ನಿಂಬೆ ಹುಳಿ) ಹತ್ತಿರ ಸಂಬಂಧವುಳ್ಳದ್ದು. ಆದುದರಿಂದ ದೇಹದಲ್ಲಿ ಇದು ಹೇಗೆ ಪರಿವರ್ತನೆಗೊಳ್ಳುತ್ತದೆ ಎನ್ನುವ ವಿಚಾರದಲ್ಲಿ ಪ್ರಪಂಚದ ಜೀವರಸಾಯನಶಾಸ್ತ್ರಜ್ಞರು ಬಹಳ ಆಸಕ್ತಿ ತೋರಿಸಿದರು. ಅನೇಕ ಸಂಶೋಧನಾಲಯಗಳಲ್ಲಿ ಇದರ ಬಗ್ಗೆ ಪ್ರಯೋಗಗಳು ಪ್ರಾರಂಭವಾಗಿದ್ದು ಈಗಲೂ ನಡೆಯುತ್ತಿವೆ. ಮುಖ್ಯವಾಗಿ ಅಮೇರಿಕದ ಡಾ. ಲೋವೆನ್‌ಸ್ಟೈನ್ ಎನ್ನುವವರು ಈ ಆಮ್ಲವು ದೇಹದಲ್ಲಿ ಕೊಬ್ಬು ಉತ್ಪತ್ತಿಯಾಗುವ ಕ್ರಿಯೆಗಳನ್ನು ತಡೆಹಿಡಿಯುತ್ತದೆ ಎಂದು ತೋರಿಸಿಕೊಟ್ಟರು. ದೇಹದಲ್ಲಿ ಅದಕ್ಕೆ ಬೇಕಾದ ಪದಾರ್ಥಗಳನ್ನು ಅರಗಿದ ಆಹಾರ ಪದಾರ್ಥಗಳಿಂದ ಸೃಷ್ಟಿಸುವ ಕೆಲಸವು ಕೆಲವು ಮುಖ್ಯ ಕಿಣ್ವಗಳಿಂದ ನಿರಂತರವಾಗಿ ನಡೆಯುತ್ತಿರುತ್ತದೆ. ಕೊಬ್ಬಿನ ಅಂಶವನ್ನು ಶರ್ಕರ ಪದಾರ್ಥಗಳಿಂದ ತಯಾರಿಸುವ ಕೆಲಸವು ಒಂದು ವರ್ಗದ ಕಿಣ್ವಗಳಿಂದ ಆಗುತ್ತದೆ. ಪ್ರಾಣಿಯು ಪಿಷ್ಟ ಶರ್ಕರ ಪದಾರ್ಥಗಳನ್ನು ಅಧಿಕವಾಗಿ ತಿಂದರೆ ಸ್ಥೂಲಕಾಯವಾಗುವುದು ಇದರಿಂದಲೇ.

ಪ್ರಯೋಗಾಲಯದಲ್ಲಿ ಪ್ರಾಣಿಗಳಿಗೆ ಹೆಚ್ಚಾದ ಶರ್ಕರ ಪದಾರ್ಥಗಳನ್ನು ಕೊಟ್ಟು, ಜೊತೆಗೆ ಕೊಡಾಂಪುಳಿ ಆಮ್ಲವನ್ನು ಕೊಟ್ಟರೆ ಅವು ಕೊಬ್ಬಲಿಲ್ಲ. ಆಮ್ಲ ಕೊಡದೇ ಇದ್ದ ಗುಂಪಿನ ಪ್ರಾಣಿಗಳು ಕೊಬ್ಬಿದವು. ಹೈಡ್ರಾಕ್ಸಿ ಸಿಟ್ರಿಕ್ ಆಮ್ಲ ನಾಲ್ಕು ವಿಭಾಗಗಳಲ್ಲಿ ಇರಬಹುದು ಎಂದು ಹೇಳಿದೆ. ಇವುಗಳನ್ನು ಕೃತಕವಾಗಿ ತಯಾರಿಸಿ ಪ್ರಾಣಿಗಳಿಗೆ ಕೊಟ್ಟು ನೋಡಿದರು. ಈ ನಾಲ್ಕರಲ್ಲಿ ಕೊಡಾಂಪುಳಿಯಲ್ಲಿರುವ ಜಾತಿಯ ಆಮ್ಲಕ್ಕೆ ಮಾತ್ರ ಕೊಬ್ಬಿನ ಉತ್ಪಾದನೆಯನ್ನು ತಡೆಹಿಡಿಯುವ ಗುಣವಿದೆ ಎಂದು ಕಂಡುಬಂದಿತು.

ಮನುಷ್ಯರು ಸ್ಥೂಲಕಾಯರಾಗಲು ಹೆಚ್ಚು ಪಿಷ್ಟ ಮತ್ತು ಶರ್ಕರ ಪದಾರ್ಥಗಳನ್ನು ತಿನ್ನುವುದು, ಸಾಕಷ್ಟು ವ್ಯಾಯಾಮ ಮಾಡದಿರುವುದು ಮುಖ್ಯ ಕಾರಣ. ಇದಲ್ಲದೆ ಕೆಲವು ಅಂತಃಸ್ರಾವಿಗಳೂ ಆನುವಂಶಿಕ ಕಾರಣಗಳೂ ಈ ಸ್ಥಿತಿಯನ್ನು ತರುತ್ತವೆ.

ಪ್ರಾಣಿಗಳಲ್ಲಿನಂತೆ ಮನುಷ್ಯರಲ್ಲೂ ಕೊಡಾಂಪುಳಿ ಆಮ್ಲವು ಸ್ಥೂಲಕಾಯ ಜಾಡ್ಯವನ್ನು ತಪ್ಪಿಸಬಲ್ಲದೆ? ಕೊಡಾಂಪುಳಿ ಹಾಕಿದ ಮೀನು ಸಾರು ತಿನ್ನುವ ಕೇರಳೀಯರಲ್ಲಿ ಬೊಜ್ಜು ಇಲ್ಲದಿರುವುದು ಈ ಕಾರಣದಿಂದಲೇ? ಮುಂತಾದ ಪ್ರಶ್ನೆಗಳಿಗೆ ಈಗ ನಡೆಯುತ್ತಿರುವ ಪ್ರಯೋಗಗಳಿಂದ ಉತ್ತರ ಸಿಗಬಹುದು. ✿



ಕಪ್ಪಿನ ಮೇಲಿನ ಚಹಾ ಅಥವಾ ಕಾಫಿಯ ಕಲೆಗಳನ್ನು ಹೋಗಲಾಡಿಸಲು ವಿನೆಗರ್‌ನಿಂದ ಕಪ್ಪನ್ನು ತಿಕ್ಕಬೇಕು. ಅನಂತರ ಉಪ್ಪಿನಲ್ಲಿ ಅದ್ದಿದ ಬಟ್ಟೆಯಿಂದ ಅದನ್ನು ಒರೆಸಬೇಕು.

ನಗೆ ಬುಗ್ಗೆ

ಆಕೆ: ನೀನು ಕೊಟ್ಟ ಈ ಉಂಗುರವನ್ನು ತೆಗೆದುಕೋ. ನಾನೀಗ ಬೇರೆಯವನನ್ನು ಪ್ರೀತಿಸುತ್ತಿರುವೆ.

ಆತ: ಓಹೋ ಹಾಗೋ. ಅವನ ಹೆಸರು, ವಿಳಾಸವೇನು?

ಆಕೆ: ಏಕೆ? ಆತನನ್ನು ಕೊಲ್ಲಬೇಕೆಂದಿರುವಿಯೇನು?

ಆತ: ಹಾಗೇನಿಲ್ಲ. ಈ ಉಂಗುರವನ್ನು ಆತನಿಗೆ ಮಾರಬೇಕೆಂದಿರುವೆ.

*

ನಾಟಕವೊಂದನ್ನು ನೋಡಿ ಹೊರಬಂದ ಮಿತ್ರರಿಬ್ಬರು ಮಾತನಾಡಿಕೊಳ್ಳುತ್ತಿದ್ದರು.

"ನಿನಗೆ ಯಾವ ಪಾತ್ರ ಹಿಡಿಸಿತು?"

"ವಿದೂಷಕನ ಪಾತ್ರ."

"ಛೇ, ಆತ ಚೆನ್ನಾಗಿ ಪಾತ್ರವನ್ನು ನಿರ್ವಹಿಸಲಿಲ್ಲ. ಆದರೂ ಅದ್ಹೇಗೆ ಆ ಪಾತ್ರ ನಿನಗೆ ಹಿಡಿಸಿತೋ!"

"ಆತ ನನಗೆ ನಾಟಕ ನೋಡಲು ಫ್ರೀಪಾಸ್ ಕೊಟ್ಟಿದ್ದ."

*

ಸೇವಕ: ನನ್ನ ಈ ತಪ್ಪಿಗಾಗಿ ದಯವಿಟ್ಟು ಕ್ಷಮಿಸಿ.

ಮಾಲಿಕ: ಆಗಲಿ. ಆದರೆ ಹೋದ ಸಲವೂ ನೀನು ಇದೇ ತಪ್ಪಿಗೆ ಕ್ಷಮೆಯನ್ನು ಕೇಳಿದ್ದೆ.

ಸೇವಕ: ದಯವಿಟ್ಟು ಕ್ಷಮಿಸಿ. ಮುಂದಿನ ಸಲ ಬೇರೆ ತಪ್ಪಿಗೆ ಕ್ಷಮೆ ಕೇಳುವೆ.

*

ಅಧಿಕಾರಿ: ನಮಗೆ 'ಹೊಣೆಗಾರ' ವ್ಯಕ್ತಿಯ ಅವಶ್ಯಕತೆಯಿದೆ.

ಅರ್ಜಿದಾರ: ಹಾಗಾದರೆ ನೀವು ನನ್ನನ್ನು ನೇಮಿಸಿಕೊಳ್ಳಬಹುದು. ಯಾಕೆಂದರೆ ನಾನು ಹಿಂದೆ ನೌಕರಿ ಮಾಡುತ್ತಿದ್ದ ಕಡೆಗಳಲೆಲ್ಲ ಆದ ತಪ್ಪುಗಳಿಗೆ ನಾನೇ 'ಹೊಣೆಗಾರ' ನೆಂದು ಹೇಳಿದ್ದಾರೆ.

*

ಟೇಬಲ್ ಮೇಲೆ ಬಿದ್ದ ಬಹಳಷ್ಟು ಧೂಳನ್ನು ಗಮನಿಸಿದ ಮನೆಯ ಯಜಮಾನಿ, "ನಾನು ನನ್ನ ಹೆಸರನ್ನು ಸುಲಭವಾಗಿ ಇದರ ಮೇಲೆ ಬರೆಯಬಹುದು", ಎಂದಳು ವ್ಯಂಗ್ಯವಾಗಿ.

ತಕ್ಷಣ ಸೇವಕಿ ನುಡಿದಳು: "ನೀವು ವಿದ್ಯಾವಂತರು, ಸುಲಭವಾಗಿ ಬರೆಯಬಲ್ಲಿರಿ. ಆದರೆ ನಾನು ಅವಿದ್ಯಾವಂತೆ; ನನಗೆ ಬರೆಯಲು ಬಾರದು."

*

ಗುರು: ಈಡನ್ ಗಾರ್ಡನ್‌ನಲ್ಲಿ ಆ್ಯಡಮ್ ಸೇಬನ್ನು ಕಚ್ಚಲು ಕಾರಣವೇನು?

ಶಿಷ್ಯ: ಆತನ ಬಳಿ ಚಾಕು ಇರಲಿಲ್ಲಾ, ಸಾರ್.

*

ಸಭೆಯಲ್ಲಿ ಹಿಂದಿ ಅಭಿಮಾನಿ ಭಾಷಣಕಾರನೊಬ್ಬ ಹೇಳಿದ:

"ನನ್ನ ಹಾಗೂ ಹಿಂದಿ ಭಾಷೆಯ ಸಂಬಂಧ, ನನ್ನ ಹಾಗೂ ನನ್ನ ಪತ್ನಿಯ ಸಂಬಂಧದಂತಿದೆ. ನನಗೆ ಪತ್ನಿಯೆಂದರೆ ಬಲು ಪ್ರೀತಿ. ಆದರೆ ನಾನು ಆಕೆಯ ಮೇಲೆ ಅಧಿಕಾರ ಚಲಾಯಿಸುವಂತಿಲ್ಲ."

*

"ನನ್ನ ಪತಿಗಾಗಿ ಕೆಲವು ಶರ್ಟುಗಳು ಬೇಕಾಗಿವೆ. ಆದರೆ ನಾನು ಕಾಲರ್ ಸೈಜನ್ನೇ ಮರೆತಿದ್ದೇನೆ."

ತಕ್ಷಣ ಅಂಗಡಿಯವ ನುಡಿದ: "ಹದಿಮೂರೂವರೆ ಮೇಡಂ."

"ನಿಮಗೆ ಹೇಗೆ ಗೊತ್ತಾಯಿತು?"

"ತಮ್ಮ ಶರ್ಟುಗಳನ್ನು ಖರೀದಿಸಲು ಪತ್ನಿಯರನ್ನು ಕಳಿಸುವ ಬಹುತೇಕ ಗಂಡಂದಿರ ಕಾಲರ್ ಸೈಜು ಸುಮಾರು ಇಷ್ಟೇ ಇರುತ್ತದೆ ಮೇಡಂ" ಎಂದ ಅಂಗಡಿಯವ.

*

"ತಮ್ಮ ವಯಸ್ಸೆಷ್ಟು ?"

"ನಲವತ್ತು ವರ್ಷ."

"ತಾವು ಇಲ್ಲಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದೀರಿ ?"

"ಐವತ್ತು ವರ್ಷಗಳಿಂದ."

ಇದು ಹೇಗೆ ಸಾಧ್ಯ ?"

"ನಾನು ಹೆಚ್ಚಾಗಿ ಓವರ್ ಟೈಮ್ ಕೆಲಸ ಮಾಡಿದ್ದೇನೆ."

*

ಅವಳು: ನನ್ನ ಪತಿ ನಿದ್ರಿಸುವಾಗ ಮಾತನಾಡುತ್ತಿರುತ್ತಾರೆ. ದಯವಿಟ್ಟು ಸೂಕ್ತ ಸಲಹೆ ಸೂಚಿಸಿ, ಡಾಕ್ಟ್ರೇ.

ಡಾಕ್ಟರ್: ಓಹೋ ಹಾಗೋ. ನಿಮ್ಮ ಪತಿಗೆ ದಿನವೆಲ್ಲಾ ಮಾತನಾಡಲು ಅವಕಾಶ ಕೊಡಿರಿ.

*

ಮ್ಯಾನೇಜರ್: ನಿನ್ನೆ ನಾನು ಭಾಷಣ ಮಾಡುತ್ತಿರುವಾಗ ಕೆಲವು ಕಾರ್ಮಿಕರು ಮಧ್ಯೆಯೇ ಎದ್ದುಹೋದರಲ್ಲಾ, ಏಕೆ ?

ಪಿ.ಎ. : ಅವರಿಗೆ ನಿದ್ರೆಯಲ್ಲಿ ನಡೆಯುವ ರೂಢಿಯಿದೆ.

*

ಓರ್ವ ಮಹಾಶಯನು ಬೆಳಿಗ್ಗೆ ನಾಯಿಯೊಡನೆ ವಾಯುವಿಹಾರಕ್ಕೆ ಹೊರಟಿದ್ದ. ರಸ್ತೆಯಲ್ಲಿ ಸಿಕ್ಕ ಆತನ ಮಿತ್ರನೊಬ್ಬ, "ಬೆಳಿಗ್ಗೆ ಈ ಕತ್ತೆ ಜೊತೆ ಎಲ್ಲಿಗೆ ಹೊರಟಿದ್ದೀಯಾ?" ಎಂದು ಕೇಳಿದ.

"ಇದು ಕತ್ತೆಯಲ್ಲ. ನಾಯಿ" ಎಂದನು ಮಹಾಶಯ.

"ನಾನು ನಿಮ್ಮನ್ನು ಕೇಳಿಲ್ಲ. ಈ ನಾಯಿಯನ್ನು ಕೇಳಿದೆ," ಎಂದನಾ ಮಿತ್ರ.

*

ಆತ: ಚೆನ್ನಾಗಿ ನಿದ್ರೆ ಬರಲು ಏನು ಮಾಡಬೇಕು ?

ವೈದ್ಯ: ಮಲಗುವ ಮುಂಚೆ ಬಿಸಿ ಹಾಲು ಹಾಗೂ ಒಂದು ಸೇಬನ್ನು ಸೇವಿಸಬೇಕು.

ಆತ: ಹಿಂದೆ ನೀವು ಉಪವಾಸವಿರಲು ತಿಳಿಸಿದ್ದಿರಲ್ಲ !

ವೈದ್ಯ: ನಿಜ. ಆದರೆ ಇತ್ತೀಚೆ ವೈದ್ಯಕೀಯ ವಿಜ್ಞಾನ ಸಾಕಷ್ಟು ಮುಂದುವರೆದಿದೆ.

*

ನರೇಶ: ನಾಲ್ಕು ಮಹಿಳೆಯರು ಒಂದೆಡೆ ಸುಮ್ಮನೆ ಕುಳಿತಿರುವುದು ಸಾಧ್ಯವೇ ?

ರಮೇಶ: ಸಾಧ್ಯವಿದೆ. ಯಾರಾದರೊಬ್ಬರು ಆ ನಾಲ್ವರನ್ನು ಕುರಿತು 'ನಿಮ್ಮಲ್ಲಿ ಹೆಚ್ಚು ವಯಸ್ಸಾದವರಾರು ಎಂದಾಗ.'

*

ಓರ್ವ ತಾಯಿ ತನ್ನ ಮಕ್ಕಳಿಗೆ ಹೀಗೆ ಹೇಳಿದಳು: "ಪ್ರತಿದಿನ ನಾನು ಹೇಳುವ ಕೆಲಸಗಳನ್ನೆಲ್ಲಾ ಯಾರು ಹೆಚ್ಚಾಗಿ ಮಾಡುವರೋ ಅವರಿಗೆ ವಾರಾಂತ್ಯದಲ್ಲಿ ಒಂದು ಸುಂದರ ವಸ್ತುವನ್ನು ಬಹುಮಾನವಾಗಿ ನೀಡುವೆ."

ತಾಯಿ ಹೋದ ನಂತರ ಮಕ್ಕಳೆಲ್ಲ ಮಾತಾಡಿಕೊಂಡವು: "ಈ ಬಹುಮಾನವಂತೂ ನಮಗೆಂದೂ ಸಿಗುವುದಿಲ್ಲ. ಯಾಕೆಂದರೆ ಅಪ್ಪ ಅಮ್ಮ ಹೇಳಿದ ಕೆಲಸಗಳನ್ನೆಲ್ಲಾ ಚಾಚೂ ತಪ್ಪದೆ ಮಾಡುತ್ತಾನೆ."

*

ಪತ್ನಿ : ಫೆಬ್ರುವರಿಯಲ್ಲಿ ನೀವು ನನ್ನನ್ನು ಪ್ರೀತಿಸಿದಷ್ಟು ಡಿಸೆಂಬರ್‌ನಲ್ಲಿಯೂ ಪ್ರೀತಿಸುವಿರಾ ?

ಪತಿ: ಇನ್ನೂ ಹೆಚ್ಚಾಗಿ ಪ್ರೀತಿಸುವೆ. ಯಾಕೆಂದರೆ ಫೆಬ್ರುವರಿಗಿಂತ ಡಿಸೆಂಬರ್‌ನಲ್ಲಿ ಹೆಚ್ಚು ದಿನಗಳಿವೆ.

ಕುಡಿತದಿಂದ
ಅನೇಕ
ಸಂಸಾರಗಳು
ಹಾಳಾಗಿವೆ

★
★★

ನಿಮ್ಮ ಕುಟುಂಬದ
ಕ್ಷೇಮಕ್ಕಾಗಿ
ಕುಡಿತದಿಂದ
ದೂರವಿರಿ.

davp 77/254

ಇನ್ನೊಬ್ಬ ಶೈಲಾಕ್

ಮೂಲ : ಜಿ. ತಿರುಮುವಳವನ್
ಕನ್ನಡಕ್ಕೆ : ಕೆ. ಎಸ್. ಚಂದ್ರಶೇಖರ

ಅವನನ್ನು ಭೆಟ್ಟಿಯಾಗಿ ಬಹುಶಃ ಹತ್ತು ವರ್ಷಗಳೇ ಕಳೆದಿವೆ ; ಸರಿಯಾಗಿ ಹೇಳಬೇಕೆಂದರೆ ಆದಿನ ೧ ಅಕ್ಟೋಬರ್ ೧೯೬೫,

ಅವನು ಕಾಲೇಜಿನ ಪ್ರವೇಶದ್ವಾರದ ಮೂಲೆಯಲ್ಲಿ ನಿಂತಿದ್ದ. ಆತ ಕಪ್ಪನೆಯ, ಹರಿದಿದ್ದ ಕೋಟನ್ನು ಹಾಕಿದ್ದ ಒಬ್ಬ ಗಿಡ್ಡ ಮನುಷ್ಯ. ಆತನ ತಲೆಯಲ್ಲಿದ್ದ ಕೆಲವೇ ಕೂದಲುಗಳು ಪರಸ್ಪರ ಹೆಣೆದುಕೊಂಡಿದ್ದವು.

ಅನೇಕ ಜನರು ಅವನನ್ನು ಭೆಟ್ಟಿಮಾಡಿದರು, ಮಾತಾಡಿಸಿದರು ಮತ್ತು ಅಪರಪ್ಪಕ್ಕೆ ಅವರು ನಡೆದರು. ಅವನು ಕೈ ಮುಗಿದು ಅವರನ್ನು ಬರಮಾಡಿಕೊಳ್ಳುತ್ತಿದ್ದ. ಅವರಲ್ಲಿ ಬಹು ಪಾಲು ನಮ್ಮ ಕಾಲೇಜಿನ ಜವಾನರು ಮತ್ತು ಅಟೆಂಡರುಗಳು.

ನಾನು ಆ ಬರಿಗಾಲಿನ ಮನುಷ್ಯನ ಬಗ್ಗೆ ಆಗ ಹೆಚ್ಚು ಯೋಚಿಸಲಿಲ್ಲ. ಆದರೆ ಮುಂದಿನ ತಿಂಗಳ ಒಂದನೇ ತಾರೀಖು ನಾನು ಅವನನ್ನು ಮತ್ತೆ ನೋಡಿದಾಗ ಆತನ ಬಗ್ಗೆ ಆಸಕ್ತಿ ಹುಟ್ಟಿತು.

ನಮ್ಮ ಕಸ ಗುಡಿಸುವ ಜವಾನ ಎಲುಮಲೈಯನ್ನು ಆ ಕೋಟುವಾಲಾ ಯಾರೆಂದು ಕೇಳಿದೆ.

"ಯಾರು ಸಾರ್ ? " ಎಲುಮಲೈ ಕೇಳಿದ.

"ಆ ಕರೆಯ ಕೋಟಿನ ಗಿಡ್ಡ ಮನುಷ್ಯ-- ಯಾವಾಗಲೂ ಆ ಗೇಟಿನ ಮೂಲೆಯಲ್ಲಿ ನಿಂತಿರುತ್ತಾನಲ್ಲಾ ಅವನು. ನಿನ್ನೆ ರಾಮು ಮತ್ತು ನೀನು ಅವನೊಂದಿಗೆ ಮಾತಾಡುತ್ತಿದ್ದಿರಿ"- ನಾನು ವಿವರಿಸಿದೆ.

ಎಲುಮಲೈ ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ಜೋರಾಗಿ ನಗತೊಡಗಿದ. "ಓ, ನೀವೆನ್ನುವುದು ಕಣ್ಣನ್..."

"ಅವನು ಕಣ್ಣನ್ನನೋ ಅಥವಾ ಕೃಷ್ಣನೋ ನನಗೆ ಗೊತ್ತಿಲ್ಲ. ಅವನಿಲ್ಲಿ ಏನು ಮಾಡುತ್ತಿದ್ದಾನೆ ? "

ನಮ್ಮ ಮಾತುಕತೆಯನ್ನು ಆಲಿಸುತ್ತಿದ್ದ ಪ್ರೊ. ರಾಮಚಂದ್ರನ್ ಈಗ ಮಧ್ಯೆ ಪ್ರವೇಶಿಸಿದರು. "ಆ ಮನುಷ್ಯ ಒಬ್ಬ ಲೇವಾದೇವಿಗಾರ, ಈ ಜನಗಳು ಅವನಿಂದ ಸಾಲ ತರುತ್ತಾರೆ. ಹೀಗಾಗಿ ಅವನು ಸಂಬಳದ ದಿನವಾದ ಒಂದನೇ ತಾರೀಖು ಬಡ್ಡಿಯನ್ನು ವಸೂಲು ಮಾಡಲು ಬರುತ್ತಾನೆ,..."

"ಓಹೋ, ಹೀಗೋ ! ಅವನು ಎಷ್ಟು ಬಡ್ಡಿ ಹಾಕುತ್ತಾನೆ ? " ನಾನು ಅವನನ್ನು ಕೇಳಿದೆ.

"ಕೇವಲ ಹನ್ನೆರಡೂವರೆ ಸಾರ್ " ಎಲುಮಲೈ ಉತ್ತರಿಸಿದ.

"ಶೇಕಡಾ ಹನ್ನೆರಡೂವರೆ ! ಅದು ತುಂಬಾ ಉಚಿತವಾದ ಬಡ್ಡೀದರ ಎಂದೇಕೆ ನೀವು ಭಾವಿಸುವುದಿಲ್ಲ ? "- ನಾನು ರಾಮಚಂದ್ರನನ್ನು ಕೇಳಿದೆ.

"ಓ... ಓ... ನೀವು ತಪ್ಪು ತಿಳಿದಿದ್ದೀರಾ. ಅದು ಶೇಕಡಾ ಹನ್ನೆರಡೂವರೆ ಅಲ್ಲ ! ಅದು ನೂರು ರೂಪಾಯಿಗೆ ಒಂದು ತಿಂಗಳಿಗೆ ಹನ್ನೆರಡೂವರೆ ರೂಪಾಯಿಗಳು... ಈಗ

ಬಡ್ಡಿಯನ್ನು ಲೆಕ್ಕ ಹಾಕಿ."

"ಅಯ್ಯೋ, ದೇವರೇ! ಇದು ಹಗಲು ದರೋಡೆಯಲ್ಲದೆ ಬೇರೇನು? ಅವನು ರಕ್ತ ಹೀರುವ ಜಿಗಣೆ... ಒಬ್ಬ 'ಮಾನವ ಪರೋಪ ಜೀವಿ.' ಅವನು ಖಂಡಿತಾ ಶೈಲಾಕ್– ಅನು-ಮಾನವೇ ಇಲ್ಲ..." ನನ್ನ ಮಾತು ಕೇಳಿ ರಾಜನ್, ಲವರ್ಡ್ಡು ಮತ್ತು ಅಹ್ಮದ್ ಬಂದರು.

"ನೀನು ಈ ಸಾಲವನ್ನು ಯಾವಾಗ ತಕ್ಕೊಂಡೆ?"–– ನಾನು ಎಲುಮಲೈನನ್ನು ಪ್ರಶ್ನಿಸಿದೆ.

"ಅದು ನನ್ನ ಮದುವೆಯ ಖರ್ಚಿಗಾಗಿ ತೆಗೆದುಕೊಂಡದ್ದು....ಸುಮಾರು ೧೯೬೦ ರಲ್ಲಿ."

"ಅಂದರೆ ನೀನು ಕಳೆದ ಐದು ವರ್ಷಗಳಿಂದ ತಿಂಗಳಿಗೆ ಹನ್ನೆರಡೂವರೆಯಂತೆ ಬಡ್ಡಿ ಕೊಡುತ್ತಿದ್ದೀಯಾ?"

ಎಲುಮಲೈ ಮೌನವಾಗಿ ತಲೆ ಹಾಕಿದ.

"ಒಟ್ಟಿಗೆ ಎಷ್ಟು ಹಣ ಅವನಿಗೆ ಕೊಟ್ಟಿದ್ದೀಯ ಎಂಬುದು ಗೊತ್ತೇ? ೧೦೦ ರೂ. ಗಳಿಗೆ ಒಂದು ವರ್ಷಕ್ಕೆ ೧೫೦ ರೂ. ಆಗುವುದು. ಐದು ವರ್ಷಗಳಲ್ಲಿ, ನೀನು ೭೫೦ ರೂಪಾಯಿಗಳನ್ನು ಕೊಟ್ಟಿದ್ದೀ ಮತ್ತು ಅಸಲು ಇನ್ನೂ ಹಾಗೆಯೇ ಇದೆ. ನಿಜವಾಗಿಯೂ ಈ ಮನುಷ್ಯನನ್ನು ಪೋಲೀಸಿಗೆ ಒಪ್ಪಿಸಬೇಕು..." ನಾನು ಕೋಪ-ದಿಂದ ಹೇಳಿದೆ.

"ಯಾಕೆ ಸಾರ್?"– ಅಹ್ಮದ್ ಸೂಕ್ಷ್ಮವಾಗಿ ಮಧ್ಯ ಬಾಯಿ ಹಾಕಿದ.

"ಮುಗ್ಧ ಜನಗಳನ್ನು ತುಂಬಾ ಅನ್ಯಾಯಕರ-ವಾದ ಬಡ್ಡಿ ಹೊರೆಯಿಂದ ಸುಲಿಯುತ್ತಿರುವು-ದಕ್ಕಾಗಿ."

"ಸಾರ್, ಈ ಸಮಸ್ಯೆ ನಿಮಗೆ ಅರ್ಥವಾಗಿಲ್ಲ ಎಂದು ಜನ ಭಾವಿಸುತ್ತಾರೆ. ನೀವು ಅವನನ್ನು ಶೈಲಾಕ್ ಎಂದೇ ಕರೆಯಿರಿ. ಆದರೆ ನನ್ನಂಥ ಎಲುಮಲೈನಂಥ ಜನರು ಅವನನ್ನು ನಮ್ಮ ತೊಂದರೆಯಿಂದ ಪಾರುಮಾಡುವ ಒಬ್ಬ 'ರಕ್ಷಕ'ನೆಂದೇ ಭಾವಿಸುತ್ತಾರೆ. ತುಂಬಾ ಬಡ್ಡಿ ಹೇರು-ವುದು ಮತ್ತು ಅಕ್ರಮವಾಗಿ ಲೇವಾದೇವಿ ಮಾಡುವುದು ತಪ್ಪೆಂದು ಗೊತ್ತಿದೆ. ಆದರೆ ಅದು ಸಂಪೂರ್ಣವಾಗಿ ಕಣ್ಣನ್‌ನಂಥ ಲೇವಾ-ದೇವಿಯವನ ತಪ್ಪಲ್ಲ"–– ಅಹ್ಮದ್ ವಿವರಿಸಿದ.



ರಾಜನ್ ಪ್ರವೇಶಿಸಿದ: "ನಾವೆಲ್ಲಾ ಬಡ ಜನಗಳು, ಒಬ್ಬ ಮಾರವಾಡಿಯಿಂದ ಹಣ ತರಬೇಕೆಂದರೆ, ನಾವು ಆಭರಣಗಳನ್ನೋ ಅಥವ ಪಾತ್ರೆಗಳನ್ನಾದರೋ ಒತ್ತೇ ಇಡಬೇಕಾಗುತ್ತದೆ. ಬ್ಯಾಂಕಿನಿಂದ ಹಣ ತರಲು ಏನಾದರೂ ಜಾಮೀನು ಕೊಡಬೇಕಾಗುತ್ತದೆ. ನಮಗೆ ಏನೂ ಒತ್ತೇ ಇಡುವಂತೆ ಕೇಳದೆ ಯಾರು ಸಾಲ ಕೊಡುತ್ತಾರೆ? ಆಗ ಕಣ್ಣನ್‌ನಂತಹ ಜನರು ಮಾತ್ರ ಸಹಾಯ ಮಾಡುತ್ತಾರೆ. ನಮ್ಮ ಎಲ್ಲ ವ್ಯವಹಾರಗಳೂ ಕೇವಲ ಬಾಯಿಮಾತಿನ ಒಪ್ಪಂದ, ಯಾವುದೇ ರೀತಿಯ ದಾಖಲೆಗಳಿರುವುದಿಲ್ಲ; ಅಥವಾ ಬಾಂಡ್ ಆಗಲೀ ಪತ್ರೇನೇ ಆಗಲೀ ಇರುವುದಿಲ್ಲ; ಆದ್ದರಿಂದ ನಾವು ಅವನು ಎಷ್ಟೇ ಬಡ್ಡಿ ಕೇಳಿದರೂ ಸಂತೋಷದಿಂದ ಕೊಟ್ಟುಬಿಡುತ್ತೇವೆ.

"ಅದೂ ಅಲ್ಲದೇ ಅವನು ಆ ಅಸಲನ್ನು ಎಂದೂ ಹಿಂತಿರುಗಿಸುವಂತೆ ಒತ್ತಾಯ ಪಡಿಸುವುದಿಲ್ಲ."– ಲಪರ್ದು ರಾಜನ್‌ನ ಅಭಿಪ್ರಾಯವನ್ನು ಬೆಂಬಲಿಸಿದ–"ಕಣ್ಣನ್ ಹೇಳುತ್ತಾನೆ– 'ನಾನು ಬದುಕಿರುವಷ್ಟು ದಿನ ನೀನು ಬಡ್ಡಿ ಕೊಡು; ಅಸಲನ್ನು ನೀನು ಕೊಡಬೇಕಿಲ್ಲ, ನಾನು ಸತ್ತ ನಂತರ ಯಾರೂ ನಿನ್ನನ್ನು ಅಸಲಿನ ಬಗ್ಗೆ ಕೇಳುವುದಿಲ್ಲ' ಅದಕ್ಕೇ ನಾವು ಬಡ್ಡಿಯನ್ನು ತಪ್ಪದೇ ಸರಿಯಾಗಿ ಕೊಡುತ್ತೇವೆ."

ಹೇಗೇ ಆದರೂ ನನಗೆ ಸಮಾಧಾನವಾಗಲಿಲ್ಲ. ಎಲುಮಲೈಗೆ ಸಹಾಯ ಮಾಡಲು ನಿರ್ಧರಿಸಿದೆ.

ಮಾರನೆ ದಿನ ಅವನಿಗೆ ೧೦೦ರೂ. ಗಳನ್ನು ಕೊಟ್ಟು ಕಣ್ಣನ್‌ನ ಸಾಲವನ್ನು ಹಿಂತಿರುಗಿಸುವಂತೆ ಹೇಳಿದೆ, "ನೀನು ನನಗೆ ಬಡ್ಡಿ ಕೊಡುವ ಅಗತ್ಯವಿಲ್ಲ; ಮುಂದಿನ ತಿಂಗಳಿನಿಂದ ನೀನು ಪ್ರತಿ ತಿಂಗಳೂ ಇಪ್ಪತ್ತು ರೂಪಾಯಿಗಳಂತೆ ಕೊಡು. ಇನ್ನು ಕೆಲವೇ ತಿಂಗಳುಗಳಲ್ಲಿ ನೀನು ಸಾಲದ ಹೊರೆಯಿಂದ ಮುಕ್ತನಾಗುವೆ" –ನಾನು ಅವನಿಗೆ ಭರವಸೆಯಿತ್ತೆ.

ಅವನು ದಿಗ್ಭ್ರಮೆಗೊಂಡ; ಆದರೆ ಅವನಿಗೆ ಸಂತೋಷವೂ ಆಗಿತ್ತು.

ಈ ಸುದ್ದಿಯನ್ನು ಕೇಳಿದ ಇತರ ಅಟೆಂಡರುಗಳು ನನ್ನೆಡೆಗೆ ಹಣಕ್ಕಾಗಿ ಧಾವಿಸತೊಡಗಿದರು. ನಾನು ಅವರಿಗೆ ಇದು ಕೇವಲ ಪ್ರಯೋಗಾರ್ಥವೆಂದೂ, ಒಂದು ವೇಳೆ ಎಲುಮಲೈ ಸಾಲವನ್ನು ಕ್ರಮವಾಗಿ ಹಿಂತಿರುಗಿಸುತ್ತಿದ್ದರೆ ನಾನು ಬೇರೆಯವರಿಗೆ ಸಹಾಯ ಮಾಡಬಲ್ಲೆನೆಂದೂ ಹೇಳಿದೆ.

ಆ ದಿನದಿಂದ ಕಣ್ಣನ್ ನನ್ನನ್ನು ಒಂದು ಬಗೆಯಾಗಿ ಬಹುಶಃ 'ನನ್ನ ಮಾರ್ಗದಲ್ಲಿ ಮಧ್ಯೆ ಪ್ರವೇಶಿಸ ಬೇಡ' ವೆಂದು ಬೇಡುವ ಹಾಗೆ–ಕುತೂಹಲ ದಿಂದ ನೋಡುತ್ತಿದ್ದ, ಮುಂದಿನ ಎರಡು ತಿಂಗಳುಗಳಲ್ಲಿ ಎಲುಮಲೈ ಪ್ರಾಮಾಣಿಕತೆಯಿಂದ ಇಪ್ಪತ್ತು ರೂಪಾಯಿಗಳಂತೆ ಕೊಡುತ್ತಿದ್ದ; ಮೂರನೇ ತಿಂಗಳು ತಾನು ತನ್ನ ನಾದಿನಿಯ ಮದುವೆಗೆ ಪಾಂಡಿಚೇರಿಗೆ ಹೋಗಲಿರುವುದಾಗಿ ಹೇಳಿ ಕೇವಲ ಹತ್ತು ರೂ.ಗಳನ್ನು ಕೊಟ್ಟ. ನಾಲ್ಕನೇ ತಿಂಗಳು ಹಣ ಕೊಡಲೇ ಇಲ್ಲ; ಇದಾದ ನಂತರ ಅವನು ಕೆಲವು ದಿನ ನನ್ನ ಕಣ್ಣು ತಪ್ಪಿಸಿ ಓಡಾಡುತ್ತಿದ್ದ. ಒಂದು ದಿನ ಅವನು ನನ್ನೆದುರಿಗೇ ಸಿಕ್ಕಾಗ, ಅವನು ಈ ಬಾರಿ ಕೇವಲ ಹತ್ತು ರೂ. ಕೊಡುವುದಾಗಿಯೂ ದಯುವಿಟ್ಟು ಒಪ್ಪಬೇಕೆಂದೂ ಬೇಡಿಕೊಂಡ.

"ದಯವಿಟ್ಟು ಸಾರ್, ಎಲ್ಲಾ ಕಡಿತಗಳಿಂದ ನಾನು ಕೇವಲ ಅರವತ್ತು ರೂಪಾಯಿಗಳನ್ನು ಮಾತ್ರ ಸಂಬಳದಲ್ಲಿ ಪಡೆಯುತ್ತಿದ್ದೇನೆ. ಮತ್ತು ಅದರಲ್ಲಿ ನಿಮಗೆ ಇಪ್ಪತ್ತು ರೂಪಾಯಿಗಳು ಮತ್ತು ಕಣ್ಣನ್‌ಗೆ ಹನ್ನೆರಡು ರೂಪಾಯಿ ಕೊಡುವುದು ನನಗೆ ತುಂಬಾ ಹೊರೆ ಎನಿಸುತ್ತದೆ..." ಎಂದು ಹೇಳಿದ.

"ಕಣ್ಣನ್‌ಗೆ ಹನ್ನೆರಡೂವರೆ!" ನನಗೆ ಆಶ್ಚರ್ಯವಾಯಿತು. "ನೀನು ಬೊಗಳುತ್ತಿರುವುದೇನು?..."

ಅದು ಹೇಗೆ ಸಂಭವಿಸಿತೆಂದು ಅವನು ನನಗೆ ವಿವರಿಸಿದ. ಅವನು ಕಣ್ಣನ್‌ಗೆ ನೂರು ರೂಪಾಯಿಯನ್ನು ಹಿಂತಿರುಗಿಸಿದಾಗ ಕಣ್ಣನ್ ತುಂಬಾ ವ್ಯಥೆಗೊಂಡ. ಅವನು ಎಲುಮಲೈನನ್ನು ಅವನ ಮನೆಯಲ್ಲಿ ಸಂಧಿಸಿ ಹಣವನ್ನು ವಾಪಸ್ ತೆಗೆದುಕೊಳ್ಳುವಂತೆ ಬೇಡಿಕೊಂಡ, ಒಬ್ಬ ಗಿರಾಕಿಯನ್ನು ಕಳೆದುಕೊಳ್ಳುವುದೆಂದರೆ ಅವನಿಗೆ ಒಬ್ಬ ಬಂಧುವನ್ನು ಕಳೆದು ಕೊಂಡಂತಂತೆ! ಕಣ್ಣೀರು

ಸುರಿಸುತ್ತಾ ಕಣ್ಣನ್ ಆ ಹಣವನ್ನು ಹಿಂತಿರುಗಿಸುವ ಬಗ್ಗೆ ಚಿಂತಿಸದಿರುವಂತೆ ಕೇಳಿಕೊಂಡ. ಎಲುಮಲೈನ ಹೆಂಡತಿ, ಮತ್ತು ಅಕ್ಕ ಪಕ್ಕದವರು ಆತನನ್ನು ಹಣ ತೆಗೆದುಕೊಳ್ಳುವಂತೆ ಒತ್ತಾಯಿಸಿದರು.

"ಹಾಗಾದರೆ ನೀನು ಆ ಹಣವನ್ನು ನನಗೆ ಹಿಂತಿರುಗಿಸಬೇಕಿತ್ತು..." —ನಾನು ಕೇಳಿದೆ.

"ಆ ಹಣವನ್ನು ನಾನು ನನ್ನ ನಾದಿನಿಯ ಮದುವೆಯಲ್ಲಿ ಖರ್ಚು ಮಾಡಿದೆ ಸಾರ್..." —ಎಲುಮಲೈ ಮಂಗನಂತೆ ಹಲ್ಲು ಕಿರಿದ.

ಅದನ್ನು ವೀಕ್ಷಿಸುತ್ತಿದ್ದ ರಾಮಚಂದ್ರನ್ 'ನಾನಗಲೇ ಹೇಳಲಿಲ್ಲವೇ ?' ಎಂಬುದನ್ನು ಸೂಚಿಸುವಂತೆ ದೊಡ್ಡದಾಗಿ ನಕ್ಕರು.

"ಈ ಜನಗಳು ಈ ಅಧೋಗತಿಗೆ ಯಾಕೆ ಇಳಿದಿದ್ದಾರೆಂದರೆ ಅವರು ತಮ್ಮ ಮತಿಯನ್ನು ಮೀರಿ ನಡೆದುಕೊಳ್ಳುತ್ತಾರೆ. ಮದುವೆ, ಸಂಸ್ಕಾರ ಮುಂತಾದವುಗಳಿಗಾಗಿ ಮಿತಿ ಮೀರಿ, ಅನಾವಶ್ಯಕವಾಗಿ ಖರ್ಚು ಮಾಡುತ್ತಾರೆ. ಸಾಲ ತರುವುದು, ಹಿಂತಿರುಗಿಸುವುದು ಮತ್ತು ಮತ್ತೆ ಹೆಚ್ಚು ಸಾಲ ತರುವುದು —ಹೀಗೆ ಇದೊಂದು ಸುತ್ತುತ್ತಿರುವ ವಿಷಚಕ್ರ. ನಾನು ಮತ್ತು ನೀವು ಒಂಟಿಯಾಗಿ ಈ ಸಮಸ್ಯೆಯನ್ನು ಬಗೆಹರಿಸಲಾರೆವು," ಎಂದು ರಾಮಚಂದ್ರನ್ ಹೇಳಿದರು.

ನನ್ನ ಆಸಕ್ತಿಯು ಬಲಿಪಶುಗಳ ಬಗ್ಗೆ ಮತ್ತು ಷಹುಕಾರಗಳಿಂದಾಗಲೇ ಅವರ ರಕ್ತ ಹೀರುತ್ತಿರುವ ಈ 'ಆಧುನಿಕ ಡ್ರಾಕುಲಾ' ಬಗ್ಗೆ ಹೆಚ್ಚಿತು.

ಅವನ ಬಗ್ಗೆ ನಾನು ಹೆಚ್ಚು ತಿಳಿಯಬಯಸಿದೆ. ಆಗ ನಾನು ಕಂಡುಕೊಂಡ ಚಿತ್ರ ನಿಜಕ್ಕೂ ಬೆರಗು ಹುಟ್ಟಿಸುವಂಥದು.

ಅವನು ಮಕ್ಕಳೇ ಇಲ್ಲದ, ಒಂಟಿಯಾಗಿದ್ದ ಒಬ್ಬ ವಿಧುರ. ಅವನಿಗೆ ಯಾವ ಬಂಧುಗಳೂ ಇರಲಿಲ್ಲ. ಹತ್ತಿರದಲ್ಲೇ ಇದ್ದ ಹಿಂದು ಓಣಿಯಲ್ಲಿದ್ದ, ಒಂದು ಸಣ್ಣ ಹಂಚಿನ ಮನೆ ಅವನದು.

ಅವನಿಗೆ ಬೇಕಾಗಿದ್ದುದು —ಹತ್ತಿರದ ಚಹಾ ಅಂಗಡಿಯಿಂದ ತಂದ ಒಂದೆರಡು ಇಡ್ಲಿಗಳ ಉಪಹಾರ, ಒಂದು ಸಾಧಾರಣ ಊಟ ಮತ್ತು ಒಂದೆರಡು ಬಾಳೆಹಣ್ಣುಗಳು, ಅವನು ಈ ಲೇವಾದೇವಿ ವ್ಯವಹಾರನಿಂದ ಕೆಲವು ಲಕ್ಷ ರೂಪಾಯಿಗಳನ್ನು ಸಂಪಾದಿಸಿದ್ದನು.

ಎಂಥ ವಿಲಕ್ಷಣ ವ್ಯಕ್ತಿ ಅವನು! ಆ ಹಣದಿಂದ ಅವನೊಬ್ಬ ರಾಜನಂತೆ ಜೀವಿಸುವುದು ಸಾಧ್ಯವಿತ್ತು. ಆದರೆ ಆತನು ಭಿಕಾರಿಯಂತೆ ಜೀವನ ಸಾಗಿಸುತ್ತಿದ್ದ. ಈ ಜಿಪುಣ ಆ ಹಣದಿಂದ ಏನು ಮಾಡುತ್ತಾನೆ? ಎಂಬುದು ಯಾರಿಗೂ ಗೊತ್ತಿಲ್ಲ. ಆ ಹಣವನ್ನು ಎಲ್ಲಿಟ್ಟಿರುತ್ತಾನೆ? ಹಣವನ್ನೆಲ್ಲಾ ಏನು ಮಾಡಬೇಕೆಂದಿದ್ದಾನೆ ಎಂಬುದು ಒಂದು ನಿಗೂಢ ಸಂಗತಿ, ಒಂದು ಬಿಡಿಸಲಾಗದ ಒಗಟು.

ಸುಮಾರು ಹತ್ತು ವರ್ಷಗಳೇ ಕಳೆದವು, ಕಣ್ಣನ್‌ನಿಗೆ ವಯಸ್ಸಾಯಿತು. ಅವನು ವೃದ್ಧನಾಗತೊಡಗಿದ. ಅವನ ದೃಷ್ಟಿ ಮಂದವಾಗತೊಡಗಿತು. ಅವನು ಈಗ ತನ್ನ ಸಹಾಯಕ್ಕೆಂದು ಇಬ್ಬರು ಹುಡುಗರನ್ನು ಇಟ್ಟುಕೊಂಡಿದ್ದ. ಅವರು ಯಾರು, ಎಲ್ಲಿಯವರೆಂದು ಯಾರಿಗೂ ತಿಳಿಯದು.

ಅವನು ಈಗಲೂ ಪ್ರತಿ ತಿಂಗಳು ಒಂದನೇ ತಾರೀಖು ತಪ್ಪದೆ ತನ್ನ ಮಾಮೂಲು ಸ್ಥಳವಾದ ಆ ಗೇಟಿನ ಮೂಲೆಗೆ— ಪವಿತ್ರವಾದ ತನ್ನ ನೇಮಗಳನ್ನು ತಪ್ಪದೆ ಮಾಡುವ 'ಕರ್ಮಯೋಗಿ'ಯಂತೆ— ಬಡ್ಡಿ ವಸೂಲು ಮಾಡಲು ಬರುತ್ತಿದ್ದ.

ಪ್ರಾರಂಭದಲ್ಲಿ ನಾನು ಅವನನ್ನು ದ್ವೇಷಿಸುತ್ತಿದ್ದೆ. ಆದರೆ ಕ್ರಮೇಣ ಅವನ ಬಗ್ಗೆ ಒಂದು ಬಗೆಯ ಕನಿಕರ ಉಂಟಾಯಿತು. ವರ್ಷಗಳು ಕಳೆದ ಹಾಗೆ ಅವನ ಜೊತೆಗೆ ಒಂದು ರೀತಿಯ ಅವ್ಯಕ್ತ ಬಾಂಧವ್ಯ ಬೆಳೆಸಿಕೊಂಡೆ.

ಇದ್ದಕ್ಕಿದ್ದಂತೆ ೧೯೭೫ ರ ಮಾರ್ಚಿಯ ಒಂದು ದಿನ ಅವನು ಸತ್ತ. ಮಧ್ಯಾಹ್ನದ ವೇಳೆಗೆ ಆ ಸುದ್ದಿ ನಮ್ಮ ಕಾಲೇಜಿಗೆ ತಲುಪಿತು. ನಮ್ಮ ಜವಾನರಿಗೆ ಆ ಸುದ್ದಿ ಕೇಳಿ ಆಘಾತವಾಯಿತು. ಆದರೆ ನಾನು ಆ ಸುದ್ದಿ ಕೇಳಿದಾಗ —ಸಾಲಗಳಿಂದ ಮುಕ್ತರಾದುದಕ್ಕೆ – ನಮ್ಮ ಜವಾನರು ಸಂತೋಷಪಡುತ್ತಾರೆಂದು ಭಾವಿಸಿದ್ದೆ; ಆದರೆ ಹಾಗಾಗಲಿಲ್ಲ. ಅವರೆಲ್ಲ ತಮ್ಮ ಕೆಲಸ ಮುಗಿಸಿ

ಅವನ ಮನೆಯ ಕಡೆಗೆ ಧಾವಿಸಿದರು.

ಆ ಮನೆ ಈಗ ವಿಚಿತ್ರವಾದ ಗೊಂದಲದಿಂದ ತುಂಬಿತ್ತು. ಅವನ ಮನೆಯಲ್ಲಿದ್ದ ಆ ಇಬ್ಬರು ಹುಡುಗರು ಆ ಮನುಷ್ಯ ತನ್ನ ಜೀವನವಿಡೀ ಕಷ್ಟಪಟ್ಟು ಸಂಗ್ರಹಿಸಿದ್ದ ಎಲ್ಲಾ ದ್ರವ್ಯದೊಂದಿಗೆ ಪರಾರಿಯಾಗಿಬಿಟ್ಟಿದ್ದರು. ದುರ್ದೈವಿ ಆತ್ಮ! ಅವನ ಹೆಣವನ್ನು ಸುಡಲು ಬೇಕಾಗುವಷ್ಟು ಹಣವಿರಲಿಲ್ಲ.

ಯಾರೋ ಒಬ್ಬರು ಆ ಬಗ್ಗೆ ಕಾರ್ಪೊರೇಷನ್ನಿಗೆ ತಿಳಿಸಲು ಸಲಹೆ ಮಾಡಿದರು. ಆದರೆ ಆ ವೃದ್ಧನ ಗಿರಾಕಿಗಳು ಅವನಿಂದ ಅನೇಕ ವರ್ಷ ಕಾಲ ಸುಲಿಯಲ್ಪಟ್ಟವರು ಅವನ ಮೆಚ್ಚಿನ 'ರಕ್ಷಕ'ನಿಗೆ ಸೂಕ್ತವಾದ ರೀತಿಯಲ್ಲಿ ಸಂಸ್ಕಾರ ಮಾಡಲು ನಿರ್ಧರಿಸಿದರು.

ಪ್ರತಿಯೊಬ್ಬರೂ ತಮ್ಮ ಶಕ್ತ್ಯಾನುಸಾರ ವಂತಿಗೆ ನೀಡಿದರು. ಅವನ ಹೆಣವನ್ನು ಹೂಗಳಿಂದ ಶೃಂಗರಿಸಿದರು. ಆತನ ಸಂಸ್ಕಾರವಾದ ನಂತರ ಅಂತಹ ಒಳ್ಳೆಯ ಮನುಷ್ಯನನ್ನು ಇನ್ನು ಮುಂದೆ ತಾವು ನೋಡಲು ಸಾಧ್ಯವಿಲ್ಲವೆಂಬಂತೆ ಕಂಬನಿ ಸುರಿಸುತ್ತಾ ಹಿಂತಿರುಗಿದರು.

*

ಇತ್ತೀಚೆಗೆ ನಾನು ಶೇ. ೯೦ರಷ್ಟು ಬಡ್ಡಿ ಹೇರುತ್ತಿದ್ದ ಎಲ್ಲಾ ಲೇವಾದೇವಿಗಾರರನ್ನೂ ಸರಕಾರ ಬಂಧಿಸಿತೆಂಬ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದಾಗ ನನಗೆ ಥಟ್ಟನೆ ಕಾಲೇಜಿನ ಮೂಲೆಯಲ್ಲಿ ಕೈ ಜೋಡಿಸಿಕೊಂಡು ನಿಂತಿರುತ್ತಿದ್ದ ಹರಿದ ಕೋಟಿನ ಆ ಗಿಡ್ಡ ಮನುಷ್ಯನ ನೆನಪು ಉಕ್ಕಿ ಬಂದಿತು.

ಸದ್ಯ, ದೇವರೇ! ಅಂಥಾ ಜನಗಳ ವಿರುದ್ಧ ಸರಕಾರ ಕ್ರಮ ತೆಗೆದುಕೊಳ್ಳುವ ಎಷ್ಟೋ ದಿನಗಳ ಮುಂಚೆಯೇ ಅವನು ಸತ್ತುಹೋಗಿದ್ದ!

('ಕಾರವಾನ್' ಪತ್ರಿಕೆಯಿಂದ)

ಕೂದಲೆಳೆಗೆ, ಹತ್ತು ಸಾವಿರ ಪೌಂಡು

ಫ್ರಾನ್ಸಿನ ಡೊಮಿಂಕ್ಯು ಪಾಸನ್ನೆ ಎಂಬ ಸದ್ಗೃಹಸ್ಥ, ತನ್ನ ಕೂದಲೆಳೆಯೊಂದಕ್ಕೆ, ಹತ್ತು ಸಾವಿರ ಪೌಂಡು ಗಳಿಸಿ, ಜಗತ್ತಿನ ಇತಿಹಾಸದಲ್ಲಿಯೇ ಒಂದು ದಾಖಲೆ ಸ್ಥಾಪಿಸಿದ್ದಾನೆ. ಪಾಸನ್ನೆ, ಗ್ಯಾಪ್ ನಗರದಲ್ಲಿ ಮನೆಯೊಂದನ್ನು ಕಟ್ಟಿಕೊಳ್ಳಲು, ದಲ್ಲಾಳಿ ವ್ಯವಹಾರ ಮಾಡುತ್ತಿದ್ದ ತನ್ನ ಮಿತ್ರನ ಬಳಿ ಸಾಲ ಬೇಡಿದ. ವಸ್ತು ಒಡವೆಗಳನ್ನು ಅಡವಿಟ್ಟುಕೊಂಡು ಸಾಲ ಕೊಡುವುದು ದಲ್ಲಾಳಿಯ ಕರಾರು ಆಗಿದ್ದುದರಿಂದ ಪಾಸನ್ನೆ ತನ್ನ ಕೂದಲೆಳೆಯೊಂದನ್ನು ಕಿತ್ತು, "ಇದನ್ನೇ ಒಂದು ಆಭರಣ ಎಂದು ತಿಳಿದುಕೋ" ಎಂದಿದ್ದ. ಮಿತ್ರನಲ್ಲಿ ವಿಶ್ವಾಸವಿದ್ದುದರಿಂದ, ದಲ್ಲಾಳಿ ನಗುತ್ತಲೇ ಕೂದಲೆಳೆ ತೆಗೆದುಕೊಂಡು, ಸಾಲ ನೀಡಿದ್ದ.

ದಲ್ಲಾಳಿ ಈ ವ್ಯವಹಾರವನ್ನು ಎಷ್ಟು ಲಘುವಾಗಿ ತೆಗೆದುಕೊಂಡಿದ್ದನೋ, ಪಾಸನ್ನೆ ಅಷ್ಟೇ ಗಹನವಾಗಿ ತೆಗೆದುಕೊಂಡಿದ್ದ. ಮನೆ ಕಟ್ಟಿಸಿಕೊಂಡು ಕೆಲ ವರ್ಷಗಳಾದ ನಂತರ, ಪಾಸನ್ನೆ ಬಡ್ಡಿ ಸಮೇತ ಅಸಲನ್ನು ಮಿತ್ರನಿಗೆ ಹಿಂದಿರುಗಿಸಿ, ತಾನು ಮೊದಲು ಅಡವಿಟ್ಟಿದ್ದ ಕೂದಲೆಳೆ ಬೇಡಿದ. ಆದರೆ ಕೂದಲೆಳೆ ಕಳೆದುಹೋಗಿತ್ತು. ಪಾಸನ್ನೆ ಒಂದು ಥರ ಮನುಷ್ಯನಾದುದರಿಂದ, ಈ ಪ್ರಕರಣವನ್ನು ಕೋರ್ಟಿಗೆ ಹಾಕಿದ.

ಸತತ ೨೩ ವರ್ಷಗಳ ಸುದೀರ್ಘ ವಿಚಾರಣೆಯ ನಂತರ, ನ್ಯಾಯಾಲಯ ಪಾಸನ್ನೆಯ ಪರವಾಗಿ ತೀರ್ಪು ನೀಡಿ ಹತ್ತು ಸಾವಿರ ಪೌಂಡುಗಳಷ್ಟು ಹಣವನ್ನು ದಲ್ಲಾಳಿಯಿಂದ ಕೊಡಿಸಿತು.

ಡಾಂಭಿಕರ ನಾವೆಲ್ಲ!

ನರ್ಗೀಸ್ ದಲಾಲ

ನಾವೆಲ್ಲ ಎಷ್ಟು ಆಷಾಢಭೂತಿಗಳು! ಅಹಿಂಸೆಯ ಬಗೆಗೂ ಪ್ರಾಣಿಮಾತ್ರರಿಗೆ ಸ್ವಾಭಾವಿಕವಾಗಿಯೇ ಇರುವ ಜೀವಿಸುವ ಹಕ್ಕಿನ ಬಗೆಗೂ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಾ ಉದಾತ್ತ ಭಾವನೆಗಳನ್ನು ಪ್ರದರ್ಶಿಸುತ್ತಾ ತಿರುಗಾಡುತ್ತೇವೆ. ಆದರೆ ನಮ್ಮ ಮನಸ್ಸಿನಾಳವನ್ನು ಸ್ವಲ್ಪ ಹೊಕ್ಕು ನೋಡಿದರೂ ಸಾಕು, ಇತರರ ದುಃಖ-ತಾಪತ್ರಯಗಳ ಬಗೆಗಿರುವ ನಿರ್ಮಮ ನಿರ್ಲಕ್ಷ್ಯ ತಾನೇ ತಾನಾಗಿ ಮೆರೆಯುತ್ತಿರುವುದು ತಂತಾನೇ ಗಮನಕ್ಕೆ ಬರುತ್ತದೆ. ನೈತಿಕ ಹಾಗೂ ಧಾರ್ಮಿಕ ಕಾರಣಗಳಿಂದಾಗಿ ಗೋವಧೆಯನ್ನು ನಿರ್ಬಂಧಿಸಬೇಕೆಂದು ಗೋಹತ್ಯಾವಿರೋಧಿಗಳು ನಮ್ಮ ದೇಶದಲ್ಲಿ ಸಾಕಷ್ಟು ಕಾಲದಿಂದ ಹುಯಿಲೆಬ್ಬಿಸುತ್ತಾ ಬಂದಿದ್ದಾರೆ. ಪ್ರಾಚೀನ ಭಾರತದಲ್ಲಿ ಗೋಮಾಂಸ ಭಕ್ಷಣೆ ತ್ಯಾಜ್ಯವಾಗಿರಲಿಲ್ಲವೆಂದು ಬರೆಯಲಾದ ಇತಿಹಾಸಗ್ರಂಥಗಳನ್ನು ರಾಷ್ಟ್ರಹಿತಕ್ಕೆ ವಿರೋಧವಾಗಿದೆಯೆಂಬ ಕಾರಣದಿಂದ ಬಹಿಷ್ಕರಿಸಲಾಗುತ್ತಿದೆ. ಒಂದಾದ ಮೇಲೆ ಒಂದರಂತೆ ರಾಜ್ಯಗಳು ಹೊಸದಾಗಿ ಶಾಸನಗಳನ್ನು ನಿರ್ಮಿಸಿ ಗೋವಧೆಯನ್ನೂ ಗೋಮಾಂಸ ಭಕ್ಷಣೆಯನ್ನೂ ನಿರ್ಬಂಧಿಸುತ್ತಿವೆ

ಆದರೆ ವಾಸ್ತವದಲ್ಲಿ ನಡೆದದ್ದೇನು? ನಮಗೆ ಬೇಡವಾದ ಅಥವಾ ನಮಗೆ ಹೆಚ್ಚಾದ ಗೋವುಗಳನ್ನು ನಾವು ಉಪವಾಸ ಸಾಯಗೊಡುವುದಿಲ್ಲವೇನೋ ನಿಜವೆ. ಆದರೆ ಅವುಗಳನ್ನು ನಾವು ಅಗಣಿತ ಪ್ರಮಾಣದಲ್ಲಿ ಪಶ್ಚಿಮ ಏಶಿಯದ ರಾಷ್ಟ್ರಗಳಿಗೆ ರಫ್ತುಮಾಡಿ ವಿದೇಶವಿನಿಮಯವನ್ನು ಗಳಿಸುತ್ತಿದ್ದೇವೆ. ಅಲ್ಲಿಯಾದರೂ ಅವುಗಳನ್ನು ಸರಿಯಾಗಿ ನೋಡಿಕೊಳ್ಳಲಾಗುತ್ತಿದೆಯೆ? ಇಲ್ಲ. ಆ ರಾಷ್ಟ್ರಗಳು ಗೋವುಗಳನ್ನು ತರಿಸಿಕೊಳ್ಳುವುದೇ ಅವುಗಳ ಮಾಂಸಕ್ಕಾಗಿ, ಜಗತ್ತಿನಲ್ಲಿ ಇದಕ್ಕಿಂತ ದೊಡ್ಡ ಡಾಂಭಿಕತನದ ಸಂಗತಿ ಯಾವುದಾದರೂ ಇದ್ದರೆ ಅದನ್ನು ನಾನು ಇನ್ನೂ ತಿಳಿಯಬೇಕಿದೆ. ಗೋಹತ್ಯೆಯ ಬಗೆಗೆ ಹುಯಿಲೆಬ್ಬಿಸಿದಂತೆ, ಗೋವುಗಳನ್ನು ಪರದೇಶಗಳಿಗೆ ರಫ್ತುಮಾಡಬಾರದೆಂದು ಯಾರಾದರೂ ದನಿಯೆತ್ತಿದ್ದಾರೆಯೆ? ಪ್ರಾಣಿದಯಾ ಸಂಘಗಳನ್ನುಳಿದು ಇಡೀ ದೇಶದಲ್ಲಿ ಒಬ್ಬನೇ ಒಬ್ಬ ವ್ಯಕ್ತಿಯಾದರೂ ಈ ಪ್ರಾಣಿಹಿಂಸೆಯ ಬಗೆಗೆ ಚಕಾರ ಶಬ್ದವನ್ನಾದರೂ ಆಡಿದ್ದಾನೆಯೆ?

ರಫ್ತುಮಾಡಲಿರುವ ಇಂಥ ಮೂಕ, ಅಸಹಾಯಕ ಪ್ರಾಣಿಗಳ ದುರ್ದೈವ ಪರಂಪರೆ ಮೊದಲು ನಮ್ಮ ದೇಶದಲ್ಲಿಯೇ ಪ್ರಾರಂಭವಾಗುತ್ತದೆ. ಹಳ್ಳಿಗಾಡಿನಿಂದ ಮೈಲುಗಟ್ಟಲೆ ದೂರ ಅವುಗಳನ್ನು ಹೊಡೆದುಕೊಂಡು ಬರಲಾಗುತ್ತದೆ, ದಾರಿಯಲ್ಲಿ ಅವುಗಳಿಗೆ ಸಾಕಷ್ಟು ನೀರು– ಆಹಾರಗಳನ್ನೂ ಕೊಡಲಾಗುವುದಿಲ್ಲ. ಹೀಗಾಗಿ ಬಂದರನ್ನು ಸೇರುವ ವೇಳೆಗೆ ಅವು ನಿತ್ರಾಣವಾಗಿ, ನಿರ್ವಿಣ್ಣವಾಗಿಹೋಗಿರುತ್ತವೆ. ಅನಂತರ

ಸಾಕಷ್ಟು ರಕ್ಷಣೆಯಿಲ್ಲದ, ಸಾಕಷ್ಟು ನೀರು-ಆಹಾರಗಳಿಲ್ಲದ ಪರಿಸರದಲ್ಲಿ ಮೂರೋ ಐದೋ ದಿನಗಳ ವರೆಗೆ ಸಮುದ್ರಯಾನ. ಈ ಯಾತನೆಯನ್ನು ನಿಸ್ಸಹಾಯವಾಗಿ ಸಹಿಸಿ ಪರದೇಶದ ಬಂದರಿನಲ್ಲಿಳಿದ ಕೂಡಲೇ ಆ ಮುಗ್ಧ ಹಸುಗಳನ್ನು ಹೇಗೆ ಹೇಗೋ ಟ್ರಕ್ಕುಗಳಲ್ಲೋ ಟ್ರೇನುಗಳಲ್ಲೊ ತುಂಬಿ ವಧಾಲಯಗಳಿಗೆ ಸಾಗಿಸಿ, ಬಹುತರವಾಗಿ ಯಾತನಾಮಯ ವಿಧಾನಗಳಿಂದ ಅವುಗಳನ್ನು ಕೊಂದು ಮಾಂಸವನ್ನು ತೆಗೆಯಲಾಗುತ್ತದೆ. ಭಾರತದ ಪವಿತ್ರ-ಭೂಮಿಯ ಮೇಲೆ ಗೋವಧೆಯು ಸಲ್ಲದೆಂಬ ಏಕಮೇವ ಕಾರಣದಿಂದ ಇದೆಲ್ಲವನ್ನೂ ನಡೆಯಗೊಡಲಾಗುತ್ತಿದೆಯೆ ?

ಮಂಗಗಳಿಗೊದಗುವ ಗತಿ ಇದಕ್ಕಿಂತ ಭಿನ್ನವಾಗಿಲ್ಲ. ಹಾಗೆ ನೋಡಿದರೆ ಪರದೇಶಗಳಿಗೆ ಕಳಿಸಲಾಗುವ ಹಸುಗಳ ಪಾಡೇ ತುಲನಾತ್ಮಕವಾಗಿ ಹೆಚ್ಚು ವಾಸಿ. ನಮ್ಮ ದೇಶದ ಲಕ್ಷಾಂತರ ಜನ ಮಂಗನನ್ನು ಹನುಮಂತನ ಅವತಾರವೆಂದೇ

ಅಮೇರಿಕದ ತಲೆನೋವು !

ಇದು ವರೆಗೆ ಭಾರತ ವರ್ಷಕ್ಕೆ ಸುಮಾರು ೨೦,೦೦೦ ರ್ಹೀಸಸ್ ಜಾತಿಯ ಮಂಗಗಳನ್ನು ವಿದೇಶಗಳಿಗೆ ರಫ್ತು ಮಾಡುತ್ತಿತ್ತು; ಅಮೇರಿಕವೇ **ಬಹು ದೊಡ್ಡ ಗಿರಾಕಿ** (ಅಮದು ವರ್ಷಕ್ಕೆ ೧೨,೦೦೦ ಕ್ಕಿಂತ ಹೆಚ್ಚು ಮಂಗಗಳು.)

ಇದೇ ಎಪ್ರಿಲ್ ಒಂದರಿಂದ ಈ ನಿರ್ಯಾತವನ್ನು ನಿಲ್ಲಿಸಿಬಿಡುವ ನಿರ್ಧಾರವನ್ನು ಭಾರತ ಸರಕಾರ ಪ್ರಕಟಿಸಿದೆ; ಇದಕ್ಕೆ ಕಾರಣ ಈ ಮರ್ಕಟಗಳನ್ನು ಕೊಂಡುಕೊಳ್ಳುತ್ತಿದ್ದ ದೇಶಗಳು– ವಿಶೇಷತಃ ಅಮೇರಿಕ ಅವುಗಳನ್ನು ಅಮಾನುಷವೂ ಕ್ರೂರವೂ ಆದ ರೀತಿಯಲ್ಲಿ ಬಳಸುತ್ತಿರುವುದು. ೧೯೫೫ರಲ್ಲಿ ಮಂಗಗಳ ನಿರ್ಯಾತದ ಬಗ್ಗೆ ಭಾರತ– ಅಮೇರಿಕಗಳಲ್ಲಾದ ಒಪ್ಪಂದದ ಒಂದು ಅಂಶವನ್ನು ಸ್ಪಷ್ಟಪಡಿಸುತ್ತದೆ. ಭಾರತವು ಈ ಮಂಗಗಳನ್ನು ಕಳಿಸಿದಷ್ಟು ಸಲವೂ ಅಮೇರಿಕದ ಸರ್ಜನ್ ಜನರಲ್ ಅವುಗಳನ್ನು ವೈದ್ಯಕೀಯ ಸಂಶೋಧನೆಕ್ಕಾಗಿ ಮಾತ್ರ ಬಳಸಲಾಗುತ್ತಿದೆಯೆಂದು ಸರ್ಟಿಫಿಕೇಟನ್ನು ಸ್ವಹಸ್ತಾಂಕಿತದಿಂದ ಕೊಡಬೇಕಲ್ಲದೆ ಮಂಗಗಳನ್ನು ಮನುಷ್ಯಸಹಜರೀತಿಯಲ್ಲಿ ನಡೆಸಿಕೊಳ್ಳಲಾಗುತ್ತದೆಂಬುದನ್ನು ಖಚಿತಪಡಿಸಿಕೊಳ್ಳಲು ಆಗೀಗ ತಪಾಸಿಸಲು ಅವಕಾಶವಿರಬೇಕೆಂದು ನಿರ್ಧರಿಸಲಾಗಿತ್ತು. ಅಲ್ಲದೆ ಪರಮಾಣು ಸ್ಫೋಟ ಪ್ರಯೋಗಗಳಲ್ಲೂ ಬಾಹ್ಯಾಕಾಶ ಸಂಶೋಧನೆಗಳಲ್ಲೂ ಇವುಗಳ ಉಪಯೋಗವನ್ನು ಪ್ರತಿಬಂಧಿಸಲಾಗಿತ್ತು.

ಆದರೆ ಅಮೇರಿಕವು ಒಪ್ಪಂದದ ಈ ಎಲ್ಲ ಅಂಶಗಳನ್ನೂ ಉಲ್ಲಂಘಿಸುತ್ತಲೇ ಬಂದಿದೆಯೆಂದು ಭಾರತ ಆಪಾದಿಸುತ್ತಿದೆ.

ಭಾರತವು ನಿರ್ಯಾತವನ್ನು ನಿಲ್ಲಿಸುವುದರ ನೇರ ಪರಿಣಾಮವಾಗುವುದು ಪೋಲಿಯೋ ಲಸಿಕೆ ಮತ್ತು ಇತರ ಕೆಲ ಲಸಿಕೆಗಳನ್ನು ತಯಾರಿಸುವ ಸಂಸ್ಥೆಗಳ ಮೇಲೆ ಇದೀಗ ಭಾರತದಿಂದ ತರಿಸಿದ ಸುಮಾರು ೧೩೦೦ ರ್ಹೀಸಸ್ ಮಂಗಗಳು ಅಮೇರಿಕದಲ್ಲಿವೆಯಂತೆ. ಅವುಗಳನ್ನು ಅಮೇರಿಕದಲ್ಲೇ ಪೋಷಿಸಿ ತಳಿ ಅಭಿವೃದ್ಧಿಗೊಳಿಸಿ ಅವುಗಳ ಸಂಖ್ಯೆಯನ್ನು ಹೆಚ್ಚಿಸಲು ಸಾಧ್ಯವೇ ಎಂಬುದು ಅಮೇರಿಕನ್ನರ ತಲೆ ತಿನ್ನುತ್ತಿದೆ. ಆ ದೇಶಕ್ಕೆ ಸಾಕಾಗುವಷ್ಟು ರ್ಹೀಸಸ್ ಮಂಗಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಸ್ಥಳೀಯವಾಗಿ ಪಡೆಯಲು ಐದರಿಂದ ಹತ್ತು ವರ್ಷಗಳಾದರೂ ಬೇಕಾಗಬಹುದು. ಅಲ್ಲಿಯ ವರೆಗೆ... ?

ಬರೆಯುತ್ತಾರೆ. ಕೆಲವು ವರ್ಷಗಳ ಹಿಂದೆ ಕೋಟಾದಲ್ಲೊಬ್ಬ ಉದ್ದೇಶಪೂರ್ವಕವಾಗಿಯೋ ಆಕಸ್ಮಿಕವಾಗಿಯೋ ಒಂದು ಮಂಗವನ್ನು ಕೊಂದಾಗ ದೊಂಬಿಯೇಳುವ ಪ್ರಸಂಗವೇ ಉಂಟಾಗಿ ಕೊನೆಗೆ ರಾಷ್ಟ್ರೀಯ ಧುರೀಣರಿಗೆ ಸಲ್ಲುವ ತೆರದಲ್ಲೇ ಸಕಲ ಗೌರವದಿಂದ ಅದಕ್ಕೆ ಅಂತ್ಯ ಸಂಸ್ಕಾರವನ್ನು ನೀಡಿದ ಘಟನೆ ಇನ್ನೂ ನನ್ನ ಮನಸ್ಸಿನಲ್ಲಿ ಹಸಿರಾಗಿಯೇ ಇದೆ.

ಆದರೆ ಮನುಕುಲದ ಈ ಪೂರ್ವಜನನ್ನು ವಾಸ್ತವದಲ್ಲಿ ನಾವು ಹೇಗೆ ನೋಡಿಕೊಳ್ಳುತ್ತಿದ್ದೇವೆ? ಪ್ರತಿವರ್ಷ ಅಮೇರಿಕಕ್ಕೂ ಬ್ರಿಟನ್ನಿಗೂ ರಫ್ತು ಮಾಡಿದ ಸಾವಿರಾರು ಮಂಗಗಳನ್ನು ಅಲ್ಲಿನ ಪ್ರಯೋಗಾಲಯದಲ್ಲಿ ಜೀವಂತವಾಗಿ ವಿಚ್ಛೇದಿಸಲಾಗುತ್ತಿದೆ. ಇಲ್ಲವೆ ಅವುಗಳ ಮೇಲೆ ಇತ್ತಿತರ ರೀತಿಗಳಿಂದ ಅಮಾನುಷವಾದ ಪ್ರಯೋಗಗಳನ್ನು ಮಾಡಲಾಗುತ್ತಿದೆ. ನಾವಿಂದು ಎಷ್ಟೊಂದು ಬೃಹತ್ಪ್ರಮಾಣದಲ್ಲಿ ಮಂಗಗಳನ್ನು ರಫ್ತು ಮಾಡುತ್ತಿದ್ದೇವೆಂದರೆ ಉತ್ತರಪ್ರದೇಶದ ಶೇಕಡಾ ೬೩ ರಷ್ಟು ಹಳ್ಳಿಗಳು ಮಂಗಗಳಿಲ್ಲದೆ ಬರಡಾಗಿವೆ. ನಿಸರ್ಗ ಸಂರಕ್ಷಣೆಯ ಅಂತಾರಾಷ್ಟ್ರೀಯ ಸಮಿತಿಯ ಇತ್ತೀಚಿನ ವರದಿಯ ಪ್ರಕಾರ, ಪ್ರಯೋಗಾಲಯಗಳ ಬೇಡಿಕೆಯನ್ನು ಪೂರೈಸುವ ತರಾತುರಿಯಿಂದಾಗಿ ಹದಿನೈದು ಜಾತಿಯ ಮಂಗಗಳ ಸಂತತಿ ಈ ಭೂಮಿಯಿಂದ ಅಳಿಸಿಹೋಗುವ ಪ್ರಮೇಯ ಪ್ರಾಪ್ತವಾಗಿದೆ. ಜಿಜ್ಞಾಸೆಗಾಗಿಯೋ ವೈಜ್ಞಾನಿಕ ವಾದವೊಂದನ್ನು ಪರೀಕ್ಷಿಸಬೇಕೆಂಬ ಉದ್ದೇಶದಿಂದಲೋ ಫಲಿತಾಂಶಗಳನ್ನು ದೃಢೀಕರಿಸಲು ಪುನರಾವರ್ತನೆಗಾಗಿಯೋ ಇನ್ನು ಕೆಲ ವೇಳೆ ಮಾನವ ಸ್ವಭಾವದಲ್ಲಿ ನೈಸರ್ಗಿಕವಾಗಿಯೋ ಸಹಿತವಾಗಿರುವ ಕ್ರೌರ್ಯವನ್ನು ತೃಪ್ತಿಪಡಿಸಿಕೊಳ್ಳಲೋಸುಗವೋ ಈ ಮಂಗಗಳನ್ನು ಪ್ರಯೋಗಾಲಯಗಳಲ್ಲಿ ಯಾತನೆಗೆ ಒಳಪಡಿಸಲಾಗುತ್ತದೆ. ರೋಗಾಣುಗಳನ್ನೂ ನರಗಳನ್ನು ನಿಸ್ಸತ್ವಗೊಳಿಸುವ ವಿಷಾನಿಲವನ್ನೂ ಯುದ್ಧದಲ್ಲಿ ಬಳಸಿದರೆ ಯಾವ ರೀತಿಯ ಪರಿಣಾಮವುಂಟಾಗುವದೆಂಬುದನ್ನು ಪರಿಕ್ಷಿಸಲು ಇತ್ತೀಚೆ ಅಮೇರಿಕದಲ್ಲಿ ಮಂಗಗಳನ್ನು ಬಳಸಲಾಯಿತು. ಮೋಟಾರು ಅಪಘಾತಗಳ ಬಗೆಗೆ ಸಂಶೋಧನೆ ಕೈಕೊಳ್ಳುವಾಗ ಮಂಗಗಳನ್ನು ಸೀಟಿಗೆ ಕಟ್ಟಿಹಾಕಿ ಅನಂತರ ಪೂರ್ವನಿರ್ಧರಿತ ವೇಗದಿಂದ ಮೋಟರನ್ನು ಹಾಯಿಸಿ ಅವುಗಳನ್ನು ಜಜ್ಜಿ ಕೊಂದು ಯಾವ ಅಂಗ ಎಷ್ಟು ಕ್ಷತಿಗೊಂಡಿದೆಂಬುದನ್ನು ಪರಿಶೀಲಿಸಲಾಗುತ್ತಿದೆ. ಈಗ ಎರಡು ತಿಂಗಳ ಹಿಂದೆ ಭಾರತ ಸರಕಾರ ಮಂಗಗಳ ರಫ್ತನ್ನು ನಿರ್ಬಂಧಿಸುವ ವರೆಗೆ ಈಗಾಗಲೆ ಸಾಕಷ್ಟು ಸಂಗ್ರಹದಲ್ಲಿರುವ ವಿದೇಶ ವಿನಿಮಯವನ್ನು ಇನ್ನೂ ಅಧಿಕಗೊಳಿಸಲು ಮಂಗಗಳನ್ನು ರಫ್ತು ಮಾಡುತ್ತಲೇ ಇದ್ದೆವು. ✡

(Opinion ಪತ್ರಿಕೆಯಿಂದ)



ಅಮೇರಿಕದ ಪ್ರವಾಸಿಯೋರ್ವನು ತನ್ನ ಆರು ತಿಂಗಳವರೆಗೆ ಕಲಾವಿದನಲ್ಲಿ ಬಿಡುವ ವಿಚಿತ್ರ ಕರಾರಿನೊಡನೆ ಇಟಾಲಿಯನ್ ಚಿತ್ರಕಲಾವಿದನೊಬ್ಬನಿಂದ ಕಲಾಕೃತಿಯೊಂದನ್ನು ಪಡೆದ.

ಇದರಿಂದ ಲಾಭವಾದದ್ದು ತನಗಲ್ಲ, ಅಮೇರಿಕದ ಪ್ರವಾಸಿಗೆ ಎಂಬುದು ಇಟಾಲಿಯನ್ ಚಿತ್ರಕಲಾವಿದನ ಗಮನಕ್ಕೆ ಬರಲು ತಡವಾಗಲಿಲ್ಲ. ಅಮೇರಿಕದ ಪ್ರವಾಸಿಯು ಉತ್ತಮ ಕಲಾಕೃತಿಯನ್ನು ಪಡೆದಿದ್ದನಲ್ಲದೆ ಈ ಕರಾರಿನ ಮೂಲಕ ಪತ್ನಿಯ ಕಾಟವನ್ನು ತಪ್ಪಿಸಿಕೊಳ್ಳುವ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದ. ಇದು ಗಮನಕ್ಕೆ ಬಂದ ಕೂಡಲೇ ಆ ಕಲಾವಿದ ಅಮೇರಿಕದ ಪ್ರವಾಸಿಗೆ ಆತನ ಮಡದಿಯನ್ನು ಹಿಂತಿರುಗಿಸಿದ.


ಕಡಿಮೆ ಹಣ
ಖರ್ಚು ಮಾಡಿ !
ಹೆಚ್ಚು ಬಟ್ಟೆಗಳನ್ನು
ಒಗೆಯಿರಿ
KASTURI
NEELAM SOAP
KASTURI
BAR SOAP
WOODY-SROM-77-89
ತಯಾರಕರು
ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ್
ಮಂಗಳೂರು.

ರಸ್ತೆಯ ಬದಿ ಟ್ರಾಫಿಕ್ ಕಂಟ್ರೋಲ್ ಕಂಬದಲ್ಲಿ ಕೆಂಪುದೀಪ ಹತ್ತಿದೊಡನೆಯೇ ವೇಗವಾಗಿ ಸೈಕಲ್ ತುಳಿಯುತ್ತಿದ್ದ ವೇಲಾಯುಧ ಗಕ್ಕನೆ ಬ್ರೇಕು ಹಾಕಿ ಎಲ್ಲ ವಾಹನಗಳ ಜೊತೆಗೆ ನಿಲ್ಲಬೇಕಾಯಿತು. ಕಾರು, ಸ್ಕೂಟರುಗಳ ಚಾಲಕರು ಮುಂದೆ ಗಮನಿಸುತ್ತಾ ನಿಂತರು. ಮತ್ತೆ ಸಿಗ್ನಲ್ ಆದೊಡನೆಯೇ ಎಲ್ಲರ ಜೊತೆ ಅವನೂ ಮುನ್ನಡೆದ. ಆಗಲೇ ಏಳೂಮುಕ್ಕಾಲು ಆಗಿರಬಹುದು. ದಾರಿಯಲ್ಲಿ ಒಬ್ಬರನ್ನು ಕೇಳಿದಾಗ ಏಳೂಕಾಲೆಂದಿದ್ದರು. ಎಂಟರೊಳಗೇ ಆಫೀಸಿನ ಗುಮಾಸ್ತನ ಎದುರಿಗೆ ನಿಲ್ಲದಿದ್ದರೆ ಕಷ್ಟ. ಕಾರ್ಪೊರೇಷನ್ನಿನ ಎಮರ್ಜನ್ಸಿ ಸೆಕ್ಷನ್ನಿನಲ್ಲಿ ಅವನೊಬ್ಬ ಡ್ರೈವರ್. ಸದ್ಯ ಅವನು

ಟಿ. ಎಸ್. ಪದ್ಮನಾಭರಾವ್



ಗುಮಾಸ್ತನ ಮುಂದೆ ನಿಂತು ಸಲಾಂ ಹಾಕಿದಾಗ ಏನೂ ಬೈಗಳು ಬರಲಿಲ್ಲ; ಒಟ್ಟಿನಲ್ಲಿ ಒಳ್ಳೇ ಗಾಡಿ ಕೊಟ್ಟರೆ ಅದೇ ತನ್ನ ಪುಣ್ಯ ಎಂದುಕೊಂಡ, ಹಾಜರಾತಿ ತೆಗೆದುಕೊಂಡ ನಂತರ, ಸ್ನೇಹಿತರ ಜೊತೆಗೆ ಹೊರಬಂದು ಕಲ್ಲುಬೆಂಚಿನ ಹತ್ತಿರ 'ಕರೆ'ಗಾಗಿ ಕಾಯುತ್ತಾ ನಿಂತ. ಆದರೆ ಯಾರಿಗಾದರೂ ಪರಲೋಕದಿಂದ 'ಕರೆ' ಬಂದರೆ ತಾನೇ ಅವನಿಗೆ ಇಲ್ಲಿ 'ಕರೆ' ಬರುವುದು; ಕೆಲಸಕ್ಕೆ ಸೇರಿದ ಹೊಸದರಲ್ಲಿ ಸ್ವಲ್ಪದಿನ ಅವನಿಗೆ ಭಯವೂ ಆಗದಿರಲಿಲ್ಲ. ಚಿಕ್ಕ, ಮಧ್ಯ, ದೊಡ್ಡ ವಯಸ್ಸಿನವರ ಸಾವುಗಳನ್ನು ನೋಡಿ, ಅವರನ್ನು ಮಸಣಕ್ಕೆ ಕಳುಹಿಸಿ ಬಂದಿದ್ದ. ಈಗ ಅವನಿಗೆ ದುಃಖವೂ ಆಗುತ್ತಿರಲಿಲ್ಲ; ಚಿಂತೆಯೂ ಆಗುತ್ತಿರಲಿಲ್ಲ. ಯಾರಾದರೂ ತನ್ನನ್ನು ಅನವಶ್ಯವಾಗಿ ಹೆಚ್ಚು ಹೊತ್ತು ಕಾಯಿಸಿದರಾಗಲೀ, 'ಭಕ್ಷೀಸು' ಕೊಡದಿದ್ದರಾಗಲೀ ಬೇಸರವಾಗುತ್ತಿತ್ತು. 'ಕೊನೆಯಲ್ಲಿ'ಯೂ ಚೌಕಶಿಮಾಡುವ ಜನರಿದ್ದರು; ಅಡ್ರೆಸ್ ಸರಿಯಾಗಿ ಕೊಡದೇ ಅಲೆದಾಡುವಂತೆ ಮಾಡುವವರೂ ಇಲ್ಲದಿರಲಿಲ್ಲ.

ಅವನಿಗೆ ಕರೆ ಬಂದಿತು. ಕುಕ್ಕುರುಗಾಲಿನಲ್ಲಿ ಬೀಡಿ ಸೇದುತ್ತ ಕುಳಿತಿದ್ದವನು ಗ್ಯಾರೇಜಿಗೆ ಎದ್ದುಹೋದ, ವಿಳಾಸದ ಚೀಟಿ ಜೇಬಿಗೆ ಸೇರಿಸಿ ಗಾಡಿ ಸ್ಟಾರ್ಟ್ ಮಾಡಿದ. ಅವನು ಹೋಗಬೇಕಾಗಿದ್ದುದು ಮಲ್ಲೇಶ್ವರದ [illegible]ನೇ ಕ್ರಾಸು, ಮನೆಯ ನಂಬರು ಫೋನಿನ[illegible]ಯಾಗಿ ಕೇಳಿಸಿರಲಿಲ್ಲವಂತೆ. ಸಾವು ಸಂಭವಿಸಿದ ಮನೆ ಹುಡುಕುವುದು ಕಷ್ಟವೇನಲ್ಲ, ಆದರೆ ಬರಲು ತಡವಾದರೆ ತಾನು ಏನು ಮಾಡುವುದಕ್ಕಾಗುತ್ತದೆ? ಎಂದು ಆಕ್ಸಿಲೇಟರನ್ನು ಜೋರಾಗಿಯೇ ತುಳಿದು ಹದಿನೆಂಟನೇ ಕ್ರಾಸಿನ ಬಸ್ ನಿಲ್ದಾಣದಲ್ಲಿ ವ್ಯಾನ್ ನಿಲ್ಲಿಸಿ, ಚೀಟಿ ಹಿಡಿದು ಕೆಳಗಿಳಿದ, ಬಸ್ ಸ್ಟಾಪಿನ ಬಳಿ ಒಬ್ಬ ಹುಡುಗ ಹುಡುಗಿಯೊಬ್ಬಳಿಗಂಟಿಕೊಂಡೇ ನಿಂತಿದ್ದ; ಬಸ್ ಯಾವುದೂ ಇರಲಿಲ್ಲ. ಹುಡುಗ ಚೀಟಿಯನ್ನು ಓದಿದ ಮೇಲೆ ಅದೇ ರಸ್ತೆಯಲ್ಲಿ ತಗ್ಗಿನ ಕಡೆ ಹೋದರೆ ಅಲ್ಲಿರಬಹುದು ಎಂದ. ತ್ಯಾಗರಾಜನ್ ಅಂತೆ, ಸತ್ತವರ ಹೆಸರೇ ಇರಬೇಕು. ಅವರಿಲ್ಲದಿದ್ದರೂ ಅವರ ಹೆಸರು ಕೇಳಿಕೊಂಡೇ ಮನೆ ಹುಡುಕಬೇಕು. ಎಂತಹದಿದು? ಎಂದು ಅವನಿಗೆ ಅನಿಸಿತು. ಮತ್ತೆ ವ್ಯಾನನ್ನು ಬಲಕ್ಕೆ ತಿರುಗಿಸಿ, ರಸ್ತೆಯ ಕೊನೆಯವರೆಗೂ ಓಡಿಸಿ, ಸಂಪಿಗೆ ಮರವೊಂದರ ಕೆಳಗೆ ನಿಲ್ಲಿಸಿದ. ಪಕ್ಕದ ರಸ್ತೆಯಿಂದ ಸುಮಾರು ಹದಿನೆಂಟರ ಹುಡುಗನೊಬ್ಬನು ಓಡಿಬಂದು, ತಾನು ಏಳೂವರೆಗೇ ಫೋನ್ ಮಾಡಿದುದಾಗಿಯೂ, ವ್ಯಾನ್ ತೆಗೆದುಕೊಂಡು ಬರಬೇಕೆಂದೂ ಹೇಳಿದ. ಅವರ ಅಜ್ಜಿ ತೀರಿಕೊಂಡಿದ್ದರಂತೆ, ಆದರೆ ತನ್ನಲ್ಲಿರುವುದು ಆ ವಿಳಾಸವಲ್ಲ. ಹುಡುಗನಿಗೆ ವಿಷಯ ತಿಳಿಸಿದಾಗ ಅವನು ಕಾರ್ಪೊರೇಷನ್ನನ್ನು ಮನಸ್ಸಲ್ಲೇ ಬೈದ. ಮನುಷ್ಯತ್ವ ಇಲ್ಲದ ಜನ ಎಂದ, ಆದರೆ ಅತ ತ್ಯಾಗರಾಜನ್ ಮನೆ ಇರುವ ಸ್ಥಳವನ್ನು ಹೇಳಿದ. ಹಿಂದಿನ ಬೀದಿಯೇ ಅಂತೆ. ಅಂತೂ ಮನೆ ಸಿಕ್ಕಿತು. ಹೆಚ್ಚು ಜನರೂ ಇರಲಿಲ್ಲ, ವಯಸ್ಸಾದವರು ಅಂತ ಕಾಣಿಸುತ್ತೆ. ಹೆಣ್ಣುಮಕ್ಕಳ ಮುಸು ಮುಸು ಅಳು ಬಿಟ್ಟರೆ, ಹಿರಿಯರೊಬ್ಬರು ಹಾಗೆ ಮಾಡಿ, ಹೀಗೆ ಮಾಡಿ ಎಂಬ ಆಜ್ಞೆಗಳ ಶಬ್ದವಷ್ಟೇ ಕೇಳಿಸುತ್ತಿತ್ತು. ವೇಲ್ ಹಾರ್ನ್ ಮಾಡಿದ, ಹದಿನೈದೇ ನಿಮಿಷದಲ್ಲಿ ಎಲ್ಲ ಸಿದ್ಧವಾಯಿತು. ದೇಹದ ಜೊತೆ ನಾಲ್ಕಾರು ಜನ ಅಷ್ಟೆ. "ಎಲ್ಲಾ ಬಂದಾಯಿತು ಬಾಗಿಲು ಹಾಕಲೇ?" ನಿರ್ವಿಕಾರವಾಗಿ ಕೇಳಿದ. ಆ ಬೀದಿಯ ಹುಡುಗನ ಅಜ್ಜಿಯನ್ನು ತೆಗೆದುಕೊಂಡು ಹೋದರೋ, ಇಲ್ಲವೋ ತಿಳಿಯದು. ಕೆಂಪಾಂಬುಧಿ ಕೆರೆಯ ಬಳಿ ವಾಹನ ನಿಲ್ಲಿಸಿದ. ಯಾರೂ ಚೌಕಾಶಿ ಮಾಡಲಿಲ್ಲ. ಮಧ್ಯವಯಸ್ಸಿನವರೊಬ್ಬರು ಐದರ ನೋಟೊಂದನ್ನು ಅವನಿಗೆ ಭಕ್ಷೀಸು ಕೊಟ್ಟರು. ಆಫೀಸಿಗೆ ಸೇರುವ ಹಣ ಸೇರಿಹೋಗಿತ್ತು. ಇವರೂ ತಮಿಳಿನವರೇ. 'ವಣಕ್ಕಂ ಚಾರ್' ಎಂದು ಹೇಳಿ ವ್ಯಾನು ಹತ್ತಿ ಆಫೀಸಿಗೆ ವಾಪಸ್ಸು ಹೊರಡಿಸಿದ. ಇನ್ನ-

ಲ್ಲಿಗೆ ಹೋಗಬೇಕೋ ಏನೋ, ಈ ನಡುವೆ ನೈಟ್ ಷಿಫ್ಟ್ ಬರಲಿಲ್ಲ. ಕೈ ಬಿಸಿಯಾದರೆ ಅದನ್ನೆಲ್ಲಾ ಮ್ಯಾನೇಜರ್ ನೋಡಿಕೊಳ್ಳುತ್ತಾನೆ. ರಾತ್ರಿ ಕೆಲಸ ಬಹಳ ಬೇಜಾರು. ಅವನು ಏನೇನೋ ಯೋಚಿಸಿಕೊಳ್ಳುತ್ತಾ ಹೊಸದಾಗಿ ಮೊನ್ನೆ ಸೇರಿದ ಜಾಡಮಾಲಿ (ಅವಳ ಹೆಸರು ನಿಂಗಿಯೇ ಇರಬೇಕು). ಅವಳ ಪುಟಿಯುವ ಮೈಮಾಟವನ್ನೇ ಮೆಲುಕು ಹಾಕುತ್ತ, ವಾಪಸು ಬರುವಷ್ಟರಲ್ಲಿ ಆಫೀಸ್ ಕಂಪೌಂಡ್ ಬಂದೇ ಬಿಟ್ಟಿತು. ಗಾಡಿಯನ್ನು ನಿಲ್ಲಿಸಿ, ಗುಮಾಸ್ತರಿಗೆ ಲೆಕ್ಕ ಒಪ್ಪಿಸಿ, ಮೆಟ್ಟಿಲಿಳಿದು ಕೆಳಬಂದ. ಈಚೆಗೆ 'ಇವರೂ' ಒಂದು ಅಸೋಷಿಯೇಷನ್ ಮಾಡಿಕೊಂಡಿದ್ದಾರೆ, ಜವರಪ್ಪನೇ ಅದರ ನಾಯಕ. ಆತ ಸಂಬಳ, ಡಿ. ಎ. ಇದನ್ನು ಏರಿಸದೇ ಹಾಗೇ ಕಾಲ ಕಳೆಯುತ್ತಿರುವ ಅಧಿಕಾರಿಗಳನ್ನು ಹೇಗೆ ಮಟ್ಟ ಹಾಕಬಹುದು ಎಂಬ ಬಗ್ಗೆ ಜೋರಾಗಿ ಹೇಳುತ್ತಿದ್ದ. ವೇಲನಿಗೆ ಅವೆಲ್ಲಾ ತಿಳಿಯದು. ಅವನು ಹೇಳಿದಂತೆ ಕೇಳುವುದಷ್ಟೇ.

ಬೆಳಿಗ್ಗೆ ಸ್ವಲ್ಪ ಹಿಟ್ಟು, ಅನ್ನ-ಅದೂ ತಂಗಳಾದಾದದ್ದು- ಬಿಟ್ಟರೆ ಏನೂ ಇಲ್ಲ. ಹೊಟ್ಟೆ ತಾಳ ಹಾಕುತ್ತಿತ್ತು. ಐದು ರೂಪಾಯಿ ನೋಟು ಜೇಬಿನಲ್ಲಿ ಇಣುಕಿದರೂ, ತನ್ನ ಮನಸ್ಸನ್ನು ಹೋಟಲಿನೆಡೆಗೆ ಬಿಡಲಿಲ್ಲ. ಬುತ್ತಿ ತಂದಿದ್ದನಲ್ಲ. ಅದನ್ನೇ ಮರದ ಕೆಳಗೆ ತಿಂದು ನಲ್ಲಿಯಲ್ಲಿ ನೀರು ಕುಡಿದ. ಎರಡು ಬೀಡಿಯನ್ನು 'ಬಾರಿಸಿದ'. ನಿಂಗಿಯೂ ಇನ್ನೊಂದೆಡೆ ಊಟಕ್ಕೆ ಕುಳಿತಿದ್ದಳು. ಮನಸ್ಸು ಬೇಡವೆಂದರೂ, ಅವನು ಅವಳನ್ನು ತನ್ನ ಹೆಂಡತಿಯೊಂದಿಗೆ ಹೋಲಿಸಿದ. ತನ್ನವಳು ಗುಣದಲ್ಲಿ ಚಿನ್ನ. ರೂಪ ಅಷ್ಟಕ್ಕಷ್ಟೆ. ಇವಳು ರಸ ತುಂಬಿದವಳು. ಸ್ವಲ್ಪ 'ಹಾಗೆ' ಅಂತೆ, ಒಂದಿಬ್ಬರು ಹೇಳಿದರು ಕೂಡ. ಜಾನ್ ಒಂದು ಛಾನ್ಸ್ ಕೂಡ ನೋಡಿದ್ದಾನಂತೆ. ಥೂ! ಇಂಥ ಯೋಚನೆ ನಾಲ್ಕು ಮಕ್ಕಳ ತಂದೆಯಾದ ತನಗೆ ಬರಬಾರದಿತ್ತು ಎಂದು ಹೆಜ್ಜೆ ಹಾಕಿದ. ಆದರೂ, ಅವನಿಗೆ ಅವಳ ರೂಪವನ್ನು ಮನಸ್ಸಿನಿಂದ ತೊಡೆದು ಹಾಕಲಾಗಲಿಲ್ಲ. ಬಿಸಿಲು ಕಡಿಮೆಯಾಗಿ ಗಾಳಿ ಬೀಸಿ, ಮೋಡಗಳು ಕತ್ತಲೆ ಮಾಡಿದುವು. ಮಳೆ ಇನ್ನು ಸ್ವಲ್ಪ ಹೊತ್ತಿನಲ್ಲೇ ಬರಬಹುದೇನೋ ಎಂದುಕೊಳ್ಳುವಷ್ಟರಲ್ಲಿ ಬಂದೇಬಿಟ್ಟಿತು. ಷೆಡ್ಡಿನ ಒಳಗೆ ಹೋಗಿ ಕುಳಿತ. ಮುನಿಯನೂ ಆ ಛಳಿಯಲ್ಲಿ ಅವಳ ಮಾತನ್ನೇ ಹೇಳತೊಡಗಿದಾಗ ಛಳಿ ಇನ್ನೂ ಹೆಚ್ಚಾದಂತೆನಿಸಿತು. ಥೂ! ಇದ್ಯಾವ ದರಿದ್ರ ಕೆಲಸಕ್ಕೆ ಸೇರಿಕೊಂಡೆ? ಬಸ್ಸಿನಲ್ಲಿ ಸೇರಿದ್ದರಾದರೂ ಆಗಾಗ ಕಣ್ಣಿಗೆ ತಂಪು, ನೆಮ್ಮದಿ. ಇಲ್ಲೇನಿದೆ? ಬರೇ ಹೆಣಗಳನ್ನು, ಸೊರಗಿದ ಅವುಗಳ ಬಳಗವನ್ನು ನೋಡುತ್ತಿರಬೇಕಷ್ಟೇ. "ನಮ್ಮನ್ಯಾಗಿವ್ರಿಗೆ ಮೈಗೆ ನೆಟ್ಟಗಿಲ್ಲ, ರಜಾವಾದ್ರೂ ಇದ್ರೆ ಮದ್ ತಕ್ಕೊಂಡು ಓಗ್ಬಾದಿತ್ತು" ಎಂದು ಇನ್ನೊಬ್ಬ ಹೇಳಿದಾಗ ಅವನಿಗೂ ಮನೆಯಲ್ಲಿ ಚಿಕ್ಕ ಮಗುವಿನ ಜ್ವರದ ನೆನಪಾಯ್ತು. 'ವರ್ಷವೂ ಆಗಿಲ್ಲ ಅದಕ್ಕೆ. ಆಗಲೇ ಮತ್ತೆ ಅವಳಿಗೆ ತಿಂಗಳು ತಪ್ಪಿದೆ. ಎಲ್ಲಾ ದೇವರಿಚ್ಛೆ. ಸದ್ಯ ತನಗೆ ಎಲ್ಲಾ ಗಂಡೈಕಳೇ ಇನ್ನೂ ಒಂದು ಎಣ್ಣಾಗಲಿ.' ಎಂದುಕೊಂಡು ಮತ್ತೆ ಹೊಗೆ ಸೊಪ್ಪು ಹಾಕತೊಡಗಿದ.

ಮಲ್ಲೇಶ್ವರದ ಕಡೆಯಿಂದಲೇ ಬಂದ ಮುರುಗ ಹೇಳಿದ. "ಆವಮ್ಮನ್ ಕಳ್ಸಿ ಬರಾವತ್ಗೆ ಕಣ್ ಗುಡ್ಡು ಬೆಳ್ಗಾಗೋಯ್ತಪ್ಪೋ, ಬೇವಾರ್ಸಿ ಜನಾ ಎಲ್ಡ್ ರೂಪಾಯ್ ಕೊಡಾದಕ್ಕೆ ಬಾಯ್ಬುಡ್ತಾರೆ. ಒತ್ನಾಗೆ ಓಗಾಕಿಲ್ವಾ' ಎಂದು ಬೈದ. ಆ ಅಜ್ಜಿಯನ್ನು ಕಳಿಸಿ ಬಂದಿರಬೇಕು. ಎಲ್ಲಾ ಒಂದೇ ರೀತಿ ಇರುವುದಿಲ್ಲ. ಇದೆಲ್ಲಾ ಮಾಮೂಲು ಅವನಿಗೆ. "ಏನ್ಕಣಣ್ಣೋ ಯಾವ್ ಕೇಸು ಇಲ್ವಾ ನಿಂಗೆ? ಆರಾಮು' ಎನ್ನುವಷ್ಟರಲ್ಲಿಯೇ. ಜಯನಗರದ ಸೌತ್ ಎಂಡ್‌ಗೆ ಹೋಗಬೇಕೆಂದು ತಿಳಿಯಿತು. ಮಳೆಯೂ ನಿಂತಿತ್ತು. ಆ ಮನೆಯೂ ಸುಲಭವಾಗಿ ಸಿಕ್ಕಿತು. ಮನೆಯ ಮುಂದೆ ಹಾಕಿದ್ದ ಚಪ್ಪರದ ಹತ್ತಿರವೇ ಗಾಡಿ ನಿಲ್ಲಿಸಿ ಮನೆಯವರೆಗೆ ತನ್ನ ಬರವನ್ನು ತಿಳಿಸಿದ.

ಆವನ ಕಡೆ ಯಾರಿಗೂ ಗಮನವೇ ಇಲ್ಲ. ವಿಪರೀತ ಅಳುತ್ತಿದ್ದಾರೆ. ಇನ್ನು ಇವರು ಬೇಗ್ಗೆಲೇ ಹೊರಡುವುದಿಲ್ಲ ಎಂದುಕೊಂಡು ಗಾಡಿಯಲ್ಲಿ ಸೀಟಿನ ಮೇಲೆ ಕುಳಿತು ಜೇಬಿನಲ್ಲಿ ಜೋಪಾನವಾಗಿಟ್ಟುಕೊಂಡಿದ್ದ ಸಿಗರೇಟೊಂದನ್ನು ಸೇದ ತೊಡಗಿದ. ಜನಗಳು ಬರುತ್ತಲೇ ಇದ್ದಾರೆ. ಬಹುಶಃ ಹುಡುಗ–ಹುಡುಗಿಯರ ಕಡೆ ಹಿರಿಯರಾರೋ ಗೊಟಕ್ ಎಂದಿರಬೇಕು. ಯುವಕನೊಬ್ಬ ಬಂದು, "ಇನ್ನೂ ಸ್ವಲ್ಪ ಲೇಟಾಗ್ತದೆ. ಕಾಫಿ ಕುಡಿ" ಎಂದು ಎಂಟಾಣೆಯನ್ನು ಕೊಟ್ಟ. ಪಕ್ಕದ ಗಲ್ಲಿಗೆ ಹೋಗಿ ಟೀ ಕುಡಿದು, ಕ್ಷೌರದಂಗಡಿಯ ಮುಂದಿನ ವಾಲ್‌ಪೋಸ್ಟ್ ನೋಡಿ ಬಂದಮೇಲೂ ಯಾವ ಬದಲಾವಣೆಯೂ ಆಗಿರಲಿಲ್ಲ. ಹತ್ತು ನಿಮಿಷಗಳಾದ ಮೇಲೆ ಎಲ್ಲಾ ಸಿದ್ಧವಾಯಿತು. ಒಳಗೆ ತಂದು ಹಾಕಲಿ ಆಮೇಲೆ ಸೀಟಿನಲ್ಲಿ ಕುಳಿತರಾಯಿತು ಎಂದುಕೊಂಡು ಬಾಗಿಲಿಗೊರಗಿ ನಿಂತ. ಅಳು, ಚೀರಾಟ ನಡೆದೇ ಇತ್ತು. ಯಾಕ್ ಇಂಗೆ ಬಡ್ಕತ್ತಾರೆ? ಹ್ವಾದವ್ರು ಬತ್ತಾರಾ?' ಎಂದು ರಸ್ತೆ ಚರಂಡಿಗೆ ಥೂಪ್ ಎಂದು ಉಗಿದು ಸರಕ್ಕನೆ ಸೀಟಿನಲ್ಲಿ ಕುಳಿತು ಹಾರ್ನ್‌ಮಾಡಿ ಹೇಳಿದ, 'ನಾನು ನೋಡ್ತಾ ಇವ್ನಿ. ಬಂದು ಒಂದ್ ಗಂಟ್ಯಾತು. ನಮ್ಗೇನು ಇದೊಂದೇ ಕೇಸಾ ಇರಾದು.

ಲೇಟಾಗಿ ಬಂದ್ರೆ ಮಾತ್ರ ಬೊಯ್ತೀರಿ ಎಂದು ಸಿಡುಕಿದ. ಇವನ ಮಾತನ್ನು ಯಾರೂ ಕೇಳಿಸಿಕೊಳ್ಳಲಿಲ್ಲ. ಕೊನೆಗೆ ಇಬ್ಬರು ಮಧ್ಯ ವಯಸ್ಸಿನವರು, ಇಬ್ಬರು ಹಿರಿಯರು ದೇಹವನ್ನು ಒಳಗೆ ಹಾಕಿದರು. ಮದುವೆ ಹುಡುಗಿಯ ತಾಯಿ ಒಂದೇ ಸಮನೆ ಅಳುತ್ತಿದ್ದಳು, "ಅಯ್ಯೋ ಹೋದ್ಯಲ್ಲೇ, ಇನ್ನೂ ಬಿಪಾಸೂ ತೆಗೆದಿಲ್ವಲ್ಲೆ!" ಆಕೆ ಹುಚ್ಚಿಯಂತೆ ಎದೆ ಬಡಿದುಕೊಳ್ಳುತ್ತಿದ್ದಳು. ಹುಡುಗನೇ ಇರಬೇಕು–ಕಲ್ಲಿನಂತೆ ನಿಶ್ಚಲನಾಗಿ ನಿಂತಿದ್ದ. ವೇಲಾಯುಧ ಗಾಡಿ ಸ್ಟಾರ್ಟ್ ಮಾಡುವಾಗ ಎಲ್ಲರೂ ಬಂದಿದ್ದಾರೆಯೋ, ಬಾಗಿಲು ಹಾಕಿದೆಯೋ ಎಂದು ಹಿಂತಿರುಗಿ ನೋಡುವಾಗ ಅವನ ಕಣ್ಣಲ್ಲೂ ನೀರಾಡಿತು. ✡



ದರ್ಶನ

ಕಾಣದ ಕಾಲ ಕಾಲ್ಮೇಲೆ ನಿಂತು.
ವರ್ತಮಾನದೊಳಿದ್ದೂ......
ಭವಿಷ್ಯದಲ್ಲಿ ವಾಸಿಸಿ,
ಮತ್ತೆಲ್ಲವನ್ನೂ–
ಶೂನ್ಯಕ್ಕೆ ಸರಿಸುವ
ಸಮಗ್ರತೆಯ
ಸತ್ಯ ಭೂತವ ಕಂಡೆ!

–ಶ್ರೀಜವ್ವಾ



ಹೀಗಿದ್ದನು ನಮ್ಮ ಚಟ್ಟೋ!

ಮೂಲ : ಮನ್ಮಥನಾಥ ಗುಪ್ತ
ಕನ್ನಡಕ್ಕೆ : ಹ. ರಾಮಕೃಷ್ಣ ಶಾಸ್ತ್ರಿ

ಜವಾಹರಲಾಲ ನೆಹರೂರವರು ತಮ್ಮ ಆತ್ಮ-ಕಥೆಯಲ್ಲಿ ವಿದೇಶದಲ್ಲಿ ನೆಲೆಸಿದ್ದ ಭಾರತೀಯ ಕ್ರಾಂತಿಕಾರಿಗಳ ಬಗೆಗೆ ಒಂದು ಪೂರ್ಣ ಅಧ್ಯಾಯವನ್ನೇ ಮೀಸಲಾಗಿರಿಸಿದ್ದಾರೆ. ಆದರೆ ಅವರಲ್ಲಿ ಕೇವಲ ಇಬ್ಬರು ಕ್ರಾಂತಿಕಾರಿಗಳು ಮಾತ್ರ ಅವರನ್ನು ಬಹುವಾಗಿ ಆಕರ್ಷಿಸಿದ್ದಾರೆ, ಅವರಲ್ಲೊಬ್ಬರು ನರೇಂದ್ರ ಭಟ್ಟಾಚಾರ್ಯ (ಮುಂದೆ ಮಾನವೇಂದ್ರನಾಥ ರಾಯ್ ಎಂದು ಪ್ರಸಿದ್ಧರಾದವರು) ಮತ್ತೊಬ್ಬರು ವೀರೇಂದ್ರ ಚಟ್ಟೋಪಾಧ್ಯಾಯ.

ವೀರೇಂದ್ರ ಚಟ್ಟೋಪಾಧ್ಯಾಯರ ಬಗೆಗೆ ಅದರಲ್ಲಿ ಉಲ್ಲೇಖಿಸಿರುವುದು ಹೀಗೆ:

"ಭಾರತದ ಒಂದು ಪ್ರಸಿದ್ಧ ಕುಟುಂಬದಲ್ಲಿ ಜನಿಸಿದ ವೀರೇಂದ್ರ ಚಟ್ಟೋಪಾಧ್ಯಾಯರು ಇತರರಿಗಿಂತ ಭಿನ್ನರಾದ ವ್ಯಕ್ತಿಯಾಗಿದ್ದರು; ಜನರು ಅವರನ್ನು ಪ್ರೀತಿಯಿಂದ 'ಚಟ್ಟೋ' ಎಂದು ಕರೆಯುತ್ತಿದ್ದರು. ಪ್ರಸಿದ್ಧ ಕುಟುಂಬದಲ್ಲಿ ಹುಟ್ಟಿದ್ದರೂ ಬಡತನ ಅವರ ಬೆನ್ನು ಬಿಟ್ಟಿರಲಿಲ್ಲ. ಹೀಗಾಗಿ ಅವರು ಯಾವಾಗಲೂ ಜೀರ್ಣಾತಿಜೀರ್ಣವಾದ ಉಡುಪುಗಳನ್ನು ಧರಿಸಬೇಕಾಗುತ್ತಿತ್ತು. ಹೊತ್ತಿನ ತುತ್ತಿಗಾಗಿಯೂ ತಾಪತ್ರಯಪಡಬೇಕಾದ ಪರಿಸ್ಥಿತಿಯಿತ್ತು. ಹೀಗಿದ್ದರೂ ಅವರು ಸದಾಕಾಲ ಧಾರಾಳಿಯಂತೆ ವರ್ತಿಸುತ್ತಿದ್ದರು. ಉತ್ಸಾಹದ ಚಿಲುಮೆಯಾಗಿದ್ದರು. ಅವರ ಬಡತನವೇನೂ ವಿದ್ಯಾಭ್ಯಾಸಕ್ಕೆ ಅಡ್ಡ ಬರಲಿಲ್ಲ. ನಾನು ಹ್ಯಾರೋ ಶಾಲೆಗೆ ಸೇರುವ ವೇಳೆಗೆ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಇಂಗ್ಲೆಂಡಿಗೆ ಹೋದ ಚಟ್ಟೋ ಭಾರತಕ್ಕೆ ಹಿಂದಿರುಗಲಿಲ್ಲ. ಆದರೆ ಯಾವಾಗಲೂ ಸ್ವದೇಶದ ನೆನಪು ಅವರನ್ನು ಕಾಡುತ್ತಿತ್ತು.

"ವಿದೇಶದಲ್ಲಿ ನೆಲಸಿರುವ ಅನೇಕ ಕ್ರಾಂತಿಕಾರಿಗಳು ನನ್ನ ಗಮನಕ್ಕೆ ಬಂದಿದ್ದಾರೆ. ಆದರೆ ಅವರಲ್ಲಿ ಹೆಚ್ಚಿನವರು ನನ್ನ ಮೇಲೆ ಯಾವುದೇ ಪ್ರಭಾವವನ್ನು ಬೀರಲಿಲ್ಲ. ನಾನು ಅವರ ತ್ಯಾಗವನ್ನು ಪ್ರಶಂಸಿಸಿದ್ದೇನೆ; ಅವರ ಕಷ್ಟನಷ್ಟಗಳಿಗಾಗಿ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದೇನೆ. ಆದರೆ ನನಗೆ ಬಹುವಾಗಿ ಮೆಚ್ಚಿಗೆಯಾದವರಲ್ಲಿ ಅತೀ ಕಡಿಮೆ ಜನ. ವಿದೇಶದಲ್ಲಿ ನೆಲಸಿರುವ ಇಬ್ಬರು ಕ್ರಾಂತಿಕಾರಿಗಳು ಮಾತ್ರ ನನಗೆ ಹಿಡಿಸುತ್ತಾರೆ. ಒಬ್ಬರು ಎಂ. ಎನ್. ರಾಯ್, ಇನ್ನೊಬ್ಬರು ವೀರೇಂದ್ರ ಚಟ್ಟೋಪಾಧ್ಯಾಯ. ಇವರಿಬ್ಬರು ಬೌದ್ಧಿಕವಾಗಿಯೂ ನನ್ನ ಮೇಲೆ ಪರಿಣಾಮ ಬೀರಿದರು."

ಜವಾಹರಲಾಲ ನೆಹರೂ ವೀರೇಂದ್ರರಿಂದ ಪ್ರಭಾವಿತರಾದುದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ವೀರೇಂದ್ರರ ವ್ಯಕ್ತಿತ್ವ ಬಹಳ ಹರಿತವಾಗಿತ್ತು. ಅವರು ಮೇಲ್ಮಟ್ಟದ ವಿದ್ವಾಂಸರಾಗಿದ್ದರು. ಸ್ಟಾಲಿನ್ನನಂತಹ ಕ್ರಾಂತಿಕಾರಿ-

ಗಳೊಂದಿಗೆ ಅವರಿಗೆ ನಿಕಟವಾದ ಸಂಬಂಧ-ವಿತ್ತು.

ವೀರೇಂದ್ರನಾಥರ ತಂದೆಯ ಹೆಸರು ಅಘೋರನಾಥ ಚಟ್ಟೋಪಾಧ್ಯಾಯ. ಮೂಲತಃ ಅವರು ಡಾಕಾ ಜಿಲ್ಲೆಯ ತಾರಾಪಾಶಾದ ಲೋಹಗಂಜ್ ನಿಲ್ದಾಣದ ಬಳಿಯ ಬ್ರಾಹ್ಮಣರ ಅಗ್ರಹಾರದಲ್ಲಿ ನೆಲಸಿದ್ದರು. ಅವರ ಜನ್ಮ ಸ್ಥಳವಿಂದು ಈಗ ಪದ್ಮಾ ನದಿಯ ಪ್ರವಾಹದಿಂದಾಗಿ ಅಳಿದುಹೋಗಿದೆ. ಅಘೋರನಾಥರು ಕಳೆದ ಶತಮಾನ ಕೊನೆಗೊಳ್ಳುತ್ತಿರುವಾಗ ಸ್ವಿಜರ್ಲಂಡಿನ ಜ್ಯೂರಿಚ್ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾತ್ಮಕ ಪ್ರಬಂಧಗಳನ್ನು ಬರೆದು, ಡಾಕ್ಟರೇಟ್ ಸಂಪಾದಿಸಿದ್ದರು. ಬಹಳ ವರ್ಷಗಳ ವರೆಗೆ ಅವರು ಹೈದರಾಬಾದಿನ ಉಸ್ಮಾನಿಯಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಒಬ್ಬ ಋಷಿಸಮಾನ ವ್ಯಕ್ತಿಯಾಗಿದ್ದ ಅವರು ನೋಡಲೂ ಋಷಿಯಂತೆಯೇ ಇದ್ದರು. ವೀರೇಂದ್ರರ ತಾಯಿ ವರದಸುಂದರೀದೇವಿ ಒಳ್ಳೆಯ ಲೇಖಕಿಯೂ ಗಾಯಕಿಯೂ ಆಗಿದ್ದರು.

ಈ ದಂಪತಿಗಳ ಎಲ್ಲಾ ಮಕ್ಕಳೂ—ವೀರೇಂದ್ರನಾಥ, ಸರೋಜಿನಿ (ಮುಂದೆ 'ನಾಯ್ಡು' ಆದವರು), ಹರೀಂದ್ರನಾಥ ಮತ್ತು ಮೃಣಾಲಿನಿ—ಮುಂದೆ ಪ್ರಸಿದ್ಧರಾದರು. ವೀರೇಂದ್ರರು ಎಲ್ಲರಿಗಿಂತ ಹಿರಿಯರೂ ಪ್ರತಿಭಾಶಾಲಿಗಳೂ ಆಗಿದ್ದರು.

ವೀರೇಂದ್ರರು ೧೯೦೩ ರಲ್ಲಿ ಬಿ. ಎ. ಪಾಸು ಮಾಡಿದ ಬಳಿಕ ಇಂಗ್ಲಂಡಿಗೆ ಹೋದರು. ಅಲ್ಲಿ ಅವರು ಐ. ಸಿ. ಎಸ್. ಪರೀಕ್ಷೆಗೆ ಕುಳಿತರಾದರೂ ಅವರು ಮನಸ್ಸು ಇನ್ನೆಲ್ಲಿಯೋ ವಿಹರಿಸುತ್ತಿದ್ದುದರಿಂದ ಅವರೂ ಪರೀಕ್ಷೆಯಲ್ಲಿ ಪಾಸು ಮಾಡಲಾಗಲಿಲ್ಲ. ಅನಂತರ ಅವರು ಮಿಡ್ಲ್ ಟೆಂಪಲ್‌ನಲ್ಲಿ ಬ್ಯಾರಿಸ್ಟರ್ ಪದವಿಗಾಗಿ ಓದಲಾರಂಭಿಸಿದರು ಅವರಿಗೆ ಇದರಲ್ಲಿಯೂ ಸೋಲುಂಟಾಗಿ ಅವರು ಓದಿಗೆ ಶರಣು ಹೊಡೆದರು. ಸುಪ್ರಸಿದ್ಧ ಕ್ರಾಂತಿಕಾರಿಗಳಾದ ವಿನಾಯಕ ದಾಮೋದರ ಸಾವರಕರರು ಇಂಗ್ಲಂಡಿಗೆ ಕಾಲಿಟ್ಟುದು ೧೯೦೬ ರಲ್ಲಿ. ಶ್ಯಾಮಜಿ ಕೃಷ್ಣವರ್ಮ, ಮೇಡಂ ಕಾಮಾ, ಮದನಲಾಲ ದಿಂಗ್ರಾ, ತ್ರಿಮೂಲ ಆಚಾರಿಯ—ಮೊದಲಾಗಿ ಅಲ್ಲಿ ನೆಲೆಗೂಡಿದ್ದು ಅನಂತರ ಮಹಾಪುರುಷರಲ್ಲೂ ಕ್ರಮೇಣವಾಗಿ ಒಂದಾದರು. ಶ್ಯಾಮಜಿ ಕೃಷ್ಣವರ್ಮರು ಲಂಡನ್ನಿನಲ್ಲಿ 'ಇಂಡಿಯಾ ಹೌಸ'ನ್ನು ಸ್ಥಾಪಿಸಿದರು. ಅವರ 'ಇಂಡಿಯಾ ಸೋಷಿಯಾಲಜಿಸ್ಟ್' ಪತ್ರಿಕೆ ಕ್ರಾಂತಿಯ ಕಹಳೆಯನ್ನು ಮೊಳಗಿಸುತ್ತಿತ್ತು, ಸಾವರಕರರು ಇಂಡಿಯಾ ಹೌಸಿನಲ್ಲಿ ೧೮೫೭ರ ಕ್ರಾಂತಿಯ ದಿವಸವನ್ನು ಸ್ವಾತಂತ್ರ್ಯ ಸಂಗ್ರಾಮದ ದಿನಾಚರಣೆಯೆಂದು ಆಚರಿಸುತ್ತಿದ್ದರು.

ವೀರೇಂದ್ರರು ಇಂಗ್ಲೀಷನ್ನಲ್ಲದೆ ಹಿಂದಿ ಮತ್ತು ಉರ್ದುವನ್ನೊಳಗೊಂಡು ಭಾರತದ ಹಲವು ಭಾಷೆಗಳನ್ನು ಅರಿತಿದ್ದರು; ಇದಲ್ಲದೆ ಅರಬಿ, ಪಾರ್ಸಿ ಮತ್ತು ಫ್ರೆಂಚ್ ಭಾಷೆಗಳೂ ಅವರಿಗೆ ಕರತಲಾಮಲಕವಾಗಿದ್ದವು ಆದಕಾರಣ ಮೇಡಂ ಕಾಮಾ, ಶ್ಯಾಮಜಿ ಕೃಷ್ಣವರ್ಮ ಮತ್ತು ಸಾವರಕರರು ಪ್ರಚಾರ ಪತ್ರಗಳನ್ನು ತಯಾರಿಸುವ ಜವಾಬ್ದಾರಿಯನ್ನು ಅವರಿಗೇ ವಹಿಸಿಕೊಟ್ಟರು.

ಹೈದರಾಬಾದಿನ ದೇಶಿ ಸಂಸ್ಥಾನದಲ್ಲಿ ವೀರೇಂದ್ರರ ತಂದೆ ತುಂಬ ಪ್ರತಿಷ್ಠಿತ ವ್ಯಕ್ತಿಯಾಗಿದ್ದರು. ಅವರು ಅಲ್ಲಿ ಎಷ್ಟು ಪ್ರಭಾವಶಾಲಿಯಾದ ವ್ಯಕ್ತಿಯಾಗಿದ್ದರೆಂದರೆ ನಿಜಾಮನ ಅಂತಃಪುರವನ್ನು ಅವರು ಪ್ರವೇಶಿಸಬಹುದಿತ್ತು. ಇದರ ಲಾಭ ಪಡೆದ ವೀರೇಂದ್ರರು ಅಲ್ಲಿ ಖಡ್ಗ, ಭರ್ಜಿ ಮತ್ತು ಬಂದೂಕುಗಳನ್ನು ಉಪಯೋಗಿಸುವ ವಿದ್ಯೆಯನ್ನು ಕಲಿತಿದ್ದರು. ಲಂಡನ್ನಿಗೆ ಬಂದ ಮೇಲೆ ಕ್ರಾಂತಿಕಾರಿ ಯುವಕರಿಗೆ, ಅದರಲ್ಲಿ ತರಬೇತಿ ನೀಡುತ್ತಿದ್ದರು. ಇದರೊಂದಿಗೆ 'ಇಂಡಿಯನ್ ಸೋಷಿಯಾಲಜಿಸ್ಟ್' ಕೆಲಸವನ್ನೂ ನಿರ್ವಹಿಸುತ್ತಿದ್ದರು.

ಈ ಪತ್ರಿಕೆ ಕ್ರಾಂತಿಯ ಪ್ರಚಾರವನ್ನು ಎಷ್ಟು ನಿರ್ಭಯವಾಗಿ ಮಾಡಿತ್ತೆಂಬುದಕ್ಕೆ ರೌಲಟ್ ಕಾಯಿದೆಯ ಬಗೆಗೆ ೧೯೦೭ರಲ್ಲಿ ಅದು ಬರೆದದ್ದೇ ಸಾಕ್ಷಿ:

"ಭಾರತದಲ್ಲಿ ಯಾವುದೇ ಬಗೆಯ ಆಂದೋಲನ ನಡೆಸುವುದೂ ಅಪರಾಧವಾಗಿದೆ. ಇಂಗ್ಲೀ-

ಷರ ಕಾನೂನೆಂದರೆ ಜನ ಹೆದರಿ ನಡುಗುತ್ತಿದ್ದಾರೆ. ರಶಿಯದಂತಯೇ ಇದು ಸರಕಾರದ ನಿರಂತರ ಉಪಯೋಗಕ್ಕಾಗಿ ತಂದಿರುವ ಕಾಯಿದೆ. ಇದರ ಬಳಕೆಯಿಂದ ಅವರು ಯಾವ ರೀತಿ ನಮ್ಮನ್ನು ಶಿಕ್ಷಿಸಿದರೂ ಕೇಳುವಂತಿಲ್ಲ. ಈ ಅಧಿಕಾರಶಾಹಿಯಿಂದ ಭಾರತೀಯರ ಪರಿಸ್ಥಿತಿ ಅಸಹನೀಯವಾಗಿದೆ."

'ಇಂಡಿಯನ್ ಸೋಶಿಯಾಲಜಿಸ್ಟ್' ನೊಂದಿಗೆ ಅನೇಕ ತರುಣರ ಸಂಬಂಧವಿಟ್ಟುಕೊಂಡ ಶ್ಯಾಮಜಿ ಕೃಷ್ಣವರ್ಮರ ನಂತರದ ಸ್ಥಾನ ಸಾವರಕರ್ ಮತ್ತು ವೀರೇಂದ್ರರಿಗೆ ಲಭಿಸಿತು. ಡಾ. ಅವಿನಾಶ ಭಟ್ಟಾಚಾರ್ಯರು ಹೇಳುವ ಹಾಗೆ ಪ್ರಬಂಧಗಳು 'ಲಂಡನ್ ಟಾಯಿಮ್ಸ್' 'ಡೈಲಿ ಮೇಲ್' ನಂತಹ ಪ್ರಬುದ್ಧ ಪತ್ರಿಕೆಗಳಲ್ಲಿ ಪ್ರಕಟವಾಗುವಷ್ಟು ಇಂಗ್ಲೀಷ್ ಭಾಷೆಯ ಮೇಲೆ ಪ್ರಭುತ್ವ ವಿರೇಂದ್ರರಿಗಿತ್ತು.

ಅವರು ಬ್ರಿಟಿಶ್ ಸಾಮ್ರಾಜ್ಯವಾದಿಗಳ ವಿರುದ್ಧ ಸಂಗ್ರಾಮವನ್ನು ಕೈಗೊಂಡಿದ್ದರು. ಆದರೆ ಅದಕ್ಕಾಗಿ ಭಾರತದ ಸ್ವಾತಂತ್ರ್ಯಯೋಧರು ಇನ್ನೊಂದು ಪರಾಧೀನ ದೇಶದ ಸ್ವಾತಂತ್ರ್ಯಯೋಧರ ಜೊತೆ ಸೇರಿ ಕೆಲಸ ಮಾಡುವುದು ಅವಶ್ಯವಾಗಿತ್ತು. ಇಜಿಪ್ಟಿನ ಜನರು ಭಾರತೀಯರಂತೆಯೇ ಇಂಗ್ಲೀಷರ ಬಿಗಿ ಮುಷ್ಟಿಯಿಂದ ಹೊರಬರಲಾಗದೆ ತೊಳಲಾಡುತ್ತಿದ್ದರು. ಅವರ ಮುಕ್ತಿಗಾಗಿ ಪ್ರಯತ್ನಿಸಲೆಂದೋ ಏನೋ, ೧೯೦೭ ರಲ್ಲಿ ಇಜಿಪ್ಟಿನ ನಾಯಕ ಕಮಾಲ್ ಪಾಶಾ ಲಂಡನ್ನಿಗೆ ಆಗಮಿಸಿದರು. ವೀರೇಂದ್ರ ಚಟ್ಟೋಪಾಧ್ಯಾಯರು ಮೇಡಂ ಕಾಮಾರ ಜೊತೆಗೆ ಅವರನ್ನು ಭೆಟ್ಟಿ ಮಾಡಲು ತೆರಳಿದರು. ಆದರೆ ಅವರನ್ನು ಏಕಾಂತದಲ್ಲಿ ಸಂಧಿಸಿ ಮಾತನಾಡುವಾಗಲೂ ಕಮಾಲ್ ಪಾಶಾ ಅವರಿಗೆ ವೀರೇಂದ್ರರ ಮೇಲೆ ಪೂರ್ಣ ವಿಶ್ವಾಸವಿರಲಿಲ್ಲ. ಸರಕಾರಿ ಗೂಢಚಾರರು ಬೇರೆ ಬೇರೆ ವೇಷ ಧರಿಸಿ ಸರಕಾರ ವಿರೋಧಿ ಕೃತ್ಯಗಳಲ್ಲಿ ತೊಡಗಿದವರನ್ನು ಪತ್ತೆ ಹಚ್ಚುತ್ತಿದ್ದುದೇ ಇದಕ್ಕೆ ಕಾರಣವಾಗಿರಬೇಕು.

ವೀರೇಂದ್ರರು ಇಷ್ಟಕ್ಕೆ ಸುಮ್ಮನೆ ಕೂಡಲಿಲ್ಲ. ಐರಿಷ್ ಸ್ವಾತಂತ್ರ್ಯಯೋಧರ ಧುರೀಣರಾಗಿದ್ದ ಓಡೊನೆಲ್ ಅವರ ಶಿಫಾರಸು ಪತ್ರದೊಂದಿಗೆ ಮತ್ತೆ ಕಮಾಲ್ ಪಾಶಾರ ಬಳಿಗೆ ಹೋದಾಗ ಅವರ ಸಂದೇಹವು ದೂರವಾಗಿ ವೀರೇಂದ್ರರೊಡನೆ ಮುಕ್ತ ಮನಸ್ಸಿನಿಂದ ಮಾತಾಡಲು ಸಿದ್ಧರಾದರು. ಅನಂತರ ವೀರೇಂದ್ರರು ಅವರೊಂದಿಗೆ ಅಂತಾರಾಷ್ಟ್ರೀಯವಾಗಿ ಹೋರಾಡುವ ಯೋಜನೆಯನ್ನು ಹಾಕಿಕೊಂಡು ಅದು ಕಾರ್ಯಗತವಾಗಲು ಪರಿಶ್ರಮಿಸಿದರು.

ನಿಧಾನವಾಗಿ ಇಜಿಪ್ಟಿನ ಕ್ರಾಂತಿಕಾರಿಗಳ ಮೇಲೆ ವೀರೇಂದ್ರರ ವರ್ಚಸ್ಸು ಗಾಢವಾಗಿ ನೆಲೆಯೂರಿತು. ಆ ದಿನಗಳಲ್ಲಿ ಖದೀವ್ ಮತ್ತು ಫರೀದ್‌ಬೆ ಎಂಬ ಕ್ರಾಂತಿಕಾರಿ ತಂಡಗಳು ತಮ್ಮೊಳಗೆ ಹೊಡೆದಾಡುತ್ತಿದ್ದುವು. ವೀರೇಂದ್ರರು ಎರಡು ತಂಡಗಳೊಂದಿಗೆ ಶಾಂತಿ ಸಂಧಾನ ನಡೆಸಿ, ಹೋರಾಟವನ್ನು ಕೂಡಿಗೊಳಿಸಿ ಎಲ್ಲರೂ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡುವಂತೆ ಪ್ರೇರಿಸಿದರು.

ಡಾ. ಅವಿನಾಶ ಭಟ್ಟಾಚಾರ್ಯರು ಈ ವಿಷಯದಲ್ಲಿ ಹೀಗೆ ಬರೆದಿದ್ದಾರೆ:

"ಅನಂತರ ೧೯೧೩ ರ ಡಿಸೆಂಬರ್‌ನಲ್ಲಿ ಫರೀದ್‌ಬೆ ಬರ್ಲಿನ್‌ಗೆ ಬಂದರು. ನಾವು ಭಾರತೀಯ ರಾಷ್ಟ್ರವಾದಿಗಳು ಅವರೊಂದಿಗೆ ಸೇರಿ ಭಾರತ ಮತ್ತು ಇಜಿಪ್ಟಿನ ಸಮಸ್ಯೆಗಳನ್ನು ಚರ್ಚಿಸಿದೆವು ಆಗ ಫರೀದ್‌ಬೆ ಅವರು, 'ನಾನು ಈ ಸಮಸ್ಯೆಗಳ ಬಗೆಗೆ ಕೆಲವು ತಿಂಗಳ ಹಿಂದೆಯೇ ಮೇಡಂ ಕಾಮಾ ಮತ್ತು ಚಟ್ಟೋಪಾಧ್ಯಾಯರೊಂದಿಗೆ ವಿಸ್ತೃತವಾಗಿ ಚರ್ಚಿಸಿದ್ದೆ' ಎಂದು ಹೇಳಿದವರಲ್ಲದೆ ತಾವು ಫ್ರೆಂಚ್ ಭಾಷೆಯಲ್ಲಿ ಬರೆದಿದ್ದ ದಿನಚರಿಯಿಂದ ಈ ಚರ್ಚೆಯ ಕೆಲವಂಶವನ್ನು ಉದ್ಧೃತಗೊಳಿಸಿದರು. ನಮ್ಮ ತಂಡದ ವಿಷ್ಣು ಸುಖಟಣಕರ್ ಅದರ ಸಾರಾಂಶವನ್ನು ಜರ್ಮನ್ ಭಾಷೆಗೆ ತರ್ಜುಮೆಗೊಳಿಸಿ ನಮಗೆಲ್ಲಾ ಹೇಳಿದರು. ಆಗ ಫರೀದ್‌ಬೆ ಚಟ್ಟೋಪಾಧ್ಯಾಯರನ್ನೂ ಮೇಡಂ ಕಾಮಾರನ್ನೂ ಅವರ ಕ್ರಾಂತಿಕಾರಿ ಚಟುವಟಿಕೆಗಳಿಗಾಗಿ ಹೊಗಳಿದರು. ಫರೀದ್‌ಬೆ

ಅಸಾಧಾರಣ ವ್ಯಕ್ತಿಯಾಗಿದ್ದರು. ಅವರ ಪ್ರಭಾವದಿಂದಲೇ ಪ್ಯಾರಿಸ್, ಬರ್ಲಿನ್ ಮತ್ತು ಬ್ರಜೆಲ್ಸಿನ ಭಾರತೀಯ ಕ್ರಾಂತಿಕಾರಿಗಳಿಗೆ ನವೀನ ತುರ್ಕಿ ದೇಶದ ಕುಶಿ ಪಾಶಾ, ತಲಾತ್ ಬೆ, ಅಲ್ಬೇನಿಯಾದ ರಾಜ ಪಶಾದ್ ಪಾಶಾರನ್ನು ಮುಖತಃ ಸಂಧಿಸುವ ಅವಕಾಶ ಲಭಿಸಿತು.

ವೀರೇಂದ್ರ ಚಟ್ಟೋಪಾಧ್ಯಾಯರು ಮೊದಲಿನಿಂದಲೆ ಸ್ವಾತಂತ್ರ್ಯಪ್ರೇಮಿಗಳು. ಎಲ್ಲಿ ಸ್ವಾತಂತ್ರ್ಯ ಹತ್ತಿಕ್ಕಲ್ಪಟ್ಟರೂ ಅಲ್ಲಿ ಹೋಗಿ ಸತತವಾಗಿ ಹೋರಾಡುತ್ತಿದ್ದರು. ೧೯೦೭ ರಲ್ಲಿ ಜರ್ಮನಿಯ ಸ್ಟುಟ್‌ಗಾರ್ಟ್ ನಗರದಲ್ಲಿ ಅಂತಾರಾಷ್ಟ್ರೀಯ ಸಮಾಜವಾದಿಗಳ ಸಮ್ಮೇಳನ ಜರುಗಿದಾಗ ಮೇಡಂ ಕಾಮಾ, ಸರದಾರಸಿಂಹ ರಾಣಾ ಮತ್ತು ವೀರೇಂದ್ರರು ಭಾರತೀಯ ಕ್ರಾಂತಿಕಾರಿಗಳ ಪರವಾಗಿ ಭಾಗವಹಿಸಿದರು. ಆದರೆ ಅದುವರೆಗೆ ಅಂತಾರಾಷ್ಟ್ರೀಯವಾಗಿ ಯಾವ ಕಾಂಗ್ರೆಸ್ಸನ್ನೂ ಕ್ರಾಂತಿಕಾರಿಗಳು ಸೇರಿರಲಿಲ್ಲ. ಹೀಗಿರುವಾಗ ಭಾರತೀಯ ಕ್ರಾಂತಿಕಾರಿ ಮುಖಂಡರು ಕ್ರಾಂತಿಯ ಪ್ರತಿಪಾದನೆಗೆ ಆಗಮಿಸುವರೆಂಬುದು ಎಲ್ಲರಲ್ಲಿಯೂ ಆಶ್ಚರ್ಯವನ್ನುಂಟುಮಾಡಿತು.

ಇವರು ಅಲ್ಲಿಗೆ ಬಂದಾಗ ಇವರನ್ನು ಪ್ರತಿನಿಧಿಗಳೆಂದು ಸ್ವೀಕರಿಸಬೇಕೇ ಬೇಡವೇ ಎಂಬುದೆ ಸಮಸ್ಯೆಯಾಗಿಬಿಟ್ಟಿತು. ಬ್ರಿಟಿಷ್ ಪ್ರತಿನಿಧಿ ರ್‍ಯಾಮ್ಸೆ ಮ್ಯಾಕ್‌ಡೊನಾಲ್ಡ್‌ರಂತೂ ಭಾರತ ಬ್ರಿಟನ್ನಿನ ಅಂಗವಾಗಿರುವುದರಿಂದ ಇವರನ್ನು ಪ್ರತಿನಿಧಿಗಳಾಗಿ ಸ್ವೀಕರಿಸುವ ಪ್ರಶ್ನೆಯೇ ಇಲ್ಲವೆಂದರು. ಆದರೆ ಫ್ರೆಂಚ್ ಸಮಾಜವಾದಿ ಜೊರೆಸ್, ಜರ್ಮನ್ ಮುಖಂಡ ಬೆಬೆಲ್, ಲಿಬ್ನೆಖ್ತ್, ರೋಜಾ ಲಕ್ಸೆಂಬರ್ಗ್ ಮತ್ತು ಆಂಗ್ಲ ಮುಖಂಡ ಹೈಂಡ್‌ಮನ್ ಮೊದಲಾದವರು ಈ ಕ್ರಾಂತಿಕಾರಿಗಳ ಪರವಾಗಿ ವಾದಿಸಿ ಅವರಿಗೆ ಪ್ರವೇಶವನ್ನು ದೊರಕಿಸಿಕೊಟ್ಟರು.

ಈ ಸಮ್ಮೇಳನ ಭಾರತಕ್ಕೆ ವಿಶೇಷವಾಗಿ ಸ್ಮರಣೀಯವಾಗಿದೆ. ಇಲ್ಲಿ ೧೫ ಆಗಸ್ಟ್ ೧೯೦೭ ರಂದು ಮೇಡಂ ಕಾಮಾ ಅವರು ಸ್ವಹಸ್ತದಿಂದ ನಿರ್ಮಿಸಿದ ಭಾರತೀಯ ರಾಷ್ಟ್ರಧ್ವಜವನ್ನು ಆರೋಹಿಸಿ ಅದಕ್ಕೆ ವಂದನೆ ಸಲ್ಲಿಸಿ ಮಾತನಾಡುತ್ತಾ, "ಜಗತ್ತಿನ ಜನಸಂಖ್ಯೆಯ ಐದನೆಯ ಒಂದರಷ್ಟು ಜನರು ಇಂಗ್ಲೀಷರ ಅಧೀನದಲ್ಲಿರುವುದು [illegible] ದಾರಿದ್ರ್ಯಕರ; [illegible] ಪಾಲಿಗೆ [illegible]. ಇಂದಿನ ಪರಿಸ್ಥಿತಿಯಲ್ಲಿ ಯಾವ ಜನಾಂಗವೂ ಸ್ವಯಂ ಪರಾಧೀನವಾಗಿ ಹಾಗೂ ದಬ್ಬಾಳಿಕೆಯ ಕೆಳಗೆ ಬಾಳುವುದು ಸರಿಯಲ್ಲ" ಎಂದು ಘೋಷಿಸಿದರು.

ಮೇಡಂ ಕಾಮಾ ಅವರ ಘೋಷಣೆಯನ್ನು ಸಮರ್ಥಿಸಿ ಸದಸ್ಯರು ಚಪ್ಪಾಳೆ ತಟ್ಟಿದಾಗ ಇಡೀ ಸಭಾಭವನವೇ ನಿನದಿಸಿತು. ಮ್ಯಾಕ್‌ಡೊನಾಲ್ಡ್‌ನ ಜೊತೆ ಇದ್ದ ಆಂಗ್ಲರೂ ಕಾಮಾ ಅವರ ಘೋಷಣೆಯನ್ನು ವಿರೋಧಿಸಿದರು. ಇದರಿಂದ ಇಂಗ್ಲೀಷರು ತೋರಿಕೆಗೆ ಸಮಾಜವಾದಿಗಳಂತೆ ಕಂಡರೂ ಮಾನಸಿಕವಾಗಿ ಸಾಮ್ರಾಜ್ಯವಾದಿಗಳೆಂಬುದು ಸ್ಪಷ್ಟವಾಯಿತು. ಯಾರ ವಿಚಾರಧಾರೆಯಾದರೂ ಸರ್ವಾನುಮತದಿಂದ ಅಂಗೀಕೃತವಾದರೆ ಮಾತ್ರ ಮನ್ನಣೆ ದೊರೆಯಬೇಕೆಂಬುದೊಂದು ಸಮ್ಮೇಳನದ ನಿಯಮ. ಹೀಗಾಗಿ ಬ್ರಿಟಿಶ್ ಸಮಾಜವಾದಿಗಳ ವಿರೋಧದಿಂದಾಗಿ ಗೊತ್ತುವಳಿಯನ್ನು ಸ್ವೀಕರಿಸಲಿಲ್ಲವಾದರೂ ಭಾರತವು ಸ್ವಾತಂತ್ರ್ಯವನ್ನು ಬಯಸುವುದೆಂಬುದು ಅಂತಾರಾಷ್ಟ್ರೀಯ ರಂಗದಲ್ಲಿ ಪ್ರಚುರಗೊಂಡದ್ದು ಕ್ರಾಂತಿಕಾರಿಗಳ ಬಹು ದೊಡ್ಡ ಸಾಧನೆ ಎಂಬುದರಲ್ಲಿ ಅನುಮಾನವಿಲ್ಲ.

ಸ್ಟುಟ್‌ಗರ್ಟ್ ಸಮ್ಮೇಳನದ ಬಳಿಕ ವೀರೇಂದ್ರರಿಗೆ ಪೋಲೆಂಡಿನ ಕೆಲವು ಕ್ರಾಂತಿಕಾರಿಗಳ ಪರಿಚಯವಾಯಿತು. ಮುಂದೆ ರಶಿಯ, ಆಸ್ಟ್ರಿಯ ಮತ್ತು ಜರ್ಮನ್ ಸಾಮ್ರಾಜ್ಯವಾದ ವಿರೋಧಿಗಳ ಸಂಪರ್ಕವೂ ಲಭಿಸಿತು. ವೀರೇಂದ್ರರು ಹೊಸ ಕ್ರಾಂತಿಕಾರಿ ಗೆಳೆಯರೊಂದಿಗೆ ಕ್ರ್ಯಾಕ್‌ಗೆ ಹೋದರು. ಆ ಬಳಿಕ ವಾರ್ಸಾ ತಲುಪಿ ಕೆಲವು ವಾರ ಅಲ್ಲಿದ್ದರು. ಅವರಿಂದ ಪೋಲೆಂಡಿನ ಕ್ರಾಂತಿಕಾರಿಗಳಿಗೆ ಪ್ರೇರಣೆ ಲಭಿಸಿದ್ದಲ್ಲದೆ ಪ್ರತ್ಯೇಕ [illegible] ಅವರು ಕಿವಿದೆರೆದಿರುವುದು ಗೊತ್ತಾಯಿತು. ಇವರ

ಬಳಿಕ ವೀರೇಂದ್ರರು ಐರ್ಲಂಡ್‌ಗೆ ಹೋದರು. ಅಲ್ಲಿಯ ಕ್ರಾಂತಿಕಾರಿಗಳು ಬ್ರಿಟಿಶರನ್ನು ದೂಷಿಸುತ್ತಿದ್ದುದು ಅಷ್ಟಿಷ್ಟಲ್ಲ. ವೀರೇಂದ್ರರು ಡಬ್ಲಿನ್‌ಗೆ ಹೋಗಿ ಕೆಲವು ವಾರ ನಿಂತು ಅಲ್ಲಿಯ ವಿದ್ಯಮಾನಗಳನ್ನು ಗಮನಿಸಿದರು. ಐರ್ಲಂಡಿನಲ್ಲಿ ಹೆಚ್ಚಿನ ಜನರು ಸರಕಾರಿ ಸೇವೆಯಲ್ಲಿದ್ದರು. ಬಡತನವು ಏಳಲು ಸಹಾಯ ಪ್ರೇರಕವಾಗಿತ್ತು. ಹೀಗಿದ್ದರೆ ಅಧಿಕಾರ ಉಚ್ಚ ಶಿಕ್ಷಣ ಮುಂತಾದ ಸರಕಾರಿ ಸೇವೆಯಲ್ಲಿ ಸೇರಿ ರಾಜಭಕ್ತಿಯನ್ನೇ ದೇಶಭಕ್ತಿಯೆಂದು ತಿಳಿಯಬೇಕಾಗಿತ್ತು. ಹೀಗಾಗಿ ಒಂದು ದೃಷ್ಟಿಯಲ್ಲಿ ಇಲ್ಲಿಯ ಸಮಸ್ಯೆ ಭಾರತದ ಸಮಸ್ಯೆಗಿಂತ ಭಿನ್ನವಾಗಿರಲಿಲ್ಲ.

೧೯೦೯ರ ಜುಲೈ ತಿಂಗಳ ಒಂದನೇ ದಿನಾಂಕ. ಕ್ರಾಂತಿಕಾರಿ ಮದನಲಾಲ ಧಿಂಗ್ರಾ ತುಂಬಿದ ಸಭೆಯಲ್ಲಿ ಬಿಳಿಯರ ಸಚಿವ ಸರ್ ಕರ್ಜನ್ ವಾಯಿಲಿಯನ್ನು ಗುಂಡಿಕ್ಕಿ ಕೊಂದ. ದುರ್ದೈವವೆಂದರೆ ಆಗ ಧಿಂಗ್ರಾನ ಕುಟುಂಬದವರೇ ಈ ಕೃತ್ಯದ ಬಗೆಗೆ ಅವನನ್ನು ಸಾರ್ವಜನಿಕವಾಗಿ ಖಂಡಿಸಿದರು. ವೀರೇಂದ್ರರ ತಂಗಿ ಸರೋಜಿನಿ ನಾಯ್ಡು ತಮ್ಮ ತಂದೆಯ ಹೆಸರಿನಲ್ಲಿ ಒಂದು ಹೇಳಿಕೆ ಹೊರಡಿಸಿ, ಮದನಲಾಲನ ಈ ಕೃತ್ಯಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಆದರೆ ಸರೋಜಿನಿ ನಾಯ್ಡು ಅವರ ತಂದೆ ಅಘೋರನಾಥರಿಗೆ ಈ ಹೇಳಿಕೆಯ ವಿಷಯ ಏನೂ ಗೊತ್ತಿರಲಿಲ್ಲವೆಂಬ ಸಂಗತಿ ಮುಂದೆ ಹೊರಬಿತ್ತು.

ಆಗ ಲಂಡನ್‌ನಲ್ಲಿರುವುದು ಭಾರತೀಯ ಕ್ರಾಂತಿಕಾರಿಗಳಿಗೆ ಅಪಾಯಕರವಾಗಿತ್ತು. ಸರಕಾರ ಅವರ ವಿರುದ್ಧ ಕಠಿಣ ಕ್ರಮ ಕೊಳ್ಳಲು ಸಿದ್ಧವಾಯಿತು. ಜೊತೆಗೆ ಬಿಳಿಯರು ಕ್ರಾಂತಿಕಾರಿಗಳ ಮೇಲೆ ಕಂಡ ಕಂಡಲ್ಲಿ ಹಲ್ಲೆ ಮಾಡಲಾರಂಭಿಸಿದರು. ಮದನಲಾಲ ಧಿಂಗ್ರಾರ ದೆಸೆಯಿಂದ ಈ ದುರಾತ್ಮರು ಸಾರ್ವಜನಿಕ ಸಭೆಯೊಂದರಲ್ಲಿ ಸಾವರಕರರನ್ನು ಹೊಡೆದರಲ್ಲದೆ ಅವರ ರಹಸ್ಯ ನಿವಾಸದ ವರೆಗೂ ಬೆಂಬತ್ತಿದರು. ಸಾವರಕರರು ಆಗ ವಿಪಿನಚಂದ್ರ ಪಾಲರ ಮನೆಯಲ್ಲಿ ತಂಗಿದ್ದರು. ಬಿಳಿಯ ಗೂಂಡಾಗಳು ಸಾವರಕರರನ್ನು ಬೆನ್ನಟ್ಟಿ ಬಂದಾಗ ವಿಪಿನಚಂದ್ರರು, "ನನ್ನ ದೇಹದಲ್ಲಿ ಜೀವವಿರುವ ವರೆಗೆ ನೀವು ಸಾವರಕರರ ಬಳಿ ಸುಳಿಯುವಂತಿಲ್ಲ" ಎಂದು ಗರ್ಜಿಸಿದರು. ಕೊನೆಗೆ ಪೋಲೀಸರ ಮಧ್ಯಸ್ಥಿಕೆಯಿಂದಾಗಿ ಘಟನೆ ಕೈ ಮೀರುವುದು ತಪ್ಪಿತು.

ಈ ವೇಳೆಗೆ ಶಾಮಜಿ ಕೃಷ್ಣವರ್ಮ ಮತ್ತು ಮೇಡಂ ಕಾಮಾ ಲಂಡನ್ ತ್ಯಜಿಸಿ ಪ್ಯಾರಿಸ್ಸಿಗೆ ತೆರಳಿ, ಅಲ್ಲಿಯೂ ಕ್ರಾಂತಿಯ ಪ್ರಚಾರ ಕೈಗೊಂಡಿದ್ದರು. ಲಂಡನ್ನಿನ ಪರಿಸ್ಥಿತಿಯನ್ನು ಚೆನ್ನಾಗಿ ಬಲ್ಲ ಮಿತ್ರರು ಸಾವರಕರರೇ ಮೊದಲಾದ ಕ್ರಾಂತಿಕಾರಿಗಳು ಬಿಳಿಯರ ಕಣ್ಣಿಗೆ ಬೀಳುವುದು ಕ್ಷೇಮವಲ್ಲ, ಅವರು ನೇರವಾಗಿ ಕಥವಾ ವೇಷ ಬದಲಾಯಿಸಿ, ಪ್ಯಾರಿಸ್ಸಿಗೆ ಹೋಗುವುದು ವಿಹಿತವೆಂದು ಸಲಹೆಯಿತ್ತರು. ಅದರಂತೆ ಸಾವರಕರರು ಮತ್ತು ವೀರೇಂದ್ರರು ಪ್ಯಾರಿಸ್ ತಲುಪಿದರು.

ಪ್ಯಾರಿಸ್ಸಿನಲ್ಲಿ ಸಾವರಕರರು ಮೇಡಂ ಕಾಮಾ ಅವರ ಮನೆಯಲ್ಲಿ ತಂಗಿದ್ದರು. ಆದರೆ ಕೆಲವೇ ದಿನಗಳಲ್ಲಿ ಪ್ಯಾರಿಸ್‌ನ ವಾತಾವರಣ ಅವರಿಗೆ ಬೇಸರ ತಂದಿತು. ಭಾವವಶರಾದ ಅವರು ಯಾವುದೋ ಶಕ್ತಿಯಿಂದ ಸೆಳೆಯಲ್ಪಟ್ಟಂತೆ ಲಂಡನ್ನಿಗೆ ಬಂದರು. ಕೂಡಲೇ ಅಲ್ಲಿ ಅವರನ್ನು ಬಂಧಿಸಲಾಯಿತು. ವೀರೇಂದ್ರರು ಪ್ಯಾರಿಸ್ಸಿನಲ್ಲಿಯೇ ಉಳಿದುಕೊಂಡು ಉಸಿರಿರುವವರೆಗೂ ಯುರೋಪಿನಲ್ಲಿ ತಿರುಗಾಡಿ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಪರವಾಗಿ ಪ್ರಚಾರ ಕೈಗೊಳ್ಳಲು ನಿಶ್ಚಯಿಸಿದರು. ಅವರು ಮೇಡಂ ಕಾಮಾ ಅವರ 'ವಂದೇ ಮಾತರಂ' ಹಾಗೆಯೇ 'ತಲವಾರ್' ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದರು. ಇದಲ್ಲದೆ ಭಾರತದ ಕ್ರಾಂತಿಕಾರಿಗಳಿಗೆ ಶಸ್ತ್ರಾಸ್ತ್ರಗಳನ್ನು ಕಳುಹಿಸಿ ಕೊಡಲೂ ಪ್ರಯತ್ನಿಸಿದರು. ಜೊತೆಗೆ ರಶಿಯನ್, ಪೋಲಿಶ್, ಐರಿಷ್ ಹಾಗೂ ಈಜಿಪ್ಟಿನ ಸ್ವಾತಂತ್ರ್ಯಯೋಧರೊಡನೆ ಸೇರಿಕೊಂಡು ಪ್ಯಾರಿಸ್, ಜಿನೇವಾ, ಬ್ರುಸೆಲ್ಸ್, ಜ್ಯೂರಿಕ್, ಬರ್ಲಿನ್, ವಿಯೆನ್ನಾಗಳ 'ಭಸ್ಮೀಕರಣ ಕಾರ್ಯ'ದಲ್ಲೂ ಸಹಕರಿಸಿದರು.

ಮದನಲಾಲ ಧಿಂಗ್ರಾನನ್ನು ಗಲ್ಲಿಗೇರಿಸಲಾ-

ಯಿತು. ಸಾವರಕರರಿಗೆ ಕರಿನೀರಿನ ಶಿಕ್ಷೆಯಾಯಿತು. ಕನ್ಹಯ್ಯಾಲಾಲ್ ಖುದಿರಾಮರಿಗೂ ಫಾಶಿಯಾಯಿತು, ಮಹಾರಾಷ್ಟ್ರ, ಬಂಗಾಳಗಳಲ್ಲಿನ ಎಲ್ಲಾ ಕ್ರಾಂತಿಕಾರಿಗಳಿಗೂ ಬೇರೆ ಬೇರೆ ರೀತಿಯ ಶಿಕ್ಷೆಯಾಯಿತು. ಇದರಿಂದಾಗಿ ಯುರೋಪಿನಲ್ಲಿದ್ದ ಕ್ರಾಂತಿಕಾರಿಗಳು ಚಿಂತೆಗೀಡಾದರು. ಯಾವುದೇ ರಾಷ್ಟ್ರವೂ ಇವರ ರಕ್ಷಣೆಗಾಗಿ ಬ್ರಿಟಿಷರ ವಿರೋಧ ಕಟ್ಟಿಕೊಳ್ಳಲು ಸಿದ್ಧವಿರಲಿಲ್ಲ.

ಅದೇ ವೇಳೆಗೆ ಯುರೋಪಿನಲ್ಲಿ ಯುದ್ಧದ ವರ್ತಮಾನ ಹಬ್ಬಿತು, ಫ್ರಾನ್ಸ್ ಮತ್ತು ಜರ್ಮನಿಗಳ ನಡುವೆ ಯುದ್ಧ ನಡೆಯುವುದೆಂದೂ ಗೊತ್ತಾಯಿತು. ಆದರೆ ಇದರೊಂದಿಗೆ ಬ್ರಿಟನ್ನೂ ಸೇರಿಕೊಂಡಿದೆಯೆಂದೂ ಗೊತ್ತಾದ ಕೂಡಲೇ ವೀರೇಂದ್ರರು ಜರ್ಮನಿಗೆ ಹೋಗಿ ಅಲ್ಲಿ ೧೯೧೪ ಎಪ್ರಿಲ್‌ನಲ್ಲಿ, ಹಾಲೆ ನಗರದ ಪ್ರಕಾಶಕರೊಬ್ಬರನ್ನು ಭೆಟ್ಟಿಯಾದರು. ತಾವು ಜರ್ಮನ್ ಭಾಷೆಯಲ್ಲಿ ಹಿಂದಿ, ಉರ್ದು ಮತ್ತು ಇತರ ಭಾರತೀಯ ಭಾಷೆಗಳ ಸ್ವಯಂಬೋಧನೆಯನ್ನು ತಯಾರಿಸಿಕೊಡುವುದಾಗಿ ಒಪ್ಪಂದ ಮಾಡಿಕೊಂಡರು.

ಇದಾದ ನಂತರ ವೀರೇಂದ್ರರು ಅನೇಕ ಪ್ರಚಾರ ಪುಸ್ತಕಗಳನ್ನೂ ರಚಿಸಿದರು. ವಿವೇಕಾನಂದರ ಸಹೋದರರೂ ಪ್ರಸಿದ್ಧ ಕ್ರಾಂತಿಕಾರಿಗಳೂ ಆದ ಡಾ. ಭೂಪೇಂದ್ರನಾಥ ದತ್ತರು ತಮ್ಮ ಗ್ರಂಥವೊಂದರಲ್ಲಿ ವೀರೇಂದ್ರರ ಎರಡು ಸಾಹಿತ್ಯ ಕೃತಿಗಳನ್ನು ಕುರಿತು ವಿಮರ್ಶಿಸಿದ್ದಾರೆ. ಅದರಲ್ಲೊಂದು 'ಬ್ರಿಟಿಷ್ ರೂಲ್ ಇನ್ ಇಂಡಿಯಾ ಕಂಡೆಮ್ಡ್ ಬೈ ದಿ ಬ್ರಿಟಿಷ್ ದೆಮ್‌ಸೆಲ್ವ್ಜ್', ಇನ್ನೊಂದು 'ಸೋಷಲಿಸ್ಟ್ ಕಾನ್ಫರೆನ್ಸ್ ಆನ್ ಬ್ರಿಟಿಷ್ ರೂಲ್ ಇನ್ ಇಂಡಿಯಾ.'

ಪ್ರಥಮ ಮಹಾಯುದ್ಧ (೧೯೧೪–೧೮) ನಡೆಯುತ್ತಿದ್ದ ಸಮಯ, ಯುರೋಪಿನಲ್ಲಿ ನೆಲಸಿದ್ದ ಭಾರತೀಯ ಕ್ರಾಂತಿಕಾರಿಗಳು ಬ್ರಿಟಿಷ್ ವಿರೋಧಿ ಶಕ್ತಿಗಳೊಂದಿಗೆ ಬೆರೆತು ಮಸಲತ್ತು ನಡೆಸಿದ್ದರು. ಅತ್ತಕಡೆ ೧೯೧೭ರಲ್ಲಿ ರಶಿಯಾದಲ್ಲಿ ಕ್ರಾಂತಿ ನಡೆಯಿತು. ವೀರೇಂದ್ರರು ರಶಿಯದ ಕ್ರಾಂತಿಕಾರಿಗಳ ಮಾರ್ಗವನ್ನೇ ಭಾರತೀಯರೂ ಅನುಸರಿಸಬೇಕೆಂದೂ ಇದರಿಂದ ಬಹು ದೊಡ್ಡ ಲಾಭ ನಮಗೆ ಸಿಗುವುದೆಂದೂ ಕರೆಯಿತ್ತರು.

ಪ್ರಥಮ ಮಹಾಯುದ್ಧದಲ್ಲಿ ಜರ್ಮನಿಯು ಸೋತಿತು. ಅದರೊಂದಿಗೇ ಜರ್ಮನಿಯ ಸಹಾಯದಿಂದ ಭಾರತ ಸ್ವತಂತ್ರಗೊಳ್ಳುವ ಆಶೆಯೂ ಕಮರಿಹೋಯಿತು. ಹಾಗಾದರೆ ರಶಿಯವೇನಾದರೂ ಸಹಾಯ ಮಾಡುವುದೆ ಎಂಬ ಆಶೆಯಿಂದ ವೀರೇಂದ್ರರು ರಶಿಯದ ಮುಖಂಡರ ಸಖ್ಯ ಗಳಿಸಿದರು. ಟ್ರಾಟಸ್ಕಿಯೂ ಅವರಿಗೆ ಪರಿಚಿತನಾದ. ೧೯೧೮ರಲ್ಲಿ ಅವರ ಒಬ್ಬ ಮಿತ್ರ ತ್ರ್ಯಾವೋಸ್ಕಿಯ ಬಳಿ ಸಿಕ್ಕಿದ ಪತ್ರದಲ್ಲಿ ಟ್ರ್ಯಾಟಸ್ಕಿಯ ಕಚೇರಿಯಲ್ಲಿ ತಾನು ಕೆಲಸ ಮಾಡುತ್ತಿರುವುದಾಗಿಯೂ ರಶಿಯ-ಭಾರತೀಯ ಸಮಿತಿಯೊಂದನ್ನು ಸ್ಥಾಪಿಸಿರುವುದಾಗಿಯೂ ವೀರೇಂದ್ರರು ಬರೆದಿದ್ದರು.

೧೯೨೧ರಲ್ಲಿ ಸ್ಟಾಕ್‌ಹೋಮ್‌ನಲ್ಲಿ ಭಾರತೀಯ ಕ್ರಾಂತಿಕಾರಿಗಳು ಸಮ್ಮೇಳನವೊಂದನ್ನು ಏರ್ಪಡಿಸಿದಾಗ ಅದರಲ್ಲಿ ಮುಖ್ಯವಾಗಿ ರಶಿಯದ ಮೇಲೆ ಭರವಸೆಯಿಟ್ಟ ಕ್ರಾಂತಿಕಾರಿಗಳಾದ ಭೂಪೇಂದ್ರನಾಥ ದತ್, ಖಾನಖೋಜೆ, ವೀರೇಂದ್ರನಾಥ, ದಾಸಗುಪ್ತ ಮೊದಲಾದವರು ಪಾಲ್ಗೊಂಡಿದ್ದರು. ಈ ಮೊದಲು ಕ್ರಾಂತಿಕಾರಿಗಳಲ್ಲಿ ಕೆಲವರು ರಾಷ್ಟ್ರವಾದಿಗಳ ಪರವಾಗಿಯೂ ಇನ್ನೂ ಕೆಲವರು ಕಮ್ಯೂನಿಜಂ ಪರವಾಗಿಯೂ ಇದ್ದರು. ಭಾರತದ ಸ್ವಾತಂತ್ರ್ಯಕ್ಕಾಗಿ ಎರಡೂ ಪಂಗಡಗಳು ಒಂದಾಗಿ ಶ್ರಮಿಸಲು ನಿಶ್ಚಯಿಸಿದವು. ಈ ಸಮ್ಮೇಳನದ ಎಲ್ಲಾ ಖರ್ಚನ್ನೂ ಸ್ವೀಡನ್ ಕಮ್ಯೂನಿಸ್ಟ್ ಪಕ್ಷದ ನೇತಾರ ಸ್ಟ್ರೋಂ ವಹಿಸಿಕೊಂಡಿದ್ದ.

ಭಾರತೀಯ ಕ್ರಾಂತಿಕಾರಿಗಳು ಆ ಸಮಯದಲ್ಲಿ ಸ್ವೀಡಿಷ್ ಕಮ್ಯೂನಿಸ್ಟ್ ಮುಖಂಡರೊಂದಿಗೆ ತಮ್ಮ ಆಂದೋಲನಕ್ಕೆ ಸಕಲ ಸಹಾಯ ನೀಡಬೇಕೆಂದು ವಿನಂತಿಸಿಕೊಂಡರು. ಆದರೆ ಅವರು, "ನೀವು ಮಾಸ್ಕೋಗೆ ಹೋಗಿ ಏನಾದರೂ ವ್ಯವಸ್ಥೆ ಮಾಡಿಕೊಳ್ಳಿ. ನಾವು ಯಾವುದೇ ಸಹಾಯ ಸಲ್ಲಿಸುವ ಸ್ಥಿತಿಯಲ್ಲಿಲ್ಲ." ಎಂದಾಗ ಮಾಸ್ಕೋಗೆ ಹೋಗಲು ವೀರೇಂದ್ರರೇ

ಯೋಗ್ಯರೆಂದು ಕ್ರಾಂತಿಕಾರಿಗಳು ಪರಿಗಣಿಸಿ ಅವರಿಗೆ ಈ ಹೊಣೆಯನ್ನೊಪ್ಪಿಸಿದರು. ಎಂ. ಎನ್. ರಾಯ್ ಇವರಿಗೂ ಮೊದಲೇ ಮಾಸ್ಕೋಗೆ ಹೋಗಿ, ವೀರೇಂದ್ರರಿಗೆ ಅಲ್ಲಿಗೇ ಬರುವಂತೆ ಆಹ್ವಾನಿಸಿದರು.

ಈತನ್ಮಧ್ಯೆ ವೀರೇಂದ್ರರಿಗೆ ಮದುವೆಯಾಗಿತ್ತು, ಆದರೆ ಬೇಗನೆ ವಿಚ್ಛೇದನೆಯೂ ಆಯಿತು. ಅವರ ಪತ್ನಿ ಬೌದ್ಧ ಭಿಕ್ಷುಣಿಯಾದಳು. ಅನಂತರ ವೀರೇಂದ್ರರ ಎರಡನೆಯ ವಿವಾಹ ಸ್ವತಃ ಕ್ರಾಂತಿಕಾರಿ ಸಾಹಿತಿಯಾದ ಎಗ್ನೆಸ್ ಸ್ಮೆಡಲ್‌ಳೊಂದಿಗೆ ನಡೆಯಿತು.

ಕೆಂಪು ಸೇನೆ ತಮ್ಮೊಂದಿಗೆ ಧಾವಿಸಿ ಭಾರತವನ್ನು ಮುಕ್ತಗೊಳಿಸಬಹುದೆಂಬ ಆಶೆ ಭಾರತೀಯ ಕ್ರಾಂತಿಕಾರಿಗಳದು. ಆದರೆ ಈ ಆಶೆ ತೀರ ಅವಾಸ್ತವವಾಗಿತ್ತು. ಝಾರರಿಂದ ಹೊಸದಾಗಿ ಸ್ವಾತಂತ್ರ್ಯ ಗಳಿಸಿದ ರಶಿಯವು ಸಾಮ್ರಾಜ್ಯವಾದಿಗಳ ಮೇಲೆ ಕೈ ಮಾಡುವುದು ಅಸಂಭವವಾಗಿತ್ತು.

ಮಾಸ್ಕೋ ತಲುಪುತ್ತಲೇ ವೀರೇಂದ್ರರಿಗೆ ಪಠಾಣ ತರುಣನೊಬ್ಬನಿಂದ ಎಂ. ಎನ್. ರಾಯ್ ಅವರು ತಾಷ್ಕೆಂಟ್‌ನಲ್ಲಿದ್ದಾರೆಂದೂ ಅವರು ಸರ್ವಾಧಿಕಾರಿಯಾದ ಅಫಘಾನ್ ಅಮೀರನ ಹತ್ಯೆಯನ್ನು ಯೋಚಿಸಿದ್ದಾರೆಂದೂ ಸುದ್ದಿ ತಿಳಿಯಿತು. ಇದರಿಂದಾಗಿ ಎಲ್ಲಾ ಮುಸಲ್ಮಾನರೂ ಅವರ ಮೇಲೆ ಕೋಪಗೊಂಡು ಒಂದು ವೇಳೆ ರಾಯ್ ಅಲ್ಲಿಗೆ ಹೋದರೆ ಅವರ ಕೊಲೆ ಮಾಡಲು ಸಿದ್ಧತೆ ನಡೆಸಿದ್ದಾರೆಂಬುದೂ ತಿಳಿಯಿತು. ವೀರೇಂದ್ರರು, ಅಫಘಾನಿಸ್ತಾನಕ್ಕೆ ಹೊರಡುವ ಸನ್ನಾಹದಲ್ಲಿದ್ದ ಎಂ. ಎನ್. ರಾಯ್ ಅವರನ್ನು ಎಚ್ಚರಿಸಿ ಅವರ ಪ್ರಾಣ ಉಳಿಸಿದರು.

ದುರ್ದೈವದ ಸಂಗತಿಯೆಂದರೆ ಈ ವೇಳೆಗೆ ಮಾಸ್ಕೋ ಹಾಗೂ ಬರ್ಲಿನ್ನಿನಲ್ಲಿದ್ದ ಕ್ರಾಂತಿಕಾರಿಗಳಲ್ಲಿ ಭಿನ್ನಾಭಿಪ್ರಾಯವುಂಟಾದದ್ದು. ತತ್ಪರಿಣಾಮವಾಗಿ ರಶಿಯನ್ ಮುಖಂಡರು ಅವರ ಮೇಲೆ ಕ್ಷುದ್ರದೃಷ್ಟಿ ಬೀರುವಂತಾಗಿತ್ತು. ಆದರೆ ವೀರೇಂದ್ರ ಚಟ್ಟೋಪಾಧ್ಯಾಯರು ಮಾತ್ರ ರಶಿಯನ್ನರ ದೃಷ್ಟಿಯಲ್ಲಿ ಗೌರವಾನ್ವಿತರಾಗಿಯೇ ಉಳಿದರು. ಅವರು ಲೆನಿನ್ನರಿಗೊಂದು ಪತ್ರ ಬರೆದು ಅವರಲ್ಲಿ, ಬ್ರಿಟಿಷ್ ಸಾಮ್ರಾಜ್ಯವನ್ನು ಭಾರತದಿಂದ ಹೊಡೆದೋಡಿಸುವುದು ಅವಶ್ಯವೆಂದೂ ಈ ಉದ್ದೇಶಕ್ಕಾಗಿ ಮೂರನೆಯ ಅಂತಾರಾಷ್ಟ್ರೀಯ ಕ್ರಾಂತಿಕಾರಿಗಳ ಮಹಾ ಸಂಘದ ವ್ಯವಸ್ಥೆ ಮಾಡಬೇಕೆಂದೂ ಪ್ರಾರ್ಥಿಸಿದ್ದರು. ಅದಕ್ಕೆ ಉತ್ತರವಾಗಿ ಲೆನಿನ್ನರು ಹೀಗೆ ಬರೆದರು:

"ನೀವು ಹೇಳುವುದು ಸರಿ. ನಾನು ನಿಮ್ಮೊಂದಿಗೆ ಸಹಕರಿಸಲು ತಯಾರಿದ್ದೇನೆ. ಬ್ರಿಟಿಷ್ ಸಾಮ್ರಾಜ್ಯವನ್ನು ಅಂತ್ಯಗೊಳಿಸಲು ನಾವಿಬ್ಬರೂ ಪ್ರಯತ್ನಿಸೋಣ. ನೀವು ನಮ್ಮೊಂದಿಗೆ ಯಾವಾಗ ಭೇಟಿಯಾಗಬೇಕೆಂಬುದನ್ನು ನನ್ನ ಸಚಿವರು ನಿಮಗೆ ತಿಳಿಸುತ್ತಾರೆ.

"ಇತಿ– ವಿ. ಉಲಿಯಾನೊಫ್ (ಲೆನಿನ್)"

ಕೆಲವರು ರಶಿಯನ್ ಮುಖಂಡರೂ ಅಲ್ಲದೆ ಮಿತ್ರೇತರ ದೇಶಗಳ ಜನನಾಯಕರು ಭಾರತದಲ್ಲಿರುವ ರಾಷ್ಟ್ರೀಯ ಆಂದೋಲನವು ಕಮ್ಯೂನಿಸ್ಟ್ ಚಳವಳಿಗಿಂತ ವಿಭಿನ್ನ ಸ್ವರೂಪದ್ದಾಗಿರಬೇಕೆಂದು ಆಶಿಸುತ್ತಿದ್ದರು. ಡಾ. ದತ್ ಹೇಳಿರುವಂತೆ ಇದರ ಮುಖಂಡತ್ವ ವಹಿಸಬಲ್ಲ ಪ್ರತಿಭಾವಂತ ವ್ಯಕ್ತಿಗೆ ಸಕಲಾತ್‌ವಾಲಾರು ಹತ್ತು ಲಕ್ಷ



"ಮತ್ತೆ ದೇಶಕ್ಕಾಗಿ ಉಳಿತಾಯ ಮಾಡಿ ಅಂತಿದ್ರಲ್ಲಾ ಸಾರ್ ನೀವು?"

ಪೌಂಡು ಕೊಡಲು ಸಿದ್ಧರಿದ್ದರು. ಆದರೆ ತೃತೀಯ ಅಂತರರಾಷ್ಟ್ರೀಯ ಸಂಘದ ಕ್ರಾಂತಿಕಾರಿಗಳು ಪಾತ್ರ ನಿರ್ವಿಣ್ಣರಾಗಿದ್ದರು. ಜಡತ್ವ ಆವರಿಸ್ಸಿತು. ಅವರಲ್ಲಿ ಚೈತನ್ಯವನ್ನು ತುಂಬಲು ವೀರೇಂದ್ರರು ಲಂಡನ್ನಿಗೆ ಹೋಗಿ ಕ್ರಾಂತಿಯ ಭುಗಿಲೆಬ್ಬಿಸಿದರು.

೧೯೨೩ರಲ್ಲಿ ಬಿಹಾರದ ದಿವಂಗತ ದೀಪನಾರಾಯಣ ಸಿಂಹರು ಯುರೋಪಿಗೆ ಹೋದಾಗ ಅಲ್ಲಿ ಕ್ರಾಂತಿಕಾರಿಗಳೊಂದಿಗೆ ಕರುಣಾಪೂರ್ಣ ಸ್ವರದಲ್ಲಿ, "ನೀವು ಅಹಿಂಸಾದೀಕ್ಷೆಗೆ ಬದ್ಧರಾಗಿ ಭಾರತಕ್ಕೆ ಹಿಂತಿರುಗಿ ಕಾಂಗ್ರೆಸ್ಸಿಗೆ ಸೇರಿಕೊಳ್ಳಿ" ಎಂದು ವಿನಂತಿಸಿದಾಗ ಕ್ರಾಂತಿಕಾರಿಗಳು ಅವರ ಕೋರಿಕೆಯನ್ನು ತಳ್ಳಿ ಹಾಕಿದರು. ಅಹಿಂಸೆಯಿಂದ ಸ್ವಾತಂತ್ರ್ಯ ಲಭಿಸೀತೆನ್ನುವುದರಲ್ಲಿ ಅವರಿಗೆ ವಿಶ್ವಾಸವಿರಲಿಲ್ಲ.

ವೀರೇಂದ್ರರು ಜರ್ಮನಿಯ ಯುವಕ ಮುಂದಾಳುಗಳೊಡನೆ ಸೇರಿ, 'ಸಾಮ್ರಾಜ್ಯವಾದಿ ವಿರೋಧೀ ಕೂಟ'ವನ್ನು ಸ್ಥಾಪಿಸಿ, ಅದರ ಕಾರ್ಯದರ್ಶಿಯಾದರು. ಬ್ರುಸೆಲ್ಸ್‌ನಲ್ಲಿ ಈ ಸಂಸ್ಥೆಯ ಸಮ್ಮೇಳನ ಜರುಗಿದ ಸಂದರ್ಭದಲ್ಲಿ ಅಲ್ಲಿಗೆ ವೀರೇಂದ್ರರ ಸ್ಥಾನದಲ್ಲಿ ಜವಾಹರಲಾಲ ನೆಹರೂ ಹೋಗಿದ್ದರು.

ಇದಾದ ಮೇಲೆ ಜರ್ಮನಿಯಲ್ಲಿ ನಾಜೀವಾದ ತಲೆಯೆತ್ತಿಕೊಂಡಿದ್ದರಿಂದ ಜರ್ಮನಿಯಲ್ಲಿದ್ದ ಸಾಮ್ರಾಜ್ಯ ವಿರೋಧೀ ಹೋರಾಟಗಾರರು ಪ್ಯಾರಿಸ್, ಮಾಸ್ಕೋಗಳಿಗೆ ಫರಾರಿಯಾಗಹತ್ತಿದರು. ಈ ವೇಳೆಗೆ ವೀರೇಂದ್ರರ ಮೇಲೆ ಸ್ಟಾಲಿನ್ ಕೋಪಗೊಂಡು ಅವರನ್ನು ಮಾಸ್ಕೋದಿಂದ ಹೊರಟುಹೋಗಲು ಆಜ್ಞಾಪಿಸಿದ್ದನು. ಅವರು ಮಾಸ್ಕೋದಲ್ಲಿ ತಲೆ ಮರೆಸಿಕೊಂಡು ಉರ್ದು ಶಿಕ್ಷಕರಾಗಿದ್ದಾರೆಂದೂ ಸುದ್ದಿ ದಟ್ಟವಾಗಿ ಹಬ್ಬಿದ್ದರೂ ಅದಕ್ಕೆ ಯಾವ ಪುಷ್ಟಿಯೂ ಸಿಕ್ಕಲಿಲ್ಲ. ಕಾಂಗ್ರೆಸ್ಸಿನ ಲಾಹೋರ್ ಸಮ್ಮೇಳನಕ್ಕಿಂತ ಮೊದಲು ನೆಹರೂ ಯುರೋಪಿನ ಯಾತ್ರೆ ಕೈಕೊಂಡಾಗ ವೀರೇಂದ್ರ ಚಟ್ಟೋಪಾಧ್ಯಾಯರ ಸಹಾಯದಿಂದಾಗಿ ರಶಿಯಕ್ಕೆ ಹೋಗಲು ಸಾಧ್ಯವಾಯಿತು.

೧೯೩೬-೩೭ ರಲ್ಲಿ ಡಾ. ಭೂಪೇಂದ್ರನಾಥ ದತ್ತರು ಭಾರತಕ್ಕೆ ಬಂದಿದ್ದಾಗ ಆಗ್ನೆಸ್ ಸ್ಮೆಡಲೀಯಿಂದ ಬಂದ ಪತ್ರ ಹೊಂದಿದ್ದರು. ವೀರೇಂದ್ರರು ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದಾರೆಂದೂ ಆರ್ಥಿಕ ಸಹಾಯ ಒದಗಿಸಬೇಕೆಂದೂ ಕೋರಲಾಗಿತ್ತು. ಡಾ. ದತ್ ಕಾಂಗ್ರೆಸ್ ಮುಖಂಡರನ್ನು ಭೆಟ್ಟಿಯಾಗಿ ಮಾತುಕತೆ ನಡೆಸಿದಾಗ ಕ್ರಾಂತಿಕಾರಿಗಳಿಗೆ ಯಾವುದೇ ಸಹಾಯ ನೀಡಲೂ ಅವರು ನಿರಾಕರಿಸಿದರು. ವೀರೇಂದ್ರರ ತಂಗಿ, ಸರೋಜಿನಿ ನಾಯ್ಡುರನ್ನು ಸಂಪರ್ಕಿಸಿ, "ಅತ ಬೇನೆ ಬಿದ್ದಿದ್ದಾನೆ. ಔಷಧಕ್ಕೂ ಹಣವಿಲ್ಲ. ದಯವಿಟ್ಟು ಸಹಾಯ ಮಾಡುತ್ತೀರಾ?" ಎಂದು ಕೇಳಿದಾಗ ಆಕೆ "ನನ್ನಲ್ಲಿ ಹಣ ಎಲ್ಲಿಂದ ಬರಬೇಕು? ತಂಗಿಯ ಕಾಯಿಲೆಯಿಂದಾಗಿ ನಾನೂ ತಾಪತ್ರಯದಲ್ಲಿದ್ದೇನೆ," ಅಂದುಬಿಟ್ಟರು.

ವೀರೇಂದ್ರ ಚಟ್ಟೋಪಾಧ್ಯಾಯರು ರಶಿಯದಲ್ಲೇ ತೀರಿಕೊಂಡರೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಅವರು ಸ್ಟಾಲಿನ್ನನ ಕೋಪಕ್ಕೆ ತುತ್ತಾದರೆಂಬ ವದಂತಿಯೂ ಇದೆ. ವೀರೇಂದ್ರರು ರಶಿಯದ ಪ್ರಜೆಗಳಾಗಿದ್ದ ಪಕ್ಷದಲ್ಲಿ ಅವರ ಪತ್ನಿ "ಪತಿ ರೋಗಗ್ರಸ್ತರಾಗಿದ್ದಾರೆ. ಸಹಾಯ ಕಳುಹಿಸಿರಿ" ಎಂದು ಯಾಕೆ ಬರೆಯುತ್ತಿದ್ದಳು? ಆದರೆ ಸಹಾಯ ಕಳುಹಿಸಿದರೆ ಅವರಿಗದು ಸಿಗುತ್ತಿತ್ತು ಎಂಬುದರಲ್ಲಿ ಸಂದೇಹವಿಲ್ಲ.

ಸ್ವರಾಜ್ಯ ಸಿಕ್ಕಿದ ಮೇಲೆ ಭಾರತ ಸರಕಾರ ತುಂಬ ಮುತುವರ್ಜಿ ವಹಿಸಿದಾಗ ರಶಿಯನ್ ಸರಕಾರದಿಂದ, "ಅವರು ರಶಿಯದ ಪ್ರಜೆಯಾಗಿದ್ದರು. ಅಪಥ್ಯ ಮನಿಮಾಂದ್ಯದಿಂದ ಮೃತರಾದರು" ಎಂಬ ಮಾಹಿತಿ ಮಾತ್ರ ಸಿಕ್ಕಿತು.

ಇದನ್ನು ಎಷ್ಟು ಮಟ್ಟಿಗೆ ನಂಬಬೇಕೆನ್ನುವ ಮಾತು ಬೇರೆ. ಆದರೆ ಒಂದು ವೇಳೆ ಅವರು ರಶಿಯದ ಪ್ರಜೆಯಾಗಿದ್ದರೆ ಅವರಿಗೆ ಚಿಕಿತ್ಸೆಗಾಗಿ ಸಹಾಯ ಬೇಡುವ ಸಮಸ್ಯೆಯೇ ಉದ್ಭವಿಸುತ್ತಿರಲಿಲ್ಲ. ರಶಿಯದ ಪ್ರತಿ ನಾಗರಿಕನಿಗೂ ಉಚಿತ ಚಿಕಿತ್ಸೆ ಸಿಕ್ಕೇ ಸಿಗುತ್ತದೆ. ಆದರೆ ಪಾಪ, ಅವರು ಹಣವಿಲ್ಲದೆ ಅಲ್ಲಿ ಅಲೆಮಾರಿಯ ಹಾಗೆ ತಿರುಗಾಡಿಕೊಂಡಿದ್ದರೋ ಏನೋ!

ಅವಿದ್ಯಾವಂತ ಸಂಖ್ಯಾಚತುರರು

‘ಸಂಖ್ಯಾಪ್ರಿಯ’

ಅಂಕಗಳು ಸೃಷ್ಟಿಯಾದಂದಿನಿಂದಲೂ ಮಾನವನು ಅವುಗಳಲ್ಲಿ ವಿಶೇಷ ಆಸಕ್ತಿಯನ್ನು ತೋರಿಸುತ್ತಾ ಬಂದಿದ್ದಾನೆ. ಅಂಕಗಳಲ್ಲಿರುವ ವೈವಿಧ್ಯ ಇಂದಿಗೂ ನಮಗೆ ಆಶ್ಚರ್ಯವನ್ನುಂಟುಮಾಡುತ್ತಿವೆ. ಅವುಗಳಲ್ಲೂ ಸಹ ಮನುಷ್ಯನಲ್ಲಿರುವಂತೆ ವೈಯಕ್ತಿಕ ಗುಣಗಳಿರುವುದು ಅನೇಕ ಸಂಶೋಧನೆಗಳಿಂದ ಖಚಿತವಾಗಿದೆ. ಅಂಕಗಳ ರಹಸ್ಯಗಳನ್ನು ಕಂಡು ಹಿಡಿಯುವುದೇ ಒಂದು ಆನಂದ. ಆದರೆ ಈ ದಿಶೆಯಲ್ಲಿ ನಾವಿನ್ನೂ ಪ್ರಾರಂಭದ ಹಂತದಲ್ಲೇ ಇದ್ದೇವೆಂದು ಹೇಳಿದರೆ ಅತಿಶಯೋಕ್ತಿಯೇನಲ್ಲ. ಈ ಅಂಕಗಳ ತತ್ತ್ವ ಅಥವಾ ನಿಯಮ,ಗಳು ಅಗಾಧವಾಗಿವೆ. ಸಹಸ್ರಾವಧಿ ವರ್ಷಗಳಿಂದ ಅನೇಕ ಗಣಿತಜ್ಞರು ಅತ್ಯಂತ ಶ್ರದ್ಧೆ, ಕುತೂಹಲಗಳಿಂದ ಸಂಶೋಧನೆಯನ್ನು ನಡೆಸುತ್ತ ಬಂದಿದ್ದಾರೆ, ಹೊಸ ಹೊಸ ವಿಷಯಗಳನ್ನು ಕಂಡುಹಿಡಿಯುತ್ತಲೇ ಇದ್ದಾರೆ. ಹೀಗಾಗಿ ನಾಗರಿಕತೆ ಬೆಳೆದಂತೆಲ್ಲಾ ಅಂಕಗಳನ್ನು ಗಣಿಸುವ ವಿಧಾನಗಳು ಸೃಷ್ಟಿಯಾಗುತ್ತಲೇ ಇವೆ, ತತ್ಪರಿಣಾಮವಾಗಿ ಗಣಿತವು

ಶಾಪೋಪಶಾಪಗಳಿಂದ ಕೂಡಿದ ಹೆಮ್ಮರವಾಗಿದೆ.

ಗಣಿತಶಾಸ್ತ್ರ ಬೆಳೆದು ಹೆಮ್ಮರವಾಗಲು ಸಹಾಯಮಾಡಿದವರಲ್ಲಿ ಪ್ರತಿಭಾವಂತರು ಸಾಕಷ್ಟಿದ್ದಾರೇನೋ ನಿಜ. ಆದರೆ ವಿದ್ಯೆಯನ್ನು ಸಾಕಷ್ಟು ಗಳಿಸದೆ ಶಾಸ್ತ್ರವನ್ನು ಸಹ ಕ್ರಮಬದ್ಧವಾಗಿ ಅಭ್ಯಾಸ ಮಾಡದೆ, ಇದ್ದಕ್ಕಿದ್ದಂತೆ ಕೆಲವು ವಿಷಯಗಳಲ್ಲಿ ಅಸಾಧಾರಣವಾದ ಪ್ರತಿಭೆಯನ್ನು ತೋರಿಸಿದ ಮಹಾನುಭಾವರೂ ಇದ್ದಾರೆ. ಸಂಖ್ಯಾಪ್ರಪಂಚದಲ್ಲೂ ಹಿಂದೆ ಇಂತಹ ವ್ಯಕ್ತಿಗಳು ಇದ್ದರು; ಈಗಲೂ ಇರಬಹುದು, ಇವರಲ್ಲಿ ಅನೇಕರು ಅವಿದ್ಯಾವಂತರೆಂದೇ ಹೇಳಬಹುದು. ಕೆಲವರಿಗೆ ವರ್ಣಮಾಲೆಯ ಅಕ್ಷರಗಳನ್ನು ಬರೆಯಲೂ ಗೊತ್ತಿರುವುದಿಲ್ಲ, ಆದರೆ ಅಂಕಗಣಿತದ ಸಮಸ್ಯೆಗಳು, ಎಷ್ಟೇ ಕಠಿಣವಾಗಿದ್ದರೂ ತಕ್ಷಣವೇ ಉತ್ತರಿಸುತ್ತಾರೆ, ಆದರೆ ಸಮಸ್ಯೆಗಳಿಗೆ ಹೇಗೆ ಉತ್ತರ ಪಡೆದಿರೆಂದು ಅವರನ್ನು ಕೇಳಿದಾಗ, ಅದಕ್ಕೆ ಸಮಂಜಸವಾದ ಉತ್ತರವನ್ನು ನೀಡಲು ಅಸಮರ್ಥರಾಗುತ್ತಾರೆ.

ಬಿಡ್ಡರ್ ಎಂಬಾತ ಇಂತಹವರಲ್ಲಿ ಒಬ್ಬ. ಆತ ೧೮೧೮ ರಲ್ಲಿ ಒಮ್ಮೆ ಗಣಿತದ ಪ್ರದರ್ಶನ ನೀಡಿದಾಗ ಒಬ್ಬ ಪ್ರೇಕ್ಷಕನು ಕಾಗದದ ಮೇಲೆ ಒಂದು ದೊಡ್ಡ ಸಂಖ್ಯೆಯನ್ನು ಬರೆದು, ಬಲಗಡೆಯಿಂದ ಎಡಗಡೆಗೆ ಒಂದೇ ಬಾರಿ ಅವನ ಮುಂದೆ ಓದಿದ. ಮರುಕ್ಷಣವೇ ಬಿಡ್ಡರನು ಎಡಗಡೆಯಿಂದ ಬಲಗಡೆಗೆ ಆ ಸಂಖ್ಯೆಯನ್ನು ಒಂದು ತಪ್ಪು ಇಲ್ಲದೆ ಹೇಳಿದನಂತೆ, ಒಂದು ಗಂಟೆಯ ನಂತರ ಸಭೆ ಮುಕ್ತಾಯವಾದಾಗ, ಯಾರೋ ಒಬ್ಬರು ಆ ದೊಡ್ಡ ಸಂಖ್ಯೆಯ ಜ್ಞಾಪಕವಿದೆಯೇ ಎಂದು ಪ್ರಶ್ನಿಸಿದಾಗ ಆತ ಆ ಸಂಖ್ಯೆಯನ್ನು ಸರಿಯಾಗಿ ಹೇಳಿದನಂತೆ.

ಥಾಮಸ್ ಫುಲ್ಲರ್ ಎಂಬಾತ ೧೮ ನೇಯ ಶತಮಾನದ ಮಧ್ಯದಲ್ಲಿ ವರ್ಜೀನಿಯಾದಲ್ಲಿ ಹುಟ್ಟಿದ. ಆತನಿಗೆ ಓದುವುದಕ್ಕಾಗಲಿ ಬರೆಯುವುದಕ್ಕಾಗಲಿ ಬರುತ್ತಿರಲಿಲ್ಲ. ಅವನಿಗೆ ಎಪ್ಪತ್ತನೆಯ ವರ್ಷ ನಡೆಯುತ್ತಿದ್ದಾಗ ಯಾರೋ ಒಬ್ಬರು ಒಮ್ಮೆ ಒಂದೂವರೆ ವರುಷದಲ್ಲಿ ಎಷ್ಟು ಸೆಕೆಂಡುಗಳಿವೆಯೆಂದು ಪ್ರಶ್ನಿಸಿದಾಗ ಅವನು ಕೇವಲ ೨ ನಿಮಿಷಗಳಲ್ಲಿಯೂ, ೭೦ ವರ್ಷ ೧೭ ದಿವಸ ೧೨ ಘಂಟೆಗಳಲ್ಲಿ ಎಷ್ಟು ಸೆಕೆಂಡುಗಳಿವೆಯೆಂದು ಪ್ರಶ್ನಿಸಿದಾಗ ಕೇವಲ ಒಂದೂವರೆ ನಿಮಿಷಗಳಲ್ಲಿಯೂ ತಪ್ಪಿಲ್ಲದೆ ಉತ್ತರಿಸಿದನಂತೆ.

ಚೆಸ್ಟರ್‌ಫೀಲ್ಡ್ ಹತ್ತಿರವಿರುವ ಎಲ್ಮ್‌ಟನ್‌ನಲ್ಲಿ ಜನ್ಮವೆತ್ತಿದ ಬಕ್ಸ್‌ಟನ್ ಇಂತಹವನೇ. ಅವನು ಬಡ ಕುಟುಂಬದಲ್ಲಿ ಹುಟ್ಟಿದವನು. ತನ್ನ ಹೆಸರನ್ನು ಸಹ ಅವನಿಗೆ ಬರೆಯಲು ಬರುತ್ತಿರಲಿಲ್ಲ, ಅಷ್ಟು ಬುದ್ಧಿವಂತನೂ ಅಲ್ಲ, ಕೂಲಿ ಮಾಡಿ ಜೀವಿಸುತ್ತಿದ್ದ. ಆದರೆ ಅಂಕಿಗಳ ವಿಷಯದಲ್ಲಿ ಮಾತ್ರ ವಿಶೇಷ ಜ್ಞಾಪಕಶಕ್ತಿಯಿತ್ತು. ಒಮ್ಮೆ ಲಂಡನ್ನಿನಲ್ಲಿ ಗ್ಯಾರಿಕ್ ಪ್ರದರ್ಶಿಸಿದ 'ಮೂರನೇ ರಿಚರ್ಡ್' ನಾಟಕವನ್ನು ವೀಕ್ಷಿಸುತ್ತಿದ್ದಾಗ ಅವನಿಗೆ ನಾಟಕದ ಕಡೆಗೆ ಗಮನವೇ ಇರದೆ ಆಗ ನಾಟಕದಲ್ಲಿ ಪಾತ್ರ ವಹಿಸಿದ ನಟರು ಎಷ್ಟು ಮಾತುಗಳನ್ನಾಡಿದರೆಂಬುದನ್ನು ಲೆಕ್ಕ ಹಾಕುತ್ತಿದ್ದನಂತೆ. ಕೊನೆಗೆ ಆ ನಾಟಕದಲ್ಲಿ ಎಷ್ಟು ಪದಗಳಿವೆಯೆಂಬುದನ್ನು ಯಥಾರ್ಥವಾಗಿ ತಿಳಿಸಿದನಂತೆ, ಇವನಲ್ಲಿ ಇನ್ನೂ ಒಂದು ಅದ್ಭುತಶಕ್ತಿಯಿತ್ತು; ಯಾವುದಾದರೂ ಹೊಲ ಅಥವಾ ಜಮೀನನ್ನು ನೋಡಿದಾಗ ಅದರ ವಿಸ್ತೀರ್ಣ ಇಷ್ಟೇ ಇದೆಯೆಂದು ಕಣ್ಣಿನ ಅಂದಾಜಿನಿಂದ ಹೇಳುತ್ತಿದ್ದನಂತೆ. ಉಪಕರಣಗಳಿಂದ ಅಳತೆ ಮಾಡಿ ನೋಡಿದಾಗ ಅವನು ಹೇಳಿದ ವಿಸ್ತೀರ್ಣ ಸರಿಯಾಗಿರುತ್ತಿತ್ತು.

ಕೋಲ್‌ಬರ್ನ್ ಎಂಬಾತ ೧೮೦೪ ರಲ್ಲಿ ವರ್‌ಮಾಂಟ್‌ನಲ್ಲಿ ಹುಟ್ಟಿದ, ಆತನಿಗೆ ಓದುವುದಕ್ಕಾಗಲೀ ಬರೆಯುವುದಕ್ಕಾಗಲಿ ಬರುತ್ತಿರಲಿಲ್ಲ. ಆದರೆ ಮಗುವಾಗಿನ್ನಾಗಲೇ ಪುಸ್ತಕದ ಸಹಾಯವಿಲ್ಲದೆಯೇ, ಅಂಕಗಳ ಗುಣಲಬ್ಧಗಳನ್ನು ಮನಸ್ಸಿನಲ್ಲೇ ಲೆಕ್ಕ ಹಾಕಿಕೊಂಡು ಪಠಣ ಮಾಡುತ್ತಿದ್ದನು. ಒಂದು ಸಾರಿ ಇವನ ತಂದೆಯು ಇದನ್ನು ಗಮನಿಸಿ ಕುತೂಹಲದಿಂದ ೧೩ ಮತ್ತು [illegible] ರ ಗುಣಲಬ್ಧವೆಷ್ಟೆಂದು ಕೇಳಿದಾಗ, [illegible] ಎಂದು ಸರಿಯಾಗಿ ಉತ್ತರ ಕೊಟ್ಟನಂತೆ. [illegible]

ಘಟನೆಯು ನಡೆದಾಗ. ಅವನಿಗೆ ಕೇವಲ ೬ ವರ್ಷಗಳಾಗಿದ್ದವು. ತಂದೆಯು, ಇವನ ಪ್ರತಿಭಾ ಪ್ರದರ್ಶನಗಳನ್ನು ಬೋಸ್ಟನ್, ಲಂಡನ್ ಮತ್ತು ಪ್ಯಾರಿಸ್‌ಗಳಲ್ಲಿ ಏರ್ಪಡಿಸಿ ಹಣವನ್ನು ಸಂಪಾದಿಸಿದ. ಈ ಅದ್ಭುತಶಕ್ತಿಯ ಮರ್ಮವೇನೆಂದು ಪ್ರಶ್ನಿಸಿದಾಗ, "ದೇವರು, ನನಗೆ ಈ ಶಕ್ತಿಯನ್ನು ದಯಪಾಲಿಸಿದ್ದಾನೆ. ಆದರೆ ಅದು ಏನು, ಹೇಗೆ, ಎಂದು ನಿಮಗೆ ಹೇಳಲು ನನಗೆ ಶಕ್ತಿಯಿಲ್ಲ" ಎಂದ. ಪಾಠಶಾಲೆಗೆ ಸೇರಿಸಿದರೂ ಸಹ ವಿದ್ಯೆಯ ಕಡೆಗೆ ಒಲವು ತೋರಿಸಲಿಲ್ಲ. ಆದರೆ ಈ ಪ್ರತಿಭೆಯು ಅವನ ೨೦ ನೇ ವಯಸ್ಸಿನಲ್ಲಿಯೇ, ತಂತಾನೆ ಮಾಯವಾಯಿತು. ಆತನ ಎರಡು ಕೈಗಳಲ್ಲಿಯೂ ಮತ್ತು ಎರಡು ಕಾಲುಗಳಲ್ಲಿಯೂ ಒಂದೊಂದು ಬೆರಳು ಅಧಿಕವಾಗಿದ್ದುದೊಂದು ಅವನಿಗಿದ್ದ ದೈಹಿಕ ವೈಚಿತ್ರ್ಯ.

ಡೇಸ್ ಎಂಬವನೂ ಇದೇ ಸಾಲಿಗೆ ಸೇರಬೇಕು. ಆತ ೧೮೨೪ರಲ್ಲಿ ಜರ್ಮನಿಯಲ್ಲಿ ಹುಟ್ಟಿದ. ಇವನಿಗೆ ಅವಿಭಾಜ್ಯ ಸಂಖ್ಯೆಗಳಲ್ಲಿ ವಿಶೇಷವಾದ ಆಸಕ್ತಿ. ಗಣಿತವನ್ನು ಶಾಸ್ತ್ರೀಯವಾಗಿ ಕಲಿಯಲಿಲ್ಲ. ಇವನ ಶ್ರೇಯಸ್ಸಿಗೋಸ್ಕರ ಅನೇಕ ನುರಿತ ಉಪಾಧ್ಯಾಯರು ಎಷ್ಟು ಬೋಧಿಸಿದರೂ ಇವನು ಗಣಿತದ ಇತರ ಭಾಗಗಳನ್ನು ಕಲಿಯಲೇ ಇಲ್ಲ. ಎಂಟು ಅಂಕಗಳುಳ್ಳ ಎರಡು ಸಂಖ್ಯೆಗಳ ಗುಣಲಬ್ಧವನ್ನು ೫೪ ಸೆಕೆಂಡುಗಳಲ್ಲಿಯೂ ೨೦ ಅಂಕಗಳುಳ್ಳ ಎರಡು ಸಂಖ್ಯೆಗಳ ಗುಣಲಬ್ಧವನ್ನು ೬ ನಿಮಿಷಗಳಲ್ಲಿಯೂ ಲೀಲಾಜಾಲವಾಗಿ ಹೇಳುತ್ತಿದ್ದ. ಗ್ರಂಥಾಲಯದಲ್ಲಿ ಒಂದು ಬಾರಿ ಮಾತ್ರ ಕಣ್ಣು ಹಾಯಿಸಿ, ಇಷ್ಟೇ ಪುಸ್ತಕಗಳಿವೆಯೆಂದು, ಕರಾರುವಾಕ್ಕಾಗಿ ಹೇಳುತ್ತಿದ್ದ. ಕಣ್ಣಿನಿಂದ ನೋಡಿದ ತಕ್ಷಣವೇ ಎಷ್ಟು ವಸ್ತುಗಳಿವೆಯೆಂಬುದನ್ನು ಗ್ರಹಿಸುವ ವಿಶೇಷ ಶಕ್ತಿಯು ಇವನಲ್ಲಿತ್ತು.

ಮಾಂಗಿಯಾಮೇಲಿಯು ಸಿಸಿಲಿ ದೇಶದವನು ೧೧ನೆಯ ವಯಸ್ಸಿನಲ್ಲಿ ಕುರಿ ಕಾಯುವುದು ಅವನ ಉದ್ಯೋಗವಾಗಿತ್ತು. ಆತ ಯಾವ ವಿದ್ಯಾಭ್ಯಾಸವನ್ನೂ ಮಾಡಿರಲಿಲ್ಲ. ೧೮೩೭ರಲ್ಲಿ ಪ್ಯಾರಿಸ್ಸಿಗೆ ಬಂದು ಗಣಿತ ಪ್ರದರ್ಶನವನ್ನು ಕೊಟ್ಟ. ಸಂಖ್ಯೆಗಳಲ್ಲಿ ಅಪರಿಮಿತ ಆಸಕ್ತಿ. ಅವನಿಗೆ ೩೭,೯೬,೪೧೬ ಘನಮೂಲವೆಷ್ಟೆಂದು ಕೇಳಿದಾಗ, ಒಂದು ನಿಮಿಷದ ಅವಧಿಯಲ್ಲಿ ೧೫೬ ಎಂದು ಉತ್ತರಿಸಿದ. ಆತ ಕಠಿಣ ಸಮೀಕರಣಗಳನ್ನು ಸುಲಭವಾಗಿ ಬಿಡಿಸುತ್ತಿದ್ದ.

ಹೆನ್ರಿ ಮಾಂಡಿಯೆಕ್ಸ್ ೧೮೨೬ ರಲ್ಲಿ ಟೂರ್ಸಿನಲ್ಲಿ ಜನ್ಮವೆತ್ತಿದ. ಇವನು ಸೌದೆ ಕಡಿಯುವವನ ಮಗ. ೭ ನೆಯ ವರ್ಷದಲ್ಲಿ ಕುರಿ ಕಾಯುತ್ತಿದ್ದಾಗ ಸಂಖ್ಯೆಗಳಿಗೆ ಸಂಬಂಧಪಟ್ಟಂತೆ ಲೆಕ್ಕಾಚಾರ ಮಾಡಲು ಪ್ರಾರಂಭಿಸಿದ. ಅವನಿಗೆ ಕ್ರಮಬದ್ಧವಾಗಿ ಗಣಿತವನ್ನು ಬೋಧಿಸಲು, ಟೂರ್ಸಿನಲ್ಲಿದ್ದ ಒಬ್ಬ ಉಪಾಧ್ಯಾಯನು ಬಹಳ ಶ್ರಮಪಟ್ಟರೂ ಸಾಧ್ಯವಾಗಲ್ಲ. ಲೆಕ್ಕ ಮಾಡುವಾಗ ಅಂಕಗಳನ್ನು ಬರೆಯಲುಬಾರದೇ ಇದ್ದುದರಿಂದ, ಆತ ಕಲ್ಲುಗಳನ್ನು ಉಪಯೋಗಿಸುತ್ತಿದ್ದನಾದರೂ ಸಂಖ್ಯೆಗಳನ್ನು ಎಂದಿಗೂ ಮರೆಯುತ್ತಿರಲಿಲ್ಲ. ಆದರೆ ಜನರ ಮತ್ತು ಸ್ಥಳಗಳ ಹೆಸರುಗಳನ್ನು ಮಾತ್ರ ಅವನಿರೆ ನೆನಪಿನಲ್ಲಿಟ್ಟುಕೊಳ್ಳಲಾಗುತ್ತಿರಲಿಲ್ಲ. ಮತ್ತೊಂದು ವಿಶೇಷವೇನೆಂದರೆ, ಸಮಸ್ಯೆಯನ್ನು ಮಾನಸಿಕವಾಗಿ ಬಿಡಿಸುತ್ತಿದ್ದಾಗಲೂ, ಇತರರೊಡನೆ ಸಮಸ್ಯೆಗೆ ಸಂಬಂಧಪಡದ ಇತರ ವಿಷಯಗಳನ್ನು ಮಾತನಾಡುತ್ತಾ ಅತ್ಯಲ್ಪ ಕಾಲದಲ್ಲಿ ಉತ್ತರವನ್ನು ಕೊಡುತ್ತಿದ್ದ. ದೊಡ್ಡ ದೊಡ್ಡ ಸಂಖ್ಯೆಗಳ ವರ್ಗಗಳನ್ನು ಮತ್ತು ಘನಗಳನ್ನು ಲೀಲಾಜಾಲವಾಗಿ ಹೇಳುತ್ತಿದ್ದ. ಒಂದು ಬಾರಿ "ಯಾವ ಎರಡು ಸಂಖ್ಯೆಗಳ ವರ್ಗಗಳ ವ್ಯತ್ಯಾಸವು ೧೩೩ ಆಗುತ್ತದೆ?" ಎಂದು ಪ್ರಶ್ನಿಸಿದಾಗ, ತಟಕ್ಕನೆ ೬೭ ಮತ್ತು ೬೬ ಎಂದನಂತೆ, ಇದು ಸರಿಯಾದ ಉತ್ತರ. ಆದರೆ ಇದಕ್ಕಿಂತ ಇನ್ನೂ ಸುಲಭವಾದ ಉತ್ತರ ಇದೆ ಎಂದು ಹೇಳಿದಾಗ, ಸ್ವಲ್ಪ ಹೊತ್ತು ಯೋಚಿಸಿ, ೧೩ ಮತ್ತು ೬ ಎಂದು ಉತ್ತರ ಕೊಟ್ಟನಂತೆ.

ಜಾಕ್ವಿಸ್ ಇನಾದಿಯು ಮಹಾ ಪ್ರಖ್ಯಾತಿ ಹೊಂದಿದ ವ್ಯಕ್ತಿ. ೧೮೬೭ರಲ್ಲಿ ಬಡ

ಕುಟುಂಬದಲ್ಲಿ ಆನೋರಾಟೋ ಎಂಬಲ್ಲಿ ಹುಟ್ಟಿದ. ಇವನು ೬ ನೆಯ ವಯಸ್ಸಿನಲ್ಲಿ ಕುರಿ ಕಾಯುತ್ತಿದ್ದಾಗ ಇವನಿಗೆ ಸಂಖ್ಯೆಗಳ ಮೇಲೆ ಆಸಕ್ತಿ ಕುದುರಿ ೭ ನೆಯ ವಯಸ್ಸಿನಲ್ಲಿ ಮಾನಸಿಕವಾಗಿ ೫ ಅಂಕಗಳ ಸಂಖ್ಯೆಯನ್ನು ಗುಣಿಸುವುದನ್ನು ಅಭ್ಯಾಸ ಮಾಡಿದ. ತಾಯಿಯು ಸತ್ತಮೇಲೆ, ಆತ ಅಣ್ಣನ ಜೊತೆಯಲ್ಲಿ ಹಣ ಸಂಪಾದನೆಗೋಸ್ಕರ ಊರುಗಳಲ್ಲಿ ಅಲೆದಾಡತೊಡಗಿದ. ಇವನ ತಲೆ ದಪ್ಪ; ಆಕಾರವೂ ಅಷ್ಟು ಚೆನ್ನಾಗಿರಲಿಲ್ಲ, ಇವನು ಒಂದು ಅಳಿಲನ್ನು ಸಾಕಿದ್ದ. ಅಣ್ಣನು ಒಂದು ವಾದ್ಯವನ್ನು ನುಡಿಸುತ್ತಿದ್ದಾಗ ಆತ ಅದಕ್ಕೆ ತಕ್ಕ ಹಾಗೆ ಅಳಿಲನ್ನು ಆಡಿಸುತ್ತಿದ್ದ. ಈ ಆಟವನ್ನು ನೋಡಿದವರು ಇವರಿಗೆ ಹಣ ಕೊಡುತ್ತಿದ್ದರು. ಇದೇ ಸಂದರ್ಭದಲ್ಲಿ, ಆಟ ಮುಗಿದ ಮೇಲೆ ಪ್ರೇಕ್ಷಕರ ಪೈಕಿ ಯಾರಲ್ಲಿಯಾದರೂ, ಗಣಿತದ ಬಗ್ಗೆ ಪ್ರಸ್ತಾಪ ಮಾಡಿದರೆ ಅವರು ಕೇಳಿದ ಪ್ರಶ್ನೆಗಳಿಗೆಲ್ಲಾ ಸಮಂಜಸವಾಗಿ, ಮಿಂಚಿನ ವೇಗದಲ್ಲಿ ಉತ್ತರವನ್ನು ಕೊಡುತ್ತಿದ್ದ. ಇವನು ತನ್ನ ೧೩ ನೆಯ ವಯಸ್ಸಿನಲ್ಲಿ ಪ್ಯಾರಿಸ್ಸಿಗೆ ಬಂದು ಒಂದು ಸಭೆಯಲ್ಲಿ ತನ್ನ ಅದ್ಭುತ ಶಕ್ತಿಯನ್ನು ಪ್ರದರ್ಶಿಸಿದ್ದ. ತನ್ನ ೨೦ ನೆಯ ವಯಸ್ಸಿನ ಹೊತ್ತಿಗೆ, ಓದುವುದನ್ನು ಮತ್ತು ಬರೆಯುವುದನ್ನು ಕಲಿತ. ಇವನಲ್ಲಿ ಕೆಲವು ವೈಲಕ್ಷಣ್ಯಗಳು ಇದ್ದುವು: ಕುಳ್ಳ, ಅರ್ಧ ಕಣ್ಣು ಮುಚ್ಚಿರುವುದು, ನೀರವಾದ ಮುಖ, ಸಂಕೋಚಸ್ವಭಾವ, ಮಿತಭಾಷಿ ಹಾಗೂ ಅಪಾರವಾದ ಜ್ಞಾಪಕಶಕ್ತಿ. ಒಮ್ಮೆ ಒಂದು ಸಭೆಯಲ್ಲಿ ೪೦೦ ಅಂಕಗಳುಳ್ಳ ಸಂಖ್ಯೆಯನ್ನು ನಿರರ್ಗಳವಾಗಿ ಹೇಳಿದನಂತೆ. ೨೨ ಅಂಕಗಳುಳ್ಳ ಒಂದು ಸಂಖ್ಯೆಯನ್ನು ಹೇಳಿದ ಒಂದು ವಾರದ ನಂತರ ಒಂದು ತಪ್ಪೂ ಇಲ್ಲದೆ ಆ ಸಂಖ್ಯೆಯನ್ನು ಮತ್ತೆ ಹೇಳಿದನಂತೆ. ಇದೇ ಪ್ರಶ್ನೆಯನ್ನು ಒಂದು ವಾರದ ನಂತರ ಕೇಳುತ್ತಾರೆಂದು ಅವನಿಗೆ ತಿಳಿದಿರಲಿಲ್ಲ.

ಯಾವ ಸಂಖ್ಯೆಯ ಘನಮೂಲ ಮತ್ತು ವರ್ಗಮೂಲಗಳ ವ್ಯತ್ಯಾಸವು ೧೮ ಆಗಿರುತ್ತದೆ? ಎಂಬ ಪ್ರಶ್ನೆಗೆ ಕೇವಲ ಎರಡು ನಿಮಿಷಗಳಲ್ಲಿ ೭೨೯ ಎಂದು ಉತ್ತರಿಸಿದ.

ಯಾವ ಸಂಖ್ಯೆಗಳ ವರ್ಗಗಳ ಮೊತ್ತವು ೧೩,೪೧೧ ಆಗುತ್ತದೆ ಎಂಬುದಕ್ಕೆ ಮೂರು ನಿಮಿಷಗಳ ನಂತರ ೧೧೫, ೧೩, ೪ ಮತ್ತು ೧ ಎಂದು ಉತ್ತರಿಸಿದನಂತೆ. ಒಂದು ನಿಮಿಷದ ನಂತರ ೧೧೩, ೨೫, ೪ ಮತ್ತು ೧ ಎಂದು ಇನ್ನೊಂದು ಉತ್ತರವಿತ್ತ. ಇನ್ನೂ ಸ್ವಲ್ಪ ಹೊತ್ತಿನ ನಂತರ ೧೧೩, ೨೩, ೮ ಮತ್ತು ೭ ಎಂದು ಮತ್ತೊಂದು ಉತ್ತರವನ್ನಿತ್ತ.

೧೯೨೪ರಲ್ಲಿ ಆತ ಗಣಕಯಂತ್ರಗಳ ಸಂಗಡವೂ ಪೈಪೋಟಿ ನಡೆಸಿದ. ಕೂಡುವುದು, ಕಳೆಯುವುದು, ಗುಣಿಸುವುದು, ವರ್ಗಮೂಲವನ್ನು ಕಂಡುಹಿಡಿಯುವುದು ಮುಂತಾದ ವಿಷಯಗಳಲ್ಲಿ ಗಣಕಯಂತ್ರಗಳಿಗಿಂತಲೂ ವೇಗವಾಗಿ ಮನಸ್ಸಿನಲ್ಲೇ ಲೆಕ್ಕ ಹಾಕಿ, ಉತ್ತರಗಳನ್ನಿತ್ತು, ಯಂತ್ರಗಳನ್ನು ಸೋಲಿಸಿ ತನ್ನ ಅದ್ಭುತ ಶಕ್ತಿಯನ್ನು ಪ್ರದರ್ಶಿಸಿದ, ಇಷ್ಟಾದರೂ, ಅಕ್ಷರಮಾಲೆಯ ಯಾವುದಾದರೂ ೫ ಅಥವಾ ೬ ಅಕ್ಷರಗಳನ್ನು ಇವನ ಮುಂದೆ ಹೇಳಿದಾಗ, ಅವುಗಳನ್ನು ಜ್ಞಾಪಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಪದ್ಯದಲ್ಲಿಯಾಗಲಿ ಗದ್ಯದಲ್ಲಿಯಾಗಲಿ ೨ ಸಾಲುಗಳನ್ನು ಹೇಳಲು ಸಹ ಬರುತ್ತಿರಲಿಲ್ಲ. ಆದರೆ ಗಣಿತದ ಸಮಸ್ಯೆಯನ್ನು ಮನಸ್ಸಿನಲ್ಲಿ ಲೆಕ್ಕ ಹಾಕುತ್ತಿದ್ದರೂ ಸಹ, ಹೊರಗಡೆ ಇತರರ ಜೊತೆಯಲ್ಲಿ ಹಾಸ್ಯವಾಗಿ ಮಾತನಾಡುತ್ತಿದ್ದ. ತನ್ನ ಅದ್ಭುತ ಶಕ್ತಿಯನ್ನು ಸತತವಾಗಿ ೫೦ ವರ್ಷಗಳ ವರೆಗೆ ಪ್ರದರ್ಶಿಸಿದ.

ಡೈಮಂಡಿಯು ಅಯೋನಿಯನ್ ದ್ವೀಪದ ಪೈಲರಾಸ್ ಎಂಬಲ್ಲಿ ೧೮೬೮ರಲ್ಲಿ ಜನ್ಮವೆತ್ತಿದ. ಇವನ ತಂದೆಯು ದವಸಧಾನ್ಯಗಳ ವ್ಯಾಪಾರ ಮಾಡುತ್ತಿದ್ದ. ವಿದ್ಯಾರ್ಥಿದೆಸೆಯಲ್ಲಿದ್ದಾಗ ಈತ ತರಗತಿಯಲ್ಲಿ ಗಣಿತದಲ್ಲಿ ಮೊದಲಿಗನಾಗಿದ್ದ. ತನ್ನ ೧೬ನೇ ವಯಸ್ಸಿನಲ್ಲಿ ಶಾಲೆಯನ್ನು ಬಿಟ್ಟು, ತನ್ನ ತಂದೆಯಂತೆಯೆ ವ್ಯಾಪಾರಮಾಡಲು ಪ್ರಾರಂಭಿಸಿದ. ಈ ಸಂದರ್ಭದಲ್ಲಿಯೇ ಅತಿವೇಗವಾಗಿ ಲೆಕ್ಕಾಚಾರಮಾಡುವ ವಿಶೇಷವಾದ ಶಕ್ತಿ ತನ್ನಲ್ಲಿದೆಯೆಂದು ಅವನಿಗೆ ಅರಿವಾಯಿತು. ಆತ ಈ ಅನ್ಯಾದೃಶಶಕ್ತಿಯನ್ನು ಬೆಳೆಸಿಕೊಂಡು

ಸಮಸ್ಯೆಗಳ ಉತ್ತರವನ್ನು ಕೊಡಲು ಕೆಲವು ಸುಲಭಕ್ರಮಗಳನ್ನು ಕಂಡುಹಿಡಿದ. ಇಷ್ಟೇ ಅಲ್ಲದೆ, ರುಮೇನಿಯನ್, ಫ್ರೆಂಚ್, ಜರ್ಮನ್ ಮತ್ತು ಇಂಗ್ಲಿಷ್ ಭಾಷೆಗಳನ್ನು ಚೆನ್ನಾಗಿ ಅಭ್ಯಾಸಮಾಡಿ, ಅವುಗಳಲ್ಲಿ ಕೆಲವು ಪದ್ಯಗಳನ್ನು ಕಥೆಗಳನ್ನೂ ಬರೆದ. ಗ್ರೀಸ್ ಮತ್ತು ರುಮೇನಿಯ ಗಳಲ್ಲಿ ಪ್ರದರ್ಶನವನ್ನು ಕೊಟ್ಟು ೧೮೯೩ರಲ್ಲಿ ಪ್ಯಾರಿಸ್ಸಿಗೆ ಬಂದು ಇನಾದಿಯನ್ನು ಭೇಟಿ ಮಾಡಲು ಆಶಿಸಿದ. ಕಾರಣಾಂತರದಿಂದ, ಇದು ಸಾಧ್ಯವಾಗಲಿಲ್ಲ. ಇನಾದಿಯು ಯಾವ ಮಹಾನ್-ವ್ಯಕ್ತಿಗಳ ಸಮ್ಮುಖದಲ್ಲಿ ತನ್ನ ಪ್ರತಿಭೆಯನ್ನು ತೋರಿಸಿದ್ದನೋ ಅದೇ ವ್ಯಕ್ತಿಗಳ ಮುಂದೆ ಡೈಮಂಡಿಯು ತನ್ನ ಶಕ್ತಿಯನ್ನು ತೋರಿ-ಸಿದ. ೫ ಅಂಕಗಳುಳ್ಳ ೫ ಸಾಲುಗಳನ್ನು ಕಾಗದದ ಮೇಲೆ ಬರೆದುದನ್ನು ಕೆಲವು ಸೆಕೆಂಡು-ಗಳಷ್ಟು ವೀಕ್ಷಿಸಿ, ಆಮೇಲೆ ಅದೇ ಅಂಕಗಳನ್ನು ಎಡದಿಂದ ಬಲಕ್ಕೂ, ಬಲದಿಂದ ಎಡಕ್ಕೂ, ಮೇಲಿನಿಂದ ಕೆಳಗೂ, ಕೆಳಗಿನಿಂದ ಮೇಲಕ್ಕೂ ಮತ್ತು ಸುರುಳಿಮಾಳಿಗೆ, ಸ್ವಲ್ಪವೂ ತಪ್ಪಿಲ್ಲದೆ ಹೇಳಿದನಂತೆ. ಇನಾದಿಯು ತಾನು ಕಿವಿಯಲ್ಲಿ ಕೇಳಿದ್ದನ್ನು ತಕ್ಷಣವೇ ಗ್ರಹಿಸಿ ಜ್ಞಾಪಕದಲ್ಲಿ ಇಟ್ಟುಕೊಳ್ಳುತ್ತಿದ್ದನಾದರೆ ಡೈಮಂಡಿಯು ತಾನು ಕಣ್ಣಿಂದ ನೋಡಿದ್ದನ್ನು ಸೂಕ್ಷ್ಮವಾಗಿ ಗ್ರಹಿಸಿ ಜ್ಞಾಪಕದಲ್ಲಿ ಇಟ್ಟುಕೊಳ್ಳುತ್ತಿದ್ದ. ಇನಾದಿಗೆ ಶ್ರವಣಶಕ್ತಿಯು ಅಧಿಕವಾಗಿತ್ತು; ಆದರೆ ಡೈಮಂಡಿಗೆ ದೃಕ್‌ಶಕ್ತಿ ಅಧಿಕವಾಗಿತ್ತು. ೧೫ ಅಂಕಗಳುಳ್ಳ ಸಂಖ್ಯೆಯನ್ನು ೫ ಅಂಕಗಳುಳ್ಳ ಸಂಖ್ಯೆಯಿಂದ ಗುಣಿಸಿದರೆ ಬರುವ ಗುಣಲಬ್ಧ-ವನ್ನು ಅರ್ಧ ನಿಮಿಷದಲ್ಲಿ ಉತ್ತರಿಸುತ್ತಿದ್ದ; ೧೦ ಅಂಕಗಳುಳ್ಳ ಸಂಖ್ಯೆಯ ವರ್ಗಮೂಲವನ್ನು ಮತ್ತು ಕೇವಲ ೨ ನಿಮಿಷಗಳಲ್ಲಿ ಉತ್ತರಿಸಿದ. ಇವನ ಶಕ್ತಿ ಎಷ್ಟು ಅದ್ಭುತವಾಗಿತ್ತೆಂದರೆ, ಕಾರ್ಯಕ್ರಮದ ಕೊನೆಯಲ್ಲಿ, ಮೊದಲಿನಿಂದ ಕಡೆಯ ವರೆಗೆ ಉಪಯೋಗಿಸಿದ ಎಲ್ಲಾ ಅಂಕ-ಗಳನ್ನು ಯಾವ ಸಮಸ್ಯೆಗೆ ಸಂಬಂಧಪಟ್ಟಂತೆ, ಕ್ರಮವಾಗಿ ಹೇಳುತ್ತಿದ್ದನಂತೆ. ಅವನು ಅತೀವ ವೇಗದಲ್ಲಿ ಹೇಳುತ್ತಿದ್ದುದನ್ನು ಅನುಸರಿಸಲು ಪ್ರೇಕ್ಷಕರಿಗೆ ಬಹಳ ಶ್ರಮವಾಗುತ್ತಿತ್ತು;

ಯಾವುದಾದರೂ ವರ್ಷದಲ್ಲಿ, ಯಾವುದಾದರೂ ತಿಂಗಳಿನಲ್ಲಿ, ಯಾವುದಾದರೂ ತಾರೀಖನ್ನು ಹೇಳಿದಾಗ, ಅದು ಯಾವ ದಿನವಾಗುವುದೆಂದು ತಕ್ಷಣವೇ ಹೇಳುತ್ತಿದ್ದನಂತೆ. ಇವನಲ್ಲಿ ಮತ್ತೊಂದು ವಿಚಿತ್ರ ಗುಣವಿತ್ತು. ತಾನು ಸಂಧಿಸಿದ ಎಲ್ಲಾ ವ್ಯಕ್ತಿಗಳ ಮುಖಗಳನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಂಡು ಅವರು ಎಂತಹ ಸ್ವಭಾವದವರೆಂದು ತಿಳಿದುಕೊಳ್ಳುತ್ತಿದ್ದ. ವ್ಯಕ್ತಿಯ ಸ್ವಭಾವವು ಮುಖಲಕ್ಷಣದಿಂದ ವ್ಯಕ್ತ-ಪಡುತ್ತದೆಂಬ ನಂಬಿಕೆ ಅವನಿಗಿತ್ತು. ಹಣೆಯ ಮೇಲಿನ ರೇಖೆಗಳು, ಕಣ್ಣಿನ ದೃಷ್ಟಿ ಮೂಗಿನ ಆಕಾರ, ತುಟಿಗಳ ರೂಪ, ಇವೇ ಮುಂತಾದ ಮುಖಸಾಮುದ್ರಿಕ ಲಕ್ಷಣಗಳನ್ನು ವಿಶೇಷವಾಗಿ ಅಭ್ಯಾಸ ಮಾಡಿ, ಅವನ ಇಡೀ ವ್ಯಕ್ತಿತ್ವವೇನೆಂ-ಬುದನ್ನು ಅರ್ಥಮಾಡಿಕೊಳ್ಳುತ್ತಿದ್ದ.

ಡೈಮಂಡಿಯ ತಂಗಿ, ಯುಲೇನಿ ಎಂಬವಳಿಗೂ ತನ್ನ ಅಣ್ಣನಂತೆಯೇ ಅದ್ಭುತ ಶಕ್ತಿಯಿತ್ತು; ತನ್ನಲ್ಲಿಯೂ ಸಹ ಈ ಪ್ರತಿಭೆ ಇರುವುದೆಂಬುದು ತನ್ನ ೭ ನೆಯ ವಯಸ್ಸಿನಲ್ಲಿಯೇ ಅವಳಿಗೆ ಅರಿವಾಯಿತು. ಅಣ್ಣನ ಪ್ರೋತ್ಸಾಹದಿಂದ ಅವಳೂ ಪ್ರದರ್ಶನಗಳನ್ನು ಕೊಡತೊಡಗಿದಳು. ಗಣಿತಕ್ಕೆ ಸಂಬಂಧಪಟ್ಟ ಮೂಲಕ್ರಿಯೆಗಳನ್ನು ಅತಿವೇಗದಿಂದ ಮಾಡುತ್ತಿದ್ದಳು. ಒಂದು ಅಂಕ-ವನ್ನು ೨೦ನೇ ಘಾತಕ್ಕೆ ಏರಿಸಿದಾಗ ಬರುವ ಉತ್ತರವನ್ನು ಸ್ವಲ್ಪವೂ ತಪ್ಪಿಲ್ಲದೆ ಹೇಳುತ್ತಿ-ದ್ದಳು. ಕೊಟ್ಟಿರುವ ಉತ್ತರವು ಸರಿಯೋ ಅಥವಾ ತಪ್ಪೋ ಎಂದು ತಿಳಿಯಬೇಕಾದರೆ ಪ್ರೇಕ್ಷಕರು ಅನೇಕ ಘಂಟೆಗಳವರೆಗೆ ಶ್ರಮಪಡ-ಬೇಕಾಗುತ್ತಿತ್ತು.

ಲೂಯಿ ಫ್ಲೆಯುರಿಯೂ ಇಂತಹ ಅದ್ಭುತ ಪ್ರತಿಭಾಶಾಲಿಯೆ. ಇವನು ೨೧, ಏಪ್ರಿಲ್ ೧೮೫೩ ರಲ್ಲಿ ಹುಟ್ಟಿದ. ಹುಟ್ಟುವಾಗಲೇ ವಿಪರೀತ ಕಾಯಿಲೆಯಾದುದರ ಪರಿಣಾಮ-ವಾಗಿ ದೃಷ್ಟಿಯನ್ನು ಕಳೆದುಕೊಂಡಿದ್ದರು. ತಂದೆ ತಾಯಿಗಳು ಇವನ ವಿಷಯದಲ್ಲಿ ತೋರಿಸಬೇಕಾದಷ್ಟು ಆಸಕ್ತಿ ತೋರಿಸಲಿಲ್ಲ. ಹೀಗಾಗಿ ಅವನು ಮತ್ತೊಬ್ಬರ ಆಶ್ರಯದಲ್ಲಿ ಬೆಳೆದು ತನ್ನ ನೇ ವರ್ಷದಲ್ಲಿ ಕುರುಡರ

ಶಾಲೆಗೆ ಸೇರಿದನು. ಸರಿಯಾಗಿ ನಡೆಯುವುದಾಗಲಿ ಅಥವಾ ತನ್ನ ಬಟ್ಟೆಗಳನ್ನು ಧರಿಸಲಿಕ್ಕಾಗಲಿ ಬರುತ್ತಿರಲಿಲ್ಲ. ತನ್ನ ೧೫ನೆಯ ವಯಸ್ಸಿನಲ್ಲಿ ಬುದ್ಧಿ [illegible] ದರಿದ್ರರಾದವರು ತೆರೆದಿರುವ ಅನಾಥವಿಹಾರಕ್ಕೆ ಸೇರಿದ. ಆ ವಿಹಾರದಲ್ಲಿ ವಾಸಿಸುತ್ತಿದ್ದವರ ಪೈಕಿ ಒಬ್ಬನಿಗೆ ಅಮುರುವಾಯು ಬರುತ್ತಿತ್ತು. ಅವನು ಒಮ್ಮೆ ಬಹಳ ಜೋರಾಗಿ [illegible] ನೆಲದ ಮೇಲೆ ಬಿದ್ದುಬಿಟ್ಟನು. ಆ ಕರ್ಕಶ ಧ್ವನಿಯು ಅಲ್ಲೇ ಹತ್ತಿರದಲ್ಲಿದ್ದ [illegible] ಹೆದರಿಕೆಯನ್ನುಂಟುಮಾಡಿದ ಪರಿಣಾಮವಾಗಿ ಜ್ವರ ಬಂದು ಬಹಳ ದಿನಗಳ ವರೆಗೆ ನರಳಿದ. ಈ ಸಂದರ್ಭದಲ್ಲೇ ಅವನ ಮನಸ್ಸಿನ ರೀತಿ-ನೀತಿಗಳು ಬದಲಾಯಿಸುತ್ತಾ ಬಂದವು. ಇದ್ದಕ್ಕಿದ್ದ ಹಾಗೆ ಮನಸ್ಸಿನಲ್ಲಿ ಅಂಕಗಳ [illegible] ಕ್ರಿಯೆಯನ್ನು ಮಾಡಲು ಪ್ರಾರಂಭಿಸಿದ, ಆಗಾಗ್ಗೆ ಮನಸ್ಸಿಗೆ ಉಲ್ಲಾಸವಾಗುತ್ತಿತ್ತು. ಈ ತರಹ ಕ್ರಿಯೆಯು ಅವನಿಗೆ ಮನೋರಂಜನದ ಆಟವಾಗಿ ಪರಿಣಮಿಸಿತು. ಎಷ್ಟೇ [illegible] ಸಂಖ್ಯೆಗಳಾಗಲಿ ಅವುಗಳನ್ನು [illegible] ರೀತಿಯಲ್ಲಿ [illegible] ಗುಣಿಸುವುದನ್ನು ಕಲಿತ. ಅನಾಥವಿಹಾರಗಳನ್ನು ಬಿಟ್ಟು ಫ್ರಾನ್ಸ್, ಇಂಗ್ಲೆಂಡ್ ಮತ್ತು ಅಮೇರಿಕಗಳಲ್ಲಿ [illegible] ತನ್ನ ಅದ್ಭುತಶಕ್ತಿಯನ್ನು ಪ್ರದರ್ಶಿಸಿದನು. ೧೯೨೭ ರಲ್ಲಿ ಪುನಃ ಫ್ರಾನ್ಸಿಗೆ ಬಂದು ಹೆಸರುವಾಸಿಯಾದ ಗಣಿತಜ್ಞರ ಮುಂದೆ ಒಂದು ಪ್ರದರ್ಶನವಿತ್ತ.

೫೫೩ ಮತ್ತು ೮೮ ರ ಗುಣಲಬ್ಧವು ೪೮೬೬೪ ಎಂದು ೨ ಸೆಕೆಂಡುಗಳಲ್ಲಿಯೂ ೬೪೯ ಮತ್ತು ೩೬೭ ರ ಗುಣಲಬ್ಧವು ೨,೩೮,೧೮೩ ಎಂದು ೧೦ ಸೆಕೆಂಡುಗಳಲ್ಲಿಯೂ ಉತ್ತರಿಸಿದ. ೫೨೮೭ ರ ವರ್ಗವು ೨,೭೯,೫೨,೩೬೯ ಎಂದು ೧೦ ಸೆಕೆಂಡುಗಳಲ್ಲಿಯೂ ೨ನ್ನು ೨೦ನೇ ಘಾತಕ್ಕೆ ಏರಿಸಿದರೆ ೧೦,೪೮,೫೭೬ ಎಂದು ೨೦ ಸೆಕೆಂಡುಗಳಲ್ಲಿ ಉತ್ತರಿಸಿದ.

[illegible] ವರ್ಗಗಳ ಮೊತ್ತವು ೬೧೩೭ ಆಗುತ್ತದೆ ಎಂದು ಪ್ರಶ್ನಿಸಿದಾಗ ಮನಸ್ಸಿನಲ್ಲೇ [illegible] ಸಮಸ್ಯೆಗೆ ೩ [illegible] ಉತ್ತರಗಳನ್ನು ಕೊಟ್ಟ. ಒಂದನೆಯ ಉತ್ತರ, ೭೪,೨೦,೧೫ ಮತ್ತು ೬. ಎರಡನೆಯ ಉತ್ತರ, ೭೬,೬,೪ ಮತ್ತು ೧, ಮೂರನೆಯ ಉತ್ತರ, ೭೬,೧೬, ೧೦ ಮತ್ತು ೬. ಈ ಉತ್ತರಗಳನ್ನು ಕೊಟ್ಟ ಅವಧಿ ಕೇವಲ ೫ [illegible] ಮಾತ್ರ. ಇವನಲ್ಲಿ ಒಂದು ವಿಚಿತ್ರವಾದ ಗುಣವಿತ್ತು. ಸಮಸ್ಯೆಗಳನ್ನು ಬಿಡಿಸುವಾಗ, ಕೈಬೆರಳುಗಳನ್ನು ವಿಶೇಷವಾಗಿ ಆಡಿಸುತ್ತಿದ್ದ. ನೋಡುವವರಿಗೆ ಆತ ಕಾಗದದ ಮೇಲೆ ಬರೆಯುತ್ತಿರುವಂತೆ ಭಾಸವಾಗುತ್ತಿತ್ತು. ವಿದ್ಯಾರ್ಥಿಗಳು ಗುಣಾಕಾರವನ್ನು ಮಾಡುವಾಗ, ಕೈಬೆರಳುಗಳನ್ನು ಉಪಯೋಗಿಸುವ ರೀತಿಯಲ್ಲಿಯೇ ಅವನು ಬೆರಳುಗಳನ್ನು ಆಡಿಸುತ್ತಿದ್ದ. ಇವನು ಸಹ ಇತರರಂತೆ, ದಿನಾಂಕ, ತಿಂಗಳು, ವರ್ಷ (ಭೂತ, ಭವಿಷ್ಯತ್) ಗಳನ್ನು ಕೊಟ್ಟಾಗ, ಅನಕ್ಕೆ ಸಂಬಂಧಪಟ್ಟ ವಾರವನ್ನು ತಕ್ಷಣವೇ ಹೇಳುತ್ತಿದ್ದ.


ಹುಟ್ಟಿದಾರಭ್ಯ ಕಾಯಿಲೆಯಿಂದಲೇ ನರಳುತ್ತಿದ್ದ ಮಿಲಿ ಬಸಾಕ್ ಫ್ರಾನ್ಸ್ ದೇಶದಲ್ಲಿ ಹುಟ್ಟಿದಳು. [illegible] ವರ್ಷದಲ್ಲಿ ಮಾತನಾಡಲು ಮತ್ತು ನಡೆಯಲು ಪ್ರಾರಂಭಿಸಿದಳು. ಆಕೆ ಯಾವ ಶಾಲೆಗೂ ಹೋಗದವಳಲ್ಲ. ತನ್ನ [illegible] ವಯಸ್ಸಿನ [illegible] ಓದುವುದನ್ನೂ ಬರೆಯುವುದನ್ನೂ ಕಲಿತಳು. ಒಂದು ಬಾರಿ ಯಾರೋ ಒಬ್ಬರು ಒಂದು ಗಣಿತದ ಕಾರ್ಯಕ್ರಮವನ್ನು ಏರ್ಪಡಿಸಿದ್ದನ್ನು ವೀಕ್ಷಿಸಿದಾಗ ತಾನು ಸಹ ಅವುಗಳನ್ನು ಮಾಡಬಹುದೆಂಬ ಭಾವನೆಯು ಅವಳಲ್ಲಿ ಉದ್ಭವವಾಯಿತು. ಈ ವಿಶೇಷ ಘಟನೆಯೇ ಕಾರಣವಾಗಿ ಅವಳೂ ಓರ್ವ ಸಂಖ್ಯಾಚತುರಳಾದಳು, ಅಂಕಗಳ ವಿಷಯದಲ್ಲಿ ಇವಳಿಗೆ ಅದ್ಭುತ ಜ್ಞಾಪಕಶಕ್ತಿಯಿತ್ತು. ಆದರೆ ನಿತ್ಯ ಜೀವನದಲ್ಲಿ ನಡೆದ ಸಂದರ್ಭಗಳನ್ನು ಜ್ಞಾಪಕ[illegible]

ಮಾರಿಸ್ ಡ್ಯಾಗ್‌ಬರ್ಟ್ ಎಂಬಾತನಿಗೆ [illegible]

ಇರಲಿಲ್ಲ. ಇವನು ೧೯೪೭ರಲ್ಲಿ ಪ್ಯಾರಿಸ್‌ನಗರದಲ್ಲಿ ಗಣಿತದ ಬಗ್ಗೆ ಪ್ರದರ್ಶನವಿತ್ತು ಜಾಕ್ವಿಸ್ ಇನಾಡಿಯಷ್ಟೆ ಹೆಸರುವಾಸಿಯಾದ. ಇವನು ಸಮಸ್ಯೆಗಳಿಗೆ ಉತ್ತರಿಸುವಾಗ ಕಣ್ಣು ಮುಚ್ಚಿಕೊಂಡಿರುತ್ತಿದ್ದ. ಕೆಲವು ಬಾರಿ ಎದುರಿಗಿರುವ ಬೆಳ್ಳಗಿರುವ ವಸ್ತುವನ್ನು ದೃಷ್ಟಿಸಿ ಉತ್ತರಿಸುತ್ತಿದ್ದ. ಹಾಗೆ ಬೆಳ್ಳಗಿರುವ ವಸ್ತುವನ್ನೇ ನೋಡುತ್ತಿದ್ದಾಗ ಕಪ್ಪು ಹಲಗೆಯ ಮೇಲೆ ಅಂಕಗಳನ್ನು ಸ್ಫುಟವಾಗಿ ಬರೆದಂತೆ ಅವನಿಗೆ ಗೋಚರವಾಗುತ್ತಿತ್ತು. ಇವನ ವಿದ್ಯಾಭ್ಯಾಸ ಕೇವಲ ಪ್ರಾಥಮಿಕಶಾಲೆಗೇ ಮುಕ್ತಾಯವಾಯಿತು. ತನ್ನ ೧೬ನೆಯ ವಯಸ್ಸಿನಲ್ಲಿ ಒಂದು ಬಾರಿ ಜಾಕ್ವಿಸ್ ಇನಾಡಿಯ ಪ್ರದರ್ಶನವನ್ನು ವೀಕ್ಷಿಸಿ ತನ್ನಲ್ಲಿಯೂ ಅಂತಹ ಅದ್ಭುತಶಕ್ತಿ ಇರಬಹುದೆಂದು ಭಾವಿಸಿ ಪ್ರಯತ್ನಪಟ್ಟು ಜಯಶಾಲಿಯಾದ. ಅಂದಿನಿಂದ ಅನೇಕ ಪ್ರದರ್ಶನಗಳನ್ನು ನೀಡಿ ಖ್ಯಾತಿಯನ್ನು ಪಡೆದ. ಪ್ರದರ್ಶನದ ಮಧ್ಯದಲ್ಲಿ ಕೆಲವು ಬಾರಿ ಪಿಟೀಲುವಾದ್ಯವನ್ನು ನುಡಿಸುತ್ತಿದ್ದ. ಮೊದಲಿನಿಂದ ಅತ್ಯಂತ ವರೆಗೆ ಯಾವ ಯಾವ ಅಂಕಗಳನ್ನು ಉಪಯೋಗಿಸಿದನೆಂಬುದನ್ನು ಕ್ರಮವಾಗಿ ಪ್ರದರ್ಶನದ ಕೊನೆಯಲ್ಲಿ, ಯಾವ ತಪ್ಪೂ ಇಲ್ಲದೆ, ನಿರ್ಗಳವಾಗಿ ಹೇಳಿ ಸಭೆಯನ್ನು ಮುಕ್ತಾಯಗೊಳಿಸುತ್ತಿದ್ದ. ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಸಂದರ್ಭದಲ್ಲಿಯಾಗಲಿ ಅಥವಾ ಲೆಕ್ಕಾಚಾರ ಮಾಡುವಾಗಲಾಗಲೀ, ಬರವಣಿಗೆ ಸಾಮಗ್ರಿಯನ್ನು ಎಂದೂ ಉಪಯೋಗಿಸಲಿಲ್ಲ.

ಆಸ್ಕರ್ ವೆರ್ಹ್ಯೂಘನು ೧೯೨೬ರ ಏಪ್ರಿಲ್ ತಿಂಗಳಿನಲ್ಲಿ ಬೆಲ್ಜಿಯಂನಲ್ಲಿ ಹುಟ್ಟಿದ. ಇವನ ತಂದೆ ಮತ್ತು ತಾತ ಸೇವಾವೃತ್ತಿಯನ್ನೇ ಅವಲಂಬಿಸಿ ಜೀವನವನ್ನು ಸಾಗಿಸುತ್ತಿದ್ದರು. ಈತ ಬಾಲ್ಯದಲ್ಲಿ ಅಷ್ಟೇನೂ ಬುದ್ಧಿವಂತನಾಗಿರಲಿಲ್ಲ. ತನ್ನ ೧೬ನೆಯ ವಯಸ್ಸಿನಲ್ಲಿಯೂ ೨ನೇ ವರುಷದ ಮಗುವಿನಂತೆಯೇ ತೊದಲುತ್ತಿದ್ದನು. ಇವನಿಗೆ ಪುನರುಕ್ತಿ ಅಂಕಗಳಲ್ಲಿ ವಿಪರೀತ ಆಸಕ್ತಿ. ೮೮೮, ೮೮೮,೮೮೮, ೮೮೮, ೮೮೮ ಎಂಬ ಸಂಖ್ಯೆಯ ವರ್ಗವನ್ನು ಕೇವಲ ೪೦ ಸೆಕೆಂಡುಗಳಲ್ಲಿ ತಿಳಿಸಿದನಂತೆ ಅದೇ ರೀತಿ ೯,೯೯೯,೯೯೯ ಅನ್ನು ೫ನೇ ಘಾತಕ್ಕೆ ಏರಿಸಿದರೆ ಬರುವ ಸಂಖ್ಯೆಯನ್ನು ಒಂದೇ ನಿಮಿಷದಲ್ಲಿ ಉತ್ತರಿಸಿದ.

ಈ ತರಹದ ಅದ್ಭುತಶಕ್ತಿಯನ್ನು ಪಡೆದ ಪ್ರತಿಭಾಶಾಲಿಗಳು ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಕಾಣಿಸಿಕೊಳ್ಳುತ್ತಿರುತ್ತಾರೆ. ಈ ಆದರೆ ಪವಾಡಗಳು ಕೇವಲ ಗಣಿತಕ್ಕೆ ಮಾತ್ರ ಸೀಮಿತವಾಗಿಲ್ಲ. ಸಂಗೀತ ಪ್ರಪಂಚದಲ್ಲೂ ಇಂತಹ ವ್ಯಕ್ತಿಗಳಿದ್ದ ಬಗ್ಗೆ ಸಾಕಷ್ಟು ಆಧಾರಗಳಿವೆ. ನಮ್ಮ ದೇಶದಲ್ಲೂ ಈ ರೀತಿಯಾದ ಮಹಾಪುರುಷರಿಗೇನೂ ಕೊರತೆಯಿರಲಿಲ್ಲ; ಆದರೆ, ಅವರಿಗೆ ಸಾಕಷ್ಟು ಪುರಸ್ಕಾರ, ಪ್ರಚಾರ ಸಿಗದೆ, ಯಾರ ಗಮನಕ್ಕೂ ಬಾರದೆ, ತಮ್ಮ ಜೀವನವನ್ನು ಎಲೆಯ ಮರೆಯ ಕಾಯಿಯಂತೆ ಸಾಗಿಸಿದರು. ಇವರ ಜೀವನಚರಿತ್ರೆಯಾಗಲಿ ಇವರಲ್ಲಿದ್ದ ಜ್ಞಾನ, ಪ್ರತಿಭೆಯ ವಿಷಯವಾಗಲೀ, ವ್ಯಕ್ತಿಪರಿಚಯವಿದ್ದವರೂ ಹೊರಗಿನ ಪ್ರಪಂಚಕ್ಕೆ ತಿಳಿಸಲಿಲ್ಲ. ಹೀಗಾಗಿ ಅನೇಕ ಮಹಾವ್ಯಕ್ತಿಗಳು ಬೆಳಕನ್ನೇ ಕಾಣದೆ, ಹಾಗೆಯೇ ನಶಿಸಿಹೋಗಿದ್ದಲ್ಲಿ ಆಶ್ಚರ್ಯವಿಲ್ಲ. ಆದರೆ ರಾಮಾನುಜಮ್ ಅವರಿಗಾಗಲಿ ಮೈಸೂರಿನ ಶಕುಂತಲಾದೇವಿಗಾಗಲಿ ಈ ಸ್ಥಿತಿ ಒದಗಲಿಲ್ಲವೆನ್ನುವುದು ಒಂದು ಸುದೈವದ ಸಂಗತಿ. ★



ಜಿ. ಆರ್. ರಂಗಸ್ವಾಮಯ್ಯ

[illegible]...

ಮಾನವನ ಎದೆಗೂಡಿನಲ್ಲೊಂದು ಅಸಾಮಾನ್ಯ ಯಂತ್ರವಿದೆ. ಇದು ಮಗು ಜನಿಸುವುದಕ್ಕಿಂತ ಕೆಲವು ತಿಂಗಳುಗಳ ಮೊದಲೆ ಕಾರ್ಯಾರಂಭ ಮಾಡಿ, ಮಗು ಬೆಳೆದು ವೃದ್ಧವಾಗಿ ಸಾಯುವ ವರೆಗೂ ಕಾರ್ಯ ನಿಲ್ಲಿಸುವುದೇ ಇಲ್ಲ. ಮಗು ಹುಟ್ಟಿದಾಗ ಈ ಯಂತ್ರದ ಗಾತ್ರ ಒಂದೂವರೆ ಅಂಗುಲಕ್ಕಿಂತ ಸ್ವಲ್ಪ ಸಣ್ಣದು; ತೂಕ ಸುಮಾರು ೨೮ ಗ್ರಾಮುಗಳಷ್ಟು. ತಾಯಿಯ ಗರ್ಭದಲ್ಲಿ ಇದು ಭ್ರೂಣಾವಸ್ಥೆಯಲ್ಲಿ ಒಂದು ಸಣ್ಣ ಕೊಳವೆಯಂತಿದ್ದು ಕ್ರಮೇಣ ಮಡಚಿಕೊಂಡು ಇಬ್ಭಾಗವಾಗಿ ಕೊನೆಗೆ ಒಂದು ಜಟಿಲ ಯಂತ್ರವಾಗಿ ಅಭಿವೃದ್ಧಿಗೊಳ್ಳುತ್ತದೆ.

ಇದು ಪ್ರತಿನಿತ್ಯ ಆರಂತಸ್ತಿನ ಮೇಲಕ್ಕೆ ಆರು ಜನರನ್ನು ಇಪ್ಪತ್ತು ಸಾರಿ ಹೊತ್ತೊಯ್ಯುವ ಲಿಫ್ಟ್ ಮಾಡುವಷ್ಟು ಕೆಲಸವನ್ನು ಮಾಡುತ್ತದೆ. ಇಪ್ಪತ್ತು ಗಜ ಅಗಲದ ಎರಡು ಮೈಲಿ ಉದ್ದದ ರಸ್ತೆಯನ್ನು ನೆನೆಸಬಲ್ಲ ನೀರಿನ ತೊಟ್ಟಿಯನ್ನು ಪ್ರತಿದಿನವೂ ಈ ಯಂತ್ರ ತುಂಬಬಲ್ಲದು. ಒಂದೆರಡು ನಿಮಿಷಗಳ ಅವಧಿಯಲ್ಲಿ ಮೂವತ್ತು ಪೌಂಡಿನಷ್ಟು ರಕ್ತ ಈ ಯಂತ್ರದಲ್ಲಿ ಹಾದು ಹೋಗುತ್ತದೆ. ಈ ಅವಧಿಯಲ್ಲಿ ಇದು ೭೫–೮೦ ಸಾರಿ ಕುಗ್ಗಿ–ಹಿಗ್ಗುತ್ತದೆ. ಸಾಮಾನ್ಯವಾಗಿ ಇದರ ತೂಕ ಒಂದು ಪೌಂಡಿಗಿಂತ ಕಡಿಮೆ.

ಈ ಯಂತ್ರದ ಹೆಸರನ್ನು ಸ್ತುತಿಸದ ಕಾವ್ಯ ಪ್ರಕಾರವಿಲ್ಲ. ಯಾವ ದೇಶದ ಗಾದೆಗಳನ್ನು ತೆಗೆದುಕೊಂಡರೂ 'ಪ್ರೇಮ' ಎಂಬ ಪದದ ನಂತರದ ಸ್ಥಾನ ಈ ಹೆಸರಿಗೇ ಸಲ್ಲುತ್ತದೆ. ಪ್ರೇಮಿಗಳ ಚುಂಬನ ಮಾತ್ರದಿಂದಲೇ ರಕ್ತದ ಒತ್ತಡವನ್ನು ಗಣನೀಯವಾಗಿ ಹೆಚ್ಚಿಸುವ ಈ ಯಂತ್ರದ ಹೆಸರೇ 'ಹೃದಯ'.

ಬಿಗಿ ಹಿಡಿದ ನಿಮ್ಮ ಮುಷ್ಟಿಯಷ್ಟಿರುವ ಈ ಹೃದಯದ ಕೆಲಸ ನಿಜಕ್ಕೂ ಅದ್ಭುತ. ೩,೩೬೩,೮೪೦,೦೦೦ ನಿರಂತರ ಮಿಡಿತಗಳ ಬಳಿಕ ಇದು ವಿಶ್ರಾಂತಿ ತೆಗೆದುಕೊಂಡಿದೆಯೆಂದರೆ ಎಂಭತ್ತು ವರ್ಷದವನೊಬ್ಬ ಸತ್ತನೆಂದರ್ಥ. ಈ ಮಿಡಿತದ ಪ್ರಮಾಣ ಒಂದೇ ಅಲ್ಲ. ಬೇರೆ ಬೇರೆ ಪ್ರಾಣಿಗಳಲ್ಲಿ ಬೇರೆ ಬೇರೆ. ಒಂದೇ ಜಾತಿಯ ಪ್ರಾಣಿಗಳಲ್ಲೂ ಶಾರೀರಕ, ಮಾನಸಿಕ ಸ್ಥಿತಿಗಳ

260-9

ನ್ನನುಸರಿಸಿ ಬೇರೆ ಬೇರೆ. ಮಾನವನ ಹೃದಯ ನಿಮಿಷಕ್ಕೆ ಸರಾಸರಿಯಾಗಿ ೭೫-೮೦ ಸಲ ಬಡಿದು ಕೊಂಡರೆ ಆನೆ ಮತ್ತು ಕುದುರೆಗಳಲ್ಲಿ ೨೫-೪೦ ಸಲವೂ, ಇಲಿಗಳಲ್ಲಿ ೩೦೦-೫೦೦ ಸಲವೂ ಬಡಿದುಕೊಳ್ಳುತ್ತದೆ. ಪಕ್ಷಿಗಳಲ್ಲಿ ಈ ಪ್ರಮಾಣ ಇನ್ನೂ ಹೆಚ್ಚು.

ಹೃದಯದ ಅಸ್ತಿತ್ವವನ್ನು ಮೊದಲು ಗುರುತಿಸಿದವರಾರು ? ಈ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟ. ಬಹಳ ಹಿಂದೆಯೇ ಅರಿಸ್ಟಾಟಲನು ಆತ್ಮದ ಆವಾಸಸ್ಥಾನ ಹೃದಯ ಎಂದು ಹೇಳಿದ್ದ. ಎರಡನೆ ಶತಮಾನ ದಲ್ಲೇ ಗೇಲನ್ ಎಂಬಾತ ಹೃದಯದ ಬಡಿತಕ್ಕೂ ನಾಡಿಯ ಮಿಡಿತಕ್ಕೂ ಸಂಬಂಧವಿದೆ ಯೆಂದು ಸ್ಪಷ್ಟಪಡಿಸಿದ್ದ. ಕ್ರಿ. ಪೂ. ೫ ಮತ್ತು ೪ ನೆಯ ಶತಮಾನದಷ್ಟು ಪೂರ್ವದಲ್ಲಿಯೆ ಹೃದಯದ ಚಟುವಟಿಕೆಗಳ ಬಗ್ಗೆ ಗ್ರೀಸ್ ದೇಶದ ಜನ ಸಾಕಷ್ಟು ತಿಳಿದುಕೊಂಡಿದ್ದರು. ಹಿಪ್ಪೋಕ್ರೆಟಿಸ್ ನಾಡಿಯ ಬಡಿತವನ್ನೂ ಹೆರೋಫಿಲಸ್ ಇದರ ಗತಿಯನ್ನೂ ಇರೋಸಿಸ್ಟ್ರೇಟಸನು ಹೃದಯದ ಕವಾಟಗಳ ಬಗೆಗೂ ವಿವರಣೆ ನೀಡಿದ್ದಾರೆ. ಇದಾಗಿ ಅನೇಕ ಶತಮಾನಗಳ ಬಳಿಕ ಫ್ರಾನ್ಸಿನ ಲಿಯೋನಾರ್ಡೊ-ದ-ವಿಂಚಿಯಂಥವರು ಹೃದಯದ ರಚನೆಯನ್ನು ಬಿಡಿಸಿದ್ದಾರೆ.

೧೬೨೮ರಲ್ಲಿ ವಿಲಿಯಂ ಹಾರ್ವೆ ರಕ್ತ ಪರಿಚಲನೆಯ ಲಕ್ಷಣಗಳನ್ನು ಗುರುತಿಸುವಲ್ಲಿ ಮೊದಲಿಗ. ಇವನು ಒದಗಿಸಿದ ಹಿನ್ನೆಲೆಯೇ ಮುಂದಿನ ಸಂಶೋಧನೆಗಳಿಗೆ ದಾರಿದೀಪ.

ಹೃದಯ ರೋಗಗಳು ಇಂದು ನಿನ್ನೆಯವಲ್ಲ. ಸಾವಿರಾರು ವರ್ಷಗಳಷ್ಟು ಹಳೆಯದಾದ ಮಮ್ಮಿಗಳಲ್ಲಿಯೆ ಅವುಗಳ ಕುರುಹುಗಳನ್ನು ಕಾಣಬಹುದು.

ನಾವು ಕಟ್ಟಿಕೊಳ್ಳುವ ಕೈಗಡಿಯಾರದ ಮೂರನೆ ಮುಳ್ಳು ಹೃದಯದ ಬಡಿತಕ್ಕೆ ಸಂಬಂಧಿಸಿದೆಯೆಂದು ಹೇಳಿದರೆ ಆಶ್ಚರ್ಯ-ವಾದೀತು. ಆಂಗ್ಲ ವೈದ್ಯ ಸರ್ ಜಾನ್ ಫ್ಲೋಯರ್ (೧೬೪೯-೧೭೩೪) ಎಂಬುವನು ಹೃದಯ ಮತ್ತು ನಾಡಿಯ ಬಡಿತಗಳನ್ನು ನಿರುವಾಕ್ಯವಾಗಿ ಕಾಲಮಿತಿಗೊಳಪಡಿಸಿದರೆ ಮಾತ್ರ ಹೃದಯ ಗತಿಯನ್ನು ಅಳೆಯಬಹುದೆಂದು ಸೂಚಿಸಿದ. ಆಗ ಕೈಗಡಿಯಾರಗಳಲ್ಲಿ ಸೆಕೆಂಡಿನ ಮುಳ್ಳು ಇಲ್ಲದ್ದರಿಂದ ಒಂದು ನಿಮಿಷ ಮಾತ್ರ ಚಲಿಸಿ ನಿಲ್ಲುವಂಥ ವಿಶೇಷ ಗಡಿಯಾರವನ್ನು ಅವನು ತಯಾರಿಸಿದ. ಕೆಲವು ವರ್ಷಗಳ ನಂತರ ಸ್ವಿಟ್ಸರ್‌ಲೆಂಡಿನ ಗಡಿಯಾರ ತಯಾರಕನೊಬ್ಬ ವೈದ್ಯರು, ಖಗೋಳಶಾಸ್ತ್ರ-ಜ್ಞರು ಹಾಗೂ ಸಂಚಾರಿಗಳಿಗೆ ಉಪಯೋಗ-ವಾಗಲೆಂದು ಸೆಕೆಂಡಿನ ಮುಳ್ಳುಗಳನ್ನಳವಡಿಸಿದ ಗಡಿಯಾರಗಳನ್ನು ತಯಾರಿಸಿದ.

೧೯೩೫ ರಲ್ಲಿ ಫ್ರೆಂಚ್ ವಿಜ್ಞಾನಿಯೊಬ್ಬ ಹೃದಯದ ವಿದ್ಯುತ್ ಚಾಲಕ ಬಲವನ್ನು ಗುರುತಿಸುವಂಥ ವಿಶೇಷ ಸಾಧನವೊಂದನ್ನು ರೂಪಿಸಿದ. ವಿಷಾನಿಲಗಳಿಂದ ಮರಣವನ್ನಪ್ಪಿ-ದವರ ಹೃದಯದ ವಿದ್ಯುತ್‌ಚಾಲಕ ಬಲವನ್ನು ವ್ಯಕ್ತಿ ಸತ್ತ ಅರ್ಧ ಗಂಟೆಯವರೆಗೂ ಈ ಸಾಧನದಿಂದ ಗುರುತಿಸಬಹುದು.

ಮುಂದುವರಿದ ಶಸ್ತ್ರಕ್ರಿಯಾ ಪದ್ಧತಿ-ಗಳಿಂದಾಗಿ ಗಾಯಗೊಂಡ ಹೃದಯಗಳನ್ನು ಶಸ್ತ್ರಚಿಕಿತ್ಸೆಗೊಳಪಡಿಸಿ ಗುಣಪಡಿಸುವುದು ದ್ವಿತೀಯ ಮಹಾಯುದ್ಧದ ಸಮಯದಲ್ಲಿ ರಣರಂಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಡಾಕ್ಟರರಿಗೆ ದೈನಂದಿನ ಕೆಲಸವಾಗಿಬಿಟ್ಟಿತು. ತತ್ಪರಿಣಾಮವಾಗಿ ಹೃದಯ ಕ್ಷತಿಗೊಂಡು ಸಾಯುವವರ ಸಂಖ್ಯೆ ಶೇಕಡಾ ೪೨ ರಿಂದ ಶೇಕಡಾ ೧೬ ಕ್ಕಿಳಿಯಿತು. ೧೮೯೬ ರಲ್ಲಿ ಗುಯಿಡೊ ಫರಿನಾ ಮತ್ತು ಎಲ್. ರೆಹ್ನ್ ಎಂಬುವರು ಮೊದಲ ಬಾರಿಗೆ ಹೃದಯದ ಶಸ್ತ್ರ ಚಿಕಿತ್ಸೆ ನಡೆಸಿದರು. ಇದೇ ಸಮಯದಲ್ಲಿ ಬರ್ಲಿನ್ನಿನ ಪ್ರೊಫೆಸರ್ ಸಾಯರ್‌ಬ್ರುಕ್ ಎಂಬು-ವರು ವ್ಯಕ್ತಿಯೊಬ್ಬನ ಹೃದಯದಲ್ಲಿ ನೆಟ್ಟ ಚಾಕುವನ್ನು ಹೊರತೆಗೆದು ಹರಿದು ಹೋದ ಭಾಗ ವನ್ನು ಸರಿಪಡಿಸಿದರು.

ಕಳೆದ ಶತಮಾನದ ಅಂತ್ಯದ ವರೆಗೂ ಯುರೋಪಿನ ಕೆಲವು ರಾಜಮನೆತನಗಳಲ್ಲಿ ಯಾರಾದರೂ ಸತ್ತರೆ ಅವರ ಹೃದಯವನ್ನು ಶರೀರದಿಂದ ಬೇರ್ಪಡಿಸಿ ಬೇರೆಯಾಗಿಯೇ

ಸಮಾಧಿ ಮಾಡುತ್ತಿದ್ದರು. ಇಂಗ್ಲೆಂಡಿನ ವೆಸ್ಟ್ ಮಿನಿಸ್ಟರ್ ಅಬೆಯಲ್ಲಿ ಈಗಲೂ ಎಲಿಜಬೆತ್ ರಾಣಿ, ಅವಳ ಸಹೋದರಿ ಮೇರಿ, ಎರಡನೆಯ ಚಾರ್ಲ್ಸ್ ಮತ್ತು ಮಹಾರಾಣಿ ಅನ್ನೆಯರ ಹೃದಯಗಳನ್ನು ಸಮಾಧಿ ಮಾಡಲಾಗಿದೆ. ಫ್ರಾನ್ಸ್ ದೇಶದ ದೊರೆಗಳ ಹೃದಯಗಳನ್ನು ಸಮಾಧಿಮಾಡದೆ ತೈಲಗಳಿಂದ ರಕ್ಷಿಸಿ ಅವರ ಅಂತಿಮ ಇಷ್ಟದಂತೆ ಚರ್ಚ್ ಅಥವಾ ಕ್ರೈಸ್ತ ಮಠಗಳಿಗೆ ಒಪ್ಪಿಸುತ್ತಿದ್ದರು.

ಸ್ಕಾಟ್ಲೆಂಡಿನ ದೊರೆ ರಾಬರ್ಟ್ ಬ್ರೂಸ್ ತಾನು ಸತ್ತ ಮೇಲೆ ತನ್ನ ಹೃದಯವನ್ನು 'ಪವಿತ್ರ ಭೂಮಿ'ಯಲ್ಲಿ ಹೂಳಬೇಕೆಂದು ತನ್ನ ಇಷ್ಟಮಿತ್ರ ಸರ್ ಜೇಮ್ಸ್ ಡಗ್ಲಾಸನಿಗೆ ಹೇಳಿದ. ಅವನು ಅವನ ಅಂತಿಮ ಇಚ್ಛೆಯನ್ನು ಮನ್ನಿಸಲು ದೊರೆಯ ಹೃದಯವನ್ನು ಬೆಳ್ಳಿಯ ಕರಂಡಕವೊಂದರಲ್ಲಿಟ್ಟು, ಕೊರಳಿಗೆ ಕಟ್ಟಿಕೊಂಡು ಪ್ಯಾಲೆಸ್ಟೈನ್‌ಗೆ ಹೊರಟ. ಮಾರ್ಗ ಮಧ್ಯೆ ಅವನಿಗೆ ಮೂರ್ ಜನರನ್ನು ಎದುರಿಸಬೇಕಾಗಿ ಬಂದು ಅವರೊಡನೆ ನಡೆದ ಹೋರಾಟದಲ್ಲಿ ಸತ್ತ. ಅವನ ಶರೀರದಡಿ ಬಿದ್ದಿದ್ದ ಆ ಹೃದಯವನ್ನು ಮತ್ತೆ ಸ್ಕಾಟ್ಲೆಂಡ್‌ಗೆ ತಂದು ಮೆಲ್ರೋಸ್ ಅಬೆಯಲ್ಲಿ ಸಮಾಧಿ ಮಾಡಲಾಯಿತು.

ಒಂದನೆಯ ಎಡ್ವರ್ಡ್ ದೊರೆಯು ರಾಬರ್ಟ್ ಬ್ರೂಸ್‌ನ ಹಾಗೆಯೇ ತನ್ನ ಹೃದಯವನ್ನು ಪ್ಯಾಲೆಸ್ಟೈನ್‌ಗೆ ಕಳಿಸಬೇಕೆಂದೂ ಉಯಿಲನ್ನು ಬರೆದು ಅದಕ್ಕಾಗಿ ಎರಡು ಸಾವಿರ ಪೌಂಡ್‌ಗಳನ್ನೂ ಬಿಟ್ಟುಹೋದ. ಈ ಹಣವನ್ನು ದುರುಪಯೋಗಪಡಿಸಿಕೊಂಡವರಿಗೆ ನರಕ ಪ್ರಾಪ್ತಿಯಾಗುವುದೆಂದೂ ಆತ ಆ ಉಯಿಲಿನಲ್ಲಿ ಬರೆದಿದ್ದ. ಆದರೆ ಕಾರಣಾಂತರದಿಂದ ಕೊನೆಗೂ ಅವನ ಅಂತಿಮ ಇಚ್ಛೆ ಪೂರೈಸಲೇ ಇಲ್ಲ.

ಇಂಗ್ಲೆಂಡಿನ ಲಾರ್ಡ್ ಬೈರನ್ ಕವಿಯ ಹೃದಯವನ್ನು ಬೆಳ್ಳಿಯ ಕರಂಡಕವೊಂದರಲ್ಲಿ ನ್ಯೂಸ್ಟೆಡ್ ಅಬೆಯಲ್ಲಿ ಸಮಾಧಿ ಮಾಡಲಾಗಿದೆ.

ಎಡಗೈ ಉಂಗುರದ ಬೆರಳಿಗೂ ಹೃದಯಕ್ಕೂ ನೇರ ಸಂಬಂಧವಿದೆಯೆಂಬ ನಂಬುಗೆಯೊಂದಿದೆ. ಈ ಬೆರಳಿನ ಧಮನಿಯೊಂದು ಹೃದಯದೊಡನೆ ನೇರ ಸಂಬಂಧವಿಟ್ಟುಕೊಂಡಿದೆಯಂತೆ. ಹೃದಯೇಶ್ವರಿಗೆ ಉಂಗುರವನ್ನು ಪ್ರೇಮದ ಕಾಣಿಕೆಯಾಗಿ ನೀಡುವುದು ಇದೇ ಕಾರಣದಿಂದ ಎಂದೂ ಅನ್ನುವವರಿದ್ದಾರೆ. ಆದರೆ ಈ ಭಾವನೆಗೆ ವೈದ್ಯಕೀಯ ಆಧಾರವಿಲ್ಲ.

ಹೃದಯಕ್ಕೆ ಸೂಜಿಯಿಂದ ಚುಚ್ಚಿಯೂ ಅದರ ಕ್ರಿಯೆಯನ್ನು ಚುರುಕುಗೊಳಿಸಬಹುದಂತೆ. ಮ್ಯಾಂಚೆಸ್ಟರ್‌ನ ವೈದ್ಯರೊಬ್ಬರು ಶಸ್ತ್ರಚಿಕಿತ್ಸೆಗೊಳಪಡಿಸಿರುವಾಗ ಹೃದಯ ತನ್ನ ಕ್ರಿಯೆ ನಿಲ್ಲಿಸಿದರೆ ಉದ್ದನೆಯ ಸೂಜಿಯೊಂದನ್ನು



ಚುಚ್ಚಿ ಅದು ಕಾರ್ಯ ನಿರ್ವಹಿಸುವಂತೆ ಮಾಡಬಹುದೆಂದು ಹೇಳುತ್ತಾರೆ.

ಕಳೆದ ಮಹಾಯುದ್ಧದ ಸಮಯದಲ್ಲಿ ಆಸ್ಟ್ರಿಯದ ಯೋಧನೊಬ್ಬ ಆಸ್ಪತ್ರೆಗೆ ದಾಖಲಾದ. ವೈದ್ಯರು ಅವನನ್ನು ಪರೀಕ್ಷಿಸಿದಾಗ ಅವನಿಗೆ ಎರಡು ಹೃದಯಗಳಿದ್ದುದು ಪತ್ತೆಯಾಯಿತು. ಅವು ತಮ್ಮ ಕಾರ್ಯವನ್ನು ಸಮನಾಗಿ ಹಂಚಿಕೊಂಡು ಒಂದಾದಮೇಲೊಂದರಂತೆ ಬಡಿಯುತ್ತಿದ್ದವಂತೆ. ತಜ್ಞರೊಬ್ಬರು ಅವುಗಳನ್ನು ನಿಖರವಾಗಿ ಪರೀಕ್ಷಿಸಿದ ಬಳಿಕ ಎರಡೂ ಹೃದಯಗಳು ತುಂಬಾ ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿವೆಯೆಂದೂ ಈತ ಬಹುಕಾಲ ಬದುಕುತ್ತಾನೆಂದೂ ಅಭಿಪ್ರಾಯಪಟ್ಟರು. ಅಪರೂಪಕ್ಕೊಮ್ಮೆ ಹೃದಯ ಎದೆಯ ಬಲಗಡೆಗೂ ಇರುವುದುಂಟು. ಇತ್ತೀಚೆಗೆ ದಕ್ಷಿಣ ಆಫ್ರಿಕದ ಆರೆಂಜ್ ಫ್ರೀ ಸ್ಟೇಟ್‌ನಲ್ಲಿ ಇಂಥ ಇಬ್ಬರನ್ನು ಗುರುತಿಸಲಾಗಿದೆ.

ಇತ್ತೀಚೆಗೆ ಅರ್ಬುದ ರೋಗಕ್ಕೆ ತುತ್ತಾಗುವವರಿಗಿಂತ ಹೆಚ್ಚು ಮಂದಿ ಹೃದಯ ರೋಗಗಳಿಗೆ ತುತ್ತಾಗುತ್ತಿದ್ದಾರೆ, ಅವರಲ್ಲಿ ರಕ್ತದ ಅತಿ ಒತ್ತಡಕ್ಕೆ ತುತ್ತಾದವರೇ ಹೆಚ್ಚು. ಆಧುನಿಕತೆಗೆ ತೆರಬೇಕಾದ ಬೆಲೆ ನಿಜಕ್ಕೂ ಬಹು ದೊಡ್ಡದು. ಹಳ್ಳಿಗಾಡಿನವರಿಗಿಂತ ನಗರವಾಸಿಗಳೇ ಹೆಚ್ಚಾಗಿ ಹೃದಯರೋಗಗಳಿಗೆ ಬಲಿಯಾಗುತ್ತಿದ್ದಾರೆ.

ಕ್ರೀಡಾಪಟುಗಳು ಸಾಮಾನ್ಯವಾಗಿ ತಮ್ಮ ಇಳಿವಯಸ್ಸಿನಲ್ಲಿ ಹೃದಯ ರೋಗಗಳಿಗೆ ತುತ್ತಾಗುತ್ತಿರುವುದರ ಕಾರಣ ಅವರ ಹಿಂದಿನ ಕ್ರೀಡಾ ಚಟುವಟಿಕೆಗಳಲ್ಲ; ಅವರ ಉತ್ತಮ ಕ್ರೀಡಾ ಚಟುವಟಿಕೆಗಳಿಗೆ ಪೂರಕವಾಗಲು ಅಗತ್ಯಕ್ಕೂ ಮೀರಿ ವೃದ್ಧಿಗೊಂಡ ನರವ್ಯೂಹವೆಂದು ವೈದ್ಯರು ಹೇಳುತ್ತಿದ್ದಾರೆ.

ದಕ್ಷಿಣ ಆಫ್ರಿಕದ ಡಾ. ಕ್ರಿಶ್ಚಿಯನ್ ಬರ್ನಾರ್ಡ್ ಪ್ರಪ್ರಥಮವಾಗಿ ಹೃದಯ ಕಸಿ ಮಾಡಿದ್ದು ಯಾರಿಗೆ ತಾನೇ ಗೊತ್ತಿಲ್ಲ? ಹೃದಯ ಸ್ಪಂದನ ಉಪಕರಣವೂ (pace maker) ಇಂದು ಲಭ್ಯ. ಬ್ಯಾಟರಿಯಿಂದ ನಡೆಯುವ ಕೃತಕ ಹೃದಯಗಳಿಗೂ ಇಂದು ಕೊರತೆಯಿಲ್ಲ. ಆದರೆ ಅದನ್ನು ಕೊಳ್ಳಲು ಸಾಕಷ್ಟು ಹಣವಿರಬೇಕಷ್ಟೆ. ★

ದುಡ್ಡು

ದುಡ್ಡು ಹಾಸಿಗೆಯನ್ನು ಕೊಂಡುಕೊಳ್ಳಬಹುದು, ಆದರೆ ನಿದ್ರೆಯನ್ನು ಕೊಳ್ಳಲಾರದು.
ದುಡ್ಡು ಪುಸ್ತಕಗಳನ್ನು ಕೊಂಡುಕೊಳ್ಳಬಹುದು,
ಆದರೆ ಮಿದುಳನ್ನು ಕೊಳ್ಳಲಾರದು.
ದುಡ್ಡು ಆಹಾರವನ್ನು ಕೊಂಡುಕೊಳ್ಳಬಹುದು,
ಆದರೆ ಹಸಿವೆಯನ್ನು ಕೊಳ್ಳಲಾರದು.
ದುಡ್ಡು ಔಷಧ ಕೊಂಡುಕೊಳ್ಳಬಹುದು, ಆದರೆ ಆರೋಗ್ಯ ಕೊಳ್ಳಲಾರದು.
ದುಡ್ಡು ವಿಲಾಸಿ ವಸ್ತುಗಳನ್ನು ಕೊಳ್ಳಬಹುದು,
ಆದರೆ ಸಂಸ್ಕೃತಿಯನ್ನು ಕೊಳ್ಳಲಾರದು.
ದುಡ್ಡು ಮನೋರಂಜನೆಯನ್ನು ಕೊಳ್ಳಬಹುದು,
ಆದರೆ ಸಂತೋಷವನ್ನು ಕೊಳ್ಳಲಾರದು.
ದುಡ್ಡು ದೇವಾಲಯ ಕಟ್ಟಿಸಬಹುದು, ಆದರೆ ಸ್ವರ್ಗ ಕೊಳ್ಳಲಾರದು.

– ರಮೇಶ ಗುಡಗುಂಟಿ

ಅಂತಾರಾಷ್ಟ್ರೀಯ ಯೋಗ ಸಂಸ್ಥೆಯ ಸಂಸ್ಥಾಪಕ ಧೀರೇಂದ್ರ ಬ್ರಹ್ಮಚಾರಿ ಎಲ್ಲ ಯೋಗಿಗಳಂತಲ್ಲ. ಆತನ ಯೋಗದ ವೈಶಿಷ್ಟ್ಯವೇ ಬೇರೆ. ಆತನ ಯೋಗದ ಗುಟ್ಟು ಈಗ ರಟ್ಟಾಗಿದೆ.

ಬಿಳಿಯ ಮಸ್ಲಿನ್ ಉಡುಗೆಯ ಸ್ಥೂಲಕಾಯದ ಧೀರೇಂದ್ರ ಬ್ರಹ್ಮಚಾರಿ ಎಂದೂ ಸಂನ್ಯಾಸಿಯಾಗಿ ಕಾಣುತ್ತಿರಲಿಲ್ಲ. ಐವತ್ತು ವರ್ಷದ ಸದೃಢ ಕಾಯದ ಧೀರೇಂದ್ರ ಕಾಣುತ್ತಿದ್ದುದು ಭೋಗಿಯಾಗಿಯೇ ಹೊರತು ಯೋಗಿಯಂತಲ್ಲ.

ಪಂಡಿತ ನೆಹರೂ ಕಾಲದಲ್ಲೇ ತೀನ್ ಮೂರ್ತಿ ಭವನಕ್ಕೆ ಕಾಲಿಟ್ಟ ಧೀರೇಂದ್ರನ ಪೂರ್ವಾಶ್ರಮ ಹೆಚ್ಚು ಆಕರ್ಷಕವೇನಲ್ಲ. ಯೋಗಾಸನಗಳನ್ನು ಅರ್ಧಂಬರ್ಧವಾಗಿ ಕಲಿತಿದ್ದ ಆತ ತೀನ್ ಮೂರ್ತಿ ಭವನಕ್ಕೆ ಕಾಲಿಟ್ಟದ್ದು, ನೆಹರೂರವರಿಗೆ ಯೋಗಾಭ್ಯಾಸ ಕಲಿಸಲು, ೧೯೫೮ರ ಸುಮಾರಿನಲ್ಲಿ. ೧೯೫೯ ರಲ್ಲಿ ವಿಶ್ವಾಯತನ ಯೋಗಾಶ್ರಮದ ಸ್ಥಾಪನೆಯ ದಿನ ಜಯಪ್ರಕಾಶ ನಾರಾಯಣರು ಸೇರಿದಂತೆ, ಹಲವಾರು ವರಿಷ್ಠರು ಭೇಟಿಕೊಟ್ಟರು. ತನ್ನ ಯೋಗಾಸನದ ಗ್ರಂಥಕ್ಕೆ ಜಯಪ್ರಕಾಶ ನಾರಾಯಣರ ಮುನ್ನುಡಿಯನ್ನು ಪಡೆಯಲು ಆತ ಶಕ್ತನಾದ

ಆಶ್ರಮಕ್ಕೆ ಅಲ್ಪಾವಧಿಯಲ್ಲಿ ಕೇಂದ್ರ ಶಿಕ್ಷಣ ಹಾಗೂ ಆರೋಗ್ಯಖಾತೆಯಿಂದ ಇಪ್ಪತ್ತು ಸಾವಿರ ರೂಪಾಯಿಗಳಷ್ಟು ವಾರ್ಷಿಕ ವಂತಿಗೆ ಮಂಜೂರಾಯಿತು. ಇದರ ಜೊತೆಗೆ ಜಂತರ್ ಮಂತರ್ ರಸ್ತೆಯಲ್ಲಿ, ಹಲವಾರು ಹಿರಿಯ ಅಧಿಕಾರಿಗಳ ಅಭ್ಯಂತರವಿದ್ದಾಗಲೂ, ಭವ್ಯ ನಿವಾಸವನ್ನು ಆತನ ವಾಸಕ್ಕೆ ನೀಡಲಾಯಿತು.

ಜವಾಹರಲಾಲ ನೆಹರು, ಮುರಾರಜಿ ದೇಸಾಯಿ, ಡಾ. ರಾಜೇಂದ್ರಪ್ರಸಾದ, ಜಗಜೀವನರಾಮ ಮತ್ತು ಇನ್ನಿತರ ಹಲವರು, ಆತನ ಪ್ರಮುಖ ಶಿಷ್ಯರೆಂದು ಹೇಳಲಾಗಿದೆ.

ನೆಹರೂರವರ ನಿಧನದ ನಂತರ, ಧೀರೇಂದ್ರನಿಗೆ ಸ್ವಲ್ಪ ಕಾಲ ಹಿನ್ನಡೆ, ಆತನ ಕರಾಮತ್ ಕೆಲಸಗಳು ಕುಳ್ಳ ಶಾಸ್ತ್ರಿಯವರನ್ನು ಮರಳು ಮಾಡಲಿಲ್ಲ. ಇಂತಹ ಸಂನ್ಯಾಸಿಗಳಿಗೆ ಸೊಪ್ಪು



ಧೀರೇಂದ್ರ ಬ್ರಹ್ಮಚಾರಿ

ಕೆ. ಎಂ. ನರಸಿಂಹಸ್ವಾಮಿ, ಕಳಸ

ಹಾಕದ ಲಾಲ್‌ಬಹಾದ್ದೂರ್ ಶಾಸ್ತ್ರಿಗಳ ಕಾಲದಲ್ಲಿ ಹಣದ ದುರ್ವಿನಿಯೋಗದ ಬಗ್ಗೆ ವಿಚಾರಣೆ ಪ್ರಾರಂಭವಾಯಿತು. ಜಂತರ್ ಮಂತರ್ ನಿವಾಸದಿಂದ ಧೀರೇಂದ್ರನಿಗೆ ಅರ್ಧಚಂದ್ರ ಪ್ರಯೋಗವಾಯಿತು, ಎರಡು ದಿನಗಳ ವರೆಗೆ ತನ್ನ

ಸರಕು ಸರಂಜಾಮುಗಳೊಡನೆ ಆತ ರಸ್ತೆಯ ಬದಿಯಲ್ಲೇ ಇರಬೇಕಾಯಿತು. ಅನಂತರ ಆತ ಡಿಫೆನ್ಸ್ ಕಾಲೊನಿಗೆ, ತನ್ನ ಆಶ್ರಮವನ್ನು ಸ್ಥಳಾಂತರಿಸಿದ. ಆತ ಮಾಸಿಕ ೮೦೦ ರೂಪಾಯಿಗಳ ಬಾಡಿಗೆಯನ್ನು ಹೊಸ ನಿವಾಸಕ್ಕೆ ತೆರಬೇಕಾಯಿತು.

ಶಾಸ್ತ್ರಿಗಳ ಆಕಸ್ಮಿಕ ನಿಧನದಿಂದ ಪ್ರಧಾನಮಂತ್ರಿ ಸ್ಥಾನಕ್ಕೇರಿದ ಇಂದಿರಾರಿಂದಾಗಿ, ಧೀರೇಂದ್ರರ ಪುನರಾಗಮನವಾಗಿ ಸಾಕಷ್ಟು ಪ್ರಚಾರವೂ ದೊರಕಿತು. ಅಲ್ಲಿಯವರೆಗೆ ಡಿಫೆನ್ಸ್ ಕಾಲೊನಿಯ ಕಟ್ಟಡಕ್ಕೆ ಕಟ್ಟಿದ್ದ ಸುಮಾರು ೨೫೦೦೦ ರೂಪಾಯಿಗಳು ಅವನಿಗೆ ಮರುಪಾವತಿಯಾದವು. ೧೦೫ ಎಕರೆಗಳಷ್ಟು ಜಾಗವನ್ನು ಚದುರಗಜಕ್ಕೆ ಹತ್ತು ರೂಪಾಯಿಗಳಿಗಿಂತ ಕಡಿಮೆ ಬೆಲೆಯಲ್ಲಿ ನೀಡಲಾಯಿತು. ದಿಲ್ಲಿಯ ಪ್ರತಿಷ್ಠಿತ ಜಾಗದಲ್ಲಿದ್ದ ಈ ಜಾಗದ ಬೆಲೆ ೧೯೬೮–೬೯ರ ಸುಮಾರಿನಲ್ಲಿ ಚದುರ ಗಜಕ್ಕೆ ಸಾವಿರ ರೂಪಾಯಿಗಳಷ್ಟಿತ್ತು.

೧೯೬೭ರಲ್ಲಿ ಸಕ್ರಿಯವಾಗಿ ರಾಜಕೀಯಕ್ಕೆ ಧೀರೇಂದ್ರ ಚುನಾವಣಾ ಕಾಲದಲ್ಲಿ ಯಶಪಾಲ ಇಳಿದ ಕಪೂರರೊಂದಿಗೆ ಕಳೆದ ಸಮಯವೇನೂ ವ್ಯರ್ಥವಾಗಲಿಲ್ಲ. ಮೊದಮೊದಲು ಇಬ್ಬರೂ ಪರಸ್ಪರ ಅಸೂಯೆ ಹಾಗೂ ಸಂಶಯದಿಂದ ವರ್ತಿಸಿದರಾದರೂ ನಂತರ ಪರಮಾಪ್ತರಾದರು. ದಿನೇಶಸಿಂಗರನ್ನು ಇಬ್ಬರೂ ದ್ವೇಷಿಸುತ್ತಿದ್ದು, ಕೊನೆಗೊಮ್ಮೆ ಅವರನ್ನು ಪ್ರಧಾನಿ ವಲಯದಿಂದ ಹೊರದಬ್ಬುವಲ್ಲಿ ಯಶಸ್ವಿಯಾದರು.

ಈ ವೇಳೆಗೆ ಸಂಜಯ ಗಾಂಧಿ ಇಂಗ್ಲೆಂಡಿನಿಂದ ಹಿಂದಿರುಗಿದ್ದರು. ಆತನಿಗೆ ಈ ಸ್ವಾಮೀಜಿ ನಿರೀಕ್ಷಿಸಿದಷ್ಟು ನಿರುಪಯೋಗಿ ಅಲ್ಲವೆನ್ನಿಸಿತು. ಜೀವನದ ಸುಂದರ ವಸ್ತುಗಳೆಲ್ಲವನ್ನೂ ಪ್ರೀತಿಸುತ್ತಿದ್ದ ಸ್ವಾಮೀಜಿ ತನ್ನದೇ ಆದ ರೀತಿಯಲ್ಲಿ ಆಧುನಿಕನಾಗಿದ್ದ. ಸುಂದರಿಯರ ಸಮೂಹದಲ್ಲಿ ಸದಾ ಇರುತ್ತಿದ್ದ ಈ ಸ್ವಾಮೀಜಿ ಸಂಜಯನನ್ನು ಬಹುವಾಗಿ ಆಕರ್ಷಿಸಿದ. ವಿದೇಶಿ ಕಾರುಗಳು, ವಿದೇಶಿ ವಿಮಾನ, ಆಗಿಂದಾಗ ಜೀವನದಲ್ಲಿ ಬೇಸರಗೊಂಡಾಗ ಹೋಗಿ [illegible] ಕಾಶ್ಮೀರಯಾತ್ರೆ, ನಪೋಲ್ಸಿನಿಂದ ಹಿಂದಿರುಗುವುದು, ಇವುಗಳು ತರುಣ ಸಂಜಯ ಗಾಂಧಿ ಹಾಗೂ ಧೀರೇಂದ್ರರಲ್ಲಿ ಸ್ನೇಹದ ಬೆಸುಗೆಯನ್ನು ಚಿಗುರಿಸಿ ಬೆಳೆಸಿತು.

'ಮಂತಾಲಯಿ'ಯ ತಾವಿ ನದಿಯ ಸೌಂದರ್ಯವನ್ನು ಸವಿಯುತ್ತಿದ್ದ ಎತ್ತರದ ಜಾಗದಲ್ಲಿದ್ದ 'ಅಪರ್ಣ ಆಶ್ರಮ' ಯೋಗ ಸಂಶೋಧನೆಯಲ್ಲಿ ಅತ್ಯುನ್ನತವಾದುದೆಂದು ಹೇಳಲಾಗುತ್ತಿತ್ತು. ಆದರೆ ಇದು ಬಾಹ್ಯನೋಟಕ್ಕೆ ಮಾತ್ರವಾಗಿತ್ತು. ಜನಗಳನ್ನು ನಂಬಿಸುವ ತಂತ್ರವಾಗಿತ್ತು. ಅಂತರಂಗ ಬೇರೆಯೇ ಇತ್ತು. ಸಂಪೂರ್ಣ ಶಬ್ದನಿಯಂತ್ರಿತ ಗೋಡೆಗಳಿಂದ ಕಟ್ಟಲ್ಪಟ್ಟ ಈ ಆಶ್ರಮಕ್ಕೆ ಅಪಾರ ವೆಚ್ಚವನ್ನು ಮಾಡಲಾಗಿತ್ತು. ಮಂತ್ರಾಲೋಚನೆ, ಪೂಜಾಗೃಹಗಳು ಸಂಪೂರ್ಣ ಹವಾನಿಯಂತ್ರಿತವಾಗಿದ್ದವು. ವಿದ್ಯಾ ಇಲಾಖೆಯಿಂದ ಸಾಕಷ್ಟು ವಂತಿಗೆ ಪಡೆದಿದ್ದ, ಸ್ವಾಮೀಜಿಯ ಅಮೃತ ಶಿಲೆಯ ಕನಸಿನ ಲೋಕಕ್ಕೆ ೧೫ ಲಕ್ಷ ರೂಪಾಯಿಗಳಿಗೂ ಹೆಚ್ಚು ಹಣ ಸುರಿಯಲಾಗಿತ್ತು.

ಈ ಸ್ವಾಮೀಜಿಯ ಅನುಕೂಲಕ್ಕಾಗಿ ಸಮೀಪದಲ್ಲೇ ಒಂದು ವಿಮಾನದ ತಂಗುದಾಣವನ್ನು ಬನ್ಸಿಲಾಲರು ರಕ್ಷಣಾಖಾತೆಯ ವತಿಯಿಂದ ನಿರ್ಮಿಸಿಕೊಟ್ಟಿದ್ದರು. ರಕ್ಷಣಾಖಾತೆಯ ಹೆಲಿಕಾಪ್ಟರುಗಳು ಈತನನ್ನು ಮತ್ತು ಈತನ ಪ್ರಮುಖ ಅತಿಥಿಗಳನ್ನು ಆಗಿಂದಾಗ್ಗೆ ಹೊತ್ತು ತಿರುಗುತ್ತಿದ್ದವು. ಇದರ ಜೊತೆಗೆ ಸ್ವಾಮೀಜಿ ಬಳಿ ಖಾಸಗಿ ವಿದೇಶಿ ವಿಮಾನವೊಂದಿತ್ತು.

ಹದಿನಾರು ವಾತಾನುಕೂಲಿತ ಕೊಠಡಿಗಳಿದ್ದ ಒಂದು ನಿವಾಸ ಹೊಸ ದಿಲ್ಲಿಯಲ್ಲಿತ್ತು. ಕಾರ್ಯಕ್ಕೆ [illegible] ಬಳಸಲಾಗುತ್ತಿತ್ತು. 'ಯೋಗ ಇಂಟರ್‌ನಾಶನಲ್ ಹೌಸ್' ಎಂದು ಕರೆಯಲ್ಪಡುತ್ತಿದ್ದ, ಇದು ವಾಸ್ತವವಾಗಿ ಧೀರೇಂದ್ರನ 'ಡೆನ್' ಆಗಿ ಪರಿಣಮಿಸಿತು.

[illegible] ವ್ಯವಹಾರ ಹೇರಳ ಧನಲಾಭವನ್ನು ತಂದುಕೊಟ್ಟಿತ್ತು. [illegible]

ಅರ್ಥಸಚಿವರಾಗಿದ್ದಾಗ ನಿಲ್ಲಿಸಿದ್ದ ಸಹಾಯಧನವನ್ನು ಶ್ರೀಮತಿ ಗಾಂಧಿ ವೈಯಕ್ತಿಕ ಪ್ರಭಾವ ಬೀರಿ ಕೊಡಿಸಿದರು. ೧೯೬೭–೭೭ ರ ವರೆಗೆ ೪೩ ಲಕ್ಷ ರೂಪಾಯಿಗಳ ವಂತಿಗೆ ಧೀರೇಂದ್ರರಿಗೆ ಸಂದಾಯವಾಗಿದೆ ಎಂದು ಜನತಾ ಸರಕಾರ ಹೇಳಿಕೆ ನೀಡಿದೆ.

ಧೀರೇಂದ್ರನಿಗೆ ಇದಕ್ಕಿಂತ ಮಿಗಿಲಾದ ಲಾಭ ಬೇಕಾದಷ್ಟು ಸಿಕ್ಕಿದೆ. ದೇಶದ ವಿವಿಧ ಉದ್ಯಮಗಳ ವರಿಷ್ಠರು, ಕೈಗಾರಿಕೋದ್ಯಮಿಗಳು, ಗಣ್ಯರು, ರಾಜಕಾರಣಿಗಳು ತಮ್ಮೆಲ್ಲ ಕೆಲಸಕ್ಕೆ ವಶೀಲಿಗೆ ಧೀರೇಂದ್ರನ ಆಶ್ರಮದ ಬಾಗಿಲನ್ನು ಕಾಯತೊಡಗಿದರು. ಯಶಪಾಲ ಕಪೂರ, ಆರ್. ಕೆ. ಧವನ್ ಅಥವಾ ಸಂಜಯ ಗಾಂಧಿಗಿರುವಷ್ಟೇ ಪ್ರಾಮುಖ್ಯ ಇವನಿಗೂ ದೊರೆಯತೊಡಗಿತು.

ಇದರ ಜೊತೆಗೆ ಧೀರೇಂದ್ರ 'ಪ್ರಪಂಚದ ಅತ್ಯಂತ ಬಲಿಷ್ಠ ಮಹಿಳೆಗೆ ಗಂಟೆಗಟ್ಟಲೇ ಯೋಗಾಭ್ಯಾಸ ಮಾಡಿಸುತ್ತಿದ್ದ. ತನ್ನ ರೋಗಿಯ ರೋಗ ನಿದಾನಕ್ಕೆ ತನ್ನದೇ ಆದ ವಿಧಾನವನ್ನು ಅನುಸರಿಸುತ್ತಿದ್ದ.

ಆತ ಮಹಿಳೆ ರೋಗಿಯನ್ನು ಬೆನ್ನಮೇಲೆ ಮಲಗುವಂತೆ ನಿರ್ದೇಶಿಸಿ ನಂತರ ದಾರದ ಒಂದು ತುದಿಯನ್ನು ನಾಭಿಯ ಮೇಲಿಟ್ಟು, ಎಡ ಅಥವಾ ಬಲ ಮೊಲೆ ತೊಟ್ಟಿನ ನಡುವಿನ ಅಂತರವನ್ನು ಅಳೆಯುತ್ತಿದ್ದ. "ಮಹಿಳೆಯರ ಮೊಲೆಯ ಗಾತ್ರ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವುದರಜೊತೆಗೆ, ಕೆಲವರ ಮೊಲೆಗಳು ಜೋತು ಬೀಳುತ್ತಿದ್ದುದರಿಂದ, ಹೊಕ್ಕಳು ಮತ್ತು ಮೊಲೆತೊಟ್ಟಿನ ನಡುವಿನ ಅಂತರದ ಬದಲು ಹೊಕ್ಕಳು ಮತ್ತು ಬಲ ಹಾಗೂ ಎಡ ತುದಿಗಾಲಿನ ವರೆಗಿನ ಅಂತರವನ್ನು ಅಳೆಯುತ್ತೇನೆ. ಹೊಕ್ಕಳು ೭೨ ಸಾವಿರ ನರಗಳ ಕೇಂದ್ರ. ಹೊಕ್ಕಳು ನಾಡಿಯಿದ್ದಂತೆ. ನನಗೆ ನಾಡಿ ಸಿಕ್ಕಿದಾಗ ವ್ಯಕ್ತಿಯ ವ್ಯಾಧಿಯೇನೆಂದು ಅನುಮಾನವಿಲ್ಲದೆ ಹೇಳುತ್ತೇನೆ" ಎಂದು ಆತ ಜಂಭ ಕೊಚ್ಚಿಕೊಳ್ಳುತ್ತಿದ್ದ.

ಧೀರೇಂದ್ರ ಸರಕಾರದ ಅತಿಥಿಯಾಗಿ ಜಪಾನಿನ ಒಸಾಕಾದಲ್ಲಿ ನಡೆದ ಎಕ್ಸ್‌ಪೋ ೭೨ಕ್ಕೆ ಹೋಗಿದ್ದ. ಸಾವಿರ ರೂಪಾಯಿಗಳ ಮಾಸಿಕ ವೇತನಕ್ಕೆ ತಾನೇ ನೇಮಿಸಿದ್ದ ಸಂಶೋಧನಾಧಿಕಾರಿ ಹದಿಹರೆಯದ ಸುಂದರಿ ಮಂಜು ಸಹ ಅವನ ಜೊತೆಯಲ್ಲಿದ್ದಳು. ಹಿಂದಿರುಗುವಾಗ ಲೆಕ್ಕವಿಲ್ಲದಷ್ಟು ಎಲೆಕ್ಟ್ರಾನಿಕ್ ಸಾಮಗ್ರಿಗಳು, ಟೊಯಾಟಾ ಸ್ಥಳಾಂತರಿಸಬಲ್ಲ ಈಜುಗೊಳ ಮುಂತಾದ ಹಲವಾರು ಐಷಾರಾಮಿ ವಸ್ತುಗಳನ್ನು ಸುಂಕರಹಿತವಾಗಿ ಭಾರತಕ್ಕೆ ತಂದ.

ದಿನ ಒಂದಕ್ಕೆ ೭೦ ಕಿಲೋಗ್ರಾಮುಗಳಷ್ಟು ಸೇಬನ್ನು ಕಬಳಿಸುತ್ತಿದ್ದ ಸುಂದರ ಕಪ್ಪು ಹಸುವನ್ನು ಆಗಿನ ರಕ್ಷಣಾ ಸಚಿವ ಬನ್ಸೀಲಾಲ್ ಧೀರೇಂದ್ರನಿಗೆ ನೀಡಿದ್ದರು. ಈ ಕಪ್ಪು ಹಸುವಿಗೆ ಹತ್ತು ಸಾವಿರ ರೂಪಾಯಿ ಬೆಲೆ ಬಾಳುವ ಹೋರಿಯನ್ನು ಧೀರೇಂದ್ರ ದಿಲ್ಲಿಯ ಆಡಳಿತ ವರ್ಗದಿಂದ ಬಾಡಿಗೆಗೆ ಪಡೆದಿದ್ದ. ಹೋರಿಯನ್ನು ಹಿಂದಿರುಗಿಸಲು ಅಧಿಕಾರಿಗಳು ಕೇಳಿಕೊಂಡಾಗ ದಿಲ್ಲಿಯಲ್ಲಿ ಉಷ್ಣ ಜಾಸ್ತಿಯೆಂದು ಅದನ್ನು ಕಾಶ್ಮೀರಕ್ಕೆ ರವಾನಿಸಿರುವುದಾಗಿ ಈತ ಸಮಜಾಯಿಷಿ ನೀಡಿದ್ದನಂತೆ.

ಕೆಲವು ತಿಂಗಳುಗಳ ಹಿಂದೆ ನಡೆದ ಆರು ಗಂಟೆಗಳ ತನಿಖೆಯಲ್ಲಿ ಧೀರೇಂದ್ರನ ಆಶ್ರಮದಲ್ಲಿ ಗುಂಡುಗಳು, ಮದ್ದು, ರಿವಾಲ್ವರ್, ರೈಫಲ್ಲುಗಳು ಸಿಕ್ಕಿವೆಯಂತೆ. ಇವೆಲ್ಲದರ ಜೊತೆಗೆ ಕಳ್ಳಸಾಗಾಟದಲ್ಲಿ ಈತನ ಪಾತ್ರವಿದೆಯಂತೆ. ಇಂದಿರಾ ಗಾಂಧಿ ಹಾಗೂ ಸಂಜಯ ಗಾಂಧಿಯವರ ಪರವಾಗಿ 'ಯುದ್ಧಖಜಾನೆ'ಯ ಮೇಲೆ ಇವನ ಹತೋಟಿ ಇದೆಯೆಂದೂ ಕೆಲವರ ಹೇಳಿಕೆ.

ಇವೆಲ್ಲದರ ಜೊತೆಗೆ ವಿ. ವಿ. ಆಹುಜಾ ದಿಲ್ಲಿಯ ಮೆಟ್ರೋಪಾಲಿಟನ್ ಕೋರ್ಟಿನಲ್ಲಿ ತನ್ನ ಪತ್ನಿ ಕುಸುಮಳ ಜೊತೆಗೆ ಬ್ರಹ್ಮಚಾರಿಯನ್ನು ನೋಡಿದ್ದಾಗಿ ದೂರಿತ್ತಿರುವುದು ಮತ್ತು ಅದು ನ್ಯಾಯಾಲಯದಲ್ಲಿ ಸ್ವೀಕೃತವಾಗಿರುವುದು ಧೀರೇಂದ್ರನಿಗೆ ಸಾಕಷ್ಟು ಪೇಚು ತಂದೊಡ್ಡಿದೆ. ಧೀರೇಂದ್ರನ ಕತೆ ಇಷ್ಟಕ್ಕೇ ಮುಗಿದಿಲ್ಲ. ಇನ್ನೂ ಕಾದು ನೋಡಬೇಕಾಗಿದೆ. ✡

(ಆಧಾರ: ಜನಾರ್ದನ ಠಾಕೂರರ 'ಆಲ್ ಪ್ರೈಮ್ ಮಿನಿಸ್ಟರ್ಸ್ ಮೆನ್' ಗ್ರಂಥ)



ಮುಖ

ಜಿ. ನಾರಾಯಣ

ಅರ್ಧ ಕತ್ತಲಾವರಿಸಿದ ಬಸ್ ಸ್ಟಾಪಿನಲ್ಲಿ ಜನರ ಮುಖ ಸರಿಯಾಗಿ ಕಾಣುತ್ತಿರಲಿಲ್ಲ. ನೆರಳುಗಳು ನೀಳವಾಗಿ ಚಾಚಿಕೊಂಡು ಭೀತಿಯನ್ನುಂಟುಮಾಡುತ್ತಿದ್ದುವು. ಆಕೆ ನೆರಳುಗಳ ವಿನ್ಯಾಸವನ್ನೇ ಸೂಕ್ಷ್ಮವಾಗಿ ಗಮನಿಸುತ್ತಿದ್ದಳು. ಸ್ಟಾಪಿನ ಹೊರಗೆ ನಿಂತ ಜನಜಂಗುಳಿ ಬಂದ ಬಸ್ಸುಗಳನ್ನೆಲ್ಲ ಕಣ್ಣನ್ನು ಕಿರಿದುಗೊಳಿಸಿ ನೋಡುತ್ತಿತ್ತು. ದೂರದಲ್ಲಿ ತೋರುತ್ತಿದ್ದ ಬಸ್ಸಿನ ಬೆಳಕು ಸುತ್ತಲಿನ ಬಂಗಲೆಗಳ, ಮರಗಳ ಮೇಲೆಲ್ಲ ಹರಡಿ ನಂತರ ಕ್ರಮೇಣ ಹತ್ತಿರವಾಗುತ್ತಿದ್ದಂತೆ, ಅದೇ ತಮ್ಮ ಬಸ್ಸಿರಬಹುದೆಂದು ಜನಜಂಗುಳಿ ಸುಗ್ಗುವಷ್ಟರಲ್ಲಿ ನಿಲ್ಲದೆ ಮುಂದೆ ಹೋಗುತ್ತಿತ್ತು. ಮತ್ತೆ ಅರೆಗತ್ತಲು. ಬೆಳಕು–ಕತ್ತಲೆಯ ಪುನರಾವರ್ತನೆ ನಡದೇ ಇತ್ತು. ಅದೇ ಬಸ್ ಸ್ಟಾಪ್, ಅದೇ ಕಬ್ಬಿಣದ ಸರಳುಗಳು ಎಲ್ಲೂ ತಪ್ಪಿಸಿಕೊಂಡು ಹೋಗಲಾರದಂತಹ 'ಚಕ್ರಭೀಮನ ಕೋಟೆ'ಯಂತೆ ತನ್ನ ಸುತ್ತ ವ್ಯಾಪಿಸಿದಂತೆ ಆಕೆಗನ್ನಿಸಿತು. ದೂರದಿಂದ ಮತ್ತೊಂದು ಬಸ್ಸಿನ ದೀಪಗಳೆರಡು ಪ್ರಕಾಶಮಾನವಾಗುತ್ತ ಬಂದವು, ಟಾರ್ ರಸ್ತೆ ನಿಧಾನವಾಗಿ ಬೆಳಕಾಗುತ್ತ ಬಂತು, ನೀಳವಾದ ನೆರಳೊಂದು ಆ ಬೆಳಕಿನಲ್ಲಿ ಮೂಡಿತು, ಆಕೆ ಅದು ತನ್ನ ಬಸ್ಸೇನೋ ಎಂದು ಸ್ಟಾಪಿನಿಂದ ಹೊರಗೆ ಬಂದು ಬೆಳಕಿಗೆ ನಿಂತಳು. ಆ ನೆರಳು ಕ್ರಮೇಣ ಕುಳ್ಳಾಗಿ, ವ್ಯಕ್ತಿಯೊಬ್ಬ ಅದರಿಂದ ಮೂಡಿಬಂದ. ಆಕೆಯ ಮುಖ ಬಸ್ಸಿನ ಬೆಳಕಿನಿಂದ ಮಿನುಗಿತು. ಆತ ಆಕೆಯ ಎದುರೇ ಬಂದು ನಿಂತು ಒಂದು ಕ್ಷಣ ಆಕೆಯ ಮುಖವನ್ನೇ ದಿಟ್ಟಿಸಿದ. ಆಕೆ ಎಲ್ಲ ಸಭ್ಯ ಹೆಂಗಸರು ಗಂಡಸರನ್ನು ನೋಡುವಂತೆ, ಒಮ್ಮೆ ಅವನತ್ತ ನೋಡಿ, ಅನಂತರ ದೂರದಲ್ಲಿ ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ ತಿರುಗುತ್ತಿದ್ದ ಬೆಳಕಿನ ರಾಟೆಯನ್ನು ನೋಡಲಾರಂಭಿಸಿದಳು. ರಾಟೆಯ ಬೆಳಕು ಕೆಳಗಿನಿಂದ ಮೇಲಕ್ಕೆ ಹೋಗಿ ಸುತ್ತೆಲ್ಲ ಬೆಳಗಿ ನಂತರ ಕೆಳಗಿಳಿಯುತ್ತಿತ್ತು.

"ನನ್ನ ಗುರ್ತು ನಿಂಗೂ ಸಿಕ್ಕಿಲ್ವ?" ಆಳವಾದ ಗವಿಯಿಂದ ಬಂದಂತಿತ್ತು ಅವನ ಧ್ವನಿ. ಆಕೆ ಮುಖ ತಿರುಗಿಸಿ ಅವನ ಮುಖನ್ನೊಮ್ಮೆ ದಿಟ್ಟಿಸಿದಳು. ನೀಳ ಗಡ್ಡ, ಕಿವಿಯನ್ನು ಮುಚ್ಚಿದ

ಅಸ್ತವ್ಯಸ್ತ ಕೂದಲು, ಆಳದಲ್ಲಿದ್ದರೂ ಮಿಂಚುತ್ತಿದ್ದ ಕಣ್ಣುಗಳು; ಮಾತಾಡಿದಾಗ 'ಗಬ್ಬೆಂದು' ಬಂದ ಸಿಗರೇಟಿನ ವಾಸನೆ. "ಆಂ" ತಟಕ್ಕನೆ ಆಕೆಯ ಸುತ್ತೆಲ್ಲ ನೀರವತೆ ಆವರಿಸಿತು. ಲಯಬದ್ಧವಾಗಿ ತಿರುಗುತ್ತಿದ್ದ ರಾಟೆಯ ಬೆಳಕು ಹಿಂದುಮುಂದಾಗಿ ತಿರುಗಲಾರಂಭಿಸಿದಂತೆನಿಸಿತು. ಸುಭಾಸ್ ನಗರದ ಗ್ಲೂಕೋಸ್ ಜಾಹೀರಾತಿನ ಮಿನುಗು ದೀಪ, ರೈಲ್ವೇ ಸ್ಟೇಶನ್ನಿನ ಮೇಲಿದ್ದ ನಿಯಾನ್ ಸೈನ್ ಎಲ್ಲ ಎಲ್ಲ ಜೀವ ಕಳೆದುಕೊಂಡಂತೆ, ಸಾಲು ಹಿಡಿದು ಓಡುತ್ತಿದ್ದ ಆಟೋಗಳು, ಬಸ್ಸುಗಳು ಎಲ್ಲ ನಿಂತಂತೆ...

ಆಕೆ ಅವನನ್ನು ಮರೆಯಲು ಸಾಧ್ಯವೆ? ಅವರ ಸ್ಕೂಲಿನ ಆ ದಿನಗಳನ್ನು... ಆತ ಭಾನುವಾರದಂದೂ ಕ್ಲಾಸಿದೆ ಎಂದು ತನ್ನ ಹಳ್ಳಿಯಿಂದ ಪೇಟೆಗೆ ಬಂದು ಆಕೆಯ ಮನೆಯಲ್ಲಿ ಅವಳಣ್ಣನ ಜೊತೆ ಕೇರಂ ಆಡುತ್ತ ಕುಳಿತುಕೊಳ್ಳುತ್ತಿದ್ದುದನ್ನು, ಆಕೆಯ ಜೊತೆ ರಿಂಗ್ ಆಡುತ್ತ ಕಳೆಯುತ್ತಿದ್ದುದನ್ನು, ಕೆ. ಎಸ್. ಎಲ್. ಮೇಷ್ಟ್ರು ಪಾಠ ಮಾಡುತ್ತಿದ್ದಾಗ ಏನೋ ಬರೆಯುತ್ತ ಕುಳಿತು ಕೊನೆಗೆ ತನ್ನನ್ನು ಪ್ರಶ್ನಿಸಿದಾಗ ಆತ ತಡಬಡಿಸುತ್ತಿದ್ದುದನ್ನು, ತನ್ನ ಮನೆಯಲ್ಲಿ ಏನಾದರೂ ಮಧ್ಯಾಹ್ನ ತಿನ್ನಲು ಕೊಟ್ಟರೆ, ಆಕೆಗೂ ಆಕೆಯಣ್ಣನಿಗೂ ಕೊಟ್ಟು ತಾನು ಮಾತ್ರ ಸಂಕೋಚದಿಂದ ಉಪವಾಸ ಇರುತ್ತಿದ್ದುದನ್ನು, ಅವನೂರಿನಿಂದ ಧೂಳು ತುಂಬಿದ ರಸ್ತೆಯಲ್ಲಿ ನಡೆದು ಬಂದು ತೂತು ಬಿದ್ದ ತನ್ನ ಚಪ್ಪಲಿಗಳನ್ನು ಆದಷ್ಟು ಆಕೆಗೆ ಕಾಣಿಸದಂತೆ ಇಡಬೇಕೆಂದು ಆತ ಯತ್ನಿಸುತ್ತಿದ್ದುದನ್ನು, ಚಳಿಗಾಲದಲ್ಲಿ ಸ್ವೆಟರ್ ಇಲ್ಲದೆ ಚಳಿಯಲ್ಲಿ ನಡುಗುತ್ತ ಬಂದರೂ "ಓಹ್ ನಂಗಂತೂ ಚಳಿಯೇ ಇಲ್ಲ" ಎಂದು ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತಿದ್ದುದನ್ನು, ಆಕೆಗೆ ಆಕೆಯ ಅಣ್ಣನಿಗೆ ಕಠಿಣವಾದ ಇಂಗ್ಲಿಷ್ ಪದ್ಯಗಳನ್ನು ನೀರು ಕುಡಿದಂತೆ ಆತ ಹೇಳುತ್ತಿದ್ದುದನ್ನು, ಗಣಿತಕ್ಕೆ ಆತ ಹಾಕುತ್ತಿದ್ದ ಶಾಪವನ್ನು ಆಕೆಗೆ ಮರೆಯಲು ಸಾಧ್ಯವೇ?... ಆದರೆ ಆಗ ತುಂಬಿಕೊಂಡು ಗುಂಡು ಗುಂಡಾಗಿ ಬಟ್ಟಲುಗಣ್ಣನ್ನು ಬಿಡುತ್ತ ಸದಾ ಉತ್ಸಾಹದಿಂದ ಹರಟುತ್ತಿದ್ದ ಆ ಶ್ಯಾಮನೆಲ್ಲಿ? ಈತನೆಲ್ಲಿ?...

"ಸಾರಿ, ನಾನು ಯಾರೋ ಅಂತ ತಿಳ್ಕೊಂಡು ನಿಮ್ಮನ್ನು ಮಾತಾಡಿಸಿಬಿಟ್ಟೆ, ಕ್ಷಮಿಸಿ... ನಾನೇ ತಪ್ಪು ಮಾಡಿರಬೇಕು." ಆತ ಕತ್ತು ತಗ್ಗಿಸಿ ಮುಂದಕ್ಕೆ ಹೆಜ್ಜೆ ಹಾಕಿದ. ಆಕೆಯ ದೇಹ ಜಡವಾಯಿತು. ಕಾಲುಗಳು ಆಳವಾದ ಮರಳಿನಲ್ಲಿ ಹೂತಂತಾಯಿತು. ಸ್ವಪ್ನದಲ್ಲಿ ಭೀತರಾಗಿ ಅರಚುವವರ ಸ್ವರದಂತೆಯುಂತೆ ಧ್ವನಿ ಗೊಗ್ಗರಾಯಿತು. "ನಿಂತ್ಕೊಳ್ಳಿ. ಶ್ಯಾಮಣ್ಣ" ಕಷ್ಟಪಟ್ಟು ಹೇಳಿದಳು ಆಕೆ. ಆತ ನಿಂತು ತೀಕ್ಷ್ಣವಾಗಿ ಅವಳತ್ತ ನೋಡಿದ. "ನಿಂಗೂ ಗುರ್ತು ಸಿಕ್ಕಿಲ್ವೇನೋ ಅಂದ್ಕೊಂಡಿದ್ದೆ... ಸಿಕವಚನದಲ್ಲಿ ಮಾತಾಡೋಕೆ ಏನೂ ಅಭ್ಯಂತರ ಇಲ್ಲ ತಾನೇ?" ಅದೇ ರೀತಿಯ ಗುಂಡಿನ ಧ್ವನಿ. "ಇಲ್ಲ" ಅವಳ ಧ್ವನಿ ಅವಳಿಗೇ ಕೇಳದಷ್ಟು ಕ್ಷೀಣವಾಗಿತ್ತು.

"ಎಲ್ಲಿಗ ಹೋಗ್ಬೇಕು ನಿಂಗೆ? ಜಯನಗರದ ಕಡೇಗಾ?" ಆತ ಪ್ರಶ್ನಿಸಿದ. ಬಣ್ಣ ಬಣ್ಣದ ಲೈಟ್ ಹೊತ್ತಿಸಿಕೊಂಡ ರಿಕ್ಷಾಗಳು ಭಯಂಕರ ಶಬ್ದ ಮಾಡುತ್ತ ಹೋಗುತ್ತಿದ್ದಾಗ, ಗಡ್ಡದ ಹಿಂದೆ ಮರೆಯಾದ ಅವನ ಮುಖದಲ್ಲಿಯ ಭಾವನೆಗಳನ್ನು ಆ ರಿಕ್ಷಾಗಳ ಬೆಳಕಿನಲ್ಲಿ ಆಕೆ ಅಳೆಯಲು ಯತ್ನಿಸುತ್ತಿದ್ದಳು. "ಹೂಂ."

"ನಾನೂ ಆ ಕಡೆಗೇ ಬರ್ತೀನಿ. ರಿಕ್ಷಾದಲ್ಲಿ ನನ್ನ ಪಕ್ಕದಲ್ಲಿ ಕೂತ್ಕೊಳ್ಳೋಕೆ ಹೆದರಿಕೆ ಏನೂ ಇಲ್ಲ ತಾನೇ?" ಅವನ ಧ್ವನಿಯಲ್ಲಿದ್ದ ವ್ಯಂಗ್ಯ ಆಕೆಯನ್ನು ಚುಚ್ಚಿತು. ಆಕೆಯ ಉತ್ತರಕ್ಕೆ ಆತ ಕಾಯಲಿಲ್ಲ. ತಟ್ಟನೆ ರಸ್ತೆಯ ಕಡೆ ಮುಖ ಮಾಡಿ ಚಪ್ಪಾಳೆ ತಟ್ಟಿ, "ಆಟೋ" "ಆಟೋ" ಎಂದ. ಆಟೋ ಪಕ್ಕದಲ್ಲಿ ನಿಂತಾಗ "ಹುಂ ಹತ್ತು" ಎಂದ. ಆಕೆ ತುಸು ಯೋಚಿಸಿದಳು. ಆತ ಒಳಕ್ಕೆ ಜಿಗಿದು, ಆಕೆಯ ಕೈಹಿಡಿದು ಒಳಕ್ಕೆಳೆದು, ನಂತರ ಅತಿ ಸಣ್ಣದಾಗಿ "ಕ್ಷಮಿಸು" ಎಂದ. ಆಕೆ ಬೆಳಕನ್ನು ಬೀರುತ್ತ ತಿರುಗುತ್ತಿದ್ದ ರಾಟೆ ಮೇಲಕ್ಕೆ ಹೋಗುವುದನ್ನು ನೋಡುತ್ತಿದ್ದಳು.

"ಜಯನಗರ" ಎನ್ನುತ್ತ ಆತ ಒಂದು ಸಿಗ-

ರೇಟ್ ಹಚ್ಚಿದ.

"ನೀವೀಗ ಎಲ್ಲಿದೀರಾ? ಏನ್ಮಾಡ್ತೀರಾ? ನಿಮ್ಮನ್ನು ಕಾಣ್ದೆ ಎಷ್ಟು ವರ್ಷ ಆಯ್ತಲ್ಲ, ನನ್ನ ನೆನಪಿದೆಯಲ್ಲ ಅಷ್ಟು ಸರಿಯಾಗಿ!" ಆಕೆ ತಡೆದು ತಡೆದು ಕೇಳಿದಳು. ಆಟೋ ಜೋರಾಗಿ ಶಬ್ದ ಮಾಡಿತು. ಬಸ್ಸುಗಳ ಪಕ್ಕದಲ್ಲಿ ನುಗ್ಗುತ್ತ ಕೆಂಪೇಗೌಡ ಸರ್ಕಲ್ ಕಡೆ ತಿರುಗಿತು.

"ನೀವು-ಗೀವು ಅನ್ನೋ ಬಹುವಚನ ಎಲ್ಲಾ ಬೇಕಿಲ್ಲ; ಅದೆಲ್ಲ ನಿಮ್ಮಂಥ 'ಕಲ್ಚರ್ಡ್' ಜನಕ್ಕೆ; ನಂಗೆ ಮೊದಲಿನ ಹಾಗೆಯೇ ನೀನು ಅಂದ್ರೆ ಸಾಕು... ಇಲ್ಲೇ ಇದೀನಿ ಕಾಣ್ಸಲ್ವಾ? ನಿನ್ನ ಕಣ್ಣೆದುರೇ ಇದೀನಿ... ಏನ್ಮಾಡ್ತಿದೀನಿ ಅಂತ ಹೇಳಲಿ? ಯಾವುದಾದ್ರೂ ಒಂದೇ ಕೆಲಸ ಮಾಡ್ತಿದ್ದಿದ್ರೆ, ಒಂದೇ ರೀತಿ ಬದುಕುತ್ತಿದ್ದಿದ್ರೆ ನಿರ್ದಿಷ್ಟವಾಗಿ ಹೀಗಿದೀನಿ, ಹೀಗ್ ಮಾಡ್ತಿದೀನಿ ಅಂತಿದ್ದೆ...... ಹೋಟೆಲ್ ತಟ್ಟೆ ತೊಳೆಯೋದ್ರಿಂದ ಹಿಡಿದು ಸೂಳೇರ ಬ್ರೋಕರ್ ವರೆಗೆ ಎಲ್ಲ ಕೆಲ್ಸ ಮಾಡ್ದೆ. ಒಟ್ಟಿನಲ್ಲಿ ಬದುಕ್ತಿದೀನಿ." ಅವನ ಕೈಯಲ್ಲಿದ್ದ ಸಿಗರೇಟು ಕಿಡಿ ಕಾರಿತು. ಮೈಸೂರ್ ಬ್ಯಾಂಕಿನ ಎದುರಿಗಿರುವ ದೀಪದಿಂದ ಬಿದ್ದ ಬೆಳಕಿನಲ್ಲಿ ಆಕೆಯ ಕಣ್ಣಲ್ಲಿ ನೀರಾಡುತ್ತಿದ್ದುದನ್ನು ಆತ ಗಮನಿಸಿದ. "ಕ್ಷಮಿಸು ನಂಗೆ ಮೃದುವಾಗಿ ಮಾತಾಡೋದು ಮರೆತು ಹೋಗಿದೆ, ಒರಟಾಗಿ ಮಾತಾಡಿಕೊಂಡು, ಮಾತಾಡಿ ಅಭ್ಯಾಸವಾಗಿದೆ. ನಿನ್ನ ಬಗ್ಗೆ ಕೇಳ್ಬೇಕೋ ಬ್ಯಾಡವೋ



ನಂಗೊತ್ತಿಲ್ಲ, ಆದ್ರೂ ಕೇಳ್ತಿದೀನಿ. ನೀನೆಲ್ಲಿದೀಯ? ಮದುವೆ ಆಗಿದೆ ಅಂತ ನೋಡಿದ್ರೆ ತಿಳಿಯುತ್ತೆ, ಗಂಡ ಏನ್ಮಾಡ್ತಿದಾರೆ?" ತನ್ನ ಸಿಗರೇಟಿನ ಹೊಗೆಯನ್ನಾತ ದಿಟ್ಟಿಸಿದ. ಆಟೋ ಬೋರ್ಡ್, ಬಿಲ್ಡಿಂಗುಗಳನ್ನು ದಾಟುತ್ತಾ ಮುಂದೆ ಹೋಗುತ್ತಿತ್ತು. ಅದರ ವೇಗಕ್ಕೆ ಬಿಲ್ಡಿಂಗುಗಳೆಲ್ಲ ಗರಗರನೆ ತಿರುಗಿದಂತೆ ಆಕೆಗೆ ಭಾಸವಾಯಿತು. "ಜಯನಗರ ಐಳನೇ ಬ್ಲಾಕ್‌ನಲ್ಲಿದೀವಿ, ನಮ್ಮ ಮನೆಯೋರು ಫ್ಯಾಕ್ಟರಿಯೊಂದರಲ್ಲಿ ಇಂಜನಿಯರ್, ನಮ್ಮ ಮದುವೆಯಾಗಿ ಇಲ್ಲಿಗೆ ಬಂದು ನಾಲ್ಕೈದು ವರ್ಷವಾಯ್ತು." ಹೇಳಬಾರದ ಸಮಾಚಾರವೊಂದನ್ನು ಹೇಳುವಂತೆ, ಅಳುಕುತ್ತ ಆಕೆ ನುಡಿದಳು. ಅನಂತರ ಗಂಟಲಲ್ಲಿ ಕಫ ಕಟ್ಟಿದವಳಂತೆ ಒಮ್ಮೆ ಕೆಮ್ಮಿ ಮೌನವಾದಳು. ಆಕೆ ಅದನ್ನೆಲ್ಲ ಹೇಳುತ್ತಿದ್ದಾಗ ಆತ ತನಗೆ ಹೇಳುತ್ತಿಲ್ಲವೇನೋ ಎನ್ನುವಷ್ಟು ನಿರಾಸಕ್ತಿಯಿಂದ ಹಿಂದೋಡುತ್ತಿದ್ದ ಬಿಲ್ಡಿಂಗುಗಳನ್ನು, ಪಕ್ಕದಲ್ಲಿ ಭಯಂಕರ ಶಬ್ದ ಮಾಡುತ್ತಿದ್ದ ಬಸ್ಸುಗಳನ್ನೂ ಆತ ನೋಡುತ್ತಿದ್ದ; ಬೀದಿಯ ಪಕ್ಕದ ದೀಪಗಳ ಬೆಳಕು, ಎದುರಿನಿಂದ ಬರುತ್ತಿದ್ದ ವಾಹನಗಳ ಬೆಳಕು ಅವನ ಮುಖವನ್ನು ಆಗೀಗ ಬೆಳಗುತ್ತಿದ್ದುವು. ಆಕೆ ಅವನ ಮುಖವನ್ನು ದಿಟ್ಟಿಸಿದಳು...

ಆತನಿನ್ನೂ ಅದೇ ಹುಡುಗ, ಕೇರಂ ಆಡುವಾಗ ಕಿರುಚುತ್ತಿದ್ದ, ಬೇರೆಯವರು ಕಣ್ಣೀರಿಟ್ಟಾಗ ತಾನೂ ಕಣ್ಣೀರಿಡುತ್ತಿದ್ದ, ಗೌರಿ ಕೆರೆಯ ದಂಡೆಯ ಮೇಲೆ ನಿಂತು ಮುಳುಗುವ ರಕ್ತ ವರ್ಣದ ಸೂರ್ಯ ಕೆರೆಯನ್ನೆಲ್ಲ ಬಂಗಾರ ಮಾಡುತ್ತಿದ್ದಾಗ ತಾನೇ ರಚಿಸಿದ 'ಮುಳುಗುವನು ರವಿ ಮುಳುಗುವನು' ಎಂದು ತನ್ಮಯತೆಯಿಂದ ಹಾಡುತ್ತಿದ್ದ, ಅದೇ ಶ್ಯಾಂ, ಶಾಮಣ್ಣ,...ಆತ ಈ ಗಾಂಭೀರ್ಯದ, ಈ ನಿರಾಶೆಯ ಮುಖವಾಡದಲ್ಲಿ ತನ್ನ ವ್ಯಕ್ತಿತ್ವವನ್ನು ಅದುಮಿದ್ದಾನೆಯೇ? ಛೇ ಅದನ್ನು ನೋಡಲು ಸಾಧ್ಯವಿಲ್ಲ. ಆಗಿನಂತೆಯೇ ಆತ ನಗಬೇಕು, ಕೂಗಬೇಕು...

"ನಮ್ಮಣ್ಣನೂ ಇದೇ ಊರಿನಲ್ಲಿದ್ದಾನೆ ಗೊತ್ತಾ?" ಆಕೆ ಮತ್ತೆ ಪ್ರಶ್ನಿಸಿದಳು. ಆತ ಸುಮ್ಮನಾದ. ಆರುತ್ತಿದ್ದ ಸಿಗರೇಟನ್ನು ಕೊನೆಯ ಬಾರಿ ಸೇದಿ ರಸ್ತೆಗೆ ಎಸೆದ. ಕಿಡಿ ಕಾರುತ್ತ ಉರುಳಿದ ಸಿಗರೇಟು ಎದುರಿನಿಂದ ಬಂದ ಬಸ್ಸೊಂದರ ಚಕ್ರಕ್ಕೆ ಸಿಕ್ಕಿ ಚೂರು ಚೂರಾಯಿತು. "ಹೌದು, ಗೊತ್ತು...ಒಮ್ಮೆ ಕಂಡಿದ್ದೆ." ಅವನ ಧ್ವನಿ ಭಾರವಾಗಿತ್ತು. "ಹೌದಾ!... ಆತ ನಂಗೆ ಹೇಳಲೇ ಇಲ್ವಲ್ಲ?" ಆಕೆ ಉತ್ಸಾಹದಿಂದ ಕೇಳಿದಳು. "ಕಾಣಬಾರದಿತ್ತು. ಈಗ ಒಂದೂವರೆ ವರ್ಷದ ಹಿಂದೆ ಅವನನ್ನು ಕಂಡೆ. ಆಗಷ್ಟೇ ನಾನು ಬೆಂಗಳೂರಿಗೆ ಬಂದು ಕೆಲವೇ ದಿನಗಳಾಗಿದ್ದುವು. ಕರ್ನಾಟಕ ಲಾಟರಿ ಸಂಸ್ಥೆಯಲ್ಲಿ ದಿನಗೂಲಿಯ ಮೇಲೆ ರಸ್ತೆಗಳಲ್ಲಿ ಜಾಹೀರಾತು ಅಂಟಿಸೋಕೆ ಸೇರಿಕೊಂಡಿದ್ದೆ ಕೂಲಿಯಾಗಿ...ಒಂದು ದಿನ ಮಲ್ಲೇಶ್ವರಂ ಸರ್ಕಲ್‌ನಲ್ಲಿ ಜಾಹೀರಾತು ಪತ್ರ ಅಂಟಿಸೋಕೆ ತೊಡಗಿದ್ದೆ. ಮಧ್ಯಾಹ್ನವಾಗಿತ್ತು, ಬಿಸಿಲು ರಣರಣಿಸುತ್ತಿತ್ತು. ನಾನು ಬರಿಗಾಲಿನಲ್ಲಿದ್ದೆ. ಮುಖ ಮೈಗೆಲ್ಲ ಅಂಟು ಮೆತ್ತಿಕೊಂಡಿತ್ತು, ಬೆವರಿನಿಂದ ಮೈ ಒದ್ದೆಯಾಗಿತ್ತು. ತುಂಬಾ ಬಾಯಾರಿಕೆಯಾಗಿ ಪಕ್ಕದಲ್ಲಿದ್ದ ಕ್ಯಾಂಟೀನ್‌ಗೆ ನೀರು ಕುಡಿಯಲು ಹೋಗಿದ್ದೆ. ಅಲ್ಲಿ ನಿಮ್ಮಣ್ಣ ಕಂಡ. ಖಂಡಿತ ನಾನು ಅವನನ್ನು ಕಾಣಬಾರದಿತ್ತು. ಆತ ತನ್ನ ಗೆಳೆಯರ ಜೊತೆ ಇದ್ದುದರಿಂದ ನನ್ನ ಗುರುತೇ ಇಲ್ಲದಂತೆ ನಟಿಸೋಕೆ ತುಂಬಾ ಕಷ್ಟಪಟ್ಟ. ನಿನ್ನ ಸುದ್ದಿ ಕೇಳಿದಾಗ ವಿಷಯನ್ನೇ ಹಾರಿಸಿಬಿಟ್ಟ; ಅವನಿಗೆ ನಾನೆಲ್ಲಿ ಬಂದು ನಿನ್ನನ್ನು ಮಾತಾಡಿಸಿ ಏನ್ಮಾಡಿಬಿಡ್ತೀನೋ ಅಂತ ಭೀತಿ." ಆತ ಸ್ವಲ್ಪ ಹೊತ್ತು ಮೌನವಾದ. ಆಕೆಯೂ ಏನೂ ಮಾತನಾಡಲಿಲ್ಲ. "ನಾನು ಹೇಗೆ ನಿನ್ನನ್ನು ಗುರುತಿಸಿದೆ ಅಂತ ನಿಂಗೆ ಆಶ್ಚರ್ಯವಾಯ್ತಲ್ಲ?... ನಿಜ. ನಿಂಗೆ ಹಾಗೆನ್ಸೋದು, ಯಾಕೆಂದ್ರೆ ನಿಂಗೆ ಬಾಲ್ಯದ ನೆನಪು ಎಷ್ಟು ಅಸಹ್ಯವಾಗಿ ಕಾಡುತ್ತೆ ಅನ್ನೋ ಅನುಭವ ಇಲ್ಲ. ನೀವು ಉಣ್ಣೋಕೆ, ಉಡೋಕೆ ಸಾಕಷ್ಟು ಇರೋರು, ಪಾರ್ಟಿಗಳಲ್ಲಿ ನೈಟ್ ಕ್ಲಬ್‌ಗಳಲ್ಲಿ ನಿಮ್ಮ ಸಾಯಂಕಾಲಗಳನ್ನ ಕಳೀತೀರಾ, ಇಲ್ಲ,

ಪಕ್ಕದ ಮನೆಯವರ ಹತ್ತಿರ ನಿಮ್ಮ ಮಕ್ಕಳ ಕಾನ್ವೆಂಟ್ ವೈಭವವನ್ನು ಹೇಳ್ತಾ ಕಳೀತೀರಾ—ಆದರೆ ನನ್ನಂಥ, ಹೊಟ್ಟೆಗೆ ಎರಡು ಹೊತ್ತಿನ ಅನ್ನಕ್ಕೆ ಏನು ಮಾಡಲಿ ಅಂತ ದಿನ-ಗೂಲಿ ಹುಡುಕ್ಕೊಂಡು ಹೋಗೋ ನನ್ನ, ಕೆಲಸಕ್ಕಾಗಿ ಮೈಲಿಗಟ್ಟಲೆ ಉದ್ದ 'ಕ್ಯೂ'ನಲ್ಲಿ ನಿಂತು, ಬಿಸಿಲಿನಲ್ಲಿ, ಕಾತರದಲ್ಲಿ ಬೆಂದು ಭಸ್ಮ-ವಾಗೋ ನನ್ನ, ಕೊನೆಗೆ ಯಾವುದಕ್ಕೂ ಗತಿ ಇರದೆ ಹತ್ತು ಪೈಸೆ ಕಡಲೆಕಾಯಿ ತಿಂದು ನೀರು ಕುಡಿದು, ಪಾರ್ಕಿನಲ್ಲಿ ಆಕಾಶದತ್ತ ನೋಡುತ್ತ ಮಲಕ್ಕೊಳ್ಳೋ ನನ್ನಂತಹ ಲೋಫರ್‌ನನ್ನ, ಬೇಟೆಯಾಡಿಯಾಡಿ ಕೊಲ್ತಾವೆ ಆ ಬಾಲ್ಯದ ನೆನಪುಗಳು, ನಿಂಗಾಗ್ಲಿ ನಿಮ್ಮಣ್ಣಂಗೇ ಆಗ್ಲಿ ನನ್ನಂತೆ ಭೂತಕಾಲ ಬೇಕಿಲ್ಲ, ಎಲ್ಲ ಬಾಲ್ಯದ ನೆನಪನ್ನ ಚಪ್ಪರಿಸುತ್ತ ವರ್ತಮಾನವನ್ನೇ ಮರೆಯಬೇಕಿಲ್ಲ. ಆದೆಲ್ಲ ನೆನಪಿಸ್ಕೊಂಡ್ರೆ ನಿಂಗೆ ಎಷ್ಟು 'ಸೆಂಟಿಮೆಂಟಲ್' ಅನ್ಸುತ್ತೆ ಅಲ್ವ? ನೀನು ನಿನ್ನ ಗಂಡನಿಗೆ ನನ್ನ ಸುದ್ದಿ ಹೇಳಿಕೊಂಡು ನಗಬೋದು, ನಾವು ಸುತ್ತಿದ ಕಾಡು, ಏರಿದ ಬೆಟ್ಟಗಳು, ನೋಡಿದ ಸೂರ್ಯಾಸ್ತ, ಮೂಸಿದ ಹೂವಿನ ವಾಸನೆ, ಏನಾದ್ರೂ ನಿಂಗೆ ನೆನಪಾಗತ್ತ? ಇಲ್ಲ...ನಿಮ್ಮ-ದುರು ಬಣ್ಣ ಬಣ್ಣದ ಬದುಕಿದೆ. ಹಾಗಾಗಿ ನಿಮ್ಮಣ್ಣಂಗೆ ನನ್ನ ಗುರುತೇ ಸಿಗಲಿಲ್ಲ! ನೀವು ನಮ್ಮೂರು ಬಿಟ್ಟಮೇಲೆ ಒಂದು ಕಾಗದ ಹಾಕಿದ್ರ?...ನನ್ನ ನೆನಪು, ಆ ಬಾಲ್ಯ, ಆ ಊರು ನಿಮ್ಮ ಪಾಲಿಗೆ ಸತ್ತೋಯ್ತು..." ಅವನ ಧ್ವನಿಯಲ್ಲಿಯ ಬಿರುಸು, ಗಟ್ಟಿಯಾಗಿ ಆಟೋದ ಸರಳನ್ನು ಹಿಡಿದುಕೊಂಡಿದ್ದರೂ ನಡುಗುತ್ತಿದ್ದ ಅವನ ಬಲಗೈ, ಆಕೆಗೆ ಭೀತಿ-ಯನ್ನುಂಟುಮಾಡಿದುವು, "ಓಹ್! ಏನೋ ಹೇಳೋಕೆ ಹೋಗಿ ಏನೋ ಅಂದೆ...ಆದೇ ನಿನ್ನಣ್ಣನ್ನ ನೋಡಿದೆ ಅಂತ ಮಾತ್ರ ಹೇಳಿ ಬಾಯಿ ಮುಚ್ಚಿಕೊಂಡಿರಬೇಕಿತ್ತು."

"ಇಲ್ಲಿಗೆ ಬರೋಕೆ ಮುಂಚೆ ಏನ್ಮಾಡ್ತಿದ್ದೆ?"

ಆತ ಮತ್ತೆ ಮೌನವಾದ. ಅವನ ಮೌನವನ್ನು ನೋಡಿದರೆ ಇನ್ನು ಮಾತೇ ಆಡಲಾರನೇನೋ ಎನ್ನಿಸುತ್ತಿತ್ತು. ಸರಸರನೆ ಹಿಂದೋಡುತ್ತಿದ್ದ ಕಾರ್ಪೊರೇಷನ್ ಕಟ್ಟಡಗಳನ್ನು, ಪುರಭವನವನ್ನು ರವೀಂದ್ರ ಕಲಾಕ್ಷೇತ್ರವನ್ನ ಆತ ನೋಡುತ್ತಿದ್ದ. ಆಕೆಗೆ ತಾನು ಒಬ್ಬ ಅಪರಿಚಿತನ ಜೊತೆ ಹೋಗುತ್ತಿದ್ದೇನೇನೋ ಎನ್ನಿಸಿ ಒಮ್ಮೆಗೇ ಭೀತಿಯಾಯಿತು. 'ಈ ಕ್ಷಣವೇ ಆಟೋ ನಿಲ್ಲಿಸಿ ಇಳಿದು ಓಡಿ ಹೋಗಿ ಯಾವುದಾದರೂ ಮನೆಯಲ್ಲಿ ಆಶ್ರಯ ಪಡೆಯಲೇ...?' ಆಕೆ ಮತ್ತೊಮ್ಮೆ ಅವನನ್ನು ನೋಡಿದಳು. ಒಮ್ಮೆಗೇ ಅವನ ಮುಖ ಸಡಿಲಾಯಿತು. ಕಣ್ಣಿನಲ್ಲಿ ವಿಲಕ್ಷಣ ಮಾರ್ದವತೆ ಮೂಡಿತು. ಕೈ ಬಿಗಿತ ಕಡಿಮೆ-ಯಾಯಿತು. ಆಕೆಯ ಕಡೆ ನೋಡಿ ಒಮ್ಮೆ ಮುಗುಳ್ನಕ್ಕ. ಅವನ ಕಣ್ಣಿನಲ್ಲಿ ಮೂಡಿದ ವಿಷಾದ ಆಕೆಯನ್ನು ಚುಚ್ಚಿತು.

"ನಿಂಗೆ ಮರೆತಿರ್‌ಬೋದೂ; ನಂಗೆ ಅಪ್ಪ ಇರ್ಲಿಲ್ಲ, ಅಮ್ಮನೇ ಮನೆ ಜವಾಬ್ದಾರಿ ನೋಡ್ಕೊತಿದ್ದಳು. ಆಕೆ ಇರೋವರೆಗೆ ಬದುಕಿಗೆ ಒಂದು ತಡೆ ಇತ್ತು, ಗುರಿ ಇತ್ತು, ಆಕೇನೂ ಒಂದು ದಿನ ಸತ್ತೋದಳು. ಆಗ ಸಿಕ್ಕಿದ ಸ್ವಾತಂತ್ರ್ಯ ನನ್ನನ್ನು ದಿಕ್‌ಗೆಡಿಸಿ ಬಿಟ್ತು. ಅದನ್ನ ಜೀರ್ಣಿಸಿಕೊಳ್ಳೋ ಸ್ಥಿತಿಯಲ್ಲಿ ನಾನಿರ-ಲಿಲ್ಲ ಎರಡ್-ಮೂರು ಬಾರಿ ಫೇಲಾಗಿ ಎಸ್. ಎಸ್. ಎಲ್. ಸಿ. ಪಾಸ್ ಮಾಡ್ದೆ. ಬೀಡಿ ಕುಡಿ-ಯೋದು ಕಲ್ತೆ. ಇಸ್ಪೀಟ್ ಆಟ ಆಕರ್ಷಕ ಅನಿಸ್ತು. ಕೆಟ್ಟ ಕೆಟ್ಟ ಪುಸ್ತಕಗಳನ್ನೋದಿ ಖುಷಿ ಪಟ್ಟೆ. ಅಮ್ಮ ಸತ್ತ ಮೇಲೆ ಅಣ್ಣಂದ್ರು ಮೂರು ಜನಾನೂ ಆಸ್ತೀನ ಹಂಚ್‌ಕಂಡ್ರು. ನಾನು ಇನ್ನೂ 'ಮೆಜಾರಿಟಿಗೆ' ಬಂದಿರಲಿಲ್ಲ. ಹಾಗಾಗಿ ನನ್ನ ಪಾಲಿನ ಆಸ್ತಿಯನ್ನು ಒಬ್ಬ ಅಣ್ಣ ನೋಡ್ಕೊಳೋ ನಾಟಕ ಆಡ್ದ. ಆದ್ರೆ ಅವನಿಗೆ, ಮುಖ್ಯವಾಗಿ ಅವನ ಹೆಂಡತಿಗೆ ನಾನು ಕೂಳು ಬಾಕನಾಗಿ ಕಾಣಿಸ್ದೆ. ಒಂದು ದಿನ ಇಸ್ಪೀಟಿಗೆ, ಬೀಡಿಗೆ ದುಡ್ಡಿರದೆ ತೋಟದಲ್ಲಿ ಅಡಿಕೆ ಕದ್ದು ಮಾರಾಟ ಮಾಡ್ದೆ. ಅದು ಅಣ್ಣನಿಗೆ ಗೊತ್ತಾಗಿ ಕಂಬಕ್ಕೆ ಕಟ್ಟಿಹಾಕಿ ಕೈ ಮೇಲೆ ಬರೆ ಎಳೆದ, ಇದಾದ ನಾಲ್ಕೇ ದಿನದೊಳಗೆ ಅಣ್ಣನ ಜೇಬಿನಲ್ಲಿದ್ದ ದುಡ್ಡನ್ನೇ ಕದ್ದು ಮನೆ ಬಿಟ್ಟೆ. ಅನಂತರ ನಾಲ್ಕೈದು ವರ್ಷಗಳ ಮೇಲೆಯೇ ಮನೆಗೆ ಹೋದದ್ದು. "ನನ್ನ ಪಾಲಿನ ಆಸ್ತಿಯನ್ನ

ಏನಾದ್ರೂ ಮಾಡಿಹೋಗು, ನನಗೆ ಅದರ ಜವಾಬ್ದಾರಿ ಬೇಡ" ಎಂದು ಅಣ್ಣ ಎನ್ನುವ ಮಹಾನುಭಾವ ಎಲ್ಲೋ ಹೋಟೆಲ್ಲಿನಲ್ಲಿ ಗ್ಲಾಸ್ ತೊಳೀತಾ ಇರೋ ನನ್ನ ಪತ್ತೆ ಹಚ್ಚಿ ಅಲ್ಲಿಗೆ ಕಾಗದ ಹಾಕಿದ. ಊರಿಗೆ ಹೋಗಿ ಎಲ್ಲ ಮುಗಿಸಿ ಬಂದೆ, ಓಹ್! ಬಿಡು ಅದನ್ನೆಲ್ಲ ಏನ್ ಹೇಳೋದು, ಅದ್ರಿಂದ ಯಾರಿಗೆ ಏನಾಗ ಬೇಕಿದೆ?... ನಾನು ಮಾಡಿದ ಯಾವ ಕೆಲಸಕ್ಕೂ ನನಗೆ ಪಶ್ಚಾತ್ತಾಪವಿಲ್ಲ. ನಾನು ಯಾರಿಗೂ ಉಪಯೋಗವಾಗಿಲ್ಲ, ಉಪಕಾರ ಮಾಡಿಲ್ಲ, ನಂಗಾಗಿ ಬದುಕ್ದೆ... ಇತರ ಪ್ರಾಣಿಗಳೂ ಬದುಕೋದಿಲ್ವಾ ಹಾಗೆ..." ಆತ ಒಮ್ಮೆಗೇ ಕ್ಯಾಕರಿಸಿ ರಸ್ತೆಗೆ ಉಗುಳಿದ. ಮಾಸಿ ಎರಡು ಬಣ್ಣ ಕಾಣುತ್ತಿದ್ದ ಅವನ ಶರ್ಟನ್ನು, ಒರಟಾದ ಕೈಯನ್ನು, ಬೆವರು ವಾಸನೆ ಬರುತ್ತಿದ್ದ ಅವನ ತಲೆಯನ್ನು ನೋಡುತ್ತಿದ್ದಂತೆ ಅಸಹ್ಯವೋ ತೀವ್ರ ಅನುಕಂಪವೋ ಎಂದು ಗುರುತಿಸಲಾಗದ ಅಸ್ಪಷ್ಟ ಭಾವನೆಯೊಂದು ಆಕೆಯಲ್ಲಿ ಝಳ-ಪಿಸಿತು. ತನ್ನ ಬದುಕಿನ ಬಗ್ಗೆ ಹೇಳುತ್ತಿದ್ದಾಗ ಆತ್ಮೀಯನಾಗುತ್ತಿದ್ದ ವ್ಯಕ್ತಿ ಉಗುಳಿದಾಗ ಮತ್ತೊಮ್ಮೆ ತೀರ ಅಪರಿಚಿತನೇನೋ ಎನ್ನಿಸ-ತೊಡಗಿದ.

ಆಟೋ ಈಗ ಲಾಲ್‌ಬಾಗಿನ ಪ್ರವೇಶದ್ವಾರದ ಹತ್ತಿರ ಬಂದಿತ್ತು. ಆದರೆ ದೂರಿನ ಟ್ಯೂಬ್-ಲೈಟ್ ಝಗಝಗಿಸುತ್ತಿತ್ತು. ಆತ ಒಮ್ಮೆಗೇ, "ಆಟೋ ನಿಲ್ಲಿಸು, ನಾವಿಲ್ಲೇ ಇಳೀತೀವಿ" ಎಂದು ಡ್ರೈವರನಿಗೆ ಹೇಳಿದ. ಆಕೆಗೆ ಅರ್ಥವಾಗಲಿಲ್ಲ. "ನೋಡು ನಿಂಗೆ ಹೆದರಿಕೆ ಅನ್ನಿಸ್ತೇ ಇದ್ರೆ ಇಲ್ಲೇ ಇಳಿಯೋಣ. ನಿನ್ನನ್ನ ಸುರಕ್ಷಿತವಾಗಿ ಜಯನಗರ ತಲಪಿಸ್ತೀನಿ. ಸ್ವಲ್ಪ ಹೊತ್ತು ಲಾಲ್‌ಬಾಗ್-ನಲ್ಲಿ ಕೂತ್ಕೊಳ್ಳೋಕ್ಕೆ ನಿಂದೇನೂ ಅಬ್ಜೆಕ್ಷನ್ ಇಲ್ಲ ತಾನೇ? ನಿಂಗೆ ಭೀತಿಯಾದ್ರೆ ಹಾಗೇ ಆಟೋ ದಲ್ಲಿ ಹೋಗ್ಬಿಡು, ನಾನು ಇನ್ನು ಬಹುಶಃ ಜೀವನದಲ್ಲಿ ಎಂದೂ ಸಿಗೋಲ್ಲ." ಯಾವ ಉದ್ವಿಗ್ನತೆಯೂ ಇಲ್ಲದೆ ಆತ ಹೇಳಿದ. ಆಕೆ ಮೌನವಾಗಿ ಒಂದೇ ನಿಮಿಷದ ನಂತರ, "ನಾನೂ ಇಳೀತೀನಿ," ಎನ್ನುತ್ತ ಇಳಿದಳು. ಆಕೆಗೆ ಮುಂಚೆಯೇ ಆಟೋಕ್ಕೆ ಆತ ಹಣ ಕೊಟ್ಟ.

ಇಬ್ಬರೂ ಲಾಲ್‌ಬಾಗಿನ ಗಿಡಗಳ ಎಲೆಗಳ ಮೇಲೆಲ್ಲಾ ಹೆಪ್ಪುಗಟ್ಟಿದ್ದ ಕತ್ತಲೆಯನ್ನು ನೋಡುತ್ತ ಒಳಹೊಕ್ಕರು. ಎದುರಿನ ಸಿಮೆಂಟಿನ ವೃತ್ತದ ಬಳಿ ಇನ್ನೂ ನಾಲ್ಕಾರು ಹುಡುಗರು ಆಡುತ್ತಿದ್ದರು. ಸನಿಹದಲ್ಲಿಯ ಮರವೊಂದರ ಕೆಳಗೆ ಅವರು ಕುಳಿತರು.

"ನಿನ್ನ ಬಗ್ಗೆ ಏನೂ ಕೇಳಲೇ ಇಲ್ವಲ್ಲ?... ಅಲ್ಲಾ, ಕೇಳೋದಾದ್ರೂ ಇನ್ನೇನು? ನಿನ್ನ ಮದುವೆಯ ಸುದ್ದಿಯನ್ನ ಯಾವಾಗ್ಲೋ ನ್ಯೂಸ್ ಪೇಪರ್ನಲ್ಲಿ ನೋಡಿದ ನೆನಪು. ಗಂಡ ಇಂಜಿನಿಯರ್ ಅಂದೆ ತಾನೇ? ಜೊತೆಯಲ್ಲಿ ನಿಮ್ಮ ಮಾವನೂ ಯಾವುದೋ ಊರಿನ ಸಾಹುಕಾರರು ಅಂತ ನೋಡ್ದ ನೆನಪು. ಅಂದ್ಮೇಲೆ ಸುಖವಾಗಿದ್ದೀಯಾ..." ಆಕೆ ಎಲೆಗಳೆಲ್ಲವನ್ನೂ ದಾಟಿ ಎಲ್ಲಾದರೂ ಬೆಳಕಿನ ಕಿರಣ ಬರಬಹುದೇನೋ ಎಂದು ಗಿಡಗಳ ಮೂಲಕ 'ಟ್ಯೂಬ್‌ಲೈಟ್' ನೋಡುತ್ತಿದ್ದಳು. ಅವನ ಮಾತಿನಲ್ಲಿದ್ದ ವ್ಯಂಗ್ಯ ತನ್ನನ್ನು ತಲುಪಿ-ಲ್ಲವೇನೋ ಎನ್ನುವಷ್ಟು ನಿರ್ಲಿಪ್ತಳಾಗಿ ಕುಳಿತು ಸ್ವಲ್ಪ ಸಮಯದ ನಂತರ ತೀರ ಗಂಭೀರ ಸ್ವರ-ದಲ್ಲಿ, "ಅಷ್ಟೇ" ಎಂದು ನುಡಿದಳು. ಆದರೆ ಆ ಧ್ವನಿಯಲ್ಲಿ ಬೆರೆತು ಹೋದ ದಟ್ಟ ನಿರಾಶೆ, ತೀವ್ರವಾದ ನೋವು, ಆತನಿಗೆ ಅಚ್ಚರಿ ತರಿಸಿರ-ಬೇಕು. ಆಕೆಯ ಮುಖವನ್ನು ನೋಡಲೆತ್ನಿಸಿದ. ಆದರೆ ವಿಶಾಲವಾದ ಕೊಂಬೆಯೊಂದರ ಕಪ್ಪು ನೆರಳಿನಲ್ಲಿ ಆಕೆ ಮುಚ್ಚಿ ಹೋಗಿದ್ದಳು. ಸುಮಾರು ಹೊತ್ತು ಅವರಿಬ್ಬರ ಮಧ್ಯೆ ನೀರವತೆಯಿತ್ತು. ಪಾರ್ಕಿನ ಜನ ಎದ್ದು ಹೊರಡಲಾರಂಭಿಸಿದ್ದರು. ದೂರದಿಂದ ಮಾತಾಡುತ್ತ ಬಂದವರ ಧ್ವನಿ ಏರುತ್ತ, ಸಮೀಪಿಸಿ ಮುಂದೆ ಹೋಗುತ್ತಿದ್ದಂತೆ ಕ್ಷೀಣಿಸಿ ಕೊನೆಗೊಮ್ಮೆ ಸತ್ತುಹೋಗುತ್ತಿತ್ತು. ಅವರಿಬ್ಬರೂ ಪರಸ್ಪರರ ಅಸ್ತಿತ್ವವನ್ನು ಮರೆ-ತಿದ್ದಾರೇನೋ ಎನ್ನುವಷ್ಟು ಮೌನವಾಗಿ ಕುಳಿ-ತಿದ್ದರು. ಆತ ಮತ್ತೊಮ್ಮೆ ಗಂಟಲು ಕ್ಯಾಕರಿ-ಸಿದ.

"ಹೋಗ್ಲಿ. ನಾನೇ ಇನ್ನೊಂದಿಷ್ಟು ಮಾತಾಡಿ ಬಿಡ್ತೀನಿ. ನಾನಂದ ಹಾಗೇ ನಿಂಗೆ ನಾನಿನ್ನು ಸಿಗೋಲ್ಲ. ಬಹುಶಃ ನಾಳೆ ಬೊಂಬಾಯಿಗೆ

ಹೋಗ್ತೀನಿ, ಹಾಗೆ ಮುಂದೆ ಎಲ್ಲಾದ್ರೂ, ತೀರ ಕತ್ತಲೆಗೆ, ನನ್ನ ಅಸ್ತಿತ್ವವನ್ನೇ ಮರೆಯುವಂಥ ಪ್ರಪಂಚಕ್ಕೆ... ಅಂದ ಹಾಗೆ ನೀನು ನಮ್ಮೂರಲ್ಲಿದ್ದಾಗ ನಮ್ ಜೊತೆ ರುಕ್ಕು ಅಂತ ಒಬ್ಬ ಚಿಕ್ಕ ಹುಡುಗಿ ಆಟ ಆಡೋಕೆ ಬರ್‍ತಿದ್ದಳಲ್ಲ. ನಿನ್ನ ಹಾಗೇನೇ ಇದ್ದಳು, ನಿನ್ನ ಹಾಗೆ ಕಣ್ಣಿನ ಕೆಳಕ್ಕೆ ಒಂದು ಕಪ್ಪು ಚುಕ್ಕೆ ಇತ್ತು. ನೀನೂ ಆಕೇನೂ ಆಟದಲ್ಲಿ ಅಕ್ಕ-ತಂಗಿ ಆಗತಿದ್ರಿ ನೆನಪಾ ಸ್ತಾ...? ಆಕೇನ ನಾನು ಕೊಂದುಬಿಟ್ಟೆ" ಅತ ಗೇಲಿ ಮಾಡುತ್ತಿರುವಂತೆ ಆಕೆಯನ್ನು ನೋಡಿದ. ಆಕೆಯ ಮುಖ, ಭೀತಿಯಿಂದ ಬಿಳಿಚಿಕೊಂಡಿತ್ತು; ತುಟಿಗಳು ಕಂಪಿಸುತ್ತಿದ್ದವು,

"ಹ್ಯಾಂಗೆ ಕೊಂದೇ ಅಂತಾನೂ ಹೇಳ್ತೀನಿ, ನೀನು ನಮ್ಮೂರು ಬಿಟ್ಟಮೇಲೆ ನಂಗೆ ಉಳಿದ ಒಂದೇ ಒಂಗು ಆತ್ಮೀಯ ವ್ಯಕ್ತಿ ಅಂದ್ರೆ ! ಆಕೆ, ಆಕೆ ಮೂಕಿ ಅಂತ ನಿಂಗೆ ಗೊತ್ತು. ನಾನು ಹಣ ಕದ್ದು ಅಣ್ಣ ಕೈಮೇಲೆ ಬರೆ ಎಳೆದದ್ದು ಹೇಳಿದೆನಲ್ಲ, ಆಗ ಆಕೆ ಭೋರಾಡಿ ಅತ್ತಳು, ಅನಂತರ ನಾನು ಮನೆ ಬಿಟ್ಟದ್ದು, ಆಸ್ತಿಯ ವ್ಯವಹಾರಕ್ಕೆ ತಿರುಗಿ ಊರಿಗೆ ಹೋದದ್ದು ಹೇಳಿದೆ. ಆಗ ಆಕೆ ನಮ್ಮ ಮನೆಗೆ ನನ್ನನ್ನು ನೋಡಲು ಬಂದಿದ್ದಳು. ಅದೇ ರುಕ್ಕು ಬೆಳೆದು ನಿಂತು ಆಕೆಯ ತಾಯಿಯ ಎದೆಯ ಹುಣ್ಣಾಗಿದ್ದಳು. ಆ ಮೂಗಿಯನ್ನ, ಬಡತನದ ಪ್ರತೀಕವನ್ನ ಯಾರು ತಾನೇ ಮದುವೆಯಾಗಬೇಕು.

"ನಾನು ಆಕೆಯ ಜೊತೆ ಅವರ ಮನೆಗೆ ಹೋದೆ. ಒಂದು ದಿನ ಅವರ ಮನೆಯಲ್ಲೇ ಊಟ ಮಾಡಿದ್ದೆ, ಅದಕ್ಕೆ ನನ್ನ ಅಣ್ಣಂದಿರ, ಊರವರ ಕಣ್ಣು ಕೆಂಪಾಯಿತು. ಆಕೆ ಕಮ್ಮಾರ ಜಾತಿಯವಳು, ನಾನು ಬ್ರಾಹ್ಮಣ ತಾನೇ? ಆದರೆ ನಾನು ಅವನ್ನು ಲೆಕ್ಕಿಸಲಿಲ್ಲ. ನನಗೆ ದೈಹಿಕ ಬಯಕೆ ಇತ್ತು, ಆಕೆ, ಸೊಂಪಾಗಿ ಬೆಳೆದಿದ್ದಳು. ನಾನು ಆಕೆಯನ್ನು ಮದುವೆಯಾಗುತ್ತೇನೆಂದು ಆಕೆಗೆ, ಆಕೆಯ ಏಕೈಕ ಆಶ್ರಯವಾದ ಅವಳ ತಾಯಿಗೆ ಹೇಳಿದಾಗ ಇಬ್ಬರೂ ಬೆಚ್ಚಿದರು. ಬೇಡವೆಂದು ಮನವೊಲಿಸಲೆತ್ನಿಸಿದರು. ಸಮಾಜದ ಬೆದರಿಕೆಯನ್ನು ಮುಂದೊಡ್ಡಿದರು. ನನಗೆ ಸಮಾಜದ ಹಂಗಿರಲಿಲ್ಲ. ಹೊಟ್ಟೆಗೆ ಒಂದು ತುತ್ತು ಅನ್ನವಿಲ್ಲದೆ ಬೀದಿ ಬೀದಿ ಸುತ್ತುತ್ತಿದ್ದಾಗ. ದಿನಗೂಲಿಗೂ ಗತಿಯಿರದೆ ನಿರಾಶೆಯಲ್ಲಿ ಮುಳುಗಿದ್ದಾಗ ಇವರು ಎಲ್ಲಿ ಹೋಗಿದ್ದರು? ನನ್ನ ಜಾತಿ ಹುಡುಗ ಅಂತ ಯಾರು ನನ್ನ ಹೊಟ್ಟೆಗೆ ಅನ್ನ ಕೊಟ್ಟರು? ಎಂದು ಊರವರಿಗೆ ಹೇಳುತ್ತಾ ಓಡಾಡಿದೆ, ನಾನು ನಿಜವಾಗಿಯೂ, ನಿರ್ಧಾರದಿಂದ ಆಕೆಯನ್ನು ಮದುವೆಯಾಗುತ್ತೇನೆಂದಾಗ ಆಕೆ ಸಂತೋಷದಿಂದ ಕಣ್ಣೀರಿಟ್ಟಳು. ಆದರೆ ಒಂದು ದಿನಾನೂ ನಾನು ಆಕೆಯನ್ನು ಮುಟ್ಟಲಿಲ್ಲ. ನಾನು ಪವಿತ್ರ ಭಾವನೆ ಇಟ್ಟುಕೊಂಡೇ ಆಕೆಯನ್ನು ಮುಟ್ಟಲಿಲ್ಲ ಎನ್ನಲಾರೆ, ಅದಕ್ಕೆ ಕಾರಣ ಆಕೆ ಗರ್ಭಿಣಿಯಾದರೆ ನನಗೊಂದು ನೆಲೆ ಇರದೆ ಆಕೆಯನ್ನು ಏನು ಮಾಡಲಿ ಎಂಬ ಭೀತಿ ಇರಬಹುದು. ಆಕೆಯ ಬಗ್ಗೆ ಕನಿಕರ ಇರಬಹುದು...ಆಸ್ತಿ ಮಾರಿದ ದುಡ್ಡು ಕೈಯಲ್ಲಿತ್ತು. ಬೆಂಗಳೂರಿಗೆ ಹೋದವನು ಒಂದು ಪೆಟ್ಟಿಗೆ ಅಂಗಡಿ ಇಟ್ಟು ನನ್ನ ಕಾಲ ಮೇಲೆ ನಾನು ನಿಲ್ಲುತ್ತೇನೆಂದೂ, ಅನಂತರ ಅವರಿಬ್ಬರನ್ನೂ ಕರೆಸಿಕೊಳ್ಳುತ್ತೇನೆಂದೂ ಅವಳ ತಾಯಿಗೆ ಹೇಳಿದೆ. ಅವರಿಬ್ಬರೂ ನನ್ನನ್ನು ನಂಬಿದರು. ನನಗೆ ಅಂತರ್ಜಾತೀಯ ವಿವಾಹವಾಗಿ ದೊಡ್ಡ ಕ್ರಾಂತಿ ಮಾಡುವ ಆದರ್ಶವಿರಲಿಲ್ಲ, ಆದರೆ ನನ್ನ ದೇಹಕ್ಕೆ ಸಹಜ ಒತ್ತುಗಳನ್ನು ಹತ್ತಿಕ್ಕಲಾಗುತ್ತಿರಲಿಲ್ಲ. ನನ್ನ ದಾಹಕ್ಕೊಂದು ಶಾಶ್ವತ ಪರಿಹಾರ ಬೇಕಿತ್ತು,

"ಬೆಂಗಳೂರಿಗೆ ಬಂದೆ. ನನ್ನ ಆಸ್ತಿಯ ದುಡ್ಡು ಸಾಕಪ್ಪಿರಲಿಲ್ಲ, ಅದಕ್ಕೆ ಮತ್ತಷ್ಟು ಕೂಡಿಸಲು ಕತ್ತೆಯಂತೆ ದುಡಿದೆ. ನನ್ನ ಪಾಲಿಗೆ ಬದುಕು ಇನ್ನೂ ಸತ್ತಿಲ್ಲವೆಂದು ಭಾವಿಸಿದೆ, ಅಷ್ಟರಲ್ಲಿ, ಈಗ ಕೆಲವು ತಿಂಗಳ ಹಿಂದೆ ಊರಿನಿಂದ ರುಕ್ಕುವಿನ ತಾಯಿ ಯಾರ ಕೈಯಲ್ಲೋ ಹಾಕಿಸಿದ ಕಾಗದ ಬಂತು. ರುಕ್ಕು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳೆಂದೂ ನಾನು ಕೂಡಲೇ ಊರಿಗೆ ಬರುವುದಿದ್ದರೆ ಬರಬೇಕೆಂದೂ ಬರೆಯಿಸಿದ್ದಳು, ಹಾಗಾಗಿ ಆಕೆಯ ಮನೆಗೆ ಹೋದೆ. ಆಕೆ ಗೋಳಿಟ್ಟಳು. ರುಕ್ಕು ಸಾಯುವಾಗ ಆಕೆಗೆ ಎರಡು ತಿಂಗಳಾಗಿತ್ತು. ಅದು ನನ

ಬದುಕಿನಲ್ಲೇ ಕೇಳಿದ ಅತ್ಯಂತ ಭಯಾನಕ ವಾರ್ತೆಯಾಗಿತ್ತು. ಆಕೆ ಬಸಿರಾಗಲು ನಾನೇ ಕಾರಣವೆಂದೂ ನಮ್ಮಂಥವರೂ ಸಮಾಜಕ್ಕೇ ಅಪಾಯವೆಂದೂ ಊರವರು ಸುದ್ದಿ ಹಬ್ಬಿಸಿದ್ದರು.

"ಆದರೆ ರುಕ್ಕುವಿನ ತಾಯಿಯಿಂದ ನನಗೆ ತಿಳಿದುದಿಷ್ಟು: ನಾನು ಬೆಂಗಳೂರಿಗೆ ಬಂದ ಕೆಲವು ದಿನಗಳನಂತರ ಒಂದು ದಿನ ರುಕ್ಕು ಊರ ಹೊರಗಿನ ಕೆರೆಗೆ ಬಟ್ಟೆ ಒಗೆಯಲೋ ಇನ್ನಾವುದಕ್ಕೋ ಹೋಗಿದ್ದಳು, ಬರುವಾಗ ಸ್ವಲ್ಪ ಕತ್ತಲಾಗಿತ್ತು. ಕೂಗಲಾರದ ಅವಳ ಮೇಲೆ ಯಾರೋ ಬಲಾತ್ಕಾರ ಮಾಡಿದರು. ರುಕ್ಕು ತಾಯಿಗೆ, ಅದನ್ನು ಹೇಳಲಾರದೆ ಹೇಳಿದ್ದಳು. ತಾಯಿ ಮಗಳಿಬ್ಬರೂ ಅದನ್ನ ನನಗೆ ಹೇಗೆ ಹೇಳುವುದೆಂದು ತಿಳಿಯದೆ ಒಳಗೊಳಗೇ ಬೆಂದು ಹೋಗಿದ್ದರು. ರುಕ್ಕು ನನ್ನನ್ನು ನೋಡಲು ಧೈರ್ಯ ಸಾಲದೆ ಆತ್ಮಹತ್ಯ ಮಾಡಿಕೊಂಡಿದ್ದಳು. ನನಗೆಲ್ಲ ಅರ್ಥವಾಗಿತ್ತು. ನನ್ನ ಹೆಸರನ್ನು ದುರುಪಯೋಗಪಡಿಸಿಕೊಂಡು ಯಾರೋ ತಮ್ಮ ಗೊಡ್ಡು ಹೆಂಡತಿಯಲ್ಲಿ ಸಿಗದಿರುವುದನ್ನು ರುಕ್ಕುವಿನಿಂದ ಪಡೆದಿದ್ದರು. ನಮ್ಮೂರ ಸಮಾಜ ಅದರ ವಿರುದ್ಧ ಬಂಡೆದ್ದ ನನ್ನ ಮೇಲೆ ವಿಚಿತ್ರ ರೀತಿಯಲ್ಲಿ ಸೇಡು ತೀರಿಸಿಕೊಂಡಿತ್ತು. ರುಕ್ಕುವಿನ ತಾಯಿಯ ಕಣ್ಣೀರನ್ನು ಕಂಡು ರುಕ್ಕುವಿನ ಸಾವಿಗೆ ನಾನೇ ಕಾರಣ ಎನ್ನುವ ಭಾವನೆ ದಟ್ಟವಾಗಿ ನನ್ನಲ್ಲಿ ಬೇರೂರಿತು. ನನ್ನ ಆಸ್ತಿಯ ದುಡ್ಡು, ನಾನು ಕತ್ತೆಯಂತೆ ದುಡಿದು ಸಂಪಾದಿಸಿದ ಹಣ ಎಲ್ಲವನ್ನೂ ರುಕ್ಕುವಿನ ತಾಯಿಗೆ ಕೊಟ್ಟು ಕೈ ತೊಳೆದುಕೊಂಡು ಮತ್ತೆ ಬೆಂಗಳೂರಿಗೆ ಬಂದೆ. ಪ್ರೇತ ಬಡಿದ ಬೀದಿಗಳನ್ನು ಕೊಳಚೆ ಚರಂಡಿಗಳನ್ನು ನೋಡುತ್ತ ನಾನೀಗ ಇಲ್ಲಿ ಬದುಕುತ್ತಿದ್ದೇನೆ. ಆದ್ರೆ ನಂಗೆ ಇನ್ನೂ ಎಷ್ಟು ಸೂಕ್ಷ್ಮ ಹೃದಯ ಯಾಕೆ ಉಳಿದುಬಿಟ್ಟಿದೆಯೋ ಅರ್ಥವಾಗಲಿಲ್ಲ."

ಆತ ತನ್ನ ಕಥೆ ಹೇಳುತ್ತಿದ್ದಾಗ ಆಕೆ ಅಲ್ಲಲ್ಲಿ ಮಿನುಗುತ್ತಿದ್ದ ಆಕಾಶಕಾಯಗಳನ್ನೂ ಅವು ಕಪ್ಪು ಮೋಡಗಳ ಮರೆಯಲ್ಲಿ ನಿಧಾನವಾಗಿ ಕರಗಿ ಹೋಗುತ್ತಿದ್ದುದನ್ನೂ ಘಳಿಗೆ ಘಳಿಗೆಗೆ ಆ ಮೋಡಗಳು ಆಕಾಶವನ್ನೇ ನುಂಗುತ್ತಿದ್ದುದನ್ನೂ ಸುಮ್ಮನೆ ನೋಡುತ್ತಿದ್ದಳು. ಕೆಲವು ಶಬ್ದಗಳನ್ನಾಡಿದಾಗ ಅವನ ಮಾತಿನಲ್ಲಿ ಮೂಡುತ್ತಿದ್ದ ಕಾವು ಅವಳು ಬೆಚ್ಚುವಂತೆ ಮಾಡುತ್ತಿದ್ದುವು. ಆಕಾಶದಲ್ಲಿ ಮೋಡಗಳು ದಟ್ಟವಾಗುತ್ತಿದ್ದಂತೆ ಪಾರ್ಕಿನ ಜನಸಂದಣಿಯೂ ಕಡಿಮೆಯಾಗುತ್ತಿತ್ತು. ಕತ್ತಲೆ ಮುಸುಕುತ್ತಿತ್ತು. ಆತ ಒಮ್ಮೆಗೇ ಎದ್ದು ನಿಂತ. "ಏಳು ಹೋಗೋಣ, ತುಂಬಾ ವೇಳೆ ಆಗಿರಬೇಕು. ನಿನ್ನ ಗಂಡ ಕಾಯ್ತಿರ್ಬೋದು. ಪೂನಮ್ ಟಾಕೀಸ್ ವರೆಗೆ ಹೋದ್ರೆ ಮುಂದೆ ಹೋಗೋಕೆ ಭಯ ಇಲ್ಲ ತಾನೇ?" ಸಣ್ಣ ಹುಡುಗಿಯನ್ನು ಕೇಳುವಂತೆ ಕೇಳಿದ. "ಇಲ್ಲ ಹೋಗಬಲ್ಲೆ" ಎಂದಳಾಕೆ. ಎಲ್ಲೋ ನೋಡುತ್ತ ಇಬ್ಬರೂ ಹೊರಬಂದು ನಿಧಾನವಾಗಿ ನಡೆಯತೊಡಗಿದರು. ದೂರದಲ್ಲಿ ಆಟೋ ಬರುವುದು ಕಂಡಿತು. ಅದರ ಬೆಳಕು ದಟ್ಟವಾಗುತ್ತಿದ್ದಂತೆ "ಆಟೋ ಬರುತ್ತೆ ನಿನ್ನ ಹತ್ತಿಸ್ತೀನಿ, ನಾನು ಇಲ್ಲೇ ಹೋಗ್ತೀನಿ." ಕತ್ತಲೆ ತುಂಬಿದ ಹಾದಿಯೊಂದನ್ನು ತೋರಿಸುತ್ತ ಆತನೆಂದ. "ಎಲ್ಲಿಗೆ ಅಂತ ಕೇಳ್ಬೇಡ. ನಿಮ್ಮಂಥ ಸಭ್ಯ ಮನೆತನದ ಹೆಂಗಸರು ಕೇಳೋ ಅಂಥ ವಿಚಾರವಲ್ಲ." ಅವನ ಮುಖ ಹೇಗಿರಬಹುದೆಂದು ತಿಳಿಯಲು ಆಕೆ ಯತ್ನಿಸಿದಳು: ಮುಖದ ಭಾವನೆಯೆಲ್ಲ ಗಡ್ಡದಲ್ಲಿ ಮರೆಯಾಗಿತ್ತು." ನಮ್ಮ ಮನೆಗೆ ಒಂದು ಬಾರಿಯಾದರೂ ಬಾ" ಆಕೆ ಕ್ಷೀಣದನಿಯಲ್ಲಿ ನುಡಿದಳು. ಆತ ತಿರುಗಿ ನಿಂತು ಗಹಗಹಿಸಿದ.

"ಹುಚ್ಚು ಹುಚ್ಚಾಗಿ ಹೀಗೆ ಹೇಳಬೇಡ, ಹೋಗು, ನನ್ನಂಥ ಲೋಫರ್‌ನನ್ನ ನಿನ್ನ ಗಂಡನಿಗೆ ಪರಿಚಯ ಮಾಡಸ್ತೀಯಾ?... ಇಷ್ಟು ದಿನ ಮರ್ತ ಹಾಗೆ ಇನ್ನು ನನ್ನ ಮರ್ತ್ಬಿಡು. ನನ್ನ ಪ್ರವೇಶದಿಂದ ಬೇರೆಯೋರ ಹುಬ್ಬು ಮೇಲೇರೋ ಹಾಗೆ ಮಾಡ್ಬೇಡ... ನನ್ನನ್ನು ಕಾಣಬಾರದಿತ್ತು. ಕಂಡ್ಬಿಟ್ಟೆ. ನಾನು ನನ್ನೆಲ್ಲ ಕಥೆಯನ್ನ ಹೇಳ್ಬಿಟ್ಟೆ. ಆದರೆ... ಮಾತನ್ನು ಅರ್ಧಕ್ಕೆ ನಿಲ್ಲಿಸಿ ಆತ ಒಂದು ಕ್ಷಣ ನಿಂತು. ಹಿಂದಕ್ಕೆ ಒಂದೆರಡು ಹೆಜ್ಜೆ ಬಂದ.

ಆಕೆಯ ಕೈಯನ್ನು ತನ್ನ ಕೈಗಳಲ್ಲಿ ತೆಗೆದು-ಕೊಂಡು ಎದೆಗೊತ್ತಿಕೊಂಡ, ನಂತರ ದಬ ದಬ ಹೆಜ್ಜೆ ಹಾಕುತ್ತ ಕತ್ತಲಲ್ಲಿ ಕರಗಿ ಹೋದ. ಅತ ಒಮ್ಮೆಯಾದರೂ ತಿರುಗಿ ನೋಡುವನೇನೋ ಎಂದಾಕೆ ಕಾದು ನಿರಾಶೆಗೊಂಡಳು. ಮೊದಲು ಬಂದಿದ್ದ ಆಟೋ ಮುಂದಕ್ಕೆ ಆಗಲೇ ಹೊರಟು ಹೋಗಿತ್ತು. ಮತ್ತೊಂದು ಬರುವವರೆಗೆ ಹೆಪ್ಪುಗಟ್ಟಿದ ಮೋಡಗಳು ಬಿರಿದು ಮಳೆ ಹನಿ-ಯೊಡೆಯುತ್ತಿದ್ದ ಆಕಾಶವನ್ನು ನೋಡುತ್ತ ನಿಂತಳಾಕೆ.

ಆ ರಾತ್ರಿ ಬಹಳ ಹೊತ್ತು ಆಕೆ ನಿದ್ರಿಸಲಿಲ್ಲ. ಆಕೆ ಮೆಲ್ಲನೆ ಎದ್ದು ಹೊರಬಂದಳು, ಬಾಗಿಲು ಕೊಂಚ ಶಬ್ದ ಮಾಡಿದರೂ ಆಕೆಯ ಗಂಡನಿಗೆ ಎಚ್ಚರವಾಗಲಿಲ್ಲ. ಆಕೆ ಬಾಲ್ಕನಿಯಲ್ಲಿ ನಿಂತಳು. ಗಾಳಿ ತಣ್ಣಗೆ ಕೊರೆಯುತ್ತಿತ್ತು. ಕೆಳಗಿನ ರಸ್ತೆ ನಿರ್ಜನವಾಗಿತ್ತು. ಆಕೆಯ ಮನೆಯಿದ್ದ ಬೀದಿಯ ದೀಪಗಳು ಗಾಳಿಯ ರಭಸಕ್ಕೆ ಎಲ್ಲೋ ತೊಂದರೆಯಾಗಿ ಆರಿ ಹೋಗಿದ್ದವು. ಆಕೆ ಎರಡೂ ಕೈಗಳಿಂದ ಗಟ್ಟಿಯಾಗಿ ಬಾಲ್ಕನಿಯ ತುದಿಯಲ್ಲಿನ ಸರಳನ್ನು ಹಿಡಿದುಕೊಂಡಳು. ನಾಲ್ಕಾರು ರಸ್ತೆಗಳಾಚೆ ಮಾತ್ರ ದೀಪಗಳು ಮಿನುಗುತ್ತ ತಮ್ಮ ಸುತ್ತಲಷ್ಟೇ ಕತ್ತಲೆಯನ್ನು ದೂರವಿರಿಸಿದ್ದವು. ಅವು ಕೂಡ ಮಿನುಗುತ್ತ, ಮಿನುಗುತ್ತ, ಕೊನೆಗೊಮ್ಮೆ ದೂರವಾದಂತೆ ಕಣ್ಮರೆಯಾಗಿದ್ದುವು. ಅದೇ ತಾನೇ ಒಂದು ಮಳೆ ಬಿದ್ದರೂ ಕರಾಳ ಮೋಡಗಳು ಆಕಾಶ-ದಲ್ಲಿ ಯಾವುದೋ ಉದ್ದೇಶವನ್ನಿಟ್ಟು ಕಾದು ಕುಳಿತ ಭೂತಗಳಂತೆ ಕಾದು ಕುಳಿದ್ದುವು. ಆ ಕತ್ತಲೆಯ ರಾಶಿಯಲ್ಲಿ ನಕ್ಷತ್ರಗಳಿರಲಿಲ್ಲ. ಬೆಳಕಿನ ಕಿರಣವಿರಲಿಲ್ಲ. ಎಲ್ಲ ಕಗ್ಗತ್ತಲು... ಆ ಕತ್ತಲೆಯ ಒಂದು ಭಾಗ ತನ್ನ ರೂಪವನ್ನೆಲ್ಲ ಆವರಿಸಿದ್ದಂತೆ, ಅದು ನಿಮಿಷ ನಿಮಿಷಕ್ಕೆ ದಟ್ಟವಾಗುತ್ತಿದ್ದಂತೆ ಆಕೆಗೆ ಅನ್ನಿಸತೊಡಗಿತು.

ಕೆಳಗೆ ಎಲ್ಲೋ ಅಪರೂಪಕ್ಕೆ ಒಂದೊಂದು ವಾಹನ ಬರುತ್ತಿತ್ತು. ಅವುಗಳ ಬೆಳಕು ಒಮ್ಮೆ ಬೀದಿಯನ್ನೆಲ್ಲ ಬೆಳಗಿ ಮುಂದೆ ಹೋದಾಗ ಬೀದಿಯ ಕತ್ತಲೆ ಮತ್ತೆ ದಟ್ಟ-ವಾಗುತ್ತಿತ್ತು. ಆಕೆಗೆ ಹೆಚ್ಚು ಹೊತ್ತು ಅಲ್ಲಿ ನಿಲ್ಲಲಾಗಲಿಲ್ಲ. ಒಳಗೆ ಬಂದು ದಿಂಬಿಗೆ ಒರ-ಗಿಟ್ಟುಕೊಂಡಿದ್ದ ಕಡ್ಡಿಪೊಟ್ಟಣ ಗೀರಿ ಮೋಂಬತ್ತಿಯೊಂದನ್ನು ಹೊತ್ತಿಸಿದಳು. [illegible]-ದಲ್ಲಿ ಆಕೆಯ ಗಂಡ ನಿದ್ರಿಸುತ್ತಿದ್ದ. ಆಕೆ ಒಮ್ಮೆ ನಿಟ್ಟುಸಿರಿಟ್ಟಳು. ನೋಡ ನೋಡು-ತ್ತಿದ್ದಂತೆ ಆತನ ಬಗ್ಗೆ ಅಸಹ್ಯ ಭಾವನೆ ಉಕ್ಕಿ ಬಂತು. ಅವನ ಶ್ರೀಮಂತಿಕೆ, ನಿಶ್ಚಿಂತತೆ-ಯನ್ನು ತೋರಿಸುತ್ತಿದ್ದ ಮುಖ, ಮಾಂಸ ತುಂಬಿದ ದೇಹ, ಯಾವುದೋ ಹೇರ್ ಆಯಿಲ್-ನಿಂದ ವಾಸನೆ ಸೂಸುತ್ತಿದ್ದ ಕೂದಲುಗಳು, ಎಲ್ಲ ಒಂದಿಷ್ಟು ಮಾಂಸ, ಮಾಂಸ, ಬರಿಯ ಮಾಂಸದ ಶೇಖರಣೆ ಎನ್ನಿಸತೊಡಗಿತು. ಇಷ್ಟು ದಿನ ತಾನು ಆತನ ಜೊತೆ ವಾಸಿಸುತ್ತಿದ್ದ ಬಗ್ಗೆ, ಅದೇ ಹಾಸಿಗೆಯಲ್ಲಿ ಅವನೊಂದಿಗೆ ಪಾಲು-ಗಾರ್ತಿಯಾದ ಬಗ್ಗೆ, ಪಶ್ಚಾತ್ತಾಪಪಡುತ್ತಿ-ದ್ದೇನೇನೋ ಎನ್ನಿಸತೊಡಗಿ ನಿಮಿಷ ನಿಮಿಷಕ್ಕೆ ಅದು ಆಳವಾಯಿತು. ಉಕ್ಕಿ ಬಂದ ಅಳುವನ್ನು ಆಕೆಗೆ ನಿಯಂತ್ರಿಸಲಾಗಲಿಲ್ಲ. ಜೋರಾಗಿ ಬಿಕ್ಕಳಿಸಿದಳು. ಕೊನೆಗೆ ನಿಶ್ಶಬ್ದವಾಗಿ, ಅಷ್ಟ-ಷ್ಟಾಗಿ ಕುಸಿಯುತ್ತ ಮೊಣಕಾಲುಗಳ ಮೇಲೆ ತಲೆ ಇಟ್ಟು ಅತ್ತಳು. ನಿದ್ದೆಗಣ್ಣಿನಲ್ಲಿಯೇ ಆಕೆಯ ಗಂಡ ಆಕೆಯತ್ತ ಕೈ ಚಾಚಿ ಅವಳ ಸೊಂಟ ಬಳಸಿದ. ಆ ಕೈಗಳನ್ನು ಕಿತ್ತೆಸೆಯುವ ಶಕ್ತಿ ಆಕೆಗಿರಲಿಲ್ಲ. ಆಕೆ ಅವನನ್ನು ಬಿಗಿಯಾಗಿ ಅಪ್ಪಿಕೊಂಡಳು. ಆದರೂ ಆಕೆಯ ಸ್ಮೃತಿಯಿಂದ, ಕತ್ತಲೆಯಲ್ಲಿ ಕಂಬಿಗಳ ಮಧ್ಯೆ ನಿಂತ ತಾನು, ಕತ್ತಲೆಯನ್ನು ಭೇದಿಸಿಕೊಂಡು ಅಷ್ಟಷ್ಟಾಗಿ ಹೆಚ್ಚಾಗುತ್ತ ಕೊನೆಗೊಮ್ಮೆ ಕಣ್ಮರೆಯಾಗುವ ಬೆಳಕು, ತಿರುಗುವ ರಾಟೆಯ ಬೆಳಕು, ಆಟೋದ ಬೆಳಕು, ಬೆಂಗಳೂರಿನುದ್ದಕ್ಕೂ ಹಬ್ಬಿದ ಬೆಳಕು, ಎಲ್ಲ ಕೊನೆಗೊಮ್ಮೆ ದೂರ ಕ್ಷಿತಿಜದಲ್ಲಿ ದಟ್ಟ ಕತ್ತಲೆಯಾಗಿ ಬರಿಯ ಶೂನ್ಯವಾಗಿ ಕೊನೆಗೊಳ್ಳುವ ಭೀಕರ ದೃಶ್ಯ, ಆಕಾಶವನ್ನೆಲ್ಲ ತುಂಬಿದ ಕುರೂಪಿ ಭಯಾನಕ ಭೀಕರ ಮೋಡ ಇವುಗಳೆಲ್ಲ ಮರೆಯಾಗಲೇ ಇಲ್ಲ.

ಆಗ ನನ್ನ ತಂಗಿ ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಎಂ. ಎಸ್ಸಿ.ಗೆ ಓದು-ತ್ತಿದ್ದಳು. ಕಾಲೇಜಿನವರು ವಿದ್ಯಾರ್ಥಿನಿ-ಯರ ಸಹಾಯಕ್ಕೆ ಒಬ್ಬ ಕಂಡೆಕ್ಟ್ರೆಸ್‌ನ್ನು ನೇಮಿಸಿದ್ದರು. ಎರಡು ವರ್ಷದ ಅವಧಿ-ಯಲ್ಲಿ ಆ ಕಂಡೆಕ್ಟ್ರೆಸ್ ನಮ್ಮ ಮನೆಗೆ ಮೂರು ನಾಲ್ಕು ಬಾರಿ ಬಂದಿದ್ದಳು. ಬಂದಾಗಲೆಲ್ಲಾ, 'ಒಂದು ಸೀರೆ ಕೊಡ್ರವ್ವ. ನಿಮ್ಮ ಹೆಸರು ಹೇಳಿ ಉಟ್ಕೊಳ್ತೀನಿ' ಎಂದು ಕೇಳಿ, 'ಇಲ್ಲ, ಇನ್ಯಾವಾಗಲಾದರೂ ನೋಡೋಣ' ಎನ್ನಿಸಿಕೊಂಡಿದ್ದಳು.

ಮೊದಲಿನಿಂದಲೂ ಕಷ್ಟಪಟ್ಟು ಓದುತ್ತಿದ್ದ ನನ್ನ ತಂಗಿ ಪ್ರಥಮ ದರ್ಜೆಯಲ್ಲಿ ಪಾಸಾ-ಗುವುದರಲ್ಲಿ ನಮಗಾರಿಗೂ ಅನುಮಾನ-ವಿರಲಿಲ್ಲ. ಜುಲೈ ತಿಂಗಳು. ಪರೀಕ್ಷೆ ಆರಂಭವಾಯಿತು. ಮೂರು ಪತ್ರಿಕೆಗಳು ಮುಗಿದವು. ಎಲ್ಲದರಲ್ಲೂ ನನ್ನ ತಂಗಿ ಚೆನ್ನಾಗಿ ಮಾಡಿದ್ದಳು. ನಾಲ್ಕನೆಯ ದಿನದ ಪರೀಕ್ಷೆ ೧೧-೩೦ ಕ್ಕೆ ಪ್ರಾರಂಭ. ನನ್ನ ತಂಗಿ ಮನೆಯನ್ನು ೯-೩೦ಕ್ಕೇ ಬಿಟ್ಟಳು. ಸರಿ ಯಾದ ಸಮಯಕ್ಕೆ ಬಸ್ಸು ಬರಲಿಲ್ಲ. ಅದ್ದರಿಂದ ರೇಲ್ವೆ ಸ್ಟೇಷನ್ನಿಗೆ ಹೋಗಿ ಅಲ್ಲಿಂದ ಜಟಕಾದಲ್ಲಿ ಕಾಲೇಜಿಗೆ ಹೋಗ-ಬೇಕೆಂದು ಅವಳ ಎಣಿಕೆ. ಸ್ಟೇಶನ್ನಿಗೆ ಹೋಗುವುದರೊಳಗೆ ಎಲ್ಲಿಲ್ಲದ ಮಳೆ ಬಂತು. ರಸ್ತೆ ಬರಿದಾಯಿತು. ಟಾಂಗಾ, ಬಸ್ಸು, ಆಟೋರಿಕ್ಷಾ ಯಾವುದೂ ಇಲ್ಲ. ತಂಗಿ ನಡೆದುಕೊಂಡೇ ಗಂಗೋತ್ರಿ ತಲುಪಿ-ದಳು. ಅವಳು ಹೋದೊಡನೆ ಗಂಟೆಯೂ ಹೊಡೆಯಿತು. ಏನೂ ಮಾಡಲೂ ತೋಚದೆ ಒದ್ದೆ ಬಟ್ಟೆಯಲ್ಲೇ ಪರೀಕ್ಷೆ ಕೊಠಡಿಗೆ ಹೋದಳು. ಎಲ್ಲರ ಕಣ್ಣೂ ಅವಳ ಕಡೆ ಕೇಂದ್ರೀಕರಿಸಿದವು. ಯಾರೂ ಯಾವ ರೀತಿಯ ಸಹಾಯವನ್ನೂ ಮಾಡಲು ಸಾಧ್ಯ-ವಿರಲಿಲ್ಲ. ಹತ್ತಿರದಲ್ಲಿ ಯಾವ ಮನೆಯೂ ಇಲ್ಲ. ನಡುಗುವ ಒದ್ದೆ ಕೈಯಿಂದಲೇ ಪ್ರಶ್ನೆ ಪತ್ರಿಕೆಯನ್ನು ತೆಗೆದುಕೊಂಡಳು. ಪ್ರಶ್ನೆ-ಗಳು ಬಹಳ ಸುಲಭವಾಗಿದ್ದವು. ಆದರೆ ಬರೆಯಲು ಸಾಧ್ಯವಾಗಲಿಲ್ಲ. ಉತ್ತರ ಪತ್ರಿಕೆಯು ಮೇಲೆ ಕೈಯಿಂದ ನೀರು ತೊಟ್ಟಿಕ್ಕುತ್ತಿತ್ತು. ಒದ್ದೆ ಬಟ್ಟೆಯುಟ್ಟು ಬರೆಯುವುದಾದರೂ ಹೇಗೆ? ದುಃಖದಿಂದ ಕಣ್ಣೀರು ಸುರಿಯಿತು. ಪುಸ್ತಕ ಮತ್ತಷ್ಟು ಒದ್ದೆಯಾಯಿತು. ಆ ವರ್ಷ ಹೋಯಿ-ತೆಂದು ಆಗಲೇ ತೀರ್ಮಾನಿಸಿದಳು.

ಕಂಡಕ್ಟ್ರೆಸ್ ಇಷ್ಟರಲ್ಲಿ ಎರಡು ಮೂರು ಫರ್ಲಾಂಗ್ ದೂರದಲ್ಲಿದ್ದ ತನ್ನ ಗುಡಿಸಿಲಿಗೆ ಹೋಗಿ ತನ್ನ ಸೀರೆ, ರವಿಕೆ ಟವಲ್ ಚಂಬಿ-ನಲ್ಲಿ ಬಿಸಿ ಕಾಫೀ ತಂದಿದ್ದಳು. ತಂಗಿಗೆ ಆದ ಸಂತೋಷಕ್ಕೆ ಮೇರೆ ಇರಲಿಲ್ಲ. ಲೇಡೀಸ್ ರೂಮಿಗೆ ಹೋಗಿ ಬಟ್ಟೆ ಬದಲಾಯಿಸಿ, ಟವಲನ್ನು ತಲೆಗೆ ಕಟ್ಟಿ-ಕೊಂಡು ಕಾಫೀ ಕುಡಿದು ಉತ್ತರ ಬರೆ-ದಳು. ಆ ವರ್ಷ ಅವಳು ಮೊದಲನೆಯ ವರ್ಗದಲ್ಲಿ ಪಾಸಾದಳು. ಕೂಡಲೇ ಅವಳಿಗೆ ರೀಸರ್ಚ್ ಫೆಲೋ ಕೆಲಸವೂ ಆಯಿತು.

ಕಂಡೆಕ್ಟ್ರೆಸ್‌ಗೆ ಅವಳು ಇಷ್ಟಪಟ್ಟ ಸೀರೆ-ಯನ್ನು ತೆಗೆದುಕೊಡಲು ಸಿದ್ಧವಾಗಿದ್ದಾಳೆ ನನ್ನ ತಂಗಿ. ಆದರೆ ಆ ಕಂಡೆಕ್ಟ್ರೆಸ್ ಮಾತ್ರ ಈಗ ಇಲ್ಲ.

-ರತ್ನ ಸಿ. ರಾವ್

ನಮ್ಮ ಪಕ್ಕದ ಮನೆಯಲ್ಲಿ ವೃದ್ಧ ದಂಪತಿಗಳಿದ್ದರು. ಅವರ ಮನೆಯಲ್ಲಿ ಮಕ್ಕಳಿಲ್ಲವಾದ ಕಾರಣ ನನ್ನ ಅಣ್ಣನ ಮಗಳು ಉಷಾಳನ್ನು ತುಂಬ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ತುಂಬಾ ಚೂಟಿ ಹಾಗೂ ಮುಗ್ಧಳಾದ ಉಷಾ ದಿನದ ಹೆಚ್ಚಿನ ಭಾಗವನ್ನೆಲ್ಲಾ ಅವರ ಮನೆಯಲ್ಲಿ ಆಟ ಪಾಟಗಳಲ್ಲೇ ಕಳೆಯುತ್ತಿದ್ದಳು.

ಒಂದು ದಿನ ಅಜ್ಜ ಅಕಸ್ಮಾತ್ತಾಗಿ ತೀರಿ-ಕೊಂಡರು. ನಾವು, ಉಷಾಳನ್ನು ಅವರ ದಿನಕರ್ಮಗಳು ಮುಗಿಯುವ ತನಕ ಮನೆಗೆ

ಬಿಟ್ಟಿರಲಿಲ್ಲ. ಆಕೆ ಒಂದು ದಿವಸ ನಮ್ಮೆಲ್ಲರ ಕಣ್ಣು ತಪ್ಪಿಸಿ ಅವರ ಮನೆಗೆ ಹೋಗಿಬಿಟ್ಟಳು. ಅಜ್ಜಿಯನ್ನು ಹುಡುಕಿಕೊಂಡು ಹೋಗಿ, ಅವರು ಮೂಲೆಯಲ್ಲಿ ಕೆಂಪು ಸೀರೆ ಉಟ್ಟು ಮಾತಾಡದೆ ಕುಳಿತಿರುವುದನ್ನು ನೋಡಿ, "ಅಜ್ಜಿ, ಅಜ್ಜಿ, ನೀನೇಕೆ ಮೂಲೆಯಲ್ಲಿ ಕುಳಿತಿರುವೆ? ಅಜ್ಜ ಎಲ್ಲಿ? ಹಣೆಗೆ ಕುಂಕುಮವೇಕೆ ಇಟ್ಟುಕೊಂಡಿಲ್ಲ? ಈ ಕೆಂಪು ಸೀರೆ ಏಕೆ? ನಿನ್ನ ಮೂಗುತಿ, ಬಳೆ ಎಲ್ಲಾ ಎಲ್ಲಿ?'' ಎಂದೆಲ್ಲ ಪ್ರಶ್ನೆಗಳ ಮಳೆಗರೆದಳು. ಆಗ ಅಜ್ಜಿ ಅವಳನ್ನು ಬಾಚಿ ತಬ್ಬಿಕೊಂಡು ಅಳುತ್ತಾ, "ಅಜ್ಜನನ್ನು ದೇವರು ಕೊಂಡೊಯ್ದುಬಿಟ್ಟನಮ್ಮಾ, ನನ್ನ ಕುಂಕುಮ, ಬಳೆ ಎಲ್ಲಾ ಅಜ್ಜ ಜೊತೆಗೊಯ್ದುರಮ್ಮಾ," ಎಂದು ಹೇಳಿದಳು.

ಇದಾಗಿ ಒಂದು ತಿಂಗಳ ನಂತರ ನಮ್ಮ ದೂರದ ಬಳಗದವರೊಬ್ಬರು, ತಮ್ಮ ಮಗಳನ್ನು ಕರೆದುಕೊಂಡು ನಮ್ಮ ಮನೆಗೆ ಬಂದರು. ಈಗಿನ ಫ್ಯಾಷನ್ನಿನವಳಾದ ಅವರ ಮಗಳು ಕೈಗೆ ಬಳೆ, ಹಣೆಗೆ ಕುಂಕುಮ ಇಟ್ಟುಕೊಂಡಿರಲಿಲ್ಲ. ಕೆಂಪು ನೈಲಾನ್ ಸೀರೆ ಜೇಡಿ ಉಟ್ಟಿದ್ದಳು. ಅವಳನ್ನೇ ಮಿಕಿಮಿಕಿ ನೋಡುತ್ತಿದ್ದ ನಮ್ಮ ಉಷಾ ತಾಯಿಯ ಹತ್ತಿರ ಹೋಗಿ, "ಅಮ್ಮಾ ಏನಮ್ಮಾ? ಈ ಅಕ್ಕನಿಗೆ ಕುಂಕುಮ, ಬಳೆ, ಏನೂ ಇಲ್ಲಾ. ಕೆಂಪು ಸೀರೆ ಉಟ್ಟಿದ್ದಾಳೆ. ಇವಳ ಗಂಡನನ್ನೂ ದೇವರು ಕೊಂಡೊಯ್ದನೇನಮ್ಮಾ?" ಎಂದು ಥಟ್ಟನೆ ಕೇಳಿದಳು. ಇದನ್ನು ಕೇಳಿದ ಅವರ ಮಗಳು ಸಿಟ್ಟಿನಿಂದ ದುಮುದುಮಿಸಿಕೊಂಡು ಹೊರಗೆ ಹೋಗಿಬಿಟ್ಟಳು. ನಮ್ಮ ಅತ್ತಿಗೆಗೆ ಪರಿಸ್ಥಿತಿಯು ಅರಿವಾಗಿ ಅವಳ ಹಿಂದೆ ಹೋಗಿ ಪಕ್ಕದ ಮನೆಯಲ್ಲಿ ನಡೆದ ಪ್ರಸಂಗವನ್ನು ವಿವರಿಸಿ ಸಮಾಧಾನಪಡಿಸಿ ಕರೆದುಕೊಂಡು ಬಂದಳು. ಅಂದಿನಿಂದ ಆ ಹುಡುಗಿ ನಮ್ಮ ಮನೆಗೆ ಬರುವಾಗೆಲ್ಲಾ ಕುಂಕುಮ ಬಳೆಗಳಿಂದ ಅಲಂಕೃತಳಾಗಿಯೇ ಬರುತ್ತಾಳೆ.

– ಶ್ರೀಮತಿ ಕಮಲಾ ಯಾಜಿ

ಮಂಗಳೂರಿನ ಪುರಭವನದಲ್ಲಿ, ಮಂಗಳ ಗಂಗೋತ್ರಿಯ ನಿರ್ದೇಶಕರೂ, ಕನ್ನಡದ ಕವಿಗಳೂ, ವಾಗ್ಮಿಗಳೂ ಆದ ಪ್ರೊಫೆಸರ್ ಎಸ್. ವಿ. ಪರಮೇಶ್ವರಭಟ್ಟರಿಗೆ ಅವರ ಶಿಷ್ಯಕೋಟಿ ಅವರ ೫೮ ನೆಯ ಹುಟ್ಟು ಹಬ್ಬದಂದು ಅರ್ಪಿಸಿದ ಸಂಭಾವನಾ ಗ್ರಂಥ 'ಪೂರ್ಣಕುಂಭ'ದ ಬಿಡುಗಡೆ. ಊರು ಪರವೂರುಗಳಿಂದ ಜನಬಂದು ಕಿಕ್ಕಿರಿದ ಸಭೆ.

ಸಾಲಗದ ಮಂಗಲರವದ ಮಧ್ಯೆ, ಪೂರ್ಣಕುಂಭದ ಸ್ವಾಗತ. ವ್ಯೆ ಬಾಗಿ ನೆಲ ಮುಟ್ಟಿ ವಿದ್ಯಾರ್ಥಿಗಳಿಂದ ಗುರುವಿಗೆ ಅಭಿವಂದನ. ಆರತಿ ಎತ್ತಿ ಅಕ್ಷತೆ ಹಚ್ಚಿ ವಿದ್ಯಾರ್ಥಿನಿಯರು ಗುರುವನ್ನು ಬರಮಾಡಿಕೊಂಡರು. ನೋಣಕಾಲೂರಿ ಜಪ್ಪಬಿದ್ದು ಆಶೀರ್ವಾದ ಬೇಡಿದರು.

ಕುಲಪತಿ ದೇ. ಜ. ಗೌ. 'ಪೂರ್ಣಕುಂಭ'ದ ಬಿಡುಗಡೆ ಮಾಡಿದವರು. ಗುರುವಿನ ಗುರು ಪ್ರೊ. ಕೆ. ವೆಂಕಟರಾಮಪ್ಪನವರು ಶಿಷ್ಯನಿಗೆ ಆಶೀರ್ವಚನ ನೀಡಿದವರು. ಗುರುವಿನ ಅಗ್ರಮಣಿಯು ಶಿಷ್ಯ ಡಾ. ಹಾ. ಮಾ. ನಾಯಕರು ಅಭಿವರ್ಚನ ಬೇಡಿದವರು.

ಗುರು ಎಸ್. ವಿ. ಪಿ. ಉತ್ತರಿಸಲು ಎದ್ದು ನಿಂತರು, ಧ್ವನಿವರ್ಧಕ ಅವರ ಬಾಯಿಯ ಅಳತೆಯನ್ನು ಮೀರಿ ಎತ್ತರದಲ್ಲಿತ್ತು. ಭಟ್ಟರು ಮಾತು ಮೊದಲು ಮಾಡುತ್ತ ಪಕ್ಕದಲ್ಲಿದ್ದ ಮೈಕ್ ಹುಡುಗನನ್ನು ಕರೆದು ನುಡಿದರ: "ನೋಡಪ್ಪಾ, ನಾನೋ ಗಿಡ್ಡ ಮನುಷ್ಯ. ತುಂಬ ಚಿಕ್ಕವನು. ಶಿಷ್ಯರೂ ಅಭಿಮಾನಿಗಳೂ ಸ್ನೇಹಿತರೂ ನನ್ನನ್ನು ತುಂಬಾ ಎತ್ತರ ಮಾಡಿ ಬಿಟ್ಟಿದ್ದಾರೆ. ಆ ಎತ್ತರಕ್ಕೆ ನಾನು ಏರಲಾರೆ. ಮೈಕ್ ಇಳಿಸಿಬಿಡಪ್ಪಾ."

– ನವವು ರಾಮುಭಟ್ಟ

ಅವರಲ್ಲಿ ತಮ್ಮ ಅನುಭವದ ಗಂಟನ್ನು ಬಿಚ್ಚಿದ್ದಾರೆ

ನನಗೆ ನೆನಪಾದಂತೆ...

ಗೌರೀಶ ಕೈಕಿಣಿ

ಪಂ. ಶಂಕರ ದೀಕ್ಷಿತ (ಜಂತಲಿ) ಅವರನ್ನು ನೆನೆದಾಗೆಲ್ಲ ನನ್ನ ಕಿವಿಯಲ್ಲಿ ಇಂದಿಗೂ ಮಂಜುಳ ನಾದ ಮೊಳಗುವುದು. ಅವರು ಇಪ್ಪತ್ತು ವರ್ಷಗಳ ಹಿಂದೆ ನಮ್ಮ ಊರ ವೆಂಕಟರಮಣ ದೇವಸ್ಥಾನದಲ್ಲಿ ಹಾಡಿದ ಆ ಬಾಗೇಶ್ರೀ. ಓ! ಎಂಥ ದಿವ್ಯ ಬಾಗೇಶ್ರೀ! ಬಾಗೇಶ್ರೀ ಮಲ್ಲಿಗೆಯು ಬಾಳಿನ ಮರ್ಮವನ್ನೆಲ್ಲ ಕಣ್ಣು ಮುಂದೆ ತೋರಿಕೊಳ್ಳಲು ಬರುವದೆಂಬುದರ ಸಾಕ್ಷಾತ್ಕಾರ ಅಂದು ಪೂಜ್ಯ ದೀಕ್ಷಿತರ ಆಲಾಪನೆಯಿಂದ ವ್ಯಕ್ತವಾಯಿತು. "ಬಿನತಿ ಸುನೋಜಿ ಡೋರಿ ಅವಧ ಪುರಕೆ ಬಸಯ್ಯಾ!" ಕಂಬನಿಯ ಕೋಡಿಯೇ ಇಂಚರದ ಹೊನಲಾಗಿ- ಅಲ್ಲಿ ಹರಿದ ಮಿಂಚಾಗಿ ಅವರ ಕಂಠದಿಂದ ಆ ನೀರವ ರಾತ್ರಿಯಲ್ಲಿ ಹರಿಯಿತು. 'ಬಸಯ್ಯಾ' ಕೇಳಲಿ, ಬಿಡಲಿ ಆ ಗುಡಿಯಲ್ಲಿ ನಾವೆಲ್ಲ ಗೋಡೆಯಲ್ಲಿ ಕೊರೆದ ಚಿತ್ರಗಳಾಗಿ ಬಿಟ್ಟಿದ್ದೆವು. ಮೈಯೆಲ್ಲ ಕಣ್ಣಾಗಿ ಕಣ್ಣೆಲ್ಲ ಕಿವಿಯಾಗಿ ಕೇಳುತ್ತಿದ್ದೆವು. ಗರ್ಭಗುಡಿಯಲ್ಲಿ ಆ ಸುಂದರ ವೆಂಕಟರಮಣನ ಮೂರ್ತಿಯೂ ಅದನ್ನು ಕೇಳಿ ಮೈ ನಿಮಿರಿ ಧನ್ಯವಾಗಿರಬೇಕು.

ಅನಂತರ ದೀಕ್ಷಿತರನ್ನು ನಾನು ಎರಡು ವರ್ಷ ಬಂಕಿಕೊಡ್ಲದಲ್ಲಿಯ ಶ್ರೀ ಲಕ್ಷ್ಮೀನಾರಾಯಣ ಮಂದಿರದ ವರ್ಧಂತಿ ಉತ್ಸವದಲ್ಲಿ ವಿಶೇಷ ಕೀರ್ತನೆಗಾಗಿ ಕರೆಯಿಸಿದೆನು. ಅವರ ಸಂಗೀತಕ್ಕೆ ಅವರ ಸಂಸ್ಕೃತ ಪಾಂಡಿತ್ಯ, [illegible]ಕೂ ಅವರ ವಾಗ್ಮಿತೆ ಶ್ರುತಿ-ಲಯ ಕಂಠ ಕೂಡಿದಷ್ಟು ಎರಕವಾಗಿದ್ದವು. (ಅವರೊಂದಿಗೆ ಅವರ ಸುಪುತ್ರರೂ ಬಂದಿದ್ದರು. ತುಂಬಾ ಸೊಗಸಾಗಿ ಹಾಡುತ್ತಿದ್ದರು. ಇಂದು ತಂದೆಯವರ ಸಂಗೀತಶಾಲೆಯನ್ನು ಹುಬ್ಬಳ್ಳಿಯಲ್ಲಿ ನಡೆಯಿಸುತ್ತಿದ್ದಾರೆ),

ಅವರೆ ಈ ಹಿರಿಯ ಸಂಗೀತಗಾರರ ಬದುಕಿನಲ್ಲಿ ಹುಲಿಮನೆ ಸೀತಾರಾಮಶಾಸ್ತ್ರಿಗಳ ಜಯಕರ್ನಾಟಕ ನಾಟಕ ಮಂಡಳಿಯಲ್ಲಿಯೂ ಮೋರೆಗೆ ಬಣ್ಣ ಬಳಿದು ವೇಷ ಕಟ್ಟುತ್ತಿರುವ ಪ್ರಸಂಗವೂ ಇತ್ತು. 'ಸಾವಿತ್ರಿ' ನಾಟಕದಲ್ಲಿ ಯಮನ ಪಾತ್ರ ವಹಿಸುತ್ತಿದ್ದರಂತೆ. ಅವರ ಭವ್ಯ ಭದ್ರ ಶರೀರಕ್ಕೆ ಆ ಪಾತ್ರ ಒಪ್ಪುತ್ತಿತ್ತು. ಆದರೆ "ಸಂಹಾರವೇ ಎನ್ನ ಲೀಲೆ" ಎಂದು ಅವರು ಅನೋಘವಾಗಿ ಹಾಡುವಾಗ ಆ ಯಮ ಧರ್ಮ ಮೃತ್ಯುದೇವತೆಯಾಗಿ ಉಳಿಯುತ್ತಿದ್ದಿಲ್ಲ. ಅವರ ಶ್ರೀಮುಖದಿಂದ ಅಮೃತವೇ ಗಾನಪ್ರವಾಹವಾಗಿ ಹರಿಯುತ್ತಿತ್ತು. ಸತ್ಯ ಸತ್ಯವಾನನಲ್ಲ ಆ ಗಾನಾಮೃತವೇ ಮರಳಿ ಸಂಜೀವನ ತಂದಿರಬೇಕು.

ಅದೇನೇ ಇರಲಿ, ನಾನು ಅಂದು ಕೇಳಿದ ಆ 'ಬಾಗೇಶ್ರೀ'ಯಿಂದ ಪಡೆದ ಬೋಧವಿದು. ಅಪ್ರತಿಮ ಗಾಯಕನ ಕಂಠದಲ್ಲಿ ಯಾವುದೇ ರಾಗವೂ ಕರುಣಾರಸವನ್ನು ಬಾಳಿನ [illegible] ಹತಿಯನ್ನು ಒಡಮೂಡಿಸಬಲ್ಲದು. "ಬಿನತಿ ಸುನೋ... ದುಃಖೀ ಹರಯ್ಯಾ!"

"ದಾಟಿಸೋ ಮಾಯಾ-ಸಾಗರವಾ!"

ಸಂಗೀತ ಕಚೇರಿಯೊಂದಾಗ ಇದೂ ಒಂದು ಮಾದರಿ. ಕೆಲವು ವರ್ಷಗಳ ಹಿಂದೆ ನಮ್ಮ ಪುಣ್ಯ ಕ್ಷೇತ್ರಕ್ಕೆ ಪೂಜೆಗೆಂದು ಶ್ರೀಮತಿ ಗಂಗೂಬಾಯಿ ಹಾನಗಲ್ಲ ತಮ್ಮ ಮಗಳೊಂದಿಗೆ ಬಂದಿದ್ದರು. ವಾಡಿಕೆಯಂತೆ ಜನರ ಆಗ್ರಹಕ್ಕೆ ಆ ಉಭಯ ಗಾಂಧರ್ವ ಮಾತಾ-ಪುತ್ರಿಯರ ಒಂದು ಸಣ್ಣ ಸಂಗೀತಕಚೇರಿ ಏರ್ಪಡಿಸಲಾಯಿತು. ಅವರು ಕ್ಷೇತ್ರದ ಪ್ರಮುಖರಲ್ಲಿ ಒಬ್ಬರಾದ ವೇದಮೂರ್ತಿ ಪ್ರಸಾದ ಭಟ್ಟರ ಮಹಡಿಯಲ್ಲಿ ತಂಗಿದ್ದರು. ಅಲ್ಲಿ ನಮ್ಮಂಥ ಹಲವಾರು ಸಂಗೀತರಸಿಕರೂ ಕಿಕ್ಕಿರಿದಿದ್ದರು.

ಕೃಷ್ಣಾ ಹಾನಗಲ್ಲರು ದಾಸರ ಪದ್ಯಗಳನ್ನು ಅಪ್ರತಿಮ ಮಾಧುರ್ಯದಿಂದ ಹಾಡಿದರು. ವಿಶೇಷತಃ 'ಯಾದವ ನೀ ಬಾ' ಹಾಗೂ 'ದಯಮಾಡೋ ರಂಗ' ಎರಡೂ ಮುಗಿಯುತ್ತಿರುವಾಗಲೇ ಮುಂದೆ ಕೂತು ತಲೆದೂಗುತ್ತಿದ್ದ ಒಬ್ಬ ವ್ಯಾಪಾರಸಿಕ ಸದ್ಗೃಹಸ್ಥರು ಸದ್ದುಮಾಡಿದರು "ಅಮ್ಮಾ, ದಾಸರ ಪದ್ಯವೇ ಆಯ್ತು, ಒಂದು ಭೀಮಪಲಾಸ ಹಾಡಿರಿ!" ಅದನ್ನು ಕೇಳಿ ಹಾಡುಗಾರರೂ ನಾವು ಕೇಳುಗರೂ ಕೂಡಿಯೇ ಪೆಚ್ಚಾದೆವು. ಏಕೆಂದರೆ ಕೃಷ್ಣಾ ಬಾಯಿಯವರು ಹಾಡಿದ್ದು ಭೀಮಪಲಾಸ ರಾಗದಲ್ಲಿಯೇ ಇತ್ತು.

ಆ ಮೇಲೆ ಶ್ರೀಮತಿ ಗಂಗೂಬಾಯಿಯವರೇ ಹಾಡಬೇಕೆಂಬ ಆಗ್ರಹವಾಯಿತು, ಪ್ರತಿಷ್ಠಿತರಿಂದ. ಅವರು ಶ್ರುತಿಗೂಡಿಸಿ ತಮ್ಮ ಘನಗಂಭೀರ ಕಂಠಶ್ರೀಯಲ್ಲಿ ಎತ್ತಿದರು. ಒಂದು ಹಿಂದಿ ಚೀಜಿನ ಸುರುವಾತು. ಅಷ್ಟರಲ್ಲಿ ಒಬ್ಬ ಪ್ರತಿಷ್ಠಿತ ರಸಿಕರು ಆಗ್ರಹಿಸಿದರು. "ನಮಗೆ ಕನ್ನಡ ಗಾಯನ ಬೇಕು ನೋಡಿ, ಹಿಂದಿ ಆಗದು!" ಆದರೂ ಶ್ರೀಮತಿಯವರು ಅದನ್ನು ಗಮನಿಸದೆ ರಾಗಾಲಾಪನೆ ಮುಂದುವರೆಸಿದರು – ತಬಲಾದವಗೆ ಬಾರಿಸಲು ಸನ್ನೆ ಮಾಡಿ. (ಆತನಿಗೆ ಎಲ್ಲಿ ತಾನು ಎತ್ತುಗಡೆ ಮಾಡಬೇಕೆಂಬುದೇ ಮರೆತು ಹೋಗಿತ್ತು ಗಾಬರಿಯಲ್ಲಿ!) ಆದರೆ ಆಲಾಪನೆಯು ಒಂದು ಆವರ್ತನೆಗೆ ಗಂಗೂಬಾಯಿಯವರು ಗಾಯನ ನಿಲ್ಲಿಸಿಬಿಟ್ಟರು. "ಅರೇ ಇವರು 'ತಾಲ' 'ಸಮ' ಏನೂ ಕಾಣಿಸುವುದೇ ಇಲ್ಲ!"– ಎಂಥ ಗಾಯನವನ್ನು ಆರಂಭಿಸುವ ಸ್ವಾತಂತ್ರ್ಯ ಗಾಯಕರದಿದ್ದರೂ ಅದನ್ನು ಯಾವ ಹಂತದಲ್ಲಿಯೂ ಮುಗಿಸುವ ತಂತ್ರ ತಬಲಾದವನ ಕೈಯಲ್ಲಿದೆ ಎಂಬುದನ್ನು ನಮ್ಮೂರ ತಬಲಜಿ ಧಡಲ್ಬಾಜಿಯಿಂದ ತೋರಿಸಿಕೊಟ್ಟ.

ಒಟ್ಟಾರೆ ನಮಗೆಲ್ಲರಿಗೂ ಕಾಲ ಸಮವಿದ್ದಿಲ್ಲ. ಕೊನೆಗೆ ಕೃಷ್ಣಾ ಹಾನಗಲ್ಲರೇ "ದಾಟಿಸೊ ಮಾಯಾ ಸಾಗರವಾ"- ಎಂಬ ದಾಸರ ಪದವನ್ನು ಅತ್ಯಂತ ಸುಂದರವಾಗಿ ಭೈರವಿಯಲ್ಲಿ ಹಾಡಿ ನಮ್ಮನ್ನು ಮಾಯಾಸಾಗರದಿಂದ ಸಹಜವಾಗಿಯೂ ದಾಟಿಸಿದರು.

ಅನುಪಮ ನಿರಂಜನ

ಇದೀಗ ಒಂದೂವರೆ ವರ್ಷದ ಹಿಂದೆ ಪ್ರಿಯ ಮಿತ್ರ 'ನಿರಂಜನ'ರನ್ನು ಮತ್ತೊಮ್ಮೆ ಕಂಡೆ. ಅಲ್ಲ, ಅವರೇ ಸಕುಟುಂಬ ಕಾರ್ಯವೊಂದಕ್ಕೆ ಹೋಗುವಾಗ ಹಾದಿಯಲ್ಲಿ ನಮ್ಮ ಊರಿಗೂ ಬಂದು ನನ್ನನ್ನು ಭೆಟ್ಟಿಯಾದರು. ಅದೆಂಥ ಭೆಟ್ಟಿ? ನನ್ನ ಪಾಲಿಗೆ ಅದೊಂದು "ಚಿರ-ಸ್ಮರಣೆ."

ಹಾಗೆ ನಿರಂಜನರೂ ನಾನೂ ಆಗೊಮ್ಮೆ ಈಗೊಮ್ಮೆ ಕಳೆದ ಎರಡು-ಮೂರು ದಶಕಗಳಲ್ಲಿ ಒಬ್ಬರನ್ನೊಬ್ಬರು ಭೆಟ್ಟಿಯಾಗುತ್ತ ಬಂದಿದ್ದೇವೆ. ಮೂರು-ನಾಲ್ಕು ವರ್ಷಗಳ ಮಧ್ಯಂತರಗಳ ನಂತರ. ಆದಾಗ್ಯೂ ಮತ್ತೆ ಭೆಟ್ಟಿಯಾದಾಗ ಹಿಂದೆ ಕಂಡಾಗಿನಂತೆಯೇ ನಮ್ಮ ಆತ್ಮೀಯತೆ ಆರಂಭ— ನಿನ್ನೆಯ ಸಂಭಾಷಣೆ ಇಂದು ಎತ್ತಿಕೊಂಡಂತೆ. ನಮ್ಮ ಆತ್ಮೀಯತೆಯ ಹೃದ್ಯತೆಯ ಹೃದ್ಬಂಧವು–ಕಾಲದ ಕೈ ನಡುವೆ ಅದಷ್ಟೇ ಅಡಿದರೂ ಮಾಸಿಲ್ಲ, ಮುಸುಕಾಗಿಲ್ಲ.

ಆದರೆ ಅವರು ಪಕ್ಷಾಘಾತಕ್ಕೆ ಕಾಲು ಕಳೆದು ಕೊಂಡ ಮೇಲೆ ಆದುದು ಈ ನಮ್ಮ ಭೆಟ್ಟಿ ಎರ-

ಡನೆಯದು. ಇದರ ಹಿಂದೆ ನಾನು ಅವರನ್ನು ಬೆಂಗಳೂರಿನಲ್ಲಿ ಜಯನಗರದ ಅವರ ಸ್ವಂತ-ಮುದ್ದಾದ ಮನೆಯಲ್ಲಿಯೇ ಕಂಡಿದ್ದೆ. ಅಂದಾಗಲಿ, ಇಂದಾಗಲಿ ಅವರಲ್ಲಿ ಒಡೆದದ್ದು ನನ್ನ ಕಣ್ಮನಗಳನ್ನು ತುಂಬುತ್ತ ಬಂದದ್ದು, ಹಿಡಿದದ್ದು ಅವರ ಅದಮ್ಯ ಸಂಕಲ್ಪ ಶಕ್ತಿ, ಸತ್ವದ ಅಜೇಯ ಚೈತನ್ಯ. ಟೊಂಕದಿಂದ ಮೇಲಕ್ಕೆ ಅವರು ವಾತಾಹತ ರೋಗಿಗಳೆಂದು ಅನಿಸುವುದೇ ಇಲ್ಲ. ಹಿಂದೆ ಅವರಿಗೆ ಆಘಾತವಾದಾಗಲೂ ಅನಿಸಿದ್ದಿಲ್ಲ. ಅಂದು ಜ್ಞಾನಕೋಶದ ಸಂಪಾದಕ ವರ್ಗದ ಸಭೆಯಲ್ಲಿ ಕುಳಿತು ಚರ್ಚಿಸುತ್ತಿರುವಾಗಲೇ ಅವರಿಗೆ ಅನಿರೀಕ್ಷಿತ- ತಮ್ಮ ಕಾಲುಗಳು ಹೋಗಿವೆ. ಸಭೆ ಮುಗಿದಾಗ ಏಳಲೇ ಆಗಲಿಲ್ಲ. ಆದರೂ ಅವರು ಆಗಲೂ ನಿರ್ವಿಕಾರವಾಗಿಯೇ ಅಕ್ಷರಶಃ "ನಿರಂಜನ"ರಾಗಿಯೇ ಇದ್ದರು.

ಮುಂದೆ ಸುದೀರ್ಘ ಚಿಕಿತ್ಸೆ, ತೈಲ ಸಂವಾಹನೆ, ಆಯಾಸದ ಚಲನ-ವಲನ [illegible] ಕೊಟ್ಟ ನಡೆದಾಟ ಇತ್ಯಾದಿಗಳಿಂದ ಅವರು ಕೋಲೂರಿ ತಮ್ಮ ಮನೆಯ ಮಹಡಿಯ [illegible] ಪಾವಟಿಗೆ ಏರಿ ಇಳಿಯುಹತ್ತಿದರು.

ಈ ಸಲ ಬಂದಾಗ ನಾನು ಅವರೊಂದಿಗೆ ಅವರ ಕಾರಿನಲ್ಲಿಯೇ [illegible] ಕುಳಿತೆ. ಡಾ. ಅನುಪಮಾ ನಿರಂಜನ ಮತ್ತು ಇಬ್ಬರೂ ಹುಡುಗಿಯರು ನಮ್ಮ ಮನೆಗೆ ಹೋದರು. ಕಾರಿನಿಂದ ಇಳಿದು [illegible] ನಮ್ಮ ಮನೆಯ ತನಕ ನಡೆದು ಹೋಗುವುದು ಅವರಿಗೆ ಚಿತ್ರಹಿಂಸೆ ಆಗುತ್ತಿತ್ತು. ನಾವು ಕುಳಿತಲ್ಲಿಯೇ ಅವರಿಗೆ ಉಪಹಾರ ಬಂದಿತು. (ಬಂಕಿಕೊಡ್ಲದಲ್ಲಿ ಯಕ್ಕುಂಡಿಯವರಲ್ಲಿಯೂ ಹಾಗೆಯೇ. ನಿರಂಜನರು ರಸ್ತೆಯ [illegible]ಲ್ಲಿಯೇ [illegible]ಯಲ್ಲಿ ಇಳಿದು, ಕುರ್ಚಿಯಲ್ಲಿ ಕುಳಿತಲ್ಲಿಯೇ ಅವರಿಗೆ ನನ್ನ ಕವಿಮಿತ್ರರು ಮಾಲೆ ಹಾಕಿ ತಿಂಡಿ-ತೀರ್ಥ ನೀಡಿ ಉಪಚರಿಸಿದ್ದರು.)

ನಿರಂಜನರು [illegible] "ಮೃತ್ಯುಂಜಯ" ಮನೋವೃತ್ತಿಯವರು "ನನ್ನ ಕೆಲಸಕ್ಕೆ ಏನೂ ತೊಂದರೆಯಾಗಿಲ್ಲ. [illegible] ಅರ್ಧಾಂಗ ವಾಯುವಿನಿಂದ [illegible] ಏನ್ನು ಬೇಕೋ ಅಷ್ಟು [illegible]

ನನಗೆ ಪ್ರಕೃತಿಯು ನೀಡಿದೆ!" ನಿರಂಜನರು ನಿರ್ಮಲ ಚಿತ್ತದಿಂದ ನಕ್ಕು ನುಡಿದರು.

ಆ ನಗು, ಆ ನುಡಿ ನಾನು ಅದೆಷ್ಟು ಸಲ, ಅದೆಷ್ಟು ಕಾಲ ಕಂಡಿಲ್ಲ, ಕೇಳಿಲ್ಲ! ೧೯೪೫ರ ಸುಮಾರಿಗೆ ಅವರು ಪ್ರಥಮ ಸಲ ನಮ್ಮಲ್ಲಿ ಬಂದಿದ್ದರು. ಆಗ ಅವರು ಕಾಮ್ರೇಡ್ ಕುಳಕುಂದ ಶಿವರಾಯರು. ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕದ ಕಾರ್ಯಕರ್ತರು. ಹುಬ್ಬಳ್ಳಿ ಅವರ ಆಗಿನ ಕೇಂದ್ರ. ಆಗಲೂ ಅವರ ನಗೆ, ನುಡಿ, ನಡೆ ಈಗಿನಂತೆಯೇ ಮೃದು- ಅಷ್ಟೇ ತೀಕ್ಷ್ಣ ಮತ್ತು ದೃಢ. ಅಂದಿನಿಂದ ಇಂದಿನ ವರೆಗೂ ನಾನು ಇವರನ್ನು ಸಮಕಾಲೀನ ಸಾರ್ವಜನಿಕ ಹಾಗೂ ಸಾಹಿತ್ಯಿಕ ಪ್ರಜ್ಞೆಯ ಕಾದಂಬರಿಕಾರರನ್ನು ಕಂಡಿದ್ದು ಬೆರಳೆಣಿಕೆಯಷ್ಟು.

"ನಿಮ್ಮ ಚಿಕಿತ್ಸೆಗೆ ನೀವು ಮಾಸ್ಕೋಕ್ಕೇ ಹೋಗುವಿರೆಂದು ಕೇಳಿದ್ದೆ--" ನಾನೆಂದೆ. "ಓ, ಅದೊಂದು ದೊಡ್ಡ ಕತೆ. ಅವರು ನಮ್ಮನ್ನು ಅಲ್ಲಿಗೆ ಕರೆದಿದ್ದರು-" "ಹಾಗಾದರೆ ಏಕೆ ಹೋಗಲಿಲ್ಲ?" ನನ್ನ ಪ್ರಶ್ನೆ. "ಕೇವಲ ನನ್ನನ್ನು ಮಾತ್ರ ಕರೆದಿದ್ದರು. ನನ್ನ ಜತೆ ನನ್ನ ಅನುಪಮಾಳನ್ನು ಒಪ್ಪುವುದಿಲ್ಲವೆಂದರು. ಜೊತೆಗೆ ಒಬ್ಬ ಡಾಕ್ಟರರು ಮಾತ್ರ ಬರಬಹುದೆಂದರು. ನನ್ನ ಹೆಂಡತಿಯೇ ನನ್ನ ಡಾಕ್ಟರಳೆಂದು ತಿಳಿಸಿದೆ. ಅವರೆ ಆಗ ಅವರು ಅನುಪಮಾ ಜೊತೆಗೆ ಬರಲಿ. ಆದರೆ ಅವಳು ಪ್ರತ್ಯೇಕ ಬೇರೆ ಉಳಿಯುವಂತೆ ವಸತಿ ವ್ಯವಸ್ಥೆ ಮಾಡಲಾಗುವುದೆಂದರು. ಅದಕ್ಕೆ ನಾನು ಒಪ್ಪಲಿಲ್ಲ, ಹೋಗಲಿಲ್ಲ!" ಸೋವಿಯತ್ ಸಂಸ್ಕೃತಿ ಮತ್ತು ನಿರಂಜನರ ಸ್ವಾತಂತ್ರ್ಯ ಪ್ರಿಯತೆ ಇವೆರಡಕ್ಕೂ ಈ ಅವರ ಮಾತು ಮಾರ್ಮಿಕ ದ್ಯೋತಕವಾಗಿತ್ತು.

ಸೋವಿಯತ್ ರಶಿಯಾದಲ್ಲಿ ನಿರಂಜನರ ಕಾದಂಬರಿಗಳು ಅನುವಾದವಾಗಿ ತುಂಬ ರೊಕ್ಕ ಗಳಿಸಿದವು. ಆದರೆ ಆ ರೊಕ್ಕ ಅಲ್ಲಿಯೇ ವಿನಿಯೋಗವಾಗಬೇಕು! ಇಲ್ಲಿ [illegible].

ತಮ್ಮ ಅಪಾಂಗ ಸ್ಥಿತಿಗಾಗಿ ಈ ಧೀರ ನಿಜವಾಗಿಯೂ [illegible]. ನಾನು ಇವರನ್ನು 'ಸಿನಿಕ' ಬರುವವರೆಗೆ [illegible]. ಅಷ್ಟರಲ್ಲಿ ನನ್ನ ಈ [illegible] ಕಾರ್ಯ [illegible]

ಬೇಕು." ಈಗ ಅವರು ಪಿರಾಮಿಡ್ಡುಗಳ ಕಾಲದ ಪ್ರಾಚೀನ ಇಜಿಪ್ತ ನಾಗರಿಕತೆಯ ಹಿನ್ನೆಲೆಯ ಒಂದು ಕಾದಂಬರಿ ಮುಗಿಸಿ ಪ್ರಕಟಿಸಿದ್ದಾರೆ. ಇನ್ನೊಂದು ಬೃಹತ್ ಕಾದಂಬರಿ ಪ್ರಾಚೀನ ಭಾರತೀಯ ಸಂಸ್ಕೃತಿಯ ಹಿನ್ನೆಲೆಗೆ ಅವರ ತಲೆಯಲ್ಲಿ ಸುಳಿವು ಹಾಕಿದೆ. ಅದನ್ನು ಮುಗಿಸುವ ಛಲ ಅವರದು.

ನನಗೆ ಭೆಟ್ಟಿಯಾದಂದು ಅವರು ಪುರೋಗಾಮಿ ಸಾಹಿತ್ಯ ಸಂಘಟನೆಯ ಪುನರುಜ್ಜೀವನಕ್ಕಾಗಿ ಅವಿಶ್ರಾಂತವಾಗಿ ದುಡಿಯುತ್ತಿದ್ದರು. ನಮ್ಮ ಹಲವಾರು ಹಿರಿಯ ಸಾಹಿತಿಗಳ ಮುಖವಾಡಗಳೂ ಅವರಿಗೆ ಗೊತ್ತು. ಅವುಗಳ ಹಿಂದಿನ ಮುಖಗಳೂ ಅವರಿಗೆ ಗೊತ್ತು. ನನ್ನ ಆತ್ಮಕಥೆಯನ್ನು ನಾನು ಬರೆಯಬೇಕೆಂದು ಕಂಡಾಗೆಲ್ಲ ಅವರು ಆಗ್ರಹ ಮಾಡುತ್ತಿರುತ್ತಾರೆ. ಅಂದು ಸಿಕ್ಕಾಗಲೂ ಅದನ್ನೇ ಮತ್ತೆ ಒತ್ತಿ ಹೇಳಿದರು—ಸೋತ ಸೇನಾಪತಿ ಆತ್ಮಚರಿತ್ರೆ ಬರೆಯುತ್ತಾರಂತೆ, ಆತ್ಮಸಮರ್ಥನೆಗೆ." ನಾನೆಂದೆ: "ನಾನು ಸೋತಿದ್ದರೂ ಸೇನಾಪತಿಯಲ್ಲ, ನನಗೆ ಆತ್ಮಸಮರ್ಥನೆಯ ಅಷ್ಟೊಂದು ಅಗತ್ಯವೂ ಇಲ್ಲ."

ಡಾ. ಅನುಪಮಾ ನಿರಂಜನರ ಬಗೆಗೆ ನನಗೆ ಯಾವಾಗಲೂ ಮಿಗಿಲಾದ ಕೌತುಕ. ಅವರು ಒಂದು ಕ್ಲಿನಿಕ್, ಒಂದು ಮೆಟರ್ನಿಟಿ ವಾರ್ಡ್ ನಡೆಸುತ್ತ, ಅತ್ಯಂತ ದಕ್ಷ ಯಶಸ್ವಿ ಡಾಕ್ಟರರಾಗಿಯೂ ಇಷ್ಟೆಲ್ಲ ಕಾದಂಬರಿಗಳನ್ನು ಬರೆಯುವದಾದರೂ ಯಾವಾಗ, ಹೇಗೆ? ಅವರು ಸ್ನಿಗ್ಧವಾಗಿ ನಗುತ್ತಲೇ ಹೇಳಿದರು, "ಬಹಳ ಕೆಲಸವಿದ್ದವರಿಗೇ ಇನ್ನಷ್ಟು ಕೆಲಸಕ್ಕೆ ಅವಕಾಶ ಒದಗುತ್ತದೆ. Everything in its place, a place for everything— ಅಂತಾರಲ್ಲ? ನನ್ನ ಲೇಖನವೆಲ್ಲ ರಾತ್ರಿ—ನಡುರಾತ್ರಿಗೆ."

ಹಿರಿಯ ಮಗಳು ತೇಜಸ್ವಿನಿ ಭಾರತೀಯ ಆಂಗ್ಲ ಕಾವ್ಯದ ಆಕಾಶಗಂಗೆಯಲ್ಲಿ ಈಗಾಗಲೇ ನಿಚ್ಚಳವಾಗಿ ತೋಳಗುವ ಚಿಕ್ಕ ತಾರೆ. ತಂದೆಯ ಕಾದಂಬರಿಗಳನ್ನು ಇಂಗ್ಲೀಷಿನಲ್ಲಿ ಅನುವಾದಿಸುತ್ತಿದ್ದಾಳೆ, "ಒಂದರೊಳ ಒಂದಿಲ್ಲ ಒಂದರೊಳು ಕುಂದಿಲ್ಲ—" ಕವಿವರ್ಯ ಬೇಂದ್ರೆಯವರ 'ಹೂ'ವಿನಂತೆ ಈ ಸಾಹಿತ್ಯಿಕ ಕುಟುಂಬ,

ಕಾರು ಸದ್ದಿಲ್ಲದೇ ಸರಿದು ಓಡಿತು—ಬಂಕಿಕೊಡ್ಲಕ್ಕೆ. ನನ್ನ ಕಣ್ಣಲ್ಲಿ ನಿರಂಜನರ ಆ ಹಾರ್ದಿಕ ಹರ್ಷದ ನಗೆ, ಕೈಯಲ್ಲಿ ಅದೇ ಹಾರ್ದಿಕ ಬೆಚ್ಚನ ವಿದಾಯ ಸ್ಪರ್ಶದ ಕಾವು, ಎದೆಯಲ್ಲಿ ಅವರ ಸರಳ ಪರಿಹಾಸನ ಆರದ ಆನಂದ. 'ಅಪರಂಪಾರ'ವಾಗಿ ತುಂಬಿ ಅಚ್ಚಳಿಯದೇ ಉಳಿದಿದೆ.

ತಂದೆಯ ಶ್ರಾದ್ಧ ಮತ್ತು Sound of Music

ನಿಶ್ಚಿತ ಮಿತಿ ನೆನಪಿಲ್ಲ, ಆದರೆ ೬೦ ರ ದಶಕದ ಉತ್ತರಾರ್ಧವಿರಬೇಕು. ಒಮ್ಮೆ ಪೂಜ್ಯ ಕವಿವರ್ಯ ಪು. ತಿ. ನರಸಿಂಹಾಚಾರ್ಯರು ನಮ್ಮ ಮನೆಗೆ ಬಂದರು. ಅವರ ಆ ಅಪೂರ್ವ ಭೆಟ್ಟಿಗಾಗಿ ನಾನು ಗೆಳೆಯ ಸು. ರಂ. ಯಕ್ಕುಂಡಿಯವರಿಗೆ ಋಣಿ. ಅವರಲ್ಲಿಗೆ ಪು. ತಿ. ನ. ಬಂದಿದ್ದರು. ಎಂದಿನಿಂದಲೂ ಯಕ್ಕುಂಡಿಯವರಿಗೆ ಮೆಚ್ಚಿನ ಮನಸೋತ ಕಾವ್ಯ ಕುತೂಹಲಿಗಳು ಆ ಹಿರಿಯ ಕವಿ. ಆ ಹರಯದ ಕವಿಯನ್ನು 'ಹುಚ್ಚ'ನೆಂದೇ ಕರೆದವರು, ಅವರ ಭಕ್ತಿರಸದ ಲಾವಣ್ಯಮಯ ಕವನಗಳಿಂದ ಮುಗ್ಧರಾಗಿ,

ಮನೆಯಲ್ಲಿ ಆಗ ನಾನು ಒಬ್ಬನೇ ಇದ್ದೆ; ಹಿರಿಯರನ್ನು ಹೇಗೆ ಸತ್ಕರಿಸುವದು? ಅವರು "ಇನ್ನೇನೂ ಬೇಡ, ಊಟದ ಸಮಯ. ಬರೇ ಇಷ್ಟು ಮಜ್ಜಿಗೆ ಕೊಡಿರಿ. ಕುಡಿಯುತ್ತೇನೆ" ಅಂದರು. ಮಜ್ಜಿಗೆಯೂ ಕಡೆದದ್ದು ಇದ್ದಿಲ್ಲ. ಮೊಸರಿಗೆ ನೀರು ಬೆರೆಸಿ ನೀಡಿದೆ. ಕವಿವರ್ಯರು ಸೇವಿಸಿ ತೃಪ್ತರಾದರು. ನಮ್ಮ ಮಾತುಕತೆ ನವ್ಯಕಾವ್ಯದತ್ತ ಹರಿಯಿತು.

ಅದಾಗಲೇ ನಾನು ಅವರ 'ಕಾವ್ಯ ಕುತೂಹಲ' ಪ್ರಬಂಧ ಸಂಗ್ರಹ ಓದಿ ತುಂಬ ಪ್ರಭಾವಿತನಾಗಿದ್ದೆ, (ಹಿಂದೆಯೇ ಅವರ 'ಈಚಲ ಮರದ ಕೆಳಗೆ' ಎಂಬ ಬಲು ಸೊಗಸಾದ ಹರಟೆಗಳನ್ನು ಓದಿ ಸುಖಿಸಿದ್ದೆ). ಪು. ತಿ. ನ. ರ

ಕಾವ್ಯ ನಾನು ಓದಿದ್ದು ಕಡಿಮೆಯೇ. ಓದಿದ ಕೆಲವಂಶವೂ ನನಗೆ ವಿಶೇಷ ಹಿಡಿಸಿದ್ದಿಲ್ಲ. ಆದರೆ ಈ ಕವಿ ತನ್ನ ಕೃತಿಗಿಂತ ಉನ್ನತರೆಂಬ ಮನವರಿಕೆ ನನ್ನದಾಗಿತ್ತು. ಮಾತ್ರವಲ್ಲ ಅವರು ಬಹಳ ಮಟ್ಟಿನಂತ ಅಭಿರುಚಿಯ ಕವಿ ಎಂದುಕೊಂಡಿದ್ದೆ.

ಆದರೆ ಅವರು ನವ್ಯದ ಬಗ್ಗೆ ತಳೆದ ಆಡಿದ ಅಭಿಪ್ರಾಯದಿಂದ ನಾನು ಬೆರಗಾದೆ. ನವ್ಯ ಅನವ್ಯ ಇದು ಮುಖ್ಯವಲ್ಲ. ಬರೆದದ್ದು ಕಾವ್ಯವೋ ಎಂಬುದು ತಾನೇ ಮುಖ್ಯ- ಅಂದರು ಪು. ತಿ. ನ. (ಹಿಂದೊಮ್ಮೆ ಕೇವಲ ಇದೇ ಮಾತು ಪೂಜ್ಯ ಮಾಸ್ತಿಯವರೂ ಒಂದು ಪತ್ರದಲ್ಲಿ ನನಗೆ ಬರೆದು ತಿಳಿಸಿದ್ದರು) "When nature makes a genius, she breaks her mould"- ಎಂಬ ಎಮರ್ಸನ್ನನ ಅಭಿಪ್ರಾಯವನ್ನು ಪು. ತಿ. ನ. ಆಡಿ ತೋರಿಸಿದರು.

"ಹಿಂದೆ ರಾಘವಾಂಕ ಲಕ್ಷ್ಮೀಶರು ಬರೆದರೆಂದು ಇಂದು ವಾರ್ಧಿಕಷಟ್ಪದಿಯಲ್ಲಿ ಕಾವ್ಯ ರಚನೆ ಸಾಧ್ಯವೇ? ಇಲ್ಲ. ಆ mould ಈಗ ಒಡೆದು ಹೋಗಿದೆ. ಹಾಗೆಯೇ ನವೋದಯ ಕಾವ್ಯದ ಜಾಯಮಾನ," ಅವರೆಂದರು. ಅಡಿಗರ ಕಾವ್ಯ ಈ ರೀತಿ ಐತಿಹಾಸಿಕವಾಗಿಯೇ ಅನಿವಾರ್ಯವೆಂದು ಆ ಹಿರಿಯರ ಅಭಿಮತವಾಯಿತು. ಸ್ವತಃ ಸಂಸ್ಕೃತನಿಷ್ಠ ಸಾಂಪ್ರದಾಯಿಕ ಭಾಗವತ ಪ್ರವೃತ್ತಿಯ ಈ ಕವಿವರ್ಯರು ಕಾವ್ಯದ ಆಧುನಿಕ ಆವಿಷ್ಕಾರದ ಬಗೆಗೆ ಇಷ್ಟೊಂದು ತೆರೆದ ಮನಸ್ಸನ್ನು ವ್ಯಕ್ತಪಡಿಸಿದ್ದು ನನಗೆ ಆಶ್ಚರ್ಯದಷ್ಟೇ ಆನಂದವನ್ನು ಉಂಟುಮಾಡಿತು.

ಅನಂತರ ಅವರನ್ನು ಡಾ. ವಿ. ಸೀತಾರಾಮಯ್ಯ ಒಂದು ಕವಿಗೋಷ್ಠಿಗೆ ಅಧ್ಯಕ್ಷರಾಗಿ ಹೊನ್ನಾವರಕ್ಕೆ ಕರೆದಿದ್ದರು. ಆಗಲೂ ಅವರು ನಮ್ಮಲ್ಲಿಗೆ ಬಂದಿದ್ದರು. ಆಗ ಅವರ ಒಂದು ಮಾತು ಅವರ ಆಧುನಿಕ ಪ್ರಜ್ಞೆಯ ಬಗೆಗೆ ನನ್ನ ಚಿತ್ತವನ್ನು ಸೆಳೆಯಿತು. ಆ ಹಿಂದಿನ ವರ್ಷ ಅವರು ಮುಂಬಯಿಯಿಂದ ಹೊರಗೆ ಎಲ್ಲಿಯೋ ಇದ್ದರು. ಊರಲ್ಲಿ ಇದ್ದಿಲ್ಲ. ಆದರೆ ಮಾಂದ್ಯಾಂ ಮುಂಬಯಿಗೆ ಬಂದರು. ಏಕೆ? "ನಾನು ಮುಂಬಯಿಗೆ ಧಾವಿಸಿದ್ದು ಎರಡು ಉದ್ದೇಶಗಳಿಗಾಗಿ—ಒಂದು ನನ್ನ ತಂದೆಯವರ ಶ್ರಾದ್ಧ, ಮತ್ತೊಂದು 'Sound of Music' ಚಿತ್ರ ನೋಡಲಿಕ್ಕೆ!"— ಅಂದರು ಆ ನಾದಲುಬ್ಧ ಕವಿ.

ಮುಂದೆ ಪು. ತಿ. ನ. ಸತ್ಕಾರ ಗ್ರಂಥ ಒಂದಕ್ಕೆ ನಾನು ಅವರ ಪ್ರಬಂಧಗಳ ಬಗೆಗೆ ಒಂದು ಲೇಖನ ಕಳುಹಿಸಿದೆ—ಸಂಪಾದಕ ಮಂಡಳದ ವಿನಂತಿಯ ಮೇರೆಗೆ. ಆ ಸಮಯ ಆ ಗ್ರಂಥ ಹೊರಬರಲಿಲ್ಲ. ಮುಂದೆ ಹೊರಬಿದ್ದಾಗ ಆ ಪ್ರಬಂಧ ಪ್ರಕಟವಾಗಲಿಲ್ಲ. ಅದನ್ನು ಪು. ತಿ. ನ. ಅವರಿಗೇ ಓದಲು ಕೊಡಲು ಕೇಳಿಕೊಂಡಿದ್ದೆ. ಆದರೆ ಅದು ಹೇಗೋ ಎಲ್ಲಿಯೋ ಕಳೆದುಹೋಯಿತು. "ಪರವಾಯಿಲ್ಲ, ಇನ್ನೊಮ್ಮೆ ಬರೆದು ಕೊಡಿ" ಎಂದರು. ಆದರೆ ಅದು ನನಗೆ ಸಾಧ್ಯವಾಗಲಿಲ್ಲ.

ಮೈಸೂರು ವಿಶ್ವವಿದ್ಯಾಲಯವು ಏರ್ಪಡಿಸಿದ ಒಂದು ವಿಚಾರ ಸಂಕಿರಣಕ್ಕೆ ಹೋದಾಗ ಆ ಕವಿವರ್ಯರು ಮತ್ತೆ ಭೆಟ್ಟಿ ಆದರು. ಹಳೆಯ ನೆನಪುಗಳು ಮರುಕಳಿಸಿದವು. ಆದರೆ ಅವರನ್ನು ಅವರ ಮನೆಯಲ್ಲಿಯೇ ಭೆಟ್ಟಿಯಾಗುವ ಭಾಗ್ಯ ಕೂಡಿಬರಲಿಲ್ಲ. ಪ್ರಿಯ ಡಾ. ವಿ. ಕೆ. ಗೋಕಾಕರನ್ನು ಅವರು ಕರೆದಿದ್ದರೆಂದು ಆಮೇಲೆ ಕೇಳಿದೆ.

ಚಿತ್ರಕಾವ್ಯವನ್ನೂ ಪಾಶ್ಚಾತ್ಯ ಸಂಗೀತವನ್ನೂ ಕೂಡಿಯೇ ಶ್ರದ್ಧೆಯಿಂದ ಕಾಣುವ ಹೃದಯವೈಶಾಲ್ಯ ಹಿರಿಯದು. ಅದಕ್ಕೇ ಸಂಸ್ಕೃತ ಸಾಹಿತ್ಯ ನವೋದಯ ಕಾವ್ಯದಷ್ಟೇ ನವ್ಯೋನವ್ಯ ಕವಿತೆಯೂ ಅಪ್ಯಾಯಮಾನವೆನಿಸಿದರೆ ಸೋಜಿಗವಲ್ಲ. ★

ಪ್ರಸಿದ್ಧ ಬೇಟೆಗಾರರೊಬ್ಬರ ಅನುಭವವನ್ನು ಕನ್ನಡದಲ್ಲಿ ಪ್ರಸ್ತುತಪಡಿಸಿದವರು 'ಕೋಹಿ'

ಕಾಮುಕ ಕರಡಿ ನನ್ನ ಜೀವನವನ್ನೇ ಪರಿವರ್ತಿಸಿತು

ಮುಹಮ್ಮದ ಅಲಿಖಾನ್

ನಾನು ಆ ಹಳ್ಳಿಯನ್ನು ತಲುಪಿದಾಗ ಜನ ಬಹಳೇ ಸಂತೋಷದಿಂದ ನನ್ನನ್ನು ಸ್ವಾಗತಿಸಿದರು. ಒಂದು ಬೇವಿನ ಗಿಡದ ಕೆಳಗೆ ಒಂದು ಹೊರಸನ್ನು ಹಾಕಿ ಮೇಲೆ ಕಂಬಳಿಯನ್ನು ಹಾಸಿ ನನ್ನನ್ನು ಕೂರಿಸಿದರು. ನಾನು ಹಳ್ಳಿಗೆ ಬಂದ ಸಮಾಚಾರ ತಿಳಿದು ಊರಿನ ಜನ ಒಬ್ಬೊಬ್ಬರಾಗಿ ನನ್ನ ಬಳಿ ಧಾವಿಸತೊಡಗಿದರು.

ಒಬ್ಬಾತ ಬಹಳ ದುಃಖದಿಂದ ಬಂದು ಬದಿ ನಿಂತಿದ್ದ ಮುದುಕನ ಕಡೆ ಕೈತೋರಿಸುತ್ತಾ, ನನಗೆ ಹೇಳಿದ:

"ಮದುವೆಗೆ ಕೇವಲ ೧೦–೧೨ ದಿನಗಳಿರುವಾಗಲೇ ಈ ಅಜ್ಜಯ್ಯನ ಮಗಳು ಮಾಯವಾದಳು. ಎಮ್ಮೆಗೆ ಹುಲ್ಲು ತರಲೆಂದು ಸಮೀಪದ ಕಾಡಿಗೆ ಹೋದವಳು ಮರಳಿ ಬರಲೇ ಇಲ್ಲ. ಆಕೆಗೆ ನಿಶ್ಚಯಿಸಿದ ಹುಡುಗ ಮನಸ್ಸಿಗೆ ಬರಲಿಲ್ಲ. ಆಕೆ ಈ ಮೊದಲೇ ಇನ್ನೊಬ್ಬನ ಕೂಡ ಪ್ರೇಮಿಸಿದ್ದಳು. ಆದ್ದರಿಂದ ಆಕೆ ಊರು ಬಿಟ್ಟು ಓಡಿ ಹೋಗಿದ್ದಾಳೆ, ಇತ್ಯಾದಿಯಾಗಿ...ಊರಿನ ಜನ ಆಕೆಯ ಬಗ್ಗೆ ತರತರದ ಕತೆ ಕಟ್ಟಿದರು. ಮುಂದೆ ಕೆಲವು ದಿನಗಳ ನಂತರ ಆಕೆಯ ಹೆಣ ಕಾಡಿನಲ್ಲಿ ಸಿಕ್ಕಾಗ ಕೊಳೆತು ನಾರುತ್ತಿತ್ತು. ಈ ಘಟನೆಯಿಂದ ಜನ ತತ್ತರಿಸಿದರು.

"ಇದಾದ ಕೆಲವೇ ದಿನಗಳಲ್ಲಿ ಕಾಡಿಗೆ ಹೋದ ಮತ್ತೊಬ್ಬ ಹೆಂಗಸು ಮಾಯವಾದಳು, ಆಕೆಗೆ ಕೇವಲ ಎರಡು ತಿಂಗಳಿನ ಮಗುವಿತ್ತು. ಊರಿನ ಜನ ಆಕೆಗಾಗಿ ಕಾಡಿನ ಅಂಗುಲ ಅಂಗುಲ ನೆಲವನ್ನೂ ಶೋಧಿಸಿದರು. ಆದರೂ ಆಕೆಯ ಸುಳಿವು ಸಿಗಲಿಲ್ಲ. ಆ ಹಳ್ಳಿಯ ಸುತ್ತುಮುತ್ತಲಿನ ಕಾಡಿನಲ್ಲಿ ಹುಲಿ, ಚಿರತೆಗಳಾವವೂ ಇರಲಿಲ್ಲ. ಹೀಗಾಗಿ ಈ ಸಾವಿನ ರಹಸ್ಯ ನಮ್ಮ ಪಾಲಿಗೆ ಬಿಡಿಸಲಾಗದ ಒಗಟಾಗಿತ್ತು. ಆಗಿನಿಂದ ಊರಿನ ಯಾವೊಬ್ಬ ಮನುಷ್ಯನೂ ಒಬ್ಬಂಟಿಯಾಗಿ ತಿರುಗುವ ಧೈರ್ಯ ಮಾಡಲಿಲ್ಲ. ಎಲ್ಲಿಗಾದರೂ ಹೋಗಬೇಕಾದಲ್ಲಿ ನಾಲ್ಕೈದು ಜನ ಗುಂಪು ಗುಂಪಾಗಿ ಹೊರಗೆ ಹೋಗುತ್ತಿದ್ದರು.

"ಒಂದು ದಿನ ಹುಲ್ಲು ತರಲು ಹೋದ ಹೆಂಗಸರು ಕಾಡಿನಿಂದ ದಿಕ್ಕೆಟ್ಟು ಓಡುತ್ತಾ ಊರಿಗೆ ಬಂದು, 'ಸುಬಿಯಾಳ ಸೊಸೆಯನ್ನು ಕರಡಿ ಹೊತ್ತುಕೊಂಡು ಹೋಯಿತೆಂದು' ಅಳುತ್ತಾ ಹೇಳಿದರು. ಅವರ ಪ್ರಕಾರ ಹುಲ್ಲು ಕೀಳುತ್ತಿರು

ವಾಗ ಕರಡಿ ಸ್ವಲ್ಪವೂ ಶಬ್ದವಾಗದಂತೆ ಹಿಂದಿನಿಂದ ಮೆಲ್ಲನೆ ಬಂದು, ಮೊದಲು ಒಬ್ಬ ಮುದಿ ಹೆಂಗಸನ್ನು ಹಿಡಿಯಿತು, ಆದರೆ ಆ ಮುದುಕಿಯ ಮುಖ ಗೋಚರಿಸುತ್ತಲೇ ಅದು ಆಕೆಯನ್ನು ಬಿಟ್ಟು ಸುಖಿಯಾಳ ಸೊಸೆಯನ್ನು ಹಿಡಿಯಿತು. ಸುಖಿಯಾಳ ಸೊಸೆಯು ವಿವಾಹವಾಗಿ ಸುಮಾರು ೩-೪ ವರ್ಷಗಳಾಗಿರಬಹುದಷ್ಟೆ. ಕೂಡಲೇ ಊರಿನ ಜನ ಕರಡಿಯನ್ನು ಹಿಡಿದು ಕೊಂದು ಆ ದುರ್ದೈವಿ ಹೆಂಗಸನ್ನು ಪಾರುಮಾಡಲು ಕಾಡಿಗೆ ಧಾವಿಸಿದರು.

"ಆದರೆ ಕರಡಿಯ ಗವಿ ಎಲ್ಲಿದೆಯೆಂಬುದು ಯಾರಿಗೂ ತಿಳಿದಿರಲಿಲ್ಲ, ಆದ್ದರಿಂದ ಗವಿಯನ್ನು ಹುಡುಕುವುದರಲ್ಲೇ ಬಹಳಷ್ಟು ವೇಳೆ ಕಳೆಯಿತು. ಕೊನೆಗೆ ಗವಿ ಸಿಕ್ಕಾಗ ಕರಡಿ ತಪ್ಪಿಸಿಕೊಂಡು ಹೋಗಿತ್ತು. ಆದರೆ ಸುಖಿಯಾಳ ಸೊಸೆ ಅಲ್ಲಿ ಎಚ್ಚರದಪ್ಪಿ ರಕ್ತದ ಮಡುವಿನಲ್ಲಿ ಬಿದ್ದಿದ್ದಳು. ಕಾಡಿಗೆ ಹೋದ ಜನ ಹಾಗೂ ಹೀಗೂ ಮಾಡಿ ಆಕೆಯನ್ನು ಹೊತ್ತುಕೊಂಡು ಊರಿಗೆ ತಂದು ಡಾಕ್ಟರರಿಗೆ ತೋರಿಸಿದರೂ ಪ್ರಯೋಜನವಾಗಲಿಲ್ಲ. ಆಕೆ ಸತತ ಮೂರು ದಿನಗಳವರೆಗೆ ಮೂರ್ಛಾವಸ್ಥೆಯಲ್ಲಿಯೇ ಇದ್ದು ನಾಲ್ಕನೇ ದಿನ ಜೀವ ತ್ಯಜಿಸಿದಳು. ಡಾಕ್ಟರ್ ಆಕೆಯನ್ನು ಪರೀಕ್ಷಿಸಿದಾಗ ಆಕೆಯನ್ನು ಅತಿಯಾಗಿ ಸಂಭೋಗಿಸಲಾಗಿದೆಯೆಂದೂ ಈ ಬಲಾತ್ಕಾರದ ಸಮಯದಲ್ಲಿ ಸಾಕಷ್ಟು ರಕ್ತ ಹರಿದು ಹೋದ್ದರಿಂದ ಆಕೆ ಉಳಿಯುವುದು ಅಸಂಭವವೆಂದೂ ಹೇಳಿದ್ದು ದಿಟವಾಯಿತು. ಎರಡು ಮೂರು ದಿನಕ್ಕೊಮ್ಮೆ ಆ ಕರಡಿಯು ಕಣ್ಣಿಗೆ ಬೀಳುತ್ತಿತ್ತು. ಆಗ ಆ ಕರಡಿಯ ಜೊತೆಗೆ ಅದರ ಸಂಗಾತಿಯೂ ಅಲ್ಲದೆ ಆ ಕರಡಿಗಳು ಪರಸ್ಪರ ಬಾಯಿಗೆ ಬಾಯಿ ಹಚ್ಚಿ ಆಲಿಂಗನ ಬದ್ಧವಾಗಿ ಜನರ ಕಣ್ಣಿಗೆ ಕಾಣಿಸಿಕೊಂಡದ್ದೇ ಹೆಚ್ಚು.

"ಆದರೆ ಆ ಕರಡಿಯೇ ಬೇರೆ. ಈ ಕರಡಿಯೇ ಬೇರೆ. ಅಂತೆಯೇ ಅದು ಕಣ್ಣಿಗೆ ಕಂಡ ಹೆಂಗಸರನ್ನು ಹೊತ್ತುಕೊಂಡು ಓಡುತ್ತದೆ ಎಂದು ಒಬ್ಬಾತ ತರ್ಕಿಸಿದ. ಈಗ್ಗೆ ಕೆಲವು ದಿನಗಳ ಹಿಂದೆಯೇ ಅದು ಒಬ್ಬ ಹೆಂಗಸನ್ನು ಅಪಹರಿಸಿತು. ಹೆಂಗಸು ಕಾಣೆಯಾದ ಸಮಾ-



ಚಾರ ತಿಳಿಯುತ್ತಿದ್ದಂತೆಯೇ ಊರಿನ ಜನ ಕಾಡಿಗೆ ಧಾವಿಸಿದರು. ಗುಹೆಯನ್ನು ತಲುಪಿದಾಗ ಕರಡಿ ಜನರ ಗದ್ದಲ ಕೇಳಿ ಗವಿಯಿಂದ ಹೊರಕ್ಕೆ ಧಾವಿಸಿ ಜನ ನೋಡುತ್ತಿದ್ದಂತೆಯೇ ಕಾಡಿನೊಳಗೆ ಓಡಿ ಹೋಯಿತು. ಜನ ಹಿಡಿದಿದ್ದ ದೊಣ್ಣೆಗಳು ಕೆಲಸಕ್ಕೆ ಬರಲಿಲ್ಲ. ಅವರಲ್ಲಿ ಒಬ್ಬನ ಹತ್ತಿರವಾದರೂ ಒಂದು ಬಂದೂಕು ಇದ್ದಲ್ಲಿ ಗುಂಡುಗಳು ಅದರ ಎದೆ ಸೀಳಿ ಬಿಡುತ್ತಿದ್ದುವು. ಜನ ಗವಿಯ ಹತ್ತಿರ ಹೋದಂತೆಯೇ ಆ ಹೆಂಗಸು ತನ್ನ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ಬಿಕ್ಕಳಿಸಿದಳು. ಆಕೆ ಅರ್ಧ ಪ್ರಜ್ಞಾವಸ್ಥೆಯಲ್ಲಿರುವಾಗಲೇ ಜನ ಆಕೆಯನ್ನು ಹೊತ್ತುಕೊಂಡು ಊರಿಗೆ ಬಂದರು. ಆಕೆಯ ಮರ್ಮಾಂಗ ಹರಿದುಹೋಗಿ ರಕ್ತಸ್ರಾವವಾಗಿತ್ತು. ಎಚ್ಚರಬಂದ ನಂತರ ಆಕೆಗೆ ಕರಡಿಯಿಂದ ಲೈಂಗಿಕ ಸಂತೃಪ್ತಿ ದೊರೆತಿದ್ದರಿಂದಲೋ ಏನೋ ಆಕೆ ಮರಳಿ ಕರಡಿಯ ಹತ್ತಿರಹೋಗಲು ಹವಣಿಸತೊಡಗಿದ್ದಳು. ಆಕೆ ತನಗರಿವಿಲ್ಲದಂತೆಯೇ ಕರಡಿಯನ್ನು ಪ್ರೇಮಿಸತೊಡಗಿದ್ದಳು. ನೋಡಿದರೆ ಆಕೆಗೆ ೩ ಜನ ಮಕ್ಕಳಿದ್ದಾರೆ."

ಆತ ಸ್ವಲ್ಪ ಹೊತ್ತು ನಿಂತು ಮತ್ತೆ ಹೇಳತೊಡಗಿದ: "ಕರಡಿಯ ಮೈಯೊಳಗಿನ ಕಾವು ಆ ಹೆಂಗಸಿನ ಮೈಗೂಡಿದ್ದರಿಂದ ಆಕೆ ಹೀಗೆ ಮಾಡುತ್ತಾ ಇದ್ದಾಳೆ. ಆ ಕಾವು ಆರಿಹೋದ ನಂತರ ಆಕೆ ಮತ್ತೆ ಮೊದಲಿನ ಸ್ಥಿತಿಗೆ ಬರುತ್ತಾಳೆ. ಅಲ್ಲಿಯ ವರೆಗೂ ಆಕೆಯನ್ನು ಕಾಯಬೇಕು ಎಂದು ವೈದ್ಯ ಹೇಳಿದ್ದು ನಿಜವಾಯಿತು. ಅಲ್ಲಿಯ ವರೆಗೆ ಆಕೆಯನ್ನು ಮಂಚಕ್ಕೆ ಕಟ್ಟಿ ಹಾಕಲಾಗಿತ್ತು. 'ಕರಡಿಯ ಹಿಡಿತದಿಂದ ಪಾರಾಗಲು ನಾನು ಒಂದು ಕಟ್ಟಿಗೆಯಿಂದ ಸಾಕಷ್ಟು ಬಾರಿಸಿದೆನು, ಆದರೆ ಕರಡಿ ಒಮ್ಮೆ ಕೂಡ ನನ್ನನ್ನು ಹೊಡೆಯಲು ಕೈಯೆತ್ತಿರಲಿಲ್ಲ,' ಎಂದು ಆಕೆ ಸಂಪೂರ್ಣವಾಗಿ ಗುಣವಾದ ನಂತರ ಒಮ್ಮೆ ಇನ್ನೊಬ್ಬ ಹೆಂಗಸಿನ ಹತ್ತಿರ ತನ್ನ ದುಃಖ ತೋಡಿಕೊಂಡಳು."

ಆ ಮಾತು ಕೇಳುತ್ತಿದ್ದಂತೆಯೇ ನಾನು ಸಿಟ್ಟಿನಿಂದ ಹುಚ್ಚನಂತಾದೆ. 'ಕರಡಿ' ಎಂಬ ಶಬ್ದ ಕೇಳಿಸುತ್ತಲೇ ನನ್ನ ರಕ್ತ ಕುದಿಯತೊಡಗಿತು. ಆ ಹೆಂಗಸು ಹಾಗೆ ಹೇಳಿದ್ದನ್ನು ಕೇಳಿದ ಮರುದಿನವೇ ಕರಡಿ ಬೇಟೆಯಾಡುವ ಕಾರ್ಯ



ಕ್ರಮವಿತ್ತು. ಆದರೆ ಆ ಕರಡಿಯ ನೀಚತನಕ್ಕೆ ರೋಸಿ ಹೋದ ನಾನು ಅದೇ ದಿನ ಆ ಕರಡಿಯನ್ನು ಬೇಟೆಯಾಡಲು ನಿರ್ಧರಿಸಿದೆ,

ನಾನು ಬೇಟೆಯಾಡಲು ಬಂದೂಕನ್ನು ಕೈಗೆತ್ತಿಕೊಳ್ಳುತ್ತಿದ್ದಂತೆಯೇ ಊರಿನ ಜನರೆಲ್ಲಾ ತಮ್ಮ ತಮ್ಮ ದೊಣ್ಣೆಗಳನ್ನೂ ಕೊಡಲಿ, ಭರ್ಚಿಗಳನ್ನೂ ತೆಗೆದುಕೊಂಡು ನನ್ನ ಹಿಂದೆ ಬರಲು ತಯಾರಾದರು. ಆದರೆ ನಾನು ಎಲ್ಲರಿಗೂ ನಿಲ್ಲಲು ಹೇಳಿ ನನ್ನ ಸಂಗಡ ೪–೫ ಜನರನ್ನು ಮಾತ್ರ ಕರೆದುಕೊಂಡು ಕಾಡಿಗೆ ನುಗ್ಗಿದೆ. ಆದರೆ ಕರಡಿ ಪತ್ತೆಯಾಗಲಿಲ್ಲ. ದಾರಿಯ ಒಂದು ತಿರುವಿನಲ್ಲಿ ದಿಣ್ಣೆಯ ಮೇಲಿನಿಂದ ಸ್ವಲ್ಪ ಕೆಳಗೆ ಇಳಿದಾಗ ನಮ್ಮಿಂದ ಕೆಲವೇ ಫರ್ಲಾಂಗುಗಳ ಅಂತರದಲ್ಲಿ ಆ ಕರಡಿ ದಂಪತಿಗಳು ಪರಸ್ಪರ ಆಲಿಂಗನ ಬದ್ಧವಾಗಿ ತುಟಿಗೆ ತುಟಿ ಹಚ್ಚಿ ಕುಳಿತಿದ್ದು ಕಾಣಿಸಿತು. ನಾವು ಕ್ಷಣ ಕಾಲ ದಿಙ್ಮೂಢರಾಗಿ ನಿಂತಲ್ಲೇ ನಿಂತೆವು.

"ಅರೆ ಈ ಲೈಲಾ ಮಜನುಗಳು, ಆದರೆ ಈ ಕರಡಿಗಳು ಯಾರಿಗೇನೂ ಕೆಡಕನ್ನೂ ಮಾಡಿಲ್ಲ" ಒಬ್ಬಾತ ಹೇಳಿದ.

"ಈ ಕರಡಿ ಜಾತಿ ಮೇಲೆ ಯಾವುದೇ ವಿಶ್ವಾಸವಿಡಬಾರದು. ಮೊದಲು ನಾವು ಎಂದೂ ಈ ಕರಡಿಗಳ ಬಗೆಗೆ ವಿಚಾರ ಸಹಿತ ಮಾಡಿರಲಿಲ್ಲ; ಆದರೆ ನೋಡಿದಾಗ, ಕರಡಿಗಳು ಇಷ್ಟೊಂದು ನೀಚತನದಿಂದ ಊರ ಹೆಂಗಸರ ಮೇಲೆ ಅತ್ಯಾಚಾರ ನಡೆಸುತ್ತವೆ" ಎಂದು ಇನ್ನೊಬ್ಬಾತ ಹೇಳಿದ.

"ಈ ಕಾಡಿನಲ್ಲಿ ಒಂದಾದರೂ ಕರಡಿಯನ್ನು ಉಳಿಸುವುದಿಲ್ಲ, ಮೊದಲು ಈ ಜೋಡು ಕರಡಿಗಳ ಮೇಲೆ ಗುಂಡು ಹಾರಿಸುತ್ತೇನೆ. ನಂತರ ಆ ಅತ್ಯಾಚಾರಿ ಕರಡಿಯೂ ನಾನು ಹಾರಿಸಿದ ಗುಂಡಿಗೆ ಬಲಿಯಾಗಲೇಬೇಕು," ನಾನು ಹೇಳಿದೆ.

"ನಮ್ಮ ಕಾಲಿನ ಸಪ್ಪಳದಿಂದಾಗಿ ಆ ಕರಡಿಗಳು ಮೆಲ್ಲನೆ ಗಿಡಗಳ ಹಿಂದೆ ಮರೆಯಾದವು, ನಾನು ಊರವರಿಗೆ ನಿಲ್ಲಲು ಹೇಳಿ ಮೆಲ್ಲನೆ ಸಪ್ಪಳಾಗದ ಹಾಗೆ ಆ ಕರಡಿಗಳನ್ನು ಹಿಂಬಾಲಿಸಿದೆ. ಅದನ್ನರಿತ ಕರಡಿಗಳು ಓಡತೊಡಗಿದವು. ಆದರೆ ಅವುಗಳನ್ನು ಬಿಟ್ಟುಕೊಡಲು ನಾನು ಸಿದ್ಧನಿರಲಿಲ್ಲ. ಗಿಡಗಳು ಮತ್ತು ಕಾಡಿನ ಕಠಿಣ ದಾರಿಯಿಂದಾಗಿ ಬಂದೂಕು ಹಾರಿಸುವ ಅವಕಾಶವೇ ಸಿಗದೇ ಹಿಂಬಾಲಿಸುತ್ತಿರುವಾಗ ಒಂದು ಸ್ಥಳದಲ್ಲಿ ಸ್ವಲ್ಪ ಹೊತ್ತಿನ ಅವಕಾಶ ಸಿಕ್ಕಿ ನಾನು ಗುಂಡು ಹಾರಿಸಿದೆ. ಮುಂದೆ ಹೆಣ್ಣು ಕರಡಿ ಓಡುತ್ತಿತ್ತು. ಅದರ ಹಿಂದೆಯೇ ಆ ಹೆಣ್ಣು ಕರಡಿಯನ್ನು ರಕ್ಷಿಸುತ್ತಾ ಗಂಡು ಕರಡಿ ಹಿಂದೆ ಬಿದ್ದಿತ್ತು. ನಾನು ಹಾರಿಸಿದ ಗುಂಡು ಗಂಡು ಕರಡಿಯ ಕಾಲಿನ ಮೇಲು ಭಾಗದಲ್ಲಿ ನಡುವಿನ ಹತ್ತಿರ ಸೇರಿರಬೇಕು. ಗಂಡು ಕರಡಿಯ ಚೀತ್ಕಾರ ಕೇಳಿ ಹೆಣ್ಣು ಕರಡಿ ಹಿಂತಿರುಗಿ ಗಂಡು ಕರಡಿಯ ಬಳಿಗೆ ಧಾವಿಸಿತು. ನಂತರ ಗಂಡು ಕರಡಿಯ ಕಿವಿಯಲ್ಲಿ ವಿಚಿತ್ರ ಭಾಷೆಯಲ್ಲಿ ಏನೋ ಹೇಳಿರಬೇಕು; ಅಂತೆಯೇ ಗಂಡು ಕರಡಿ ಯಾವುದೋ ಗಿಡಗಳ ಮರೆಯಲ್ಲಿ ಮಾಯವಾಯಿತು.

ಇನ್ನು ಒಂದು ಸೆಕೆಂದಿನ ಅವಕಾಶ ದೊರಕಿದ್ದಲ್ಲಿ ಅದು ತಾ ನಿಂತ ಸ್ಥಳದಲ್ಲಿಯೇ ಮಣ್ಣು ಕಚ್ಚಬೇಕಾಗುತ್ತಿತ್ತು. ಆದರೇನು? ಎರಡೂ ಕರಡಿಗಳು ತಪ್ಪಿಸಿಕೊಂಡುಬಿಟ್ಟವು. ನಾನು ಬಹಳ ದೂರದಿಂದ ಅವುಗಳನ್ನು ಹಿಂಬಾಲಿಸುತ್ತಾ ಓಡಿದ್ದೆನಾದ್ದರಿಂದ ನನಗೂ ಉಸಿರಾಡಲು ಸ್ವಲ್ಪ ತೊಂದರೆಯಾಗಿತ್ತು. ಕಾಡಿನ ಮುಳ್ಳುಕಂಟಿಗಳು ನನ್ನ ಮೈ, ಕೈ, ಕಾಲುಗಳನ್ನು ತರಿದುಕೊಂಡಿದ್ದುವಾದ್ದರಿಂದ ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳಲು ಉದ್ದೇಶಿಸಿದೆ. ನನ್ನ ಅಂಗಿ ಎರಡು ಮೂರುಕಡೆ ಹರಿದು ಹೋಗಿತ್ತು. ಅಷ್ಟರಲ್ಲಿ ಊರಿನ ಜನ ಬಂದೂಕಿನ ಶಬ್ದ ಕೇಳಿ ನಾ ಕುಳಿತಲ್ಲಿಗೆ ಬಂದರು. ಆದರೆ ಅವರಾರೂ ಕರಡಿಗಳನ್ನು ನೋಡಿರಲಿಲ್ಲ. ಗುಂಡಂತೂ ಗಂಡು ಕರಡಿಗೆ ಬಡಿದಿದೆ. ಅದು ತಪ್ಪಿಸಿಕೊಂಡು ಓಡಿಹೋಗಿದೆ, ಆದರೆ ಅದು ಬಹು ದೂರ ಓಡಲು ಸಾಧ್ಯವಿಲ್ಲ. ಎಲ್ಲೋ ಬಿದ್ದುಕೊಂಡು ಕೊನೆಯ ಗಳಿಗೆಯ ಬಿಕ್ಕಿ [illegible] ಸಮಯವನ್ನೆಣಿಸುತ್ತಿರಬಹುದೆಂದು ನಾನು ಊರವರಿಗೆ ಹೇಳಿದೆ.

ಗುಂಡು ತುಂಬಿದ ಬಂದೂಕನ್ನು ಹೆಗಲಿ-

ಗೇರಿಸಿ ಯಾವುದೇ ಪರಿಸ್ಥಿತಿಯನ್ನೆದುರಿಸಲು ತಯಾರಾದೆ. ಬೆರಳು ಬಂದೂಕಿನ ಕುದುರೆಯ ಮೇಲಿತ್ತು. ತಪ್ಪಿಸಿಕೊಂಡ ಆ ಕರಡಿ ಜೋಡಿಯನ್ನೇ ನಾನು ಹುಡುಕುತ್ತಿದ್ದೆ. ಆದರೆ ಎರಡೂ ಕರಡಿಗಳು ಮಂಗಮಾಯ! ನೆಲದ ಮೇಲಿನ ರಕ್ತದ ಗುರುತಿನಿಂದಾಗಿ ಕರಡಿ ಹೋದ ಜಾಡಿನ ಅಂದಾಜು ತಿಳಿಯುತ್ತಿತ್ತು. ಅದೇ ಗುರುತಿನಿಂದ ನಾವು ಮುಂದುವರಿದೆವು. ನಮಗೆ ದೂರದಲ್ಲಿ ಯಾರೋ ಹೆಣ್ಣು ಮಗಳು ಅಳುತ್ತಿರುವ ಅಸ್ಪಷ್ಟ ಶಬ್ದ ಕೇಳಿಸಿತು. ನಾವೀಗ ಅಳುತ್ತಿರುವ ಶಬ್ದ ಬರುವ ದಿಕ್ಕಿಗೆ ಸಾಗತೊಡಗಿದೆವು. ಒಂದು ಸ್ಥಳದಲ್ಲಿ ಹಳ್ಳ ಕಾಣಿಸಿತು. ನಾವು ಹಳ್ಳ ದಾಟಿ ೮-೧೦ ಹೆಜ್ಜೆ ದಾಟಿರಬೇಕು ! ಮುಂದಿನ ದೃಶ್ಯದಿಂದಾಗಿ ನಾವು ಗಕ್ಕನೆ ನಿಂತೆವು. ನಮ್ಮಿಂದ ಸ್ವಲ್ಪವೇ ದೂರದಲ್ಲಿ ಗಂಡು ಕರಡಿ ಸತ್ತುಬಿದ್ದಿತ್ತು. ಅದರ ಪತ್ನಿ ಅಳುತ್ತಾ ಕುಳಿತಿತ್ತು. ಒಮ್ಮೊಮ್ಮೆ ಬಗ್ಗಿ ಅದು ತನ್ನ ಗಂಡನ ಶವದ ಮುಖವನ್ನು ಚುಂಬಿಸುತ್ತಾ ಎದೆ ಬಡಿದುಕೊಂಡು ಗೋಳಾಡುತ್ತಿತ್ತು. ಯಾವುದೋ ಹೆಣ್ಣು ತನ್ನ ಗಂಡನ ಶವದ ಮುಂದೆ ಹೇಗೆ ಅಳುತ್ತದೋ ಹಾಗೆಯೇ ಅದು ಮನುಷ್ಯರಂತೆ ಗೋಳಾಡುತ್ತಿತ್ತು. ಅದನ್ನು ನೆನೆಸಿಕೊಂಡಾಗಲೆಲ್ಲ ದುಃಖದಿಂದ ನನ್ನ ಹೃದಯ ಬಾಯಿಗೆ ಬರುತ್ತದೆ. ನಂತರ ಆ ಹೆಣ್ಣು ಕರಡಿ ಅಕಸ್ಮಾತ್ ನನ್ನನ್ನು ನೋಡಿತು. ಅಂದು ನನ್ನೆಡೆ ತದೇಕ ದೃಷ್ಟಿಯಿಂದ ನೋಡತೊಡಗಿತು. ಈಗಲೂ ಅದರ ಕಣ್ಣಿನಿಂದ ಕಣ್ಣೀರು ಹರಿದು ಬರುತ್ತಿತ್ತು. ಮೊದಲು ಅದು ನನ್ನನ್ನು ದೃಷ್ಟಿ ಬಡಿಯದೆ ನೋಡುತ್ತಾ ನಂತರ ಮೆಲ್ಲನೆ ನನ್ನ ಕಡೆ ಬರತೊಡಗಿತು. ನಾನು ಸ್ವಲ್ಪ ಚೇತರಿಸಿಕೊಂಡೆ. ನನ್ನಿಂದ ಸ್ವಲ್ಪ ಅಂತರದಲ್ಲಿ ನಿಂತುಕೊಂಡು ಒಮ್ಮೆ ನನ್ನನ್ನು ಒಮ್ಮೆ ಸತ್ತು ಹೋದ ತನ್ನ ಪತಿಯನ್ನೂ ನೋಡಿತು. "ನೀನು ನನ್ನ ಪತಿ-



"ನಿಲ್ಲು,... ನಿಲ್ಲೆ... ಪಟಿಂಗಾ..."

ಯನ್ನು ವಿನಾಕಾರಣ ಕೊಂದೆ, ಅಂದ ಮೇಲೆ ನನ್ನನ್ನಾದರೂ ಏಕೆ ಉಳಿಸಿರುವೆ? ನನ್ನನ್ನೂ ಕೊಲ್ಲು" ಎನ್ನುವ ದೃಷ್ಟಿಯಿಂದ ಅದು ನೋಡುತ್ತಿರಬೇಕೆಂದು ಅದರ ಕಣ್ಣುಗಳು ಹೇಳುತ್ತಿದ್ದುವು. ತನ್ನ ಸರ್ವಸ್ವವನ್ನೂ ಕಳೆದುಕೊಂಡ ಸ್ತ್ರೀ ಆರ್ತಳಾಗಿ ಗೋಳಿಡುತ್ತಿರುವಂತೆ ನನಗನಿಸಿತು. ಅದು ನನ್ನೆಡೆ ನಿರ್ನಿಮೇಷ ನೇತ್ರಗಳಿಂದ ನೋಡುತ್ತಾ ಒಮ್ಮಿಂದೊಮ್ಮೆಲೇ ರೋದಿಸತೊಡಗಿದಾಗ ಕರಡಿಯ ಬಗೆಗಿನ ಕ್ರೋಧ ಕರಗಿಹೋಗಿತ್ತು. ಅಪರಾಧಿ ಭಾವ ನನ್ನನ್ನಾವರಿಸಿತ್ತು. ಈ ಘಟನೆ ನನ್ನ ಮನಸ್ಸಿನಲ್ಲಿ ಮಾನವತೆಯ ಸಂದೇಶದ ಡಿಂಡಿಮವನ್ನೇ ಮೊಳಗಿಸಿತು. ನಾನು ಯಾವುದೋ ಕರಡಿಯನ್ನು ಕೊಂದಿರುವೆನೆಂಬ ಭಾವನೆ ಬಾರದೆ ಒಬ್ಬ ಹೆಂಗಸಿನ ಕುಂಕುಮವನ್ನಳಿಸಿದೆನೆಂದೇ ನನಗನಿಸಿತು. ಅಂದಿನಿಂದ ತಿರುಗಿ ನಾನು ಬಂದೂಕು ಹಿಡಿಯಲಿಲ್ಲ. ✡



ತಿರುವು ಮುರುವು

ಕೆ. ಸುಶೀಲ

ನಾನು ಬಾರ್ ಪ್ರವೇಶಿಸಿದಾಗ ನನ್ನ ದೃಷ್ಟಿ ಒಬ್ಬ ಸುಂದರ ಸ್ತ್ರೀಯ ಮೇಲೆ ಬಿತ್ತು. ಅವಳ ಕೂದಲು ಕಪ್ಪಾಗಿಯೂ ಆಕರ್ಷಕವಾಗಿಯೂ ಇತ್ತು. ಈ ಹೆಂಗಸು ನನ್ನ ಆದರ್ಶಕ್ಕೆ ಎಲ್ಲ ರೀತಿಯಿಂದಲೂ ಸರಿಹೋಗಬಹುದೆನ್ನಿಸಿತ್ತು. ಎಷ್ಟೋ ದಿನದಿಂದ ಇವಳೇ ನನ್ನ ಕನಸಿನಲ್ಲಿ ಬರುತ್ತಿರುವುದಾಗಿ ತೋರಿತು. ಇದನ್ನೇ ಮೊದಲ ನೋಟ ಎನ್ನುವುದು.

ನಾನು ಕಳೆದ ಐದು ವರ್ಷಗಳಿಂದ ಒಬ್ಬಂಟಿಗನಾಗಿದ್ದೆ. ಅವಳನ್ನು ನೋಡಿದ ತಕ್ಷಣ ನನ್ನ ಮನಸ್ಸಿನಲ್ಲಿ ಪುನಃ ಸಂಸಾರ ಮಾಡುವ ಆಸೆಯಾಯಿತು. ಪ್ರತಿಯೊಂದು ದೃಷ್ಟಿಯಿಂದಲೂ ನಾನು ಅವಳನ್ನು ನೋಡಿದೆ. ಅವಳೇನು ನವಯುವತಿ ಆಗಿರಲಿಲ್ಲ. ಆದರೂ ಸಹ ಅವಳ ಮುಖ ಮತ್ತು ಶರೀರ ಎಲ್ಲ ರೀತಿಯಿಂದಲೂ ಆಕರ್ಷಕವಾಗಿಯೂ ಸುಂದರವಾಗಿಯೂ ಇದ್ದುವು. ನನ್ನ ಆಸೆ ಹಾಗೂ ಅಂತಸ್ತಿಗೆ ಎಲ್ಲ ತರಹದಲ್ಲೂ ಅವಳು ತಕ್ಕವಳಾಗಿದ್ದಳು. ಎಷ್ಟೋ ದಿನದಿಂದ ನಾನು ಹುಡುಕುತ್ತಿದ್ದ ಸ್ತ್ರೀಯಂತೆ ಇದ್ದಳು.

ನನಗೆ ಆ ಬಾರಿನ ಮಾಲಕ ಮತ್ತು ಅವನ ಪತ್ನಿಯ ಪರಿಚಯವಿರಲಿಲ್ಲ. ಅಲ್ಲಿಗೆ ಹೆಚ್ಚಾಗಿ ಹೋಗಿ ಬರುವ ವಾಡಿಕೆ ನನಗಿರಲಿಲ್ಲ. ಆದ್ದರಿಂದ ಈ ಸುಂದರ ಸ್ತ್ರೀಯ ವಿಷಯವಾಗಿ ಅವರಿಂದ ತಿಳಿಯುವುದಕ್ಕಾಗುತ್ತಿರಲಿಲ್ಲ.

ನನ್ನ ದೃಷ್ಟಿ ಅವಳ ಮೇಲೆ ನೆಟ್ಟಿತ್ತು. ಅವಳು ಒಬ್ಬ ಹೊಂಬಣ್ಣದ ಕೂದಲಿನ ಹುಡುಗಿಯೊಂದಿಗೆ ಮಾತಿನಲ್ಲಿ ಮಗ್ನಳಾಗಿದ್ದಳು. ಸ್ವಲ್ಪ ಹೊತ್ತಿನವರೆಗೆ ಅವಳು ಆ ಹುಡುಗಿಯೊಂದಿಗೆ ಮಾತನಾಡುತ್ತಿದ್ದಳು. ನಂತರ ತನ್ನ ಗ್ಲಾಸನ್ನು ಖಾಲಿ ಮಾಡಿ ಬಾರಿನಿಂದ ಹೊರಟು ಹೋದಳು. ನಾನು ನನ್ನ ಮೇಜಿನಿಂದ ಎದ್ದೆ. ಅವಳು ಕುಳಿತಿದ್ದ ಸ್ಟೂಲಿನ ಮೇಲೆಯೇ ಹೋಗಿ ಕುಳಿತೆ. ಬಂಗಾರದ ಕೂದಲಿನ ಹುಡುಗಿಯು ಸಂಶಯ ದೃಷ್ಟಿಯಿಂದ ನನ್ನ ಕಡೆಗೆ ನೋಡತೊಡಗಿದಳು. ಬಹುಶಃ ಅವಳು ನನ್ನನ್ನು ನಿರುಪದ್ರವಿ ಮನುಷ್ಯನೆಂದು ತಿಳಿದಿರಬಹುದು. ಆದ್ದರಿಂದ ಅವಳು ನೆಮ್ಮದಿಯಿಂದ ಮದ್ಯವನ್ನು ಗುಟುಕರಿಸತೊಡಗಿದಳು.

ಅವಳು ನನ್ನ ಪಕ್ಕದ ಸ್ಟೂಲಿನ ಮೇಲೆ ಕುಳಿತಿದ್ದಳು. ನಾನು ಧೈರ್ಯದಿಂದ ಆ ಮಾತು ಈ ಮಾತು ಆಡಲು ಮೊದಲು ಮಾಡಿದೆ. ಅವಳು ಹಸನ್ಮುಖದಿಂದ ನನ್ನ ಜೊತೆ ಮಾತಿನಲ್ಲಿ ತೊಡಗಿದಳು. ಬಹಳ ಬೇಗ ನಾವಿಬ್ಬರೂ ಪರಸ್ಪರ ನಿಸ್ಸಂಕೋಚಿತರಾದೆವು. ನಾನು ಆ ಸ್ತ್ರೀಯ ವಿಷಯವಾಗಿ ಇವಳನ್ನು ಕೇಳಿದೆ.

"ನೀವು ಅವಳ ವಿಷಯ ಏಕೆ ಕೇಳುತ್ತಿದ್ದೀರಿ ?" ಅವಳು ಬೀರ್ ಗ್ಲಾಸನ್ನು ತುಟಿಗೆ ಸೇರಿಸುತ್ತಾ ಹೇಳಿದಳು, "ಅವಳ ಹೆಸರು ಪಾವುಲಾ, ಅವಳ ಪತಿ ಕೆಲವು ವರ್ಷಗಳ ಹಿಂದೆ ಒಂದು ದುರ್ಘಟನೆಯಲ್ಲಿ ಸತ್ತುಹೋದ. ಇದಕ್ಕಿಂತ ಹೆಚ್ಚಾಗಿ ನಾನು ಏನು ಹೇಳಲಾರೆ."

ಇಷ್ಟು ತಿಳಿದ ಮೇಲೆ ನನಗೆ ಸ್ವಲ್ಪ ನಂಬಿಕೆ ಬಂತು. ಅವಳ ಗಂಡ ಸತ್ತುಹೋಗಿದ್ದ. ಇದು ನನಗೆ ಎಲ್ಲದಕ್ಕಿಂತ ಸಂತಸದ ವಿಷಯವಾಗಿತ್ತು. ನನ್ನ ಹೆಂಡತಿಯೂ ಸತ್ತುಹೋಗಿದ್ದಳು. ನಾವಿಬ್ಬರೂ ಒಂದೇ ತರಹದ ವೇದನೆಗೆ ಗುರಿಯಾಗಿದ್ದೆವು. ಒಂದೇ ದೋಣಿಯ ಪ್ರಯಾಣಿಕರಾಗಿದ್ದೆವು. ಅದ್ದರಿಂದ ನಾನು ಮದುವೆಯಾಗಲು ಸೂಚಿಸಿದರೆ ಅವಳು ಒಪ್ಪುವ ಸಂಭವವಿದೆ ಎನಿಸಿತ್ತು.

ನಾನು ಪ್ರತಿನಿತ್ಯ ಬಾರ್‌ಗೆ ಹೋಗಲಾರಂಭಿಸಿದೆ. ನನಗೆ ಪಾವುಲಾಳ ಪರಿಚಯವಾಯಿತು. ಪ್ರಾರಂಭದಲ್ಲಿ ನನಗೆ ಯಾವ ಫಲವೂ ಸಿಗಲಿಲ್ಲ, ಆದರೆ ನಾನು ಆತುರದ ಮನುಷ್ಯನಲ್ಲ. ನಾನು ಧೈರ್ಯದಿಂದ ನನ್ನ ಪ್ರಯತ್ನದಲ್ಲಿದ್ದೆ. ಮೊದಲ ಬಾರಿಗೆ ಅವಳನ್ನು ಬೀರ್ ಕುಡಿಯಲು ಆಮಂತ್ರಿಸಿದಾಗ, ನನ್ನನ್ನು ಅವಳು ಒಬ್ಬ ಭಯಾನಕ ಮನುಷ್ಯನೆನ್ನುವ ರೀತಿಯಲ್ಲಿ ನೋಡಿದ್ದಳು. ಆದರೆ ಎಲ್ಲಿಯವರೆಗೆ? ಕ್ರಮೇಣ ಅವಳು ನನ್ನೊಂದಿಗೆ ಬೆರೆಯಲಾರಂಭಿಸಿದಳು.

ಒಂದು ಸಾಯಂಕಾಲ ಅವಳಿಲ್ಲದಿದ್ದಾಗ ಹೊಂಬಣ್ಣದ ಕೂದಲಿನ ಹುಡುಗಿ ನಸುನಗುತ್ತಾ ನನ್ನೊಡನೆ ಹೇಳಿದಳು: "ಅವಳು ನಿನಗೆ



ಹತ್ತಿರವಾಗುತ್ತಿರುವಳೆಂದು ತೋರುತ್ತಿದೆ."

ನಾನು ಒಪ್ಪಿಗೆಯಿಂದ ತಲೆಯುಲ್ಲಾಡಿಸಿ ಸುಮ್ಮನಾಗಿಬಿಟ್ಟೆ. ನನಗೆ ಇಬ್ಬರು ಮಕ್ಕಳಿದ್ದರು. ಇಲ್ಲಿಯುವರೆಗೆ ಅವರ ವಿಷಯವಾಗಿ ಪಾವ್ಲಾಳೊಂದಿಗೆ ನಾನು ಮಾತನಾಡಿರಲಿಲ್ಲ. ಮಕ್ಕಳ ವಿಷಯ ಕೇಳುತ್ತಿದ್ದಂತೆ ಅವಳು ನನ್ನಿಂದ ದೂರವಾಗಬಹುದೆಂದು ಭಾವಿಸಿದ್ದೆ.

ಕೊನೆಗೆ ಒಂದು ಸಾಯಂಕಾಲ ಪಾವ್ಲಾಗೆ ವಾಸ್ತವಿಕತೆಯ ಅರಿವುಂಟು ಮಾಡಲು ನಾನು ದೃಢ ನಿಶ್ಚಯ ಮಾಡಿದೆ. ನಾನು ಬಾರ್‌ಗೆ ಹೋದೆ. ಅವಳಿನ್ನೂ ಬಂದಿರಲಿಲ್ಲ. ನನ್ನ ಮನಸ್ಸು ಮಕ್ಕಳ ವಿಷಯದಿಂದ ಅಶಾಂತಿಗೊಂಡಿತ್ತು. ಒಂದು ವೇಳೆ ಅವಳು ಮಕ್ಕಳ ಕಾರಣದಿಂದ ನನ್ನ ಪ್ರಸ್ತಾಪವನ್ನು ತಳ್ಳಿ ಹಾಕಿದರೆ ಏನಾಗಬಹುದು? ಎಂದು ಯೋಚನೆಯಿಂದ ವ್ಯಾಕುಲಗೊಳ್ಳುತ್ತಿತ್ತು.

ಈ ವಿಚಾರಗಳ ಗೊಂದಲಕ್ಕೆ ಸಿಕ್ಕಿದ ನಾನು ಸ್ಟೂಲಿನ ಮೇಲೆ ಹೋಗಿ ಕುಳಿತೆ. ಹೊಂಬಣ್ಣದ ಕೂದಲಿನ ಹುಡುಗಿ ಇನ್ನೊಂದು ಸ್ಟೂಲಿನ ಮೇಲೆ ಕುಳಿತಿದ್ದಳು. ಅವಳು ಎರಡು–ಮೂರು ಬಾರಿ ನನ್ನ ಕಡೆಗೆ ನೋಡಿದಳು; ಆದರೆ ನಾನು ಅವಳ ಕಡೆ ಗಮನ ಕೊಡಲಿಲ್ಲ. ನನ್ನ ಅಶಾಂತಿ ಹಾಗು ಮೌನವನ್ನು ಗಮನಿಸಿ ಅವಳಿಗೆ ಚಿಂತೆಯಾಗಿರಬೇಕು. ಅವಳು ನನ್ನನ್ನು ಕೇಳದೆ ಬಿಡಲಿಲ್ಲ. "ಏನು ವಿಶೇಷ? ಏನೋ ಬೇಸರವಾಗಿರುವ ಹಾಗಿದೆ."

ನಾನು ಹೌದೆಂದು ತಲೆಯಾಡಿಸಿದೆ. ಅವಳು ಕೇಳಿದಳು: "ಅದೇನು ಅಷ್ಟೊಂದು ಬೇಸರ?"

'ನಾನು ಈ ದಿನ ಪಾವ್ಲಾಳೊಂದಿಗೆ ಮದುವೆಯ ಪ್ರಸ್ತಾಪ ಮಾಡಬೇಕೆಂದಿದ್ದೇನೆ." "ಬಹಳ ಒಳ್ಳೆಯದು! ಆದರೆ ಇದರಲ್ಲಿ ಚಿಂತಿಸುವ ವಿಷಯವೇನಿದೆ?"– ಅವಳು ಆಶ್ಚರ್ಯ ಮತ್ತು ಸಂತೋಷದಿಂದ ಕೇಳಿದಳು.

"ಇದು ಸಾಮಾನ್ಯವಾದ ವಿಷಯವಲ್ಲ." ನಾನು ಉತ್ತರಿಸಿದೆ, "ಇದರಲ್ಲಿ ಒಂದು ತೊಡಕಿದೆ.'

"ಏನು?" ಆಕೆ ಮೂರ್ತಿವತ್ತಾಗಿ ಪ್ರಶ್ನಿಸಿದಳು.

'ನನಗೆ ಇಬ್ಬರು ಮಕ್ಕಳು ಇದ್ದಾರೆ' ನಾನು ಸ್ಪಷ್ಟಪಡಿಸಿದೆ.

ಅವಳು ಬೆಚ್ಚಿ ಕೇಳಿದಳು: "ಹಾಗಾದರೆ ನೀವು ಇಬ್ಬರು ಮಕ್ಕಳು ಮತ್ತು ಹೆಂಡತಿಯ ಜೊತೆ ಇರುವಿರಾ?"

"ಇಲ್ಲ, ನನ್ನ ಹೆಂಡತಿ ಐದು ವರ್ಷಗಳ ಹಿಂದೆಯೇ ಸತ್ತುಹೋದಳು."

"ಹಾಗಾದರೆ ಏನೂ ತೊಂದರೆ ಇಲ್ಲ, ನೀವು ಮದುವೆ ಪ್ರಸ್ತಾಪ ಮಾಡಬಹುದು. ಬಹುಶಃ ನೀವು ಮನಸ್ಸಿನ ವಿಷಯದಲ್ಲಿ ತರುಣರಲ್ಲ. ಇಲ್ಲದಿದ್ದರೆ, ಎರಡು ಮಕ್ಕಳಿಂದ ಈ ವಿಷಯದ ಮೇಲೆ ಯಾವ ಪ್ರಭಾವವೂ ಬೀಳುತ್ತಿರಲಿಲ್ಲ."

"ಹಾಗಾದರೆ ಅವಳು ಒಪ್ಪಬಹುದೆಂದು ನಿನ್ನ ಭಾವನೆಯೋ"? ನಾನು ಆಶ್ಚರ್ಯದಿಂದ ಕೇಳಿದೆ.

"ಖಂಡಿತ, ಈ ವಿಷಯವಾಗಿ ಬೇಕಾದರೆ ಪಣವನ್ನೂ ಕಟ್ಟಬಲ್ಲೆ. ಆ ಹುಡುಗಿ ಮುಗುಳ್ನಗುತ್ತಾ ಹೇಳಿದಳು, 'ಈ ದಿನ ನೀವು ಅವಶ್ಯವಾಗಿ ನಿಮ್ಮ ಇಷ್ಟವನ್ನು ಅವಳಲ್ಲಿ ತಿಳಿಸಿ. ಈ ದಿನ ಸಾಯಂಕಾಲದ ಸಮಯವನ್ನು ಕಳೆದುಕೊಳ್ಳಬೇಡಿ."

"ಅವಳು ಎರಡು ಮಕ್ಕಳ... ನನಗೆ ನಂಬಿಕೆ ಇಲ್ಲ."

"ಇರಲಿ ಬಿಡಿ. ಅವಳ ವಿಷಯ ನನಗಿಂತ ಹೆಚ್ಚು ನಿಮಗೆ ತಿಳಿದಿಲ್ಲ."

"ಸರಿ. ಆದರೆ ನೀನು ಈ ವಿಷಯವನ್ನು ಇಷ್ಟು ನಂಬಿಕೆಯಿಂದ ಹೇಗೆ ಹೇಳುವೆ?' ಅವಳು ನನ್ನತ್ತ ಬಗ್ಗಿದಳು. ಅವಳ ಕೂದಲಿನ ಸುಗಂಧದ ಪರಿಮಳದ ಅಲೆ ತೇಲಿ ಬಂತು. ಅವಳು ಪಿಸು ಮಾತಿನಲ್ಲಿ ಹೇಳಿದಳು: "ಮಕ್ಕಳ ಯೋಚನೆ ಮಾಡಬೇಡಿ. ಅವಳೂ ಮಕ್ಕಳ ತಾಯಿ. ನಾನು ಅವಳ ಮಗಳು. ನನಗೆ ಒಬ್ಬ ತಂಗಿ ಮತ್ತು ಮೂರು ಜನ ಸಹೋದರರೂ ಇದ್ದಾರೆ.' ✿.

ಒಂದು ಇಂಗ್ಲೀಸ್ ಕಥೆಯ ಆಧಾರದಿಂದ

ಕೆ. ಚಂದ್ರಮೌಳಿ

ಐರಾವತದಲ್ಲಿ ಮಾನಭಯ

ಸುಂದರ ಬೆಳಗು. ಹಸಿರು ನೆಲ, ನೀಲಿ ಆಕಾಶ, ಎಲ್ಲಾ ಕಡೆಯೂ ಹಕ್ಕಿಗಳ ಚಿಲಿಪಿಲಿ, ತಂಗಾಳಿ ಬೀಸುತ್ತಿದೆ. ಎರಡು ದಿನಗಳ ನಿರಂತರ ಸೋನೆ ಮಳೆಯ ನಂತರ ಸೂರ್ಯ ಮೋಡದಿಂದ ಹೊರಗೆ ಮುಖ ಹಾಕಿದ್ದ. ಎರಡು ದಿನ ಏನೂ ಕೆಲಸವಿಲ್ಲದೆ, ಚಳಿ ಚಳೀ ಅಂತ ಅದೆಲ್ಲಿ ನಿದ್ದೆ ಹೊಡೆದಿದ್ದನೋ ಏನೋ ಆ ಸೂರ್ಯ, ಈಗ ಸುಸ್ತು ಪರಿಹಾರವಾದವನ ಹಾಗೆ ಲವಲವಿಕೆಯಿಂದ ಗೆಲುವಿನ ಮುಖದಲ್ಲಿ ಹೊರ ಬಂದಿದ್ದ. ಸೂರ್ಯನಿಗೆ ಹೇಗಾದರೂ ಅನಿಸಿರಲಿ, ಎರಡು ದಿನ ಕೆಲಸವಿಲ್ಲದೆ ನಿದ್ದೆ ಮಾಡಿ ಕಳೆದು ಈಗ ತಾನೇ ಎದ್ದು ಬಂದಿದ್ದ ಶಂಕರನಿಗಂತೂ ಲವಲವಿಕೆ ತುಂಬಿಬಂದಿತ್ತು. ಎಂಟೂವರೆಗೆ ಎದ್ದು ಕಣ್ಣುಜ್ಜಿಕೊಂಡು, ಹಾಗೆಯೇ 'ಐರಾವತ' ಬಂಗಲೆಯ ಮಹಡಿಯ ಅಂಗಳದಲ್ಲಿ ಬಿಸಿಲಿಗೆ ಮೈಯೊಡ್ಡಿ, ಬಿಸಿ ಬಿಸಿ ಕಾಫಿ ಹೀರುತ್ತಾ ಓಡಾಡುತ್ತಿದ್ದಾಗ ಶಂಕರನಿಗೆ ಇಡೀ ಪ್ರಪಂಚವೇ ಹೊಸದಾಗಿ ಕಾಣುತ್ತಿತ್ತು. ಹೊಸ ಚೈತನ್ಯ ತರುತ್ತಿತ್ತು. ಒಟ್ಟಿನಲ್ಲಿ ಕವಿ ಹೇಳುವಂತೆ ಜಗದಲ್ಲೆಲ್ಲ ಹರುಷವುಕ್ಕಿ, ಹೂವು ಬಳ್ಳಿ ನಗುತಲಿತ್ತು, ಮೊಲವು ಅಳಿಲು ಜಿಗಿದು ಹಾರುತಿತ್ತು. ಹೀಗೆ ಎಲ್ಲ ಕಡೆ-ಐರಾವತ ಬಂಗಲೆ, ಮುಂದಿನ ಹೂದೋಟ, ಅದರಾಚೆಯ ಕಾಫೀ ತೋಟ ಎಲ್ಲೆಲ್ಲೂ ಸೌಂದರ್ಯ ಹೊರ ಹೊಮ್ಮುತ್ತಿತ್ತು. ಆ ಇಡೀ ದೃಶ್ಯದಲ್ಲಿನ ಒಂದೇ ಒಂದು ಕಪ್ಪು ಬೊಟ್ಟೆಂದರೆ ಇದನ್ನೆಲ್ಲಾ ನೋಡುತ್ತಾ ನಿಂತಿದ್ದ ಶಂಕರ.



ಇಂತಹ ಸನ್ನಿವೇಶದಲ್ಲಿ ಯಾರಾದರೂ ಮೈಮರೆತರೆ ಆಶ್ಚರ್ಯವೇನಿಲ್ಲ. ಆದರೆ ಶಂಕರ

ಮೈ ಮರೆತದ್ದು ಇದೆಲ್ಲವನ್ನೂ ನೋಡಿ ಅಲ್ಲ, ಹೂದೋಟದಲ್ಲಿ ಇತರ ಗುಲಾಬಿಗಳಂತೆ ಕಳೆ ಕಳೆಯಾಗಿ ಕಾಣುತ್ತಿದ್ದ ಹುಡುಗಿಯನ್ನು ನೋಡಿ. ಅವಳು ಸಹ ಪ್ರತಿಯೊಂದು ಗುಲಾಬಿಯನ್ನೂ ಮುಟ್ಟಿ ನೋಡಿ, ಮೆಚ್ಚುಗೆ ತೋರಿಸುತ್ತಿದ್ದಂತೆ ಕಂಡಿತು. ಯಾರಿವಳು, ಈ ಹೊಸಬಳು ಐರಾವತಕ್ಕೆ ಎಲ್ಲಿಂದ ಬಂದಳೆಂದು ಶಂಕರನಿಗೆ ತಕ್ಷಣ ಹೊಳೆಯಲಿಲ್ಲ. ಕೈಯಲ್ಲಿನ ಕಾಫಿ ಅಷ್ಟು ಚೇತೋಹಾರಿಯಾಗಿಲ್ಲದಿದ್ದರೆ ಅವನಿಗೆ ಹೊಳೆಯುತ್ತಲೂ ಇರಲಿಲ್ಲವೇನೋ. ಎರಡು ಸಲ ಕಾಫಿ ಹೀರಿದಾಕ್ಷಣ, ಚಿಕ್ಕಪ್ಪ ಚಂದ್ರಣ್ಣನ ಹೆಂಡತಿ ಮಕ್ಕಳೆಲ್ಲಾ ರಾತ್ರಿ 'ಐರಾವತ'ಕ್ಕೆ ಬರುತ್ತಾರೆಂದು ಕೇಳಿದ್ದ ಸುದ್ದಿ ನೆನಪಾಯಿತು. ಅಂದರೆ ರಾತ್ರಿ ಅವರೆಲ್ಲಾ ಬಂದಿರಬೇಕು. ಇವಳು ಗೀತಳ ಸ್ನೇಹಿತೆ ಯಾರಾದರೂ ಆಗಿರಬೇಕು. ಇಂತಹ ಚೆಂದೊಳ್ಳೆ ಹೆಣ್ಣನ್ನು ಸ್ನೇಹಿತೆಯಾಗಿ ಮಾಡಿಕೊಂಡಿದ್ದಕ್ಕೆ ಗೀತಳ ಬಗ್ಗೆಯೂ ಶಂಕರನಿಗೆ ಹೆಮ್ಮೆಯೆನಿಸಿತು. ಸ್ನೇಹಿತೆ ಎಂದು ಅವಳ ಜೊತೆ ಗೀತಳೂ ಎಂಟೂವರೆಗೇ ಹೂದೋಟದಲ್ಲಿ ತಿರುಗಾಡಲು ಹೊರಟಿರಲಿಲ್ಲ. ಆ ನಿಮಿಷದಲ್ಲಿ ಇಡೀ ಪ್ರಕೃತಿಯೇ ಸುಂದರವೆನಿಸಿದಾಗ, ಪ್ರಪಂಚವೇ ಹೊಸದಾಗಿ ಕಾಣುತ್ತಿದ್ದಾಗ, ಆ ಚೆಂದೊಳ್ಳೆ ಹೆಣ್ಣೊಂದೇ ತೋಟದಲ್ಲಿ ತಿರುಗಾಡುತ್ತಿರುವುದನ್ನು ನೋಡಿ ಶಂಕರನಿಗೆ ಒಮ್ಮೆಲೇ ಒಂದು ಯೋಚನೆ ಹೊಳೆಯಿತು.




ಶಂಕರನಿಗೆ ಯೋಚನೆ ಬರುವುದೇ ಕಡಿಮೆ, ಕೆಲಸ ಕೆಟ್ಟ ಮೇಲೆ ಅಯ್ಯೋ ಹೀಗಾಯಿತು ಎಂದು ಯೋಚಿಸುವುದೇ ಹೊರತು, ಕೆಲಸದ ಮೊದಲು ಯೋಚನೆ ಬಂದದ್ದೇ ಇಲ್ಲವೆನ್ನಬೇಕು. ಹಾಗೇನಾದರೂ ಯೋಚನೆ ಬಂದರೆ ತಕ್ಷಣ ಕೆಲಸ ಆಗೇಹೋಯಿತೆನ್ನಬೇಕು, ಈಗಲೂ ಅಷ್ಟೆ, ಶಂಕರ ಕಾಫಿ ಬಟ್ಟಲನ್ನು ಅಲ್ಲೇ ಕುಕ್ಕಿ, ಒಂದೇ ನಿಮಿಷದಲ್ಲಿ ಮಹಡಿಯಿಂದಿಳಿದು, ಎರಡೇ ನೆಗೆತದಲ್ಲಿ ಹೂದೋಟದಲ್ಲಿ ಆ ಹುಡುಗಿಯ ಹಿಂದೆ ಗುಲಾಬಿ ಹೂವನ್ನು ಕೈಯಲ್ಲಿ ಹಿಡಿದು ನಿಂತಿದ್ದ. ಇನ್ನೇನು ಕೊನೆಯ ಮುಹೂರ್ತವಾಗಿ ಅವಳ ಜಡೆಯನ್ನು ಎಡಗೈಯಲ್ಲಿ ಹಿಡಿದು ಬಲಗೈಯಲ್ಲಿ ಅವಳಿಗೆ ಗುಲಾಬಿ-ಹೂ ಮುಡಿಸುವುದೊಂದೇ ಬಾಕಿ. ಆದರೆ ಆ ಸಮಯಕ್ಕೆ ಸರಿಯಾಗಿ ಶಂಕರನ ಕೈ ನಡುಗಹತ್ತಿತು, ಎದೆ ಡಬಡಬ ಬಡಿಯಲು ಶುರುವಾಯಿತು. ಅದೇನು ಒಂದೇ ನೆಗೆತಕ್ಕೆ ಓಡಿ ಬಂದುದರ ಪ್ರಭಾವವೋ ಅಥವಾ ಬಾಲ್ಯದಿಂದಲೂ ಈ ಘನಾಂದಾರಿ ಕೆಲಸ ಮಾಡಬೇಕೆಂದುಕೊಂಡಿದ್ದು ಈಗ ಇದ್ದಕ್ಕಿದ್ದ ಹಾಗೆ ಹೊಟ್ಟೆಯಲ್ಲಿ ಚಳಿ–ನಡುಕ ಶುರುವಾಯಿತೋ ಗೊತ್ತಾಗಲಿಲ್ಲ. ಶಂಕರನಿಗೆ ಏಕೆ, ಎಷ್ಟೋ ಜನಕ್ಕೆ ಹೀಗೆ ಕೊನೆಯ ಗಳಿಗೆಯಲ್ಲಿ ಹೊಟ್ಟೆಯಲ್ಲಿ ನಡುಕ ಶುರುವಾಗಿ ಬಿಡುತ್ತದೆ. ಮೊದಲ ಸಲ ನಾಟಕದಲ್ಲಿ ಪಾತ್ರವಹಿಸಲು ನಿಂತಾಗ ಮಾತು ಮರೆತ ಹಾಗೆ, ಕೆಲಸಕ್ಕೆ ಇಂಟರ್‌ವ್ಯೂಗೆ ಹೋದಾಗ ಹೆಸರೇ ಮರೆತಂತೆ... ಎಲ್ಲ ಕಡೆಯೂ ಈ ಅನುಭವ ಸಾಮಾನ್ಯ. ಎಷ್ಟೋ ಹುಡುಗಿಯರನ್ನು ಹಿಂಬಾಲಿಸಿ, ಬೈಸಿಕೊಂಡು ಬಂದಿದ್ದ ಶಂಕರನಿಗೆ ಈಗ ಹುಡುಗಿ ಎದುರಿಗೇ ನಿಂತಿದ್ದು ಅವಳ ತಲೆಗೆ ಗುಲಾಬಿ ಮುಡಿಸುವ ಹೊತ್ತಿಗೆ ಕೈ ನಡುಕ ಶುರುವಾಯಿತು, ಇವನ [illegible]-


ಏನಿಂದಲೋ, ಎದೆ ಬಡಿತದಿಂದಲೋ ಏನೋ ಮಾಲ— ಅದೇ ಗೀತಳ ಸ್ನೇಹಿತೆಯ ಹೆಸರು— ತಟಕ್ಕನೆ ತಿರುಗಿದಳು. ಅವಳು ಹೀಗೆ ರಭಸದಿಂದ ತಿರುಗಬಹುದೆಂದು ನಿರೀಕ್ಷಿಸದಿದ್ದ ಶಂಕರನ ಕೈಯಲ್ಲಿದ್ದ ಗುಲಾಬಿ ತೊಟ್ಟು ಅವಳ ಮೂಗಿಗೆ ಬಡಿಯಿತು. ಮಾಲ ಬೆಚ್ಚಿಬಿದ್ದು, ಮೂಗನ್ನು ಒಂದು ಕೈಲಿ ಹಿಡಿದು ಇನ್ನೊಂದು ಕೈಯಲ್ಲಿ ಶಂಕರನ ಕೆನ್ನೆಗೆ ಛಳೀರೆನಿಸಿ ಅಲ್ಲಿ ನಿಲ್ಲದೆ ಓಡಿದಳು.

ಮಾಲ ಮುಂದಿನ ದಿನವಿಡೀ ಕನ್ನಡಿಯ ಮುಂದೆ ನಿಂತು ತನ್ನ ಮೂಗು ನೋಡಿಕೊಳ್ಳುತ್ತಿದ್ದಾಗ ಶಂಕರನನ್ನು ಅದಿನ್ನೆಷ್ಟು ಶಪಿಸಿದಳು ಅನ್ನುವುದು ಅವಳಿಗೆ ಮತ್ತು ಗೀತಳಿಗೇ ಗೊತ್ತು. ಮೂಗಿನ ಮೇಲೆ ಹೆಚ್ಚೇನೂ ಗಾಯವಾಗಿರಲಿಲ್ಲ, ಒಂದು ಸಣ್ಣ ಗೀರು ಎಳೆದ ಹಾಗೆ ಆಗಿ ಅಲ್ಲಲ್ಲಿ ರಕ್ತ ಕೆಂಪಗೆ ಕಾಣುತ್ತಿತ್ತು. ಗಾಯ ದೇಹದ ಯಾವ ಭಾಗದಲ್ಲಾದರೂ ಪರವಾಗಿಲ್ಲ, ಆದರೆ ಮುಖದ ಮೇಲೆ ಅದರಲ್ಲೂ ಮೂಗಿನ ಮೇಲಾಗುವುದು, ಅದರಲ್ಲೂ ಹೆಂಗಸಿನ ಮೂಗಿನ ಮೇಲಾಗುವುದು ತೀರಾ ದುರದೃಷ್ಟ. ಮಾಲ ಹೆಣ್ಣೇ ಅಲ್ಲದೆ ಒಂದು ಸುಂದರ ಹೆಣ್ಣಾಗಿದ್ದು, ಇಂತಹ ಬೆಡಗಿನ ಸಿಂಗಾರಿಗೆ ಮೂಗಿನ ಮೇಲೆ ಗೆರೆ ಎಳೆದರೆ ಚಿಕ್ಕಗೆ ಬರೆ ಎಳೆದಂತೆಯೇ ಸರಿ. ಗೀತ ತನ್ನ ಸ್ನೇಹಿತೆಯ ದುಃಖದಲ್ಲಿ ಭಾಗಿಯಾಗಿ ಶಂಕರನ ಸಾವಿರದೊಂದು ಮೊದಲ ನೋಟದ ಪ್ರೀತಿಯ ಬಗ್ಗೆ ತಿರಸ್ಕಾರದಿಂದಲೇ ಮಾತಾಡಿದಾಗ, ಮಾಲಳಿಗೆ ಶಂಕರನ ಮೇಲಿನ ಕೋಪ ಭುಗ್ಗೆಂದು ಉಕ್ಕಿತು.

ಈ ಕಡೆ ಶಂಕರನಿಗೆ ತನ್ನ ಯೋಜನೆ ಸಫಲವಾಗದಿದ್ದಕ್ಕೆ ದುಃಖವಾಗಿತ್ತು. ಈ ದುಃಖದಲ್ಲಿ ಅವನು ತನ್ನ ಕೆನ್ನೆಗೆ ಬಿದ್ದ ಏಟನ್ನೂ ಮರೆತಿದ್ದನು. ಆ ದಿನವಿಡೀ ಕಾಫಿ ಹೀರಿ ಯೋಚಿಸುವುದರಲ್ಲೇ ಕಳೆದರೂ ಅವನಿಗೆ ಮಾಲಳನ್ನು ತನ್ನ ಕಡೆ ಒಲಿಸಿಕೊಳ್ಳುವ ಯಾವ ಉಪಾಯವೂ ಹೊಳೆಯಲಿಲ್ಲ. ಅಂದು ಸಂಜೆ ಸುಮಾರು ಇಪ್ಪತ್ತನೆಯ ಲೋಟ ಕಾಫಿಗೆ ಹೇಳಿಕಳಿಸಿದಾಗ ಅಡಿಗೆಯ ಸುಬ್ಬುಭಟ್ಟರಿಗೆ ಏನೋ ಅನುಮಾನ ಬಂದು, ಕಾಫಿಯನ್ನು ಆಳಿನ ಕೈಯಲ್ಲಿ ಕಳಿಸದೇ ತಾವೇ ಹೊತ್ತು ತಂದರು. ಸುಬ್ಬಾಭಟ್ಟರನ್ನು ನೋಡಿಯೇ ಶಂಕರನಿಗೆ ಜೀವ ಬಂದ ಹಾಗಾಯಿತು. 'ಐರಾವತ'ದಲ್ಲಿದ್ದುಕೊಂಡು ಕಷ್ಟದಲ್ಲಿದ್ದಾಗ ಭಟ್ಟರನ್ನು ನೆನಸಿಕೊಳ್ಳದಿದ್ದ ತನ್ನ ಮನಸ್ಸಿಗೆ ಅದಿನ್ನೆಷ್ಟು ಮಂಕು ಬಡಿದಿದೆ ಎಂದು ತನ್ನನ್ನು ತಾನೇ ಬೈದುಕೊಂಡ. ಭಟ್ಟರಿಗೆ ಬೆಳಗಿನ ಕಥೆಯನ್ನು ಹೇಳಿ ದುಃಖ ತೋಡಿಕೊಳ್ಳುವುದು ಐದು ನಿಮಿಷದ ಕೆಲಸವಾಗಿತ್ತು. ಭಟ್ಟರು ಎರಡು ನಿಮಿಷ ಯೋಚನೆ ಮಾಡಿ ಗಂಟಲು ಸರಿಮಾಡಿಕೊಂಡು ಕೆಮ್ಮುತ್ತಾ ಹೇಳಿದರು: "ಪರಿಸ್ಥಿತಿ ಸಮಾಧಾನಕ್ಕೆ ಬಂದು, ಪ್ರೇಮಕ್ಕೆ ತಿರುಗಬೇಕಾದರೆ ಈಗಿರುವುದು ಒಂದೇ ದಾರಿ. ಆ ಹುಡುಗಿಯನ್ನು ಮಾನಭಯ ಅಥವಾ ಪ್ರಾಣಭಯದಿಂದ ರಕ್ಷಿಸಿ, ಅವಳಿಗೆ ನಿಮ್ಮಲ್ಲಿರುವ ಅಭಿಪ್ರಾಯ ಬದಲಾಯಿಸಿ ನಿಮಗೆ ಅವಳು ಆಭಾರಿಯಾಗಿರುವಂತೆ ಮಾಡುವುದು..." ಅಷ್ಟರಲ್ಲೇ ಹೊರಗೆ ಯಾರೋ ಭಟ್ಟರನ್ನು ಕೂಗುತ್ತಿರುವುದು ಕೇಳಿಸಿತು. ಭಟ್ಟರು ಅವಸರದಲ್ಲಿ, "ಸ್ವಾಮಿ ಇನ್ನು ಬರ್ತೇನೆ. ನಾಳೆ ನೋಡೋಣ, ಈಗ ನಿದ್ದೆ ಮಾಡಿ," ಎಂದು



ಹೊರಟೇಬಿಟ್ಟರು. ಶಂಕರನಿಗೆ ಅಷ್ಟೇ ಸಾಕಾಗಿತ್ತು— ಒಂದು ಸುಳಿವು, ಒಂದು ಕಿಡಿ ಬೇಕು. ಬೆರಳು ತೋರಿಸಿದರೆ ಅಂಗೈ ನುಂಗುವ ಸ್ವಭಾವ ಶಂಕರನದು, ಭಟ್ಟರು ಹೋಗಿದ್ದೇ ತಡ ತನ್ನ ಮುಂದಿನ ಕಾರ್ಯಕ್ರಮದ ಬಗ್ಗೆ ಯೋಚಿಸತೊಡಗಿದ. 'ಐರಾವತ'ದ ಮಲ್ಲೇಗೌಡರ ಮನೆಗೆ ಬಂದವರಿಗೆ ಮಾನಭಯ ! ಖಂಡಿತಾ ಸಾಧ್ಯವಿಲ್ಲ. ಅಂತಹ ಸಾಹಸ ಮಾಡಲು ಇಡೀ 'ಐರಾವತ'ವೇ ಏಕೆ ಸುತ್ತುಮುತ್ತಲಿನ ತೋಟಗಳಲ್ಲೂ ಯಾವ ನರಪಿಳ್ಳೆಗೂ ಧೈರ್ಯವಿಲ್ಲ, ಇನ್ನು ಪ್ರಾಣಭಯ. ಸಾಮಾನ್ಯವಾಗಿ ತೋಟದಲ್ಲಿ ಎಲ್ಲಾ ಕಡೆಯೂ ಕೂಲಿ ಕೆಲಸದವರು ಓಡಾಡುತ್ತಲೇ ಇರುವುದರಿಂದ ಕಾಡು ಪ್ರಾಣಿಗಳು ತೋಟದೊಳಗೆ ನುಗ್ಗುವ ಸಂಭವ ಕಡಿಮೆ. ಹಾಗಾದರೆ...ಹಾಗಾದರೆ...ಮಾಲಳ ಪ್ರೀತಿ ತನ್ನ ಕಡೆ ತಿರುಗುವುದು? ಓ ಸಿಕ್ಕಿತು. ಇವತ್ತು ಮಧ್ಯಾಹ್ನ ತಾನೇ ಗೀತ ಮಾಲಳಿಗೆ ಈಜು ಕಲಿಸುವುದಾಗಿ ಹೇಳುತ್ತಿದ್ದಳು. ಐರಾವತದ ಕೊಳವೇನೋ ದೊಡ್ಡದಾಗಿ ಚೆನ್ನಾಗಿದೆ. ಆದರೆ ಈಜು ಕಲಿತ ಹೊಸತರಲ್ಲಿ— ಹೊಸ ಅಗಸ ಗೋಣಿ ಎತ್ತಿ ಒಗೆಯುವಂತೆ-



ಹುಮ್ಮಸ್ಸಿನಿಂದ ಕೊಳದಲ್ಲಿ ದೂರ ದೂರ ಈಜುವುದು, ಅಥವಾ ಒಬ್ಬರೇ ಈಜಲು ಹೋಗುವುದು ಸ್ವಾಭಾವಿಕ. ಇಂತಹ ಸಮಯದಲ್ಲಿ... ಶಂಕರನ ಯೋಚನೆ ರೂಪುಗೊಂಡಿತು.

ಮಾರನೆಯ ದಿನದಿಂದ ಗೀತ, ಮಾಲರ ಚಲನವಲನಗಳನ್ನೇ ಕಾಯುತ್ತಿದ್ದು, ಅವರು ಕೊಳಕ್ಕೆ ಹೊರಟಾಗಲೆಲ್ಲಾ ತಾನೂ ಅವರಿಗರಿವಿಲ್ಲದಂತೆ ಅವರ ಹಿಂದೆಯೇ ಹೋಗಿ ಮರಗಳ ಹಿಂದೆ ಅವಿತು ನಿಂತುಕೊಂಡು ಹೊಂಚು ಹಾಕುತ್ತಿದ್ದ. ಬಲು ಬೇಗನೆ ಈಜು ಕಲಿತು ಅರೆಬೆತ್ತಲೆಯಾಗಿ ಆರಾಮವಾಗಿ ನೀರಿನಲ್ಲಿ ಚೆಲ್ಲಾಟವಾಡುತ್ತಿದ್ದ ಮಾಲಳನ್ನು ನೋಡಿ ಶಂಕರನಿಗೆ ತಾನೂ ನೀರಿನಲ್ಲಿ ಅವಳ ಪಕ್ಕ ದುಮ್ಮಿಕ್ಕಲೇ ಎನಿಸುತ್ತಿತ್ತು. ಆದರೆ ಅಂತಹ ಅಚಾತುರ್ಯದ ಬಗ್ಗೆ ಹೆದರಿ ತನ್ನ ಸದವಕಾಶಕ್ಕಾಗಿ ಕ್ಷಣಕ್ಷಣವೂ ಹೊಂಚು ಹಾಕುತ್ತಲೇ ಇದ್ದ. ಮೊದಲ ಎರಡು ಮೂರು ದಿನಗಳಲ್ಲಿ ಮಾಲ ಈಜಲು ಬರದೆ ಮುಳುಗುತ್ತಾಳೋ ಅನ್ನುವಾಗ ಗೀತ ಅಲ್ಲೇ ಇದ್ದು ಅವಳನ್ನು ಮೇಲೆತ್ತುತ್ತಿದ್ದಳು. ಈ ಮಧ್ಯೆ ಹುಡುಗಿಯರು ಈಜುವುದನ್ನು ನೋಡಲು ಶಂಕರ ದಿನವೂ ಹೋಗುತ್ತಿದ್ದಾನೆಂದು ಅನೇಕರಿಗೆ ಗೊತ್ತಾಗಿ ಬಿಟ್ಟಿತು. ಮಾಲ, ಗೀತರಿಗಂತೂ ಕೋಪಕ್ಕಿಂತಲೂ ಶಂಕರನನ್ನು ಕಂಡು ತಮಾಷೆ ಹೆಚ್ಚಾಯಿತು. "ಕೃಷ್ಣನಿಗೆ ಸಖಿಯರ ಬಟ್ಟೆ ಕದಿಯುವ ಧೈರ್ಯ ಬಂದಿಲ್ಲ ತಾನೇ!" ಎಂದು ಆಗಾಗ್ಗೆ ಅವರು ಹಾಸ್ಯ ಮಾಡುತ್ತಿದ್ದರು. ಆದರೆ ಶಂಕರ ಮಾತ್ರ ತಾನು ಹಿಡಿದ ಪಟ್ಟು ಬಿಡಲಿಲ್ಲ. ತನಗೆ ಬೇಕಾದ ಅವಕಾಶ ಬಂದೇ ಬರುತ್ತದೆಂದು ಅವನಿಗೆ ತಿಳಿದಂತಿತ್ತು. ಅಂತೆಯೇ ನಾಲ್ಕು ದಿನಗಳ ನಂತರ ಮಾಲ ಒಬ್ಬಳೇ ಕೊಳದ ಕಡೆ ಹೋಗುವುದನ್ನು ನೋಡಿ ಶಂಕರ ಒಂದೇ ನೆಗೆತಕ್ಕೆ ಹಾರಿ ಅವಳನ್ನು ಹಿಂಬಾಲಿಸಿದ. ಅವಳು ಕೊಳದ ಹತ್ತಿರ ಒಬ್ಬಳೇ ಬಟ್ಟೆ ಬದಲಾಯಿಸಿ, ಈಜುವ ಬಟ್ಟೆಯಲ್ಲಿ ನೀರಿಗೆ ಹಾರಿದಾಗಲಂತೂ ಶಂಕರನ ಎದೆ ಡವಡವ ಎಂದು ಬಡಿಯುತ್ತಿತ್ತು. ಈಜುವ ಹುಮ್ಮಸ್ಸಿನಲ್ಲಿ ಮಾಲ ಕೊಳದ ಬಲ ತುದಿಗೆ, ಜೊಂಡು ಬೆಳೆದಿರುವ ಕಡೆಗೆ ಹೋದಾಗಲಂತೂ

ಶಂಕರ ಮರದ ಹಿಂದಿನಿಂದ ಬಂದು ಎರಡು ಹೆಜ್ಜೆ ಮುಂದಿಟ್ಟ. ಮುಂದಿನ ನಿಮಿಷದಲ್ಲಿ ಅವಳ ಕಾಲು ಜೊಂಡಿಗೆ ಸಿಕ್ಕಿಕೊಂಡಿರಬೇಕು. ಮಾಲಳಿಂದ "ಆ ಆ್ಹ" ಎಂಬ ಕೂಗು ಕೇಳಿದ್ದೇ ತಡ ಶಂಕರ ಕೊಳದ ನೀರಿಗೆ ಹಾರಿದ ತಾನುಟ್ಟಿದ್ದ ಬಟ್ಟೆಯಲ್ಲೇ. ಅದೇ ನಿಮಿಷ ತನ್ನ ಪಕ್ಕದಲ್ಲೇ ನೀರಿಗೆ ಹಾರಿ ತನಗಿಂತ ವೇಗವಾಗಿ ಈಜಿದವರಾರು ಎಂಬುದನ್ನೂ ಶಂಕರ ನೋಡಲಿಲ್ಲ. ತಾನು ಜೊಂಡಿರುವ ಸ್ಥಳಕ್ಕೆ ಹೋಗುವುದರೊಳಗೆ ಗೀತ ಮಾಲಳನ್ನು ದಡಕ್ಕೆ ತಂದಿದ್ದಳು. ಶಂಕರನೂ ದಡಕ್ಕೆ ಬಂದು ಏದುತ್ತಾ ಏನಾಯಿತು ಏನಾಯಿತು ಅಂದಾಗ ಗೀತ, ಮಾಲ ಇಬ್ಬರೂ ಶಂಕರನನ್ನೇ ತಿನ್ನುವ ಹಾಗೆ ನೋಡಹತ್ತಿದರು. ಮಾಲಳನ್ನು ಮೊದಲೇ ಈಜಲು ಕಳಿಸಿ ತಾನು ಹಿಂದೆಯೇ ಬಂದು ನಾಟಕ ನೋಡುತ್ತಿದ್ದ ಗೀತಳಿಗೂ ಶಂಕರನ ಮೇಲೆ ಕೋಪ ಬಂದಿತ್ತು. ಇಬ್ಬರೂ ಏನೇನೋ ಬೈದುಕೊಳ್ಳುತ್ತಾ, ಪ್ಯಾಂಟು ಶರಟೆಲ್ಲಾ ಒದ್ದೆಯಾಗಿ ಬೆಪ್ಪನಂತೆ ಕಾಣುತ್ತಿದ್ದ ಶಂಕರನನ್ನು ಹೀನಾಯ ಮಾಡುತ್ತಾ 'ಐರಾವತ'ದ ಕಡೆ ನಡೆದೇಬಿಟ್ಟರು.

ಶಂಕರ ತನ್ನ ಸ್ಥಿತಿಗೆ ತಾನೇ ಮರುಕಪಡುತ್ತಾ ಬಟ್ಟೆ ಬದಲಾಯಿಸಿಕೊಂಡು ಕಾಫಿಗೆ ಕಾಯುತ್ತಿರುವಾಗ ಅವನಿಗೆ ಕರೆ ಬಂದಿತ್ತು 'ಐರಾವತ'ದ ಮುಳ್ಳೇಗೌಡರಿಂದ! 'ಐರಾವತ'ದ ಮುಳ್ಳೇಗೌಡರು ಯಾರಿಗಾದರೂ ಕರೆ ಕಳಿಸುತ್ತಾರೆಂದರೆ ಏನೋ ಗಹನವಾದ ವಿಷಯವೇ ಇರಬೇಕು. ಅವರ ಕೋಣೆ ರಾಜರ ದರ್ಬಾರದಂತೆ ತುಂಬಿತ್ತು. ಎಲ್ಲರಿಗಿಂತಲೂ ಮುಂದೆ ಗೀತಮಾಲ ಮುಳ್ಳೇಗೌಡರ ಹತ್ತಿರವೇ ಕುಳಿತಿದ್ದರು. ಎಲ್ಲರೂ ನಿಶ್ಯಬ್ದವಾಗಿದ್ದರು. ಶಂಕರ ಬಂದದ್ದೇ ತಡ ಮುಳ್ಳೇಗೌಡರು ಸಿಂಹಗರ್ಜನೆಯಿಂದ, "ಇಲ್ಲಿ ಬಾ," ಅಂದು ಅವನನ್ನು ತಮ್ಮ ಮುಂದೆ ನಿಲ್ಲಿಸಿಕೊಂಡರು. ಕೋರ್ಟಿನಲ್ಲಿ ನಡೆಯುವ ವಿಚಾರಣೆಗಿಂತಲೂ ಗಭೀರವಾಗಿತ್ತು ಮುಳ್ಳೇಗೌಡರ ವಿಚಾರಣೆ. ಕೊನೆಗೆ ಮುಳ್ಳೇಗೌಡರ ತೀರ್ಪನ್ನು ಕೊಡುತ್ತಾ ಪರಪೂರಿನಿಂದ ಬಂದಿರುವ ಚೆಂದೊಳ್ಳಿ ಹೆಣ್ಣು ಮಾಲಳ ಮಾನಕ್ಕೆ ಭಯವುಂಟುಮಾಡಿದ್ದರಿಂದ ಶಂಕರನಿಗೆ 'ಐರಾವತ'ದಿಂದ ಮೂರು ತಿಂಗಳ 'ಉಚ್ಚಾಟನೆ' ಎಂದಾಗ ಶಂಕರ ಅಲ್ಲೇ ಕುಸಿದುಬಿಟ್ಟ. ಎಲ್ಲರೂ ತನ್ನನ್ನು ತಪ್ಪು ಅರ್ಥ ಮಾಡಿಕೊಂಡರೆಂದೋ, ಸುಬ್ಬಾಭಟ್ಟರ ಊಟ ಮೂರು ತಿಂಗಳು ತಪ್ಪಿತೆಂದೋ, ಅಥವಾ ತನ್ನ ಇನ್ನೊಂದು 'ಮೊದಲ ನೋಟದ ಪ್ರೀತಿ' ಮೊದಲ ನೋಟಕ್ಕೆ ಮುಗಿಯಿತೆಂದೋ ಏನೋ ಅಂತೂ ಶಂಕರ ದುಃಖಪಟ್ಟ. ಶಂಕರನ ದುಃಖಕ್ಕೆ ಕಾರಣ ಅವನಿಗೇ ಸರಿಯಾಗಿ ಗೊತ್ತಿಲ್ಲದ್ದರಿಂದ ಅದು ನಮಗೆ ಅರ್ಥವಾಗುವುದು ಇನ್ನೂ ಕಷ್ಟ. ಅದರ ಗೊಡವೆಯೂ ನಮಗೆ ಸದ್ಯಕ್ಕೆ ಬೇಕಿಲ್ಲ. ✡



"ನನ್ನ ಜೀವಮಾನದಲ್ಲಿ ಬರಹಕ್ಕೆ ಪ್ರಾಮುಖ್ಯ ನೀಡಬೇಕೆಂದಿದ್ದೇನೆ," ಎಂದು ಸಿಂಕ್ಲೇರ್ ಲೂಯಿಸ್, ಪ್ರೊ. ಚೌನ್ಸಿ ಟಿಂಕರ್‌ಗೆ ಹೇಳಿದ.

"ಇದರಿಂದಾಗಿ ನೀನು ಉಪವಾಸ ಬೀಳಬೇಕಾಗುತ್ತದೆ," ಎಂದ ಪ್ರೊ. ಟಿಂಕರ್'

"ಉಪವಾಸ ಬಿದ್ದರೂ ಪರವಾಯಿಲ್ಲ," ಎಂದ ದೃಢಮನಸ್ಕ ಲೂಯಿಸ್.

"ಹಾಗಾದರೆ ನೀನು ಯಶಸ್ವಿಯಾಗುವೆ," ಎಂದ ಟಿಂಕರ್.

ನಕ್ಷೆಗಳಿಗೆ ಬಣ್ಣ ಬಳಿಯುವ ಸಮಸ್ಯೆ ಎಂಬ ಹೆಸರಿನಿಂದ ಗಣಿತವಿದರಿಗೆ ಕ್ರಿ. ಶ. ಸು. ೧೮೫೦ ರಿಂದ ಸವಾಲಾಗಿ ನಿಂತಿದ್ದ ಚತುರ್ವರ್ಣ ಸಮಸ್ಯೆಗೆ ೧೯೭೬ ರಲ್ಲಿ ನಿಖರ ಗಣಿತಸಾಧನೆ ಒದಗಿದೆ. ಪ್ರಸಕ್ತ ಶತಮಾನದ ಮಹಾ ಗಣಿತಸಿದ್ಧಿಗಳ ಪೈಕಿ ಇದೂ ಒಂದು. ಸಮಸ್ಯೆ ಏನು ಮತ್ತು ಅದಕ್ಕೆ ಸಾಧನೆ ಹೇಗೆ ದೊರೆಯಿತು ಎಂಬುದನ್ನು ಸ್ಥೂಲವಾಗಿ ಇಲ್ಲಿ ವಿವರಿಸಿದೆ.


ಚತುರ್ವರ್ಣ ಸಮಸ್ಯೆ

ಜಿ. ಟಿ. ನಾರಾಯಣರಾವ್

"ಕರ್ನಾಟಕದ ಭೂಪಟವನ್ನು ಬರೆದು ಅದರಲ್ಲಿ ರಾಜ್ಯದ ಹತ್ತೊಂಭತ್ತು ಜಿಲ್ಲೆಗಳನ್ನೂ ಗಡಿಗೆರೆ ಎಳೆದು ಗುರುತಿಸು. ಆ ಜಿಲ್ಲೆಗಳ ನೆಲೆ ಕಣ್ಣಿಗೆ ಸ್ಪಷ್ಟವಾಗಿ ಕಾಣಲು ನೆರವಾಗುವಂತೆ ಅವುಗಳಿಗೆ ಬೇರೆ ಬೇರೆ ಬಣ್ಣಗಳನ್ನು ಬಳಿ."

ಪ್ರೌಢಶಾಲೆಯಲ್ಲಿ ಓದುತ್ತಿರುವ ಪ್ರತಿ ವಿದ್ಯಾರ್ಥಿಗೂ ಪರಿಚಿತ ಪ್ರಶ್ನೆ ಇದು. ಈ ಪ್ರಯೋಗವನ್ನು ಅವನು ಪ್ರತ್ಯಕ್ಷವಾಗಿ ನಿರ್ವಹಿಸುವಾಗ ಹತ್ತೊಂಬತ್ತು (ಅಥವಾ, ಕರ್ನಾಟಕದ ಹೊರಗಿನ ಭಾರತ ಮತ್ತು ಸಮುದ್ರ ಭಾಗಗಳನ್ನು ಸಹ ಗುರುತಿಸುವುದಾದರೆ ಇಪ್ಪತ್ತೊಂದು) ವಿವಿಧ ವರ್ಣಗಳನ್ನು ಆಯಬೇಕೇ? ಹಾಗೆ ಆಯ್ದುದಾದರೆ- ತಾತ್ತ್ವಿಕವಾಗಿ ಇದು ಸಾಧ್ಯ- ಕಣ್ಣಿಗೆ ಈ ಎಲ್ಲ ಛಾಯೆಗಳನ್ನೂ ಪ್ರತ್ಯೇಕಿಸಿ ಗುರುತಿಸುವುದು ಸಾಧ್ಯವಾದೀತೇ?

ಇದೇ ಪ್ರಶ್ನೆಯನ್ನು ಪ್ರಪಂಚದ ಭೂಪಟಕ್ಕೆ ವಿಸ್ತರಿಸೋಣ. ಪ್ರಪಂಚದ ರಾಜಕೀಯ ನಕ್ಷೆಯನ್ನು ಹೊಸತಾಗಿ ತಯಾರಿಸುವುದು ನಮ್ಮ ಉದ್ದೇಶ. ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ ಮೊದಲಾದ ವಿವಿಧ ರಾಷ್ಟ್ರಗಳಿಗೆ ಒಂದೊಂದಕ್ಕೆ ಒಂದೊಂದರಂತೆ ಬೇರೆ ಬೇರೆ ಬಣ್ಣಗಳನ್ನು ಬಳಿಯಲು ತೊಡಗುತ್ತೇವೆ. ಬಲು ಬೇಗನೆ ನಮ್ಮ ಎದುರು ಹೊಸ ಸವಾಲೊಂದು ಎದ್ದು ನಿಲ್ಲುತ್ತದೆ: ಪ್ರಪಂಚದಲ್ಲಿ ನೂರಕ್ಕೂ ಮಿಕ್ಕಿ ರಾಷ್ಟ್ರಗಳಿರುವುದರಿಂದ ಅಷ್ಟು ವಿವಿಧ ವರ್ಣಗಳನ್ನು ತಯಾರಿಸುವುದು ಮತ್ತು ಗುರುತಿಸುವುದು ಹೇಗೆ? ಇವು ಸರ್ವಾಂಗ ಅಪ್ರಾಯೋಗಿಕ.




ಚಿತ್ರ ೧

ಈಗ ಈ ಸಮಸ್ಯೆಯನ್ನು ಬೇರೆ ಒಂದು ನಿಲುವಿನಿಂದ ಪರಿಶೀಲಿಸೋಣ. ಇದಕ್ಕೆ ಉಪಯುಕ್ತವೂ ಪ್ರಾಯೋಗಿಕವೂ ಆದ ಒಂದು ಷರತ್ತನ್ನು ಲಗತ್ತಿಸುತ್ತೇವೆ: ಯಾವುದೇ ಎರಡು ರಾಷ್ಟ್ರಗಳು ಒತ್ತೊತ್ತಾಗಿರುವಾಗ, ಅಂದರೆ ಅವುಗಳ ನಡುವೆ ಉಭಯ ಸಾಮಾನ್ಯ ಗಡಿಗೆರೆ ಇರುವಾಗ, ಅವನ್ನು ಪ್ರತ್ಯೇಕವಾಗಿ ಗುರುತಿಸಲು ಅನುಕೂಲವಾಗುವಂತೆ ಅವುಗಳಿಗೆ ಎರಡು ಬೇರೆ ಬೇರೆ ಬಣ್ಣಗಳನ್ನು ಬಳಿಯಬೇಕು; ಅವು ಒತ್ತೊತ್ತಾಗಿಲ್ಲದಾಗ, ಅಂದರೆ ಅವುಗಳ ನಡುವೆ ಉಭಯಸಾಮಾನ್ಯ ಗಡಿಗೆರೆ ಇಲ್ಲದಾಗ, ಅವುಗಳಿಗೆ ಬೇರೆ ಬೇರೆ ಬಣ್ಣಗಳನ್ನು ಹಚ್ಚಲೇಬೇಕೆಂದಿಲ್ಲ (ಅಂದರೆ ಸಂದರ್ಭದ ಸೌಕರ್ಯವನ್ನು ಗ್ರಹಿಸಿ ಒಂದೇ ಬಣ್ಣವನ್ನು ಬಳಿಯಬಹುದು ಅಥವಾ ಎರಡು ಬೇರೆ ಬೇರೆಯವನ್ನು ಹಚ್ಚಬಹುದು).

ಚಿತ್ರ ೧ರಲ್ಲಿ 1, 2, 3 ಎಂಬ ಮೂರು ರಾಷ್ಟ್ರಗಳಿಗೆ a, b, c ಎಂಬ ಮೂರು ಬೇರೆ ಬೇರೆ ಬಣ್ಣಗಳನ್ನು ಬಳಿದಿದೆ. ಕಡಿಮೆ ಬಣ್ಣಗಳಿಂದ ಇದು ಸಾಧ್ಯವಾಗದು. ಉದಾಹರಣೆಗೆ ರಾಷ್ಟ್ರ 3 ಕ್ಕೆ c ಯ ಬದಲು b ಹಾಕಿದರೆ ರಾಷ್ಟ್ರ 2 ಮತ್ತು ರಾಷ್ಟ್ರ 3 ಸಮಾವೇಶವಾಗಿ ಗಡಿ ಉಲ್ಲಂಘನೆಯ ಅಪರಾಧ ಸಂಭವಿಸೀತು. ಇಂಥ ಅಪರಾಧವನ್ನು ಭೂಪಟಾತಿಕ್ರಮಣ ಎನ್ನುವುದುಂಟು.

ಚಿತ್ರ ೨ರಲ್ಲಿ 1, 2, 3, 4 ಎಂಬ ನಾಲ್ಕು ರಾಷ್ಟ್ರಗಳಿಗೆ a, b, c, d ಎಂಬ ನಾಲ್ಕು ಬೇರೆ ಬೇರೆ ಬಣ್ಣಗಳನ್ನು ಬಳಿದಿದೆ ಕಡಿಮೆ ಬಣ್ಣಗಳಿಂದ ಇದು ಸಾಧ್ಯವಾಗದು. ಉದಾಹರಣೆಗೆ ರಾಷ್ಟ್ರ 4 ಕ್ಕೆ d ಯ ಬದಲು a ಅಥವಾ b ಅಥವಾ c ಯಾವುದನ್ನೇ ಹಾಕಿದರೂ ರಾಷ್ಟ್ರ 4 ಆಯಾ ರಾಷ್ಟ್ರದೊಂದಿಗೆ ಸಮಾವೇಶವಾಗಿ ಭೂಪಟಾತಿಕ್ರಮಣ ಸಂಭವಿಸುತ್ತದೆ.

ಚಿತ್ರ ೩ರಲ್ಲಿ ಐದು ರಾಷ್ಟ್ರಗಳಿವೆ. "ಆದ್ದರಿಂದ a, b, c, d, e ಎಂಬ ಐದು ಬೇರೆ ಬೇರೆ ಬಣ್ಣಗಳು ಬೇಕು" ಎಂದು ನೀವು ಸುಲಭವಾಗಿ ತೀರ್ಮಾನಿಸುತ್ತೀರಿ. ಈ ಮೇಲೆ ವಿಧಿಸಿರುವ ಷರತ್ತಿನ ಉತ್ತರಾರ್ಧವನ್ನು, ತತ್ರಾಪಿ ಆವರಣದಲ್ಲಿ ಇರುವ ವಾಕ್ಯವನ್ನು, ಇನ್ನೊಮ್ಮೆ ಓದಿ ನೋಡಿ. "ಯಾವುದೇ ಎರಡು ರಾಷ್ಟ್ರಗಳ ನಡುವೆ ಉಭಯಸಾಮಾನ್ಯ ಗಡಿಗೆರೆ ಇಲ್ಲದಾಗ, ಸಂದರ್ಭದ ಸೌಕರ್ಯವನ್ನು ಗ್ರಹಿಸಿ, ಒಂದೇ ಬಣ್ಣವನ್ನು ಬಳಿಯಬಹುದು ಅಥವಾ ಎರಡು ಬೇರೆ ಬೇರೆಯವನ್ನು ಹಚ್ಚಬಹುದು." ಹಾಗಾದರೆ ಚಿತ್ರ ೩ರಲ್ಲಿ ಬಳಸಬಹುದಾದ ಬಣ್ಣಗಳ ಕನಿಷ್ಠ ಸಂಖ್ಯೆ ಎಷ್ಟೆಂದು ಪರಿಶೀಲಿಸೋಣ. ರಾಷ್ಟ್ರ 1, 2, 3 ಗಳಿಗೆ a, b, c ಎಂಬ ಬೇರೆ ಬೇರೆ ಬಣ್ಣಗಳನ್ನು ಉಪಯೋಗಿಸದೆ ಗತ್ಯಂತರವಿಲ್ಲ. ರಾಷ್ಟ್ರ 4 ಕ್ಕೆ b ಯನ್ನೂ ರಾಷ್ಟ್ರ 5 ಕ್ಕೆ c ಯನ್ನೂ ಧಾರಾಳವಾಗಿ ಹಚ್ಚಬಹುದು. ಇಲ್ಲೆಲ್ಲೂ ಭೂಪಟಾತಿಕ್ರಮಣ ನಡೆಯದು. ಅಲ್ಲದೇ ಬಣ್ಣಗಳ ಸಂಖ್ಯೆಯನ್ನು ಕನಿಷ್ಠ ಮಿತಿಯಲ್ಲಿ ಇಟ್ಟಂತೆಯೂ ಆಗುವುದು.



ಚಿತ್ರ ೩

ಇನ್ನೂ ಎರಡು ಚಿತ್ರಗಳನ್ನು, ೪ ಮತ್ತು ೫, ಉದಾಹರಣೆಗಾಗಿ ತೋರಿಸಿದೆ. ಈ ಐದು ಚಿತ್ರಗಳ ಸಾರಾಂಶವಿಷ್ಟು:


ಚಿತ್ರ ೧: ಮೂರು ರಾಷ್ಟ್ರಗಳು, ಮೂರು ಬಣ್ಣಗಳು

ಚಿತ್ರ ೨: ನಾಲ್ಕು ರಾಷ್ಟ್ರಗಳು, ನಾಲ್ಕು ಬಣ್ಣಗಳು

ಚಿತ್ರ ೩: ಐದು ರಾಷ್ಟ್ರಗಳು, ಮೂರು ಬಣ್ಣಗಳು (ಐದಲ್ಲ)


ಚಿತ್ರ ೪: ಆರು ರಾಷ್ಟ್ರಗಳು, ನಾಲ್ಕು ಬಣ್ಣಗಳು (ಆರಲ್ಲ)

ಚಿತ್ರ ೫: ಏಳು ರಾಷ್ಟ್ರಗಳು, ಮೂರು ಬಣ್ಣಗಳು (ಏಳಲ್ಲ)



ಚಿತ್ರ ೩

ಈಗ ನೀವೇ ಈ ಮುಂದಿನ ಸುಲಭ ಪ್ರಯೋಗ ಮಾಡಿ ನೋಡಿ. ಕಾಗದದ ಹಾಳೆಯ ಮೇಲೆ ಹಲವಾರು ಗೆರೆಗಳನ್ನು– ಅವು ಸರಳ ರೇಖೆಗಳಾಗಿರಬಹುದು, ವಕ್ರರೇಖೆಗಳಾಗಿರಬಹುದು, ಎರಡರ ಮಿಶ್ರಣವೂ ಆಗಿರಬಹುದು –ಬೇಕಾದಂತೆ ಎಳೆಯಿರಿ. ಪ್ರತಿಯೊಂದು ಸಂವೃತ ಪ್ರದೇಶಕ್ಕೂ ೧ ರಿಂದ ತೊಡಗಿ ಕ್ರಮಾನುಗತವಾಗಿ ಸಂಖ್ಯೆಗಳನ್ನು ನಿಗದಿ ಮಾಡಿ. ಕೊನೆಯ ಸಂಖ್ಯೆ ಎಷ್ಟಾಗುವುದೋ ಅಷ್ಟು ಪ್ರದೇಶಗಳು (ರಾಷ್ಟ್ರಗಳು) ಅಲ್ಲಿ ಇವೆ ಎಂದಾಯಿತು. ಇವುಗಳಿಗೆ ಈ ಮೇಲೆ ವಿವರಿಸಿದ ರೀತಿಯಲ್ಲಿ ಹಚ್ಚಲು ಬೇಕಾಗುವ ಬಣ್ಣಗಳ ಕನಿಷ್ಠ ಸಂಖ್ಯೆ ಎಷ್ಟೆಂದು *a*, *b*, *c* ಮೊದಲಾದ ಬಣ್ಣಗಳನ್ನು ಬರೆಯುತ್ತ ಎಣಿಕೆ ಮಾಡಿ,




ಚಿತ್ರ ೪


ನಾಲ್ಕಕ್ಕಿಂತ ಹೆಚ್ಚು ಬೇಕಾಗುವುದಿಲ್ಲ ಎಂದು ನಿಮಗೇ ತಿಳಿಯುತ್ತದೆ.

ನೀವು ಆಯ್ದಿರುವ ಚಿತ್ರ ಮತ್ತು ಬಣ್ಣಗಳನ್ನು ಆಯಲು ಹಿಡಿದ ಹಾದಿ ಇವನ್ನು ಅವಲಂಬಿಸಿ ಒಮ್ಮೊಮ್ಮೆ ನಾಲ್ಕು ಬಣ್ಣಗಳು ಇರುವುದುಂಟು. ಚಿತ್ರ ೬ ರಲ್ಲಿ *e* ಎಂಬ ಐದನೆಯ ಬಣ್ಣವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಇಲ್ಲಿ ಬಣ್ಣಗಳ ನೆಲೆಗಳನ್ನು ಕೊಂಚ ಬದಲು ಮಾಡಿದರೆ ನಾಲ್ಕು ಬಣ್ಣಗಳಿಂದಲೇ ಇವನ್ನು ಸಹ ಕುಂಚಿಸುವುದು ಸಾಧ್ಯ. ಚಿತ್ರ ೭ ರಲ್ಲಿ ಇದು ಹೇಗೆ ಎಂಬುದನ್ನು ಕಾಣಿಸಿದೆ.

ಇಷ್ಟು ತಿಳಿದ ಬಳಿಕ ಚತುರ್ವರ್ಣ ಸಮಸ್ಯೆಯನ್ನು ಈ ಮುಂದಿನಂತೆ ನಿಖರವಾಗಿ ನಿರೂ-



ಚಿತ್ರ ೫



ಚಿತ್ರ ೬

ಬಿಸಬಹುದು: ಅಕ್ಕಪಕ್ಕದ ಯಾವ ಎರಡು ಪ್ರದೇಶಗಳೂ ಒಂದೇ ಬಣ್ಣದವು ಆಗಿರದಂತೆ ಸಮತಲ ಭೂಪಟದ ವಿವಿಧ ಪ್ರದೇಶಗಳಿಗೆ ಹಚ್ಚಲು ಬೇಕಾಗುವ ಬೇರೆ ಬೇರೆ ಬಣ್ಣಗಳ ಕನಿಷ್ಠ ಸಂಖ್ಯೆ ನಾಲ್ಕು.

ಇತಿಹಾಸ


ಲಂಡನ್ನಿನ ಯೂನಿವರ್ಸಿಟಿ ಕಾಲೇಜಿನಲ್ಲಿ ಗಣಿತ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದ ಫ್ರಾನ್ಸಿಸ್ ಗುತ್ರಿ ಎಂಬಾತ, ಕ್ರಿ. ಶ. ೧೮೫೨ರ ಅಂದಾಜಿಗೆ, ಸಮತಲ ಭೂಪಟಕ್ಕೆ ಬಣ್ಣ ಬಳಿಯುವ ಕೆಲಸದಲ್ಲಿ ಉದ್ಯುಕ್ತನಾಗಿದ್ದ. ಇಂಗ್ಲಂಡನ್ನೂ ಒಳಗೊಂಡಿದ್ದ ಆ ಪಟದಲ್ಲಿ ಅಕ್ಕಪಕ್ಕದ ಯಾವ ಎರಡು ಪ್ರದೇಶಗಳಿಗೂ ಒಂದೇ ಬಣ್ಣ ಬರದಂತೆ ಹಚ್ಚಲು ಕೇವಲ ನಾಲ್ಕು ವಿವಿಧ ವರ್ಣಗಳು ಇದ್ದರೆ ಸಾಕು ಎಂಬ ಗುಣವನ್ನು ಅವನು ಗಮನಿಸಿದ. ಅನುಭವಜನ್ಯವಾದ ನಾಲ್ಕು ಬಣ್ಣಗಳ ಈ ಸೂತ್ರವನ್ನು ಗುತ್ರಿ ಭೂಪಟಗಳ ಸಾರ್ವತ್ರಿಕ ಗುಣ ಆಗಿರಬಹುದೇ ಎಂಬುದಾಗಿ ಶಂಕಿಸಿದ. ಪ್ರಾಯಶಃ ಇದನ್ನು ಆತ ತನ್ನ ಗಣಿತಗುರುವಾದ ಅಗಸ್ಟಸ್ ಡ ಮಾರ್ಗನ್ (೧೮೦೬–೭೧) ಎಂಬಾತನೊಡನೆ ಪ್ರಸ್ತಾಪಿಸಿರಬೇಕು.

ಡ ಮಾರ್ಗನ್ ಈ ಸಮಸ್ಯೆಯನ್ನು ಬೇರೆ ಒಂದು ದೃಷ್ಟಿಕೋನದಿಂದ ಪರೀಕ್ಷಿಸಿ "ಐದು ವಿವಿಧ ದೇಶಗಳು, ಅವುಗಳ ಪೈಕಿ ಯಾವುದೇ ದೇಶವೂ ಇತರ ನಾಲ್ಕು ದೇಶಗಳಿಗೆ ಒತ್ತಿನದು ಆಗಿರುವಂತೆ, ಇರುವುದು ಸಾಧ್ಯವಿಲ್ಲ" ಎಂದು ರುಜುವಾತಿಸಿದ. ಚಿತ್ರ ೩ ನ್ನು ಇನ್ನೊಮ್ಮೆ ನೋಡಿ. ಅಲ್ಲಿರುವ ಪ್ರತಿಯೊಂದು ದೇಶವೂ ಇತರ ನಾಲ್ಕು ದೇಶಗಳಿಗೆ ಒತ್ತಿನದಾಗಿಲ್ಲ. (ದೇಶ ೧ ಇತರ ನಾಲ್ಕು ದೇಶಗಳಿಗೆ ಒತ್ತಿನದಾಗಿದೆ ಎಂಬ ಮಾತ್ರಕ್ಕೆ ಡ ಮಾರ್ಗನ್‌ನ ಹೇಳಿಕೆ ಸುಳ್ಳಾಗದು.) ಐದು ದೇಶಗಳನ್ನು ಒಳಗೊಂಡಿರುವ ಚಿತ್ರಗಳನ್ನು ನೀವೇ ಬೇಕಾದಂತೆ ಬರೆದು ನೋಡಿ. ಒಂದೊಂದು ಚಿತ್ರದಲ್ಲೂ ಡ ಮಾರ್ಗನ್‌ನ ಹೇಳಿಕೆಯ ಸಾಧುತ್ವವನ್ನು ಕಾಣುತ್ತೀರಿ.

ತನ್ನ ಈ ಸಾಧನೆಯಿಂದ ಉತ್ತೇಜಿತನಾದ ಡ ಮಾರ್ಗನ್ ಹೊಸ ಗುಣವೊಂದನ್ನು ಕಂಡುಕೊಂಡ. "ಯಾವುದೇ ಭೂಪಟದಲ್ಲಿ ಐದು ವಿವಿಧ ವರ್ಣಗಳು ಪರಸ್ಪರ ಒತ್ತೊತ್ತಾಗಿ ಇರಲಾರವು." ವಾಸ್ತವವಾಗಿ ಇದು ಮೇಲಿನ ಸಾಧನೆಯ ಇನ್ನೊಂದು ರೂಪ–ಗಣಿತದ ಪರಿಭಾಷೆಯಲ್ಲಿ ಅದರ ಅನುಮಿತವಿದು.

ಒಡನೆ ಅವನು ಮುಂದಿನ ತೀರ್ಮಾನಕ್ಕೆ ನೆಗೆದ: "ಭೂಪಟದ ವಿವಿಧ ದೇಶಗಳಿಗೆ ಬಳಿಯಲು ನಾಲ್ಕು ವಿವಿಧ ವರ್ಣಗಳು ಸಾಕು."

ಈ ತೀರ್ಮಾನ ಮಾತ್ರ ಸರಿ ಅಲ್ಲವೆಂದು–ಅಂದರೆ ನಿರ್ದುಷ್ಟವಾದ ಗಣಿತತರ್ಕವನ್ನು ಆಧರಿಸಿ ಪಡೆದ ಸಾಧನ ಅಲ್ಲವೆಂದು ಡ ಮಾರ್ಗನ್‌ನ ಅನಂತರದ ಗಣಿತವಿದರು ಹೇಳಿದರು. ನೀವು ಆಯುರ್ಮಾನವಿದೇ, ಅಷ್ಟೇಕೆ, ಮಾನವ



ಚಿತ್ರ ೭

ಜನಾಂಗ ಅದರ ಆಯುರ್ಮಾನವಿಡೀ ಬೇಕಾದಷ್ಟು ಬಗೆಯ ಭೂಪಟಗಳನ್ನು ಚಿತ್ರಿಸಿ ಅವುಗಳಲ್ಲಿ ಬೇಕಾದಂತೆ ರಾಷ್ಟ್ರಗಳನ್ನು ಗುರುತಿಸಿ ಅವುಗಳಿಗೆ ಬಣ್ಣಗಳನ್ನು ಹಚ್ಚಿಸಿ ಎಲ್ಲಿಯೂ ನಾಲ್ಕಕ್ಕಿಂತ ಹೆಚ್ಚು ಸಂಖ್ಯೆಯ ಬಣ್ಣಗಳು ಬೇಕಾಗುವುದಿಲ್ಲ ಎಂದು ತೋರಿಸಬಹುದು. ಗಣಿತಜ್ಞರು ಇವನ್ನೆಲ್ಲ "ತಾಳೆ ನೋಡುವಿಕೆ ಅಥವಾ ತಪಾಸಣೆ, ನಿಖರ ಸಾಧನೆ ಅಲ್ಲ" ಎಂದು ಹಗುರಮಾಡಿ ತಿರಸ್ಕರಿಸಿಬಿಡುತ್ತಾರೆ. ನೀವು ಚಿತ್ರಿಸಿರುವ ಹಾಗೂ ಚಿತ್ರಿಸಲಿರುವ ಸಮಸ್ತ ಭೂಪಟಗಳಿಗೂ ಅನ್ವಯವಾಗುವ ಸಾರ್ವತ್ರಿಕ ತರ್ಕವೇ ಗಣಿತಸಾಧನೆ. ಇದರ ಪ್ರಕಾರ ಬಣ್ಣಗಳ ಕನಿಷ್ಠ ಸಂಖ್ಯೆ ನಾಲ್ಕು ಹೌದು ಎಂದು ಸಿದ್ಧವಾದರೂ ಸರಿ, ನಾಲ್ಕು ಅಲ್ಲ ಎಂದು ಸಿದ್ಧವಾದರೂ ಸರಿ, ಇದೊಂದು ಅಪರಿಹಾರ್ಯ ಸಮಸ್ಯೆ ಎಂದು ಸಿದ್ಧವಾದರೂ ಸರಿ. ಆ ತನಕ ಈ ಸಮಸ್ಯೆ ಜೀವಂತವಾಗಿರುವುದು, ಗಣಿತವಿದರಿಗೆ ಸವಾಲಾಗಿ ಕಾಡುತ್ತಿರುವುದು— ನ್ಯಾಯಾಲಯಕ್ಕೆ ದಾಖಲಾದ ದಾವಾ ಯಾವುದೇ ಒಂದು ಪಕ್ಷಕ್ಕೆ ಗುಣ ಆಗಬೇಕು ಇಲ್ಲವೇ ವಜಾ ಆಗಬೇಕು, ಹಾಗೆ.

ಗಣಿತ ಅಂತಸ್ತು

ಹೀಗೆ ಜೀವಂತವಾಗಿದ್ದ ಚತುರ್ವರ್ಣ ಸಮಸ್ಯೆಯ ಬಗ್ಗೆ "ಮಂಡೆ ಬಿಚ್ಚಿಗೆ" ಮಾಡಿಕೊಂಡವ ಆರ್ಥರ್ ಕೇಲೀ. ಈ ಚಕ್ರವ್ಯೂಹದಿಂದ ಹೊರಬರಲು ಹಾದಿ ತಿಳಿಯದೇ ಅವನು ಲಂಡನ್ ಗಣಿತಸಂಘದ ಮುಂದೆ ಸಮಸ್ಯೆಯನ್ನು ಅಧಿಕೃತವಾಗಿ ಮಂಡಿಸಿ (೧೮೭೮) ಇತರ ಗಣಿತ ವಿದ್ವಾಂಸರ ಲಕ್ಷ್ಯವನ್ನು ಇದರತ್ತ ಸೆಳೆದ, ಆ ಸಂಘದ ಸದಸ್ಯನಾಗಿದ್ದ ಆಲ್ಫ್ರೆಡ್ ಬ್ರೇ ಕೆಂಪೆ ಎಂಬಾತ ಚತುರ್ವರ್ಣ ಸಮಸ್ಯೆಯನ್ನು ಉತ್ಸಾಹದಿಂದ ಕೈಗೆತ್ತಿಕೊಂಡು, ಅವನು ನಿಜವೆಂದೇ ನಂಬಿದ್ದ ಸಾಧನೆಯನ್ನು, ಕೇವಲ ಒಂದು ವರ್ಷದ ಒಳಗೇ ನೀಡಿದ. ಅಂದರೆ ಬಣ್ಣಗಳ ಕನಿಷ್ಠ ಸಂಖ್ಯೆ ನಾಲ್ಕು ಹೌದೆಂದು ಅವನು ಗಣಿತಮುದ್ರೆ ಒತ್ತಿದ. ಆತ ಕಂಡುಕೊಂಡ ವಿಧಾನ ಹಾಗೂ ಅನುಸರಿಸಿದ ಮಾರ್ಗ ವಿಶೇಷ ಪ್ರತಿಭಾನ್ವಿತವಾಗಿದ್ದುವು. ಆದರೂ ಕೆಂಪೆ ಎಡವಿದ್ದ.

ಕೆಂಪೆಯ ಸಾಧನೆ ದೋಷಪೂರ್ಣವಾಗಿದೆ ಎಂಬುದಾಗಿ ಪರ್ಸಿ ಜಾನ್ ಹೀವುಡ್ ೧೮೯೦ರಲ್ಲಿ ತೋರಿಸಿಕೊಟ್ಟ. ಆದರೆ ಆ ವೇಳೆಗೆ ಕಂಪೆ ಗತಿಸಿ ಹನ್ನೊಂದು ವರ್ಷಗಳೇ ಸಂದಿದ್ದುವು. ಅರುವತ್ತು ವರ್ಷಗಳ ಕಾಲ ಹೀವುಡ್ ಈ ಸಮಸ್ಯೆಯ ಬೆಂಬತ್ತಿ ಸಾಧನೆಯನ್ನು ಅರಸುತ್ತ ಶ್ರಮಿಸಿದ. ಅದೇ ವೇಳೆಗೆ ಹಲವಾರು ವಿಖ್ಯಾತ ಗಣಿತವಿದ್ವಾಂಸರು ಕೂಡ ಇದರಿಂದ ಆಕರ್ಷಿತರಾಗಿದ್ದರು. ಆದರೆ ಸಾಧನೆ ಇದೆಯೋ ಇಲ್ಲವೇ ಇದ್ದರೆ ಏನು ಎಂಬ ಸಂಗತಿಗಳು ಚಿದಂಬರ ರಹಸ್ಯವಾಗಿಯೇ ಇದ್ದುವು. ಇಂಥ ಸಾಹಸದ ಫಲವಾಗಿ ನವಗಣಿತ ಫಲಿತಾಂಶ ಮತ್ತು ತಂತ್ರಗಳು ಸಿದ್ಧಿಸಿದ್ದೂ ಹಳೆಯವು ಹೊಸಬೆಳಕು ಕಂಡದ್ದೂ ನಿಜ ಲಾಭಾಂಶಗಳು.

ಗಳಿಕೆಗಳ ಪೈಕಿ ಮುಖ್ಯವಾಗಿ ಎರಡನ್ನು ಇಲ್ಲಿ ಹೆಸರಿಸಬಹುದು.

ಮೊದಲನೆಯದು, ಪಂಚವರ್ಣ ಸಮಸ್ಯೆ. ಅದರ ನಿರೂಪಣೆ ಹೀಗಿದೆ: "ಯಾವುದೇ ಭೂಪಟಕ್ಕೆ ಬಳಿಯಲು ಐದು ಬೇರೆ ಬೇರೆ ಬಣ್ಣಗಳು ಬೇಕು ಮತ್ತು ಸಾಕು." ಅಂದರೆ ಐದಕ್ಕಿಂತ ಹೆಚ್ಚು ಅನಗತ್ಯ ಎಂದು ಇದರ ಅರ್ಥ.

ಎರಡನೆಯದು, ಟೋರಸ್ಸಿನ ಸಪ್ತವರ್ಣ ಸಮಸ್ಯೆ. ವಾಯು ತುಂಬಿದ ಟ್ಯೂಬಿಗೆ ಗಣಿತಜ್ಞರ ಭಾಷೆಯಲ್ಲಿ ಟೋರಸ್ ಎಂದು ಹೆಸರು. ಟೋರಸ್ಸಿನ ಮೈಮೇಲೆ ನಕ್ಷೆಯನ್ನು ಚಿತ್ರಿಸಿ ಅದರಲ್ಲಿ ಬೇಕಾದಂತೆ ರಾಷ್ಟ್ರಗಳನ್ನು ಗುರುತಿಸಲು ಪ್ರಯತ್ನಮಾಡಿ ನೋಡಿ— ಅಂದರೆ ನಿಮಗೆ ಇಷ್ಟ ಬಂದಂತೆ ಸರಳ ಹಾಗೂ ವಕ್ರರೇಖೆಗಳನ್ನು ಅದರ ಮೈಮೇಲೆ ಎಳೆದು ವಿವಿಧ ಸಂವೃತ ಪ್ರದೇಶಗಳನ್ನು ಪಡೆಯಿರಿ. ಇವು ಸಮತಲ ಭೂಪಟದಂತಲ್ಲದೇ ಮೂರು ಆಯಾಮಗಳಲ್ಲಿವೆ, ಆದ್ದರಿಂದ ಇವುಗಳಿಗೆ ಬೇರೆ ಗುಣಗಳಿವೆ ಎಂಬುದನ್ನು ಗಮನಿಸಬೇಕು. ಟೋರಸ್ಸಿನಲ್ಲಿ ಗುರುತಿಸಬಹುದಾದ ರಾಷ್ಟ್ರಗಳಿಗೆ ಬಳಿಯಲು ಏಳು ಬಣ್ಣಗಳು ಬೇಕು ಮತ್ತು ಸಾಕು ಎಂಬುದೇ ಟೋರಸ್ಸಿನ ಸಪ್ತವರ್ಣ ಸಮಸ್ಯೆ.

ಎಳೆಕ್ಕಿಂತ ಹೆಚ್ಚು ಅನಗತ್ಯ ಎಂದು ಇದರ ಅರ್ಥ.

ಇವೆರಡು ಸಮಸ್ಯೆಗಳಿಗೂ ಗಣಿತಸಾಧನೆಗಳು ಲಭಿಸಿದವು. ಆದರೆ ತೀರಾ ಸರಳವಾಗಿದ್ದ ಸಮತಲ ಭೂಪಟದ ಚತುರ್ವರ್ಣ ಸಮಸ್ಯೆ ಮಾತ್ರ ಜಗ್ಗಲಿಲ್ಲ. ಆ ಹಿಮಾಲಯ ಶಿಖರ ಏರಬಲ್ಲ ತೇನಸಿಂಗ್ ಯಾರೋ!

ಕೂಡಿ ಎಡೆಗೆ ನಡಿಗೆ

ಇಪ್ಪತ್ತನೆಯ ಶತಮಾನದ ತರುಣದಲ್ಲಿ ಹೊಸ ಅಸ್ತ್ರಗಳು ಗಣಿತವಿದರ ಬತ್ತಳಿಕೆಗೆ ಒದಗಿದುವು. ಕೆಂಪೆಯ ಕ್ರಾಂತಿಕಾರೀ ವಿಧಾನವನ್ನು ಅಭ್ಯಸಿಸಿದ ಜಾರ್ಜ್ ಡಿ. ಬಿರ್ಖಾಫ್ ಇಂಥ ಒಂದು ಪ್ರಬಲಾಸ್ತ್ರವನ್ನು ಒದಗಿಸಿದ (೧೯೧೩) ವಿದ್ವಾಂಸ. ಅಲ್ಲಿಂದ ಮುಂದಕ್ಕೆ ಚಿಂತನೆ ತೀರ ತಾಂತ್ರಿಕವಾಗಿ ಗಣಿತದ ಪರಿಭಾಷೆಯಲ್ಲಿ ಹರಿಯುವುದರಿಂದ ಪ್ರಸಕ್ತ ಲೇಖನದಲ್ಲಿ ಅದರ ಹೆಜ್ಜೆ ಜಾಡನ್ನು ಮಾತ್ರ ಮಸಕಾಗಿ ಗುರುತಿಸಬಹುದು, ಅಷ್ಟೆ.

ಎಷ್ಟೇ ಸಮತಲ ಭೂಪಟಗಳನ್ನು, ಒಂದೊಂದರೊಳಗೂ ಇಷ್ಟ ಬಂದಷ್ಟು ರಾಷ್ಟ್ರಗಳು ಅಡಕವಾಗಿರುವಂತೆ ರಚಿಸಿದರೂ ವ್ಯಾಪಕವಾಗಿ ಅವು ಹಲವಾರು ವಿಶಿಷ್ಟ ಗುಣಗಳಿರುವ ಜ್ಯಾಮಿತೀಯ ಆಕೃತಿಗಳ ಒಳಗೆ ಅಳವಡುತ್ತವೆ. ಉದಾಹರಣೆಗೆ ಜೀವಿಗಳನ್ನು ಎಣಿಸಿ ಅಥವಾ ಒಂದೊಂದರ ಗುಣಲಕ್ಷಣಗಳನ್ನೂ ಅಭ್ಯಸಿಸಿ ಹಾಗಿಸುವುದು ಸಾಧ್ಯವಲ್ಲದ ಸಾಹಸ– ದೇಶ, ಕಾಲ ಎರಡರಲ್ಲಿಯೂ. ಆದರೆ ಅವನ್ನು ವ್ಯಾಪಕವಾಗಿ ಸಸ್ಯಗಳು ಮತ್ತು ಪ್ರಾಣಿಗಳು ಎಂಬ ಎರಡು ವಿಭಾಗಗಳಾಗಿ ಪರಿಗಣಿಸಿದಾಗ ನಮ್ಮ ಅಧ್ಯಯನಕ್ಕೆ ಭದ್ರವಾದ ಒಂದು ನೆಲೆ ಲಭಿಸುತ್ತದೆ. ಮುಂದೆ ಪ್ರಾಣಿಗಳನ್ನು ಸಸ್ತನಿಗಳು, ಕೀಟಗಳು ಎಂದು ಮುಂತಾಗಿ ವಿಭಾಗಿಸುತ್ತ ಸಾಗಿ ಒಂದು ಕವಲಿನಲ್ಲಿ ಮನುಷ್ಯನನ್ನು ತಲಪಬಹುದು. ವಾಸ್ತವವಾಗಿ ಜೀವವಿಜ್ಞಾನಿಗಳು ತಮ್ಮ ಅಧ್ಯಯನ ನಡೆಸಲು ಅನುಸರಿಸುವುದು ಇಂಥ ಒಂದು ಕ್ರಮವನ್ನು. ಈ ತೆರನಾದ ವಿಂಗಡಣೆಯಿಂದ ಒದಗುವ ತಿರುಳುಗಳು ಮಿತಸಂಖ್ಯೆಯುಳ್ಳವು. ಇವುಗಳ ಕೂಲಂಕಷಾಧ್ಯಯನದಿಂದ ಒಟ್ಟು ಸಮಸ್ಯೆಯನ್ನು ಎದುರಿಸುವತ್ತ ಹೊಸ ಹಾದಿ ಹುಡುಕುವುದು ಸುಲಭವೂ ಪ್ರಾಯೋಗಿಕವೂ ಆಗುತ್ತದೆ.

ಹೀಗೆ ಸಾಗಿ ಜಯಭೇರಿ ಮೊಳಗಿಸಿದವರು ಅಮೇರಿಕದ ಇಲಿನಾಯ್ ವಿಶ್ವವಿದ್ಯಾಲಯದಲ್ಲಿ ಗಣಿತಪ್ರಾಧ್ಯಾಪಕರಾಗಿರುವ ಕೆನೆತ್ ಆ್ಯಪೆಲ್ ಮತ್ತು ವೂಲ್ಫ್‌ಗಾಂಗ್ ಹಾಕೆನ್ ಅವರ ವಿಧಾನ ಸಾರತಃ ಕೆಂಪೆಯ ವಿಧಾನದ ಮಾರ್ಪಾಡಿಕೆ. ಸಮಸ್ಯೆಗೆ ಪರಿಹಾರವನ್ನು ಪಡೆಯುವ ಮಾರ್ಗದಲ್ಲಿ ಅವರು ಸುಮಾರು ೪೦೦ ಪುಟಗಳಷ್ಟು ಉದ್ದದ ಸವಿವರ, ಸರಳ ಹಾಗೂ ತಾರ್ಕಿಕ ವಾದವನ್ನು ಮಂಡಿಸಿರುವರು. ಪ್ರಪಂಚದ ಅತ್ಯುತ್ಕೃಷ್ಟ ಉಚ್ಚವೇಗದ ಗಣಕಗಳನ್ನು ಸುಮಾರು ೧,೨೦೦ ತಾಸುಗಳಷ್ಟು ಹೊತ್ತು ವಿವಿಧ ಗಣನೆಗಳಿಗಾಗಿ ಉಪಯೋಗಿಸಿಕೊಂಡಿರುವರು. ಗಣಕಗಳ ಸಹಯೋಗ ದೊರೆಯದಿದ್ದರೆ, ಅಂದರೆ ಕೇವಲ ಕೈಎಣಿಕೆಯಿಂದಲೇ ಗಣನೆಗಳನ್ನು ಪೂರೈಸಬೇಕಾದ್ದರೆ, ನೂರಾರು ವರ್ಷಗಳ ವಿಫಲ ಸಾಹಸವೇ ಇದಾಗುತ್ತಿತ್ತೋ ಏನೋ.

ತಾವು ಅನುಸರಿಸಿದ ವಿಧಾನದ ಬಗ್ಗೆ ಆ್ಯಪೆಲ್ ಮತ್ತು ಹಾಕೆನ್ ಹೀಗೆ ಹೇಳಿದ್ದಾರೆ (೧೯೭೭) "ಈ ಸಮಸ್ಯೆಯನ್ನು ನಾವು ೧೯೭೨ರಲ್ಲಿ ಎತ್ತಿಕೊಂಡಾಗ ನಮಗೆ ಲಭ್ಯವಿದ್ದ ತಂತ್ರಗಳಿಂದ ಒಂದು ಸಂಗತಿ ಸ್ಪಷ್ಟವಾಯಿತು: ಗಣಕದ ಉಪಯೋಗ ಪಡೆಯದೆ ಸಾಧನೆಯತ್ತ ಸಾಗುವುದು ಸಾಧ್ಯವಾಗದು. ಇನ್ನೂ ಸಮರ್ಥ ಗಣಕಗಳು ರೂಪಗೊಂಡು ಬಳಕೆಗೆ ಒದಗಿದ ವಿನಾ, ಅಂದರೆ ಆಗ ದೊರೆಯುತ್ತಿದ್ದ ಗಣಕಗಳಿಂದ ಮಾತ್ರ, ಇದು ಸಾಧ್ಯವಾದೀತೇ ಎಂಬುದರ ಬಗ್ಗೆ ನಮಗೆ ಸಂದೇಹವಿತ್ತು."

ಆಗ (೧೯೭೨) ಲಭ್ಯವಿದ್ದ ಗಣಕಗಳನ್ನು ಉಪಯೋಗಿಸಿ ಈ ಮನುಷ್ಯ-ಗಣಕ ಸಂವಾದ ಪ್ರಾರಂಭವಾಯಿತು. ಮುಂದೆ ಇವರಿಗೆ ನವಸುಧಾರಿತ ಹಾಗೂ ಅತ್ಯಂತ ನಾಜೂಕು ಗಣಕಗಳು ಉಪಯೋಗಕ್ಕೆ ದೊರೆತವು. ೧೯೭೬ರ ಜೂನ್ ವೇಳೆಗೆ ಇವರು ಕೂಡಿ ಏರಿದ್ದರು: ಚತುರ್ವರ್ಣ ಸಮಸ್ಯೆ ಇವರಿಗೆ ಪೂರ್ತಿ ಮಣಿದಿತ್ತು. ಸಮತಲ ಭೂಪಟವನ್ನು ಬಳಿಯಲು ನಾಲ್ಕು

ಬೇರೆ ಬೇರೆ ಬಣ್ಣಗಳು ಬೇಕು ಮತ್ತು ಸಾಕು (ಅಂದರೆ ನಾಲ್ಕಕ್ಕಿಂತ ಹೆಚ್ಚು ಬಣ್ಣಗಳು ಅನಗತ್ಯ) ಎಂಬುದಕ್ಕೆ ಗಣಿತಸಾಧನೆಯನ್ನು ನೀಡುವುದರಲ್ಲಿ ಇವರು ಜಯ ಗಳಿಸಿದ್ದರು. ಇಪ್ಪತ್ತನೆಯ ಶತಮಾನದ ಮಹಾ ಗಣಿತ ಸಿದ್ಧಿಗಳ ಪೈಕಿ ಇದೊಂದು. ಈ ಸಾಧನೆಯ ಹಿರಿಮೆಯನ್ನು ಗಮನಿಸಿದ ಅಮೇರಿಕ ಸಂಯುಕ್ತ ಸಂಸ್ಥಾನದ ಸರಕಾರ Four Colors Suffice ಎಂಬ ಸೂತ್ರವಾಕ್ಯ ಸಮೇತವಾದ ವಿಶೇಷ ಅಂಚೆಚೀಟಿಯನ್ನು ಆಗಸ್ಟ್ ೧೯೭೭ ರಲ್ಲಿ ಬಿಡುಗಡೆ ಮಾಡಿತು.

ಸಾಂಪ್ರದಾಯಿಕ ಗಣಿತಸಾಧನೆಗಳು ಸಾಧಾರಣವಾಗಿ ಚಿಕ್ಕವಾಗಿದ್ದು ಸುಂದರವಾಗಿರುವುವು. ಆದರೆ ಆ್ಯಪೆಲ್-ಹಾಕೆನ್ ಸಾಧನೆ ಹೀಗಿಲ್ಲ. ಗಣಿತ ಸಂಪ್ರದಾಯದಲ್ಲಿಲ್ಲದೇ ಇವರು ಸಾಧನೆ ಪಡೆವ ದಿಶೆಯಲ್ಲಿ ಗಣಕದ ಅಧಿಕ ಸಹಾಯ ಪಡೆದಿದ್ದಾರೆ. ಈ ಕಾರಣಗಳಿಂದಾಗಿ ಇವರ ನವ್ಯ ಮಾರ್ಗವನ್ನು ಸಂದೇಹದಿಂದ ನೋಡುವ ಸಂಪ್ರದಾಯಶರಣರಿದ್ದಾರೆ. ಆದರೆ ಇಂಥ ಮಡಿವಂತಿಕೆಯ ನಿಲುವು ಆ್ಯಪೆಲ್-ಹಾಕೆನ್ ಪಡೆದಿರುವ ಯಶಸ್ಸಿಗೆ ಇನಿತೂ ಚ್ಯುತಿ ತಾರದು. ಈ ಮಹಾ ಗಣಿತವಿದ್ವಾಂಸರು ತುಂಬ ವಿನಯವಂತಿಕೆಯಿಂದ ಹೀಗೆ ಹೇಳಿದ್ದಾರೆ (೧೯೭೭): "ಬಹುಮಂದಿ ಗಣಿತಜ್ಞರು ಉದ್ದುದ್ದ ಸಾಧನೆಗಳನ್ನು ಕಂಡಾಗ ವಿಚಲಿತರಾಗುವುದು ಪ್ರಾಯಶಃ ತೀರ ಈಚಿನ ತನಕ ಅವರು ಹ್ರಸ್ವ ಸಾಧನೆಗಳನ್ನು ಒದಗಿಸುವ ವಿಧಾನಗಳನ್ನು ಮಾತ್ರ ಬಳಸುತ್ತಿದ್ದುದರಿಂದ ಆಗಿರಬಹುದು. ಚತುರ್ವರ್ಣ ಸಮಸ್ಯೆಗೆ ಹ್ರಸ್ವ ಸಾಧನೆಯೊಂದನ್ನು ಒದಗಿಸಲಾದೀತೇ ಎಂಬುದರ ಬಗ್ಗೆ ನಮಗೆ ಇಂದಿಗೂ ಏನೂ ತಿಳಿದಿಲ್ಲ."

ಆ್ಯಪೆಲ್-ಹಾಕೆನ್ ಅನುಸರಿಸಿದ ಹಾದಿ, ಬಳಸಿದ ತಂತ್ರ ಹಾಗೂ ಕಂಡ ನೋಟ ಗಣಿತಪ್ರಪಂಚದಲ್ಲಿ ಹೊಸ ಕ್ಷೇತ್ರವೊಂದನ್ನು ಪ್ರವರ್ತಿಸಲು ನಾಂದಿ ಆಗಬಹುದು.

ಆದ್ದರಿಂದ ಕರ್ನಾಟಕದ ಭೂಪಟದಲ್ಲಿ ಹತ್ತೊಂಭತ್ತು ಬೇರೆ ಬೇರೆ ಜಿಲ್ಲೆಗಳನ್ನು ಎದ್ದು ತೋರುವಂತೆ ಬಣ್ಣ ಹಾಕಿ ಗುರುತಿಸಲು ನಾಲ್ಕಕ್ಕಿಂತ ಹೆಚ್ಚು ವಿವಿಧ ವರ್ಣಗಳು ಬೇಕಾಗಿಲ್ಲ. ✪

ನಾಗಾಲ್ಯಾಂಡಿನ ಭೂಗತ ಬಂಡುಗಾರರ ಸೇನಾವರಿಷ್ಠರಾಗಿದ್ದ ಜನರಲ್ ಕೀಟೋ ಅವರ ಅಕ್ಕನ ಗಂಡ ಟೋಕಿಯೋ ಸೇಮಾ ಅಸಿಸ್ಟೆಂಟ್ ಕಮೀಷನರ್ ಆಗಿದ್ದರು. ಬಹಳ ಒಳ್ಳೆಯವರಾಗಿದ್ದರು. ಆತ ಬೇಕಾದಷ್ಟು ದುಡ್ಡು ಮಾಡುವ ಅವಕಾಶ ಇದ್ದರೂ ಮಾಡಿರಲಿಲ್ಲ. ಕಿಡ್ನಿ ಆಪರೇಷನ್ ಆಗಿ ಶ್ರೀಮಾನ್ ಟೋಕಿಯೋ ಸೇಮಾ ಅವರು ಸತ್ತರು. ಏನಾದರೂ ಆಸ್ತಿ ಪಾಸ್ತಿ ಮಾಡುವುದು ಹಾಗಿರಲಿ ಅವರು ಕೊಂಡಿದ್ದ ಕ್ರಾಕರಿ ಮತ್ತು ಕರ್ಟನ್‌ಗಳಿಗೆ ಹಣ ಕೊಡುವುದೂ ಬಾಕಿಯಾಗಿತ್ತು. ೫-೬ ಮಕ್ಕಳು ಬೇರೆ. ಯಾರಾದರೂ ಈ ಸಾಮಾನುಗಳನ್ನು ಕೊಂಡರೆ ಬಾಕಿ ತೀರಿಸಬಹುದೆಂದು ವಿಧವೆ ಬಗೆದರು. ಆದರೆ ಅವರು ಕಷ್ಟದಲ್ಲಿರುವುದನ್ನು ತಿಳಿದ ಕೆಲವು ಜನ ನೆರವಾಗಲು ಮುಂದೆ ಬಂದರು. ಚಂದಾ ಎತ್ತಿ ಸುಮಾರು ೭೦೦ ರೂ. ಕೂಡಿಸಿದರು. ಮೃತರ ಗುಣಗಳಿಗೆ ಸಲ್ಲಿಸಿದ ಅಲ್ಪ ಕಾಣಿಕೆಯಾಗಿತ್ತು ಇದು. ಗುಣಶಾಲಿಯಾದ ಆತ ಹಣವನ್ನು ಉಳಿಸದೆ ಹೆಂಡತಿ ಮಕ್ಕಳ ಪಾಲಿಗೆ ಋಣವನ್ನು ಬಿಟ್ಟು ಹೋಗಿದ್ದರು. ಮನುಷ್ಯನು ಬಿತ್ತಿದ ಸತ್ಕರ್ಮಗಳ ಬೀಜಗಳು ಎಂದೂ ನಿಷ್ಫಲವಾಗುವುದಿಲ್ಲ. ಕೆಲವು ಬೀಜಗಳು ಬೇಗ ಮೊಳೆಯಬಹುದು, ಫಲ ಕೊಡಬಹುದು. ಕೆಲವು ತೆಂಗು ಅಡಕೆಗಳಂತೆ ಕಾಲಾಂತರದಲ್ಲಿ ವಿಪುಲ ಫಲ ಕೊಡಬಹುದು.

ಉಮಾದೇವಿ ಶಂಕರರಾವ್

ಕೂದಲಿನಲ್ಲಿ ಇತಿಹಾಸ!

ಡಾ. ನಾರಾಯಣ ಮಹಿಷಿ

ಮನುಷ್ಯ ತನ್ನ ಸುತ್ತಲಿನ ವಾತಾವರಣಕ್ಕೆ ಅನುಗುಣವಾಗಿಯೇ ನಡೆಯಬೇಕಾಗುತ್ತದೆ. ಬಿಸಿಲಿನ ಬೇಗೆ ಹೆಚ್ಚಾದಾಗ ಮೈಮೇಲೆ ತೆಳುವಾದ ಬಟ್ಟೆ ತೊಡುತ್ತಾನೆ; ಚಳಿಗಾಲದಲ್ಲಿ ಉಣ್ಣೆಯ, ಇತರ ದಪ್ಪನೆಯ ಬಟ್ಟೆಗಳನ್ನು ಹಾಕಿಕೊಳ್ಳುತ್ತಾನೆ. ಅವನು ತಿನ್ನುವ ಆಹಾರಗಳ ಉಷ್ಣತೆಯಲ್ಲಿ ಸಹ ಅನುರೂಪವಾದ ಬದಲಾವಣೆಗಳನ್ನು ನಾವು ನೋಡಿದ್ದೇವೆ. ಆಧುನಿಕ ಕಾಲದಲ್ಲೂ ಇನ್ನಿತರ ಬದಲಾವಣೆಗಳನ್ನು ನಾವು ಕಾಣುತ್ತೇವೆ. ಮನುಷ್ಯ ಒಂದು ರಾಸಾಯನಿಕ ಉದ್ದಿಮೆಯಲ್ಲಿ ಕೆಲಸಮಾಡುತ್ತಿದ್ದನೆಂದರೆ ಅವನು ಉಸಿರಾಡುವ ಹವೆ ಶುದ್ಧವಿರುವದಿಲ್ಲ. ಅನಿಲೋದ್ಯಮ ಇದ್ದರೆ ಹೆಚ್ಚಾಗಿ ಅನಿಲವನ್ನೇ ಒಳಗೆ ಎಳೆದ ಕೊಳ್ಳಬೇಕಾಗುತ್ತದೆ. ರಾಸಾಯನಿಕ ಚೂರ್ಣದ ಉದ್ದಿಮೆ ಇದ್ದರೆ ಉಸಿರಾಡುವ ಹವೆಯಲ್ಲಿ ಚೂರ್ಣದ ಸೂಕ್ಷ್ಮ ಕಣಗಳು ಪುಪ್ಪುಸಗಳಲ್ಲಿ ಹೋಗುವದುಂಟು; ರಕ್ತ ಪ್ರವಾಹದಲ್ಲಿ ಸೇರಿದರೂ ಆಶ್ಚರ್ಯಪಡಬೇಕಾಗಿಲ್ಲ. ವಾಹನಗಳ ಬಳಕೆ ಹೆಚ್ಚಾದಂತೆಲ್ಲ ವಾತಾವರಣದಲ್ಲಿ ಇಂಗಾಲದ ಸೂಕ್ಷ್ಮಾತಿ-ಸೂಕ್ಷ್ಮ ಕಣಗಳು ತೇಲಾಡುತ್ತಿರುತ್ತವೆ. ಅಖಂಡವಾಗಿ ಈ ಕಣಗಳನ್ನೇ ನಾವು ಉಸಿರಾಡಿದರೆ ಕೆಲವು ದಶಕಗಳಲ್ಲಿ ಪುಪ್ಪುಸಗಳು ಇದ್ದಿಲು ಮೂಟೆಗಳಾಗಬಹುದೇನೋ ಎಂಬ ಭಯ ಆವರಿಸುತ್ತದೆ. ಲೋಹೋದ್ಯಮಗಳಲ್ಲಿಯೂ ಸಹ ಲೋಹದ ಕಣಗಳು ವಾತಾವರಣದಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದರೆ, ಅವುಗಳ ಪರಿಣಾಮ ಮನುಷ್ಯನ ಆರೋಗ್ಯದ ಮೇಲೆ ಆಗದಿರದು. ಈ ಹಿನ್ನೆಲೆಗೆ ಅನುಕೂಲವಾಗುವಂಥ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು.

ಆರ್ಸೆನಿಕ್ ಎಂಬುದು ಒಂದು ಲೋಹ. ಇದೇನು ಶರೀರಪೋಷಣೆಗೆ ಬೇಕಾಗಿಯೇ ಇಲ್ಲ. ನಾವು ತಿನ್ನುವ ಆಹಾರದಲ್ಲಿ ಇದರ ಅಸ್ತಿತ್ವ ಇರುವ ಅವಶ್ಯಕತೆಯೂ ಇಲ್ಲ. ಆದರೂ ಮನುಷ್ಯ ಶರೀರದ ಅಂಗಾಂಶಗಳಲ್ಲಿ ಇದು ಅತ್ಯಂತ ಅಲ್ಪ ಪ್ರಮಾಣದಲ್ಲಿ ಸಿಗುತ್ತದೆ. ಹತ್ತು ಲಕ್ಷ ಭಾಗದಲ್ಲಿ ಒಂದು ಹತ್ತಾಂಶದಷ್ಟು!

ಆದರೆ ಆರ್ಸೆನಿಕ್‌ದಲ್ಲಿ ಔಷಧಿ ಗುಣಧರ್ಮಗಳಿವೆಯೆಂದು ಹೋದ ಶತಮಾನದಲ್ಲಿ ಕಂಡು ಬಂದಾಗ ಗ್ರೀಸ್ ದೇಶದಲ್ಲಿ ಚರ್ಮಬಾಧೆ, ಶಾರೀರಿಕ ಕ್ಷೀಣತೆ ಮತ್ತು ಕ್ಯಾನ್ಸರ್ ಚಿಕಿತ್ಸೆಗಳಲ್ಲಿ ಇದರ ಉಪಯೋಗವಾಯಿತು. ಆರ್ಸೆನಿಕ್ ಲೋಹ ಸಾವಯವ ಸಂಯುಕ್ತದೊಡನೆ ಬೆರೆತು ಹೊಸ ರಾಸಾಯನಿಕ ಸಂಯುಕ್ತವು ತಯಾರಾದಾಗ, ಅದನ್ನು ಸಿಫಿಲಿಸ್ ರೋಗ ಚಿಕಿತ್ಸೆಯಲ್ಲಿ ಉಪಯೋಗಿಸಲಾಯಿತು. ಇದೇ ತರಹದ ಸಂಯುಕ್ತಗಳನ್ನು ದೊಡ್ಡ ಪ್ರಮಾಣದಲ್ಲಿ ಉಪಯೋಗಿಸಿದಾಗ ಕಳೆನಾಶಕ, ಕ್ರಿಮಿನಾಶಕ, ಮೂಷಕನಾಶಕ, ಗುಣಧರ್ಮಗಳಿದ್ದುದು ಕಂಡುಬಂದಿತು.

ಆರ್ಸೆನಿಕ್ ಲೋಹ ಒಂದೇ ಬಗೆಯದಿದ್ದರೂ ಇತರ ರಾಸಾಯನಿಕಗಳೊಂದಿಗೆ ಬೆರೆತಾಗ ಅನೇಕ ಸಂಯುಕ್ತಗಳು ಅಸ್ತಿತ್ವದಲ್ಲಿ ಬರುತ್ತವೆ. ಆರ್ಸೈನ್ ಎಂಬುದು ಬಹಳ ವಿಷಕಾರಿ ಅನಿಲ. ಅದನ್ನು ಉಸಿರಾಡುವದೆಂದರೆ ವಿಷಗಳಿಗೆಯನ್ನು ಮುನ್ನೋಡಿದಂತೆ. ಮೂಳೆಗಳಲ್ಲಿ, ಚರ್ಮದಲ್ಲಿ ಯಕೃತ್ತಿನಲ್ಲಿ ಈ ಆರ್ಸೆನಿಕ್ ಅತ್ಯಲ್ಪ ಪ್ರಮಾಣದಲ್ಲಿ ಸಿಗುವದುಂಟು. ಇದಕ್ಕೂ ಹೆಚ್ಚು

ಪ್ರಮಾಣದಲ್ಲಿ ಸಿಗಬಹುದಾದ ಇತರ ಸ್ಥಳಗಳೆಂದರೆ ಕೂದಲು ಮತ್ತು ಉಗುರು. ಆರ್ಸೆನಿಕ್ ವಿಷದಿಂದ ಮರಣ ಸಂಭವಿಸುವ ದೇನೋ ನಿಜ, ಆದರೆ ಆದಕ್ಕೆ ಸಂಬಂಧಿಸಿದ ಅನೇಕ ವಿವರಗಳನ್ನು ಕಲೆ ಹಾಕಿದಾಗ ಮರಣವು ಇಂಥ ಕಾರಣದಿಂದಲೇ ಸಂಭವಿಸಿರಬೇಕು ಎಂದು ಹೇಳುವದು ಐತಿಹಾಸಿಕ ದೃಷ್ಟಿಯಿಂದ ಕುತೂಹಲಕಾರಿಯಾದುದು.

ಇತ್ತೀಚೆಗೆ, ಸುಮಾರು ಒಂದು ವರುಷದ ಹಿಂದೆ ವೈದ್ಯಕೀಯ ಇತಿಹಾಸ ಸಂಶೋಧನೆಗಾಗಿಯೇ ಅಸ್ತಿತ್ವ ಪಡೆದ ಸ್ಕಾಟಿಶ್ ಸಂಸ್ಥೆಯ ಆಶ್ರಯದಲ್ಲಿ ಒಂದು ಸಭೆ ನಡೆದು ಅಲ್ಲಿ ಅನೇಕ ಪ್ರಬಂಧಗಳನ್ನು ಸಾದರಪಡಿಸಲಾಯಿತು. ಗ್ಲಾಸ್ಗೋದ ಪ್ರೊಫೆಸರ್ ಲೆನಿಹಾನ್‌ರು ಓದಿದ ಪ್ರಬಂಧ -ಕೂದಲು ಮತ್ತು ಇತಿಹಾಸ- ಕುತೂಹಲಕಾರಿಯಾಗಿತ್ತೆಂದೇ ಹೇಳಬೇಕು. ಅನೇಕ ಕಾರಣಗಳಿಂದಾಗಿ ಮಹಾನುಭಾವರ ಕೂದಲನ್ನು ಸುರಕ್ಷಿತವಾಗಿ ತೆಗೆದಿಡುವ ಪರಿಪಾಠ ಅನೇಕ ದೇಶಗಳಲ್ಲಿದ್ದ ಬಗ್ಗೆ ನಾವು ಪತ್ರಿಕೆಗಳಲ್ಲಿ ಓದಿ ತಿಳಿಯುತ್ತೇವೆ. ಇಂಥ ದೇಶಗಳ ವರ್ಗದಲ್ಲಿಯೇ ಭಾರತವು ಸಹ ಬರುವದು. ಈ ಕೂದಲನ್ನು ಆಧುನಿಕ ಉಪಕರಣಗಳನ್ನುಪಯೋಗಿಸಿ ವೈಜ್ಞಾನಿಕ ವಿಶ್ಲೇಷಣೆಗೆ ಗುರಿಪಡಿಸಿದಾಗ ಅನೇಕ ಹೊಸ ವಿಷಯಗಳು ಬೆಳಕಿಗೆ ಬರುತ್ತವೆ. ಇಂಥ ವಿಶ್ಲೇಷಣೆಯ ಹಿನ್ನೆಲೆಯಲ್ಲಿ, ಅನೇಕರು 'ಭಾರಲೋಹ ವಿಷಗಳಿಗೆ' ತುತ್ತಾದ ಬಗ್ಗೆ ಗೊತ್ತಾಗುತ್ತದೆ. ಕೂದಲಿನಲ್ಲಿ ಪ್ರೋಟೀನ್ ಇರುವ ವಿಚಾರ ಹೊಸದೇನಲ್ಲ. ಈ ಪ್ರೋಟೀನ್ ಸಂಯುಕ್ತ ತಯಾರಾಗುವ ಸುತ್ತಲಿರುವ ಲೋಹದೊಂದಿಗೆ ರಾಸಾಯನಿಕವಾಗಿ ಬೆರೆತು 'ಸಾವಯವ ಲೋಹಗಳು' (Organo- metals) ಅಸ್ತಿತ್ವ ಪಡೆಯುತ್ತದೆ. ಕೂದಲು ಬೆಳವಣಿಗೆಯ ಅನೇಕ ಹಂತಗಳಲ್ಲಿ ಒಂದೊಂದು ಅಡ್ಡಪದರನ್ನು (Cross section) ಬೇರ್ಪಡಿಸಿ ಪರೀಕ್ಷಿಸಿದಾಗ ಯಾವ ತರಹದ ವಿಷಲೋಹ ಅಲ್ಲಿದೆ ಎಂಬುದು ಗೊತ್ತಾಗುವದು. ಅವುಗಳೆಂದರೆ ಸೀಸ, ಆರ್ಸೆನಿಕ್, ಪಾದರಸ, ಕ್ಯಾಡ್ಮಿಯಂ ಇತ್ಯಾದಿ. ಇದರಿಂದ ಯಾವ ವಿಷ ಆ ಮನುಷ್ಯನ ಶರೀರದ ಮೇಲೆ ದುಷ್ಪರಿಣಾಮ ಮಾಡಿತು ಎಂಬುದು ಗೊತ್ತಾಗುವದು.

ನೆಪೋಲಿಯನ್‌ನ ಕೂದಲು ಪರೀಕ್ಷೆ ಅಭಿಪ್ರಾಯಗಳಿಗೆ ಎಡೆಮಾಡಿಕೊಟ್ಟಿದೆ. ಡಾ. ಹ್ಯಾಮಿಲ್ಟನ್ ಸ್ಮಿಥ್ ೧೯೬೧ ಮತ್ತು ೧೮೭೧ ರ ಅವಧಿಯಲ್ಲಿ ನೆಪೋಲಿಯನ್ನನ ಕೂದಲಿನ ವಿಶ್ಲೇಷಣೆಯನ್ನು ಹೋದ ದಶಕದಲ್ಲಿ ಮಾಡಿದ್ದಾರೆ. ಮನುಷ್ಯರನ್ನು ಕೊಲ್ಲಲು ಬೇಕಾದ್ದಕ್ಕಿಂತ ಕೊಂಚವೇ ಕಡಿಮೆ ಪ್ರಮಾಣದ ಆರ್ಸೆನಿಕ್ ಆ ಕೂದಲಿನಲ್ಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ವಿಶ್ಲೇಷಣೆಯಲ್ಲಿ ಆರ್ಸೆನಿಕ್ ಅಸ್ತಿತ್ವ ಮತ್ತು ಪ್ರಮಾಣ ಕ್ರಮೇಣ ಹೆಚ್ಚುತ್ತ ಹೋಗುವದರಿಂದ ವಿಷಪ್ರಾಶನ ಮಾಡಿಸಿಕೊಂಡ ಬಗ್ಗೆ ಅನುಕೂಲ ಅಭಿಪ್ರಾಯವನ್ನು ಡಾ ಸ್ಮಿಥ್ ಕೊಟ್ಟಿಲ್ಲ. ರಾಬರ್ಟ್ ಬರ್ನ್ಸ್‌ನ ಕೂದಲಿನಲ್ಲಿ, ಒಂದು ಹತ್ತು ಲಕ್ಷ ಭಾಗಗಳಲ್ಲಿ ಎಂಟು ಭಾಗ ಪಾದರಸ ಇದ್ದ ಬಗ್ಗೆ ವರದಿ ಇದೆ. ಲೈಂಗಿಕ ರೋಗ ಚಿಕಿತ್ಸೆಯಲ್ಲಿ ಪಾದರಸ ಸಂಯುಕ್ತಗಳನ್ನು ಉಪಯೋಗಿಸಿರಬೇಕೆಂಬುದು ವೈಜ್ಞಾನಿಕ ಅಭಿಪ್ರಾಯ. ಎರಡನೆ ಚಾರ್ಲೆಸ್‌ನ ಕೂದಲಿನಲ್ಲಿ ಸಹ ಹತ್ತು ಲಕ್ಷಕ್ಕೆ ೫೪ ಭಾಗ ಪಾದರಸ ಸಿಕ್ಕಿದ್ದರಿಂದ 'ವಿಷಪ್ರಾಶನ'ದ ಬಗ್ಗೆ ಅಭಿಪ್ರಾಯ ಕೊಟ್ಟದ್ದಾಯಿತು. ಆದರೆ ಚಾರ್ಲೆಸ್ ರಸವಾದಿಯಾದ್ದರಿಂದ (Alchemist) ಪಾದರಸವನ್ನು ಶುದ್ಧ ಮಾಡುವಲ್ಲಿ ತೊಡಗಿರುತ್ತಿದ್ದ. ಈ ಕಾರಣವೇ ಅವನ ಕೂದಲಿನಲ್ಲಿಯ ಪಾದರಸವಿದ್ದ ಹಿನ್ನೆಲೆಯಲ್ಲಿದೆ ಎಂದು ಕಂಡುಹಿಡಿಯಲಾಗಿದೆ.

ಈ ತರಹದ ಕೂದಲಿನ ವೈಜ್ಞಾನಿಕ ವಿಶ್ಲೇಷಣೆ ಮನುಷ್ಯನ ಇತಿಹಾಸವನ್ನೇ ತಿಳಿಸಿ ಹೇಳಲು ಸಮರ್ಥವಾಗಿದೆ. ✡

ಮಹಾತ್ಮಾ ಗಾಂಧಿ ಅವರಿಂದ ಮೆಚ್ಚುಗೆ ಪಡೆದಿದ್ದ 'ಮಾದರಿ ಮೈಸೂರು' ರಾಜ್ಯದಲ್ಲಿ ಜನರು ನೆಮ್ಮದಿಯಾಗಿ ಬಾಳುತ್ತಿದ್ದರು. ಅದಕ್ಕೆ ಮುಖ್ಯ ಕಾರಣ ಆಳಿದ ಮಹಾಪ್ರಭುಗಳಾದ ನಾಲ್ಮಡೀ ಕೃಷ್ಣರಾಜ ಒಡೆಯರ ಅವರ ವಿಶಾಲ ಮನೋಭಾವ ಹಾಗೂ ವಿವೇಕದಿಂದ ಆಡಳಿತವನ್ನು ನಡೆಸುಕೊಂಡು ಹೋಗುತ್ತಿದ್ದ ದಿವಾನ ಮಿರ್ಜಾಸಾಹೇಬರ ದಕ್ಷತೆ.

ಮಿರ್ಜಾಸಾಹೇಬರ ಒಂದು ದೊಡ್ಡ ಗುಣ ಅವರು ದಕ್ಷರಾದ ಹಿರಿಯ ಅಧಿಕಾರಿಗಳ ಸಲಹೆಗಳನ್ನು ತೆಗೆದುಕೊಳ್ಳದೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ.



ಖಲ್ವಾಟೋ ಕ್ವಚಿತ್ ದರಿದ್ರಃ!

ಸಿ. ಬಿ. ಜಯರಾವ್

ಎರಡನೇ ದುಂಡುಮೇಜಿನ ಪರಿಷತ್ತು ಲಂಡನ್ನಿನಲ್ಲಿ ನಡೆದಾಗ ಅವರು ದಕ್ಷರಾದ ಇಬ್ಬರು ಹಿರಿಯ ಅಧಿಕಾರಿಗಳನ್ನು ತಮ್ಮ ಜೊತೆಯಲ್ಲಿ ಲಂಡನ್ನಿಗೆ ಕರೆದುಕೊಂಡು ಹೋದರು. ಒಬ್ಬರು ವಿದ್ಯಾ ಇಲಾಖೆಯ ಡೈರೆಕ್ಟರರಾಗಿದ್ದ ಎಸ್. ಪಿ. ಸುಬ್ಬರಾಯರು, ಇನ್ನೊಬ್ಬರು ಕೆಚ್ಚೆದೆಯ ಅಧಿಕಾರಿ ಹಾಗೂ ಆಡಳಿತದಲ್ಲಿ ಪೂರ್ಣ ಅನುಭವವುಳ್ಳ ನವರತ್ನ ರಾಮರಾಯರು.

ಸುಬ್ಬರಾಯರು ಮತ್ತು ರಾಮರಾಯರು ಆಪ್ತ ಸ್ನೇಹಿತರು. ಇಬ್ಬರೂ ಸಾಹಿತ್ಯ ಮತ್ತು ಸಂಗೀತ ಪ್ರೇಮಿಗಳು. ಇಬ್ಬರೂ ರಸಿಕರು; ನವರತ್ನ ರಾಮರಾಯರು ವ್ಯಾಸಂಗ ಮಾಡಿದ್ದು ಬೆಂಗಳೂರಿನಲ್ಲಿ. ಅವರು ಮತ್ತು ರಾಜಾಜಿಯವರು ಆಪ್ತ ಮಿತ್ರರು, ಚೀಟ್ ಸಾಹೇಬರ ಅಚ್ಚುಮೆಚ್ಚಿನ ಶಿಷ್ಯರು. ಇಬ್ಬರೂ ಮದ್ರಾಸಿನಲ್ಲಿ ಲಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಸೇಲಂನಲ್ಲಿ ಒಟ್ಟಿಗೇ ಪ್ರಾಕ್ಟೀಸು ಮಾಡುತ್ತಿದ್ದರು. ಆದರೆ ಕಾರಣಾಂತರದಿಂದ ಮೈಸೂರು ಸರಕಾರ ಅವರನ್ನು ಅಮಲ್ದಾರ ಕೆಲಸಕ್ಕೆ ಚುನಾಯಿಸಿದಾಗ ಸೇಲಂ ನಗರವನ್ನು ಬಿಟ್ಟು ಮೈಸೂರಿನ ಕಡೆ ವಾಲಿದರು.

ಸುಬ್ಬರಾಯರು ಉತ್ತಮ ದರ್ಜೆಯಲ್ಲಿ ಇಂಗ್ಲಿಷ್ ಸಾಹಿತ್ಯ ಮತ್ತು ಅರ್ಥಶಾಸ್ತ್ರದಲ್ಲಿ ಪರಿಣತರು; ಇಂಗ್ಲೆಂಡಿನಲ್ಲಿ ಅರ್ಥಶಾಸ್ತ್ರ ಪಂಡಿತರಾದ ಮಾರ್ಷಲ್‌ರ ವಿದ್ಯಾರ್ಥಿಯಾಗಿ

ಅರ್ಥಶಾಸ್ತ್ರದಲ್ಲಿ ಪರಿಪೂರ್ಣ ಪಾಂಡಿತ್ಯವನ್ನು ಪಡೆದವರು.

ಲಂಡನ್ ನಗರ ರಾಮರಾಯರಿಗೆ ಹೊಸದು–ಆದರೆ ಸುಬ್ಬರಾಯರಿಗೆ ತಮ್ಮ ವಿದ್ಯಾರ್ಥಿ ಜೀವನದಲ್ಲಿ ಅನುಭವಿಸಿದ ಸಿಹಿ ನೆನಪುಗಳು ಮರುಕಳಿಸಿ ಬರುತ್ತಿದ್ದವು. ಗೆಳೆಯ ರಾಮರಾಯರಿಗೆ, ಅವರ ವಿದ್ಯಾರ್ಥಿ ಜೀವನ, ಅವರು ಹೋಗುತ್ತಿದ್ದ ಹೋಟೆಲುಗಳು, ಬಟ್ಟೆಯನ್ನು ಒಗೆದು ಇಸ್ತ್ರೀ ಮಾಡುತ್ತಿದ್ದ ಧೋಬಿ, ಹಾಗೂ ಅವರ ಕೇಶರಾಶಿಯನ್ನು ಕತ್ತರಿಸುತ್ತಿದ್ದ ಕ್ಷೌರಿಕ, ಆತನ ಕೈಚಳಕ, ಮುಂತಾದವನ್ನು ವರ್ಣಿಸುತ್ತಿದ್ದರು. ಸುಬ್ಬರಾಯರು ನಾಟಕ ಪ್ರೇಮಿಗಳು. ಅವರು ವಿದ್ಯಾರ್ಥಿ ಜೀವನದಲ್ಲಿ ನೋಡಿದ ನಾಟಕಗಳು, ಭೇಟಿಮಾಡಿದ ನಟ–ನಟಿಯರು ಹಾಗೂ ನಾಟಕಕಾರರು ಇವರುಗಳ ಪರಿಚಯವನ್ನು ಪರೋಕ್ಷವಾಗಿ ಮಾಡಿಕೊಟ್ಟರು.

ಒಂದು ಭಾನುವಾರ ಇಬ್ಬರಿಗೂ ಬಿಡುವು. ಮಿರ್ಜಾಸಾಹೇಬರ ಅಪ್ಪಣೆ ಪಡೆದು ಲಂಡನ್ ನಗರದ ಪರಿಚಯ ಮಾಡಿಕೊಡಲು ಸುಬ್ಬರಾಯರು, ತಮ್ಮ ಗೆಳೆಯರನ್ನು ಜೊತೆಯಲ್ಲಿ ಕರೆದುಕೊಂಡು ಹೋದರು. ತಮ್ಮ ಯೌವನದ ಸವಿನೆನಪುಗಳನ್ನು ಮೆಲುಕು ಹಾಕುತ್ತಾ, ತಾವು ಹೋಗುತ್ತಿದ್ದ ಹೋಟಲು, ಬಟ್ಟೆ ಒಗೆಯುತ್ತಿದ್ದ ಅಗಸ ಮತ್ತು ಕ್ಷೌರ ಮಾಡುತ್ತಿದ್ದ ಹಜಾಮ, ಇವರೆಲ್ಲರ ಭೇಟಿಯನ್ನು ರಾಮರಾಯರಿಗೆ ಮಾಡಿಸಿ, ಸಂಜೆ ಇಬ್ಬರೂ ಒಂದು ಸಿನೆಮಾ ನೋಡುವುದೆಂದು ತೀರ್ಮಾನಿಸಿದರು.

ಆದರೆ ಸುಬ್ಬರಾಯರಿಗೆ ತಾವು ಲಂಡನ್ ನಗರವನ್ನು ಬಿಟ್ಟು ಎಷ್ಟು ವರ್ಷಗಳಾದವು ಎಂಬುದು ಗಮನಕ್ಕೇ ಬರಲಿಲ್ಲ– ಅವರು ಹೇಳಿದ ಪ್ರತಿಯೊಂದು ಸ್ಥಳವೂ ಮಾಯವಾಗಿತ್ತು.

ರಾಮರಾಯರು ವಿನೋದಪ್ರಿಯರು. "ಸುಬ್ಬರಾಯರೇ, ನಾನು ಹುಟ್ಟಿ ಬೆಳೆದದ್ದು ಬೆಂಗಳೂರಿನಲ್ಲಿ. ನಾನು ವಾಸವಾಗಿದ್ದ ಸಿದ್ದೀಕಟ್ಟೆ, ಸೀಗೇಬೇಲಿ ಈಗ ಬೆಂಗಳೂರಿನಲ್ಲಿ ಎಲ್ಲಿದೆ ಎಂಬುದನ್ನು ಪತ್ತೇಹಚ್ಚಲು ನನಗೆ ಸಾಧ್ಯವಿಲ್ಲ. ಬೆಂಗಳೂರು ಕ್ಷಣ ಕ್ಷಣಕ್ಕೂ ಬದಲಾಯಿಸುತ್ತಿದೆ– ನಾವೇ ಬದಲಾಯಿಸುತ್ತಿದ್ದೇವೆ– ನಾವು ಕೂಡ ನಮ್ಮ ಯೌವನದ ಸವಿ ನೆನಪುಗಳನ್ನು ಮೆಲುಕು ಹಾಕಬೇಕೇ ಹೊರತು, ಮರಳಿ ಬಾ ಎಂದರೆ, ನಾವು ಯುವಕರಾಗುತ್ತೇವೆಯೇ? ನೀವು ಲಂಡನ್ ತೋರಿಸಿದ್ದು ಸಾಕು. ಎದುರಿಗೆ ಕಾಣುವ ಷೇವಿಂಗ್ ಸೆಲೂನ್‌ನಲ್ಲಿ ಕ್ರಾಪ್ ಕಟ್ ಮಾಡಿಸಿಕೊಂಡು, ಸಂಜೆ ಯಾವುದಾದರೂ 'ಒಪೆರ' ನೋಡೋಣ" ಎಂದರು.

ಇಬ್ಬರೂ ಷೇವಿಂಗ್ ಸಲೂನ್‌ಗೆ ಹೋದರು ಅದು ಒಂದು ಪುಟ್ಟ ಸಲೂನ್. ಎರಡೇ ಸೀಟುಗಳಿದ್ದವು. ಆದರೆ ಒಬ್ಬನೇ ಕೆಲಸಗಾರ ನಿದ್ದ– ಪ್ರಾಯಶಃ ಇನ್ನೊಬ್ಬ ಆ ದಿನ ರಜಾ ತೆಗೆದುಕೊಂಡಿದ್ದನೆಂದು ಕಾಣುತ್ತದೆ–

ಮೊದಲು ರಾಮರಾಯರು ಕುಳಿತರು–ಅವರ ಕೇಶರಾಶಿ ದಟ್ಟವಾಗಿ ಬೆಳೆದಿತ್ತು. ನಂತರ ಸುಬ್ಬರಾಯರು ಕುಳಿತರು.

ಕ್ಷೌರಿಕ ಬಿಲ್ ಕೊಟ್ಟ– ಇಬ್ಬರಿಗೂ ಒಂದೇ ತರಹ ಚಾರ್ಜ್ ಮಾಡಿದ್ದ. ಆಗ ಸುಬ್ಬರಾಯರು ತಮಾಷೆ ಮಾಡುತ್ತ, "ನೋಡಯ್ಯಾ, ಇದು ಬಹಳ ಅನ್ಯಾಯ. ನನ್ನ ಸ್ನೇಹಿತರ ತಲೆ ತುಂಬಾ ಕೂದಲಿವೆ– ನನ್ನದು ಬೋಳ ತಲೆ, ಬಿಲಿಯರ್ಡ್ ಮೇಜಿಗಿಂತ ನುಣುಪಾಗಿದೆ. ಆದರೆ ಇಬ್ಬರಿಗೂ ಒಂದೇ ಚಾರ್ಜ್ ಮಾಡಿದ್ದೀಯಲ್ಲಾ" ಎಂದರು.

ಅದಕ್ಕೆ ಆ ಕ್ಷೌರಿಕ ಹೇಳಿದ, "ನಿಮ್ಮ ಗೆಳೆಯರ ತಲೆ ತುಂಬಾ ಕೂದಲು. ಆದರೆ ನಿಮ್ಮ ತಲೆಯಲ್ಲಿ ನಾನು ಕೂದಲನ್ನು ಹುಡುಕಿ ಹುಡುಕಿ ಕತ್ತರಿಸಬೇಕಾದ್ದಕ್ಕೆ ಪಟ್ಟ ಶ್ರಮವೇನು ಬಟ್ಟನಲ್ಲಿ ಕಡಿಮೆಯೆ? ಅದಕ್ಕಾಗಿಯೆ ಒಂದೇ ಚಾರ್ಜ್' ಎಂದು.

ಇತಿಹಾಸದಲ್ಲಿ ಒಬ್ಬೊಬ್ಬ ಅರಸನ ಪ್ರಖ್ಯಾತಿ ಒಂದೊಂದು ವಿಷಯದಲ್ಲಿ ಎಂಬ ಪ್ರತೀತಿ ಉಳಿದುಬಿಟ್ಟು ಅವನ ಸಾಧನೆಗಳಲ್ಲಿಯ ಕೆಲವು ಉತ್ತಮ ಅಂಶಗಳು ಬೆಳಕಿಗೆ ಬಾರದೆ ಉಳಿದುಬಿಡುವುದುಂಟು. ಮೊಗಲ್ ಚಕ್ರವರ್ತಿಗಳಲ್ಲಿ ಸಂಗೀತಾರಾಧಕನೆಂದೊಡನೆ ಅಕಬರನ ಹೆಸರು ಥಟ್ಟನೆ ನೆನಪಿಗೆ ಬಂದುಬಿಡುತ್ತದೆ. ತಾನಸೇನನಂಥ ಅಪ್ರತಿಮ ಸಂಗೀತಕಲಾವಿದ ಅವನ ಆಸ್ಥಾನದ ನವರತ್ನಗಳಲ್ಲಿ ಒಬ್ಬನಾಗಿದ್ದುದು ಸಹಜವಾಗಿಯೇ ಇದಕ್ಕೆ ಕಾರಣವಾಗುತ್ತದೆ. ಆದರೆ ಅಕಬರನ ಮಗ ಜಹಾಂಗೀರನೂ ಮೊಮ್ಮಗ ಶಹಾಜಹಾನನೂ ಬಹುಶಃ ಸಂಗೀತ-

ಸಾಗರ.' ಅನಂತರದ ಕಾಲದಲ್ಲಿ ಸಂಗೀತದ ಆಯಾಮಗಳನ್ನೇ ವಿಸ್ತರಿಸುವಂತಹ 'ಮಾನಕೋತೂಹಲ' ಪ್ರಸಿದ್ಧವಾಗಿತ್ತು. 'ಮಾನಕೋತೂಹಲ'ದಿಂದಾಗಿ ರಾಗಗಳ ಒಟ್ಟು ಅಂದ ಹೆಚ್ಚಿತಲ್ಲದೆ ಅವುಗಳ ಕೋಮಲತೆ ಮತ್ತು ಸೂಕ್ಷ್ಮಪದರಗಳನ್ನು ಎತ್ತಿ ತೋರಿಸುವುದು ಸಾಧ್ಯವಾಯಿತು. ಶಹಾಜಹಾನನ ಕಾಲಕ್ಕೆ ಬರೆಯಲಾದ 'ರಾಗದರ್ಪಣ'ದ ಗ್ರಂಥಕರ್ತೃವು ಈ ವಿಷಯವನ್ನು ಹೆಮ್ಮೆಯಿಂದ ಎತ್ತಿ ಹೇಳುತ್ತ ಅವನ ಕಾಲದಲ್ಲಿ ಹಿಂದುಸ್ತಾನಿ ಸಂಗೀತ ಅಕಬರ್, ಜಹಾಂಗೀರರ ಕಾಲಕ್ಕಿಂತಲೂ ಖಂಡಿತ ಹೆಚ್ಚು ಉತ್ತಮ ಮಟ್ಟಕ್ಕೆ ಏರಿತ್ತೆಂದು ಅಭಿಮಾನ

ಸಂಗೀತಪ್ರಿಯ ಶಹಾಜಹಾನ್

ಎನ್. ಆರ್. ಜೈನಾಪುರ

ಪ್ರೇಮದಲ್ಲಿ ಅವನಿಗೆ ಸರಿಸಮಾನರೇ ಆಗಿದ್ದರೆಂದು ನಂಬಲು ಯಾರೂ ಒಮ್ಮೆಲೆ ಸಿದ್ಧರಾಗುವುದಿಲ್ಲ. ಜಹಾಂಗೀರ್ ಉನ್ಮತ್ತ ವಿಲಾಸಿಯೆಂದೂ ಶಹಾಜಹಾನ್ ಮಮತಾಜಳ ಪ್ರೇಮವನ್ನು ಮರೆಯಲಾಗದೆ ತಾಜಮಹಲಿನಂಥ ಸುಂದರ ಸಮಾಧಿಯನ್ನು ನಿರ್ಮಿಸಿದ ಪ್ರೇಮಿಯೆಂದೂ ಹೇಳಿಬಿಡುತ್ತೇವೆ.

ತಂದೆಯ ಪರಂಪರೆಯನ್ನೇ ಜಹಾಂಗೀರ್ ಉಳಿಸಿಕೊಂಡುಬಂದ. ಆದರೆ ಶಹಾಜಹಾನ್ ಮಾತ್ರ ಸಂಗೀತ ವಿಷಯದಲ್ಲಿ ತನ್ನ ತಂದೆ, ತಾತ ಇಬ್ಬರನ್ನೂ ಮೀರಿಸಿದ. ಅಕಬರನ ಕಾಲದಲ್ಲಿ ಸಂಗೀತದ ಪ್ರಮಾಣಗ್ರಂಥವೆಂದರೆ 'ರಾಗ-

ಪಡುತ್ತಾನೆ. 'ರಾಗದರ್ಪಣ'ದಲ್ಲೇ ಆ ಕಾಲದ ಹೆಸರಾಂತ ಸಂಗೀತಗಾರರ ವಿಷಯವೂ ತಿಳಿಯುತ್ತದೆ. 'ರಾಗದರ್ಪಣ'ವನ್ನೇ ಆಧಾರವಾಗಿರಿಸಿಕೊಂಡು ಕೆಲವು ಮಹತ್ವದ ಅಂಶಗಳನ್ನಿಲ್ಲಿ ಎತ್ತಿ ಹೇಳಬಹುದು. ಅಲ್ಲದೆ ಈ ಕಾಲದ ಸಂಗೀತಜ್ಞರ ಪ್ರಮುಖ ಉಲ್ಲೇಖ ಅಬ್ದುಲ್ ಮಜೀದ ಲಾಹೋರಿ ಬರೆದ 'ಬಾದಶಹಾನಾಮಾ' ಗ್ರಂಥದಲ್ಲೂ ದೊರೆಯುತ್ತದೆ.

ಶಹಾಜಹಾನನ ನಂತರ ಬಂದ ಔರಂಗಜೇಬನಿಗೆ ಸಂಗೀತದಂಥ ಲಲಿತ ಕಲೆಗಳಲ್ಲಿ ಆಸಕ್ತಿಯಿರದ್ದರಿಂದ ಮೊಗಲ್ ಆಸ್ಥಾನದಲ್ಲಿ ಸಂಗೀತ ಮೂಲೆಗುಂಪಾಯಿತು. ಆದ್ದರಿಂದ ಶಹಾಜಹಾನನ

ಆಳಿಕೆಯನ್ನೇ ಇತಿಹಾಸಕಾಲದಲ್ಲಿ ಹಿಂದುಸ್ತಾನಿ ಸಂಗೀತದ ಸ್ವರ್ಣಯುಗವೆಂದು ಹೇಳಬೇಕು.

ಶಹಾಜಹಾನನ ಆಸ್ಥಾನದಲ್ಲಿದ್ದ ಸಂಗೀತಗಾರರಲ್ಲಿ ಲಾಲಖಾನ್ ಕಲಾವಂತ ಬಹು ದೊಡ್ಡ ಹೆಸರು. ಅವನು ತಾನಸೇನನ ಮಗನೂ ಉತ್ತಮ ಸಂಗೀತಗಾರನೂ ಆಗಿದ್ದ ವಿಲಾಸಖಾನನ ಅಳಿಯ. ತಾನಸೇನನು ಈತ ಬಾಲಕನಾಗಿದ್ದಾಗಲೇ ಇವನ ಸ್ವರವನ್ನೂ ಇವನ ಯೋಗ್ಯತೆಯನ್ನೂ ಗುರುತಿಸಿ ಇವನೊಬ್ಬ ಮಹಾನ್ ಕಲಾವಿದನಾಗುವನೆಂದು ಭವಿಷ್ಯ ನುಡಿದಿದ್ದನು. ಅವನೇ ಇವನನ್ನು ವಿಲಾಸಖಾನನ ಕೈಗೊಪ್ಪಿಸಿ ತರಬೇತಿ ನೀಡುವಂತೆ ಸೂಚಿಸಿದನಲ್ಲದೆ ಲಾಲಖಾನ್ ವಯಸ್ಸಿಗೆ ಬಂದಾಗ ತನ್ನ ಮೊಮ್ಮಗಳನ್ನು ಅವನಿಗೆ ಕೊಟ್ಟು ವಿವಾಹ ಮಾಡಿದ್ದನು. ಲಾಲಖಾನ್ ಧ್ರುಪದ ಗಾಯನದಲ್ಲಿ ಎತ್ತಿದ ಕೈಯೆನಿಸಿದ್ದ. ಶಹಾಜಹಾನನಿಗೆ ಅವನ ಧ್ರುಪದದ ಹುಚ್ಚು ಎಷ್ಟಿತ್ತೆಂದರೆ ಒಮ್ಮೆ ರೂಪಾಯಿಗಳಲ್ಲಿ ಅವನ ತುಲಾಭಾರ ಮಾಡಿಸಿ ಅವನ ತೂಕಕ್ಕೇರಿದ ಸಾವಿರಾರು ರೂಪಾಯಿಗಳನ್ನು ಅವನಿಗೇ ಅರ್ಪಿಸಿ ಗೌರವಿಸಿದನಂತೆ. ಲಾಲಖಾನನ ಪುತ್ರದ್ವಯ ಖುಶಹಾಲಖಾನ್ ಮತ್ತು ಬಸ್ರಾಮಖಾನರು ತಂದೆಗಿಂತ ಹೆಚ್ಚು ಯೋಗ್ಯತೆಯ ಸಂಗೀತಗಾರರೆನಿಸಿಕೊಂಡಿದ್ದರು. ಖುಶಹಾಲಖಾನನ ತೋಡಿ ರಾಗ ಶಹಾಜಹಾನನನ್ನು ಮಂತ್ರಮುಗ್ಧನನ್ನಾಗಿ ಮಾಡಿಬಿಡುತ್ತಿತ್ತಂತೆ. ಅಕಬರನ ಆಸ್ಥಾನದಲ್ಲಿ ತಾನಸೇನನಿಗಿದ್ದ ಸ್ಥಾನವೇ ಇವರಿಬ್ಬರಿಗೆ ಶಹಾಜಹಾನನ ಆಸ್ಥಾನದಲ್ಲಿತ್ತೆಂದು ಹೇಳಲಾಗುತ್ತದೆ.

ಶಹಾಜಹಾನನ ಆಸ್ಥಾನದಲ್ಲಿದ್ದ ಹಿಂದು ಸಂಗೀತಜ್ಞರಲ್ಲಿ ಜಗನ್ನಾಥ ಪಂಡಿತನ ಹೆಸರು ಎತ್ತಿ ಹೇಳಬೇಕಾದಂಥದು. ಅವನ ಸಂಗೀತದಿಂದ, ವಿದ್ವತ್ತಿನಿಂದ ಬಾದಶಹ ಎಷ್ಟೊಂದು ಸಂಪ್ರೀತನಾಗಿದ್ದನೆಂದರೆ ಅವನಿಗೆ 'ಮಹಾಕವಿ' ಎಂಬ ಬಿರುದಿತ್ತು ಗೌರವಿಸಿದನಲ್ಲದೆ ಒಮ್ಮೆ ರೂಪಾಯಿಗಳಲ್ಲಿ ಅವನ ತುಲಾಭಾರ ಮಾಡಿಸಿದಾಗ ಹಣ ನಾಲ್ಕೂವರೆ ಸಾವಿರಕ್ಕೇರಿತಂತೆ. ಅದನ್ನೆಲ್ಲ ಅವನಿಗೇ ಅರ್ಪಿಸಿ ಮನ್ನಿಸಿದನಂತೆ. 'ಶಾಹನಾಮಾ' ಕರ್ತೃವಿನ ಹೇಳಿಕೆಯ ಪ್ರಕಾರ, "ಸ್ವರ್ಗಸಮಾನ ಭಾರತೀಯ ಸಂಗೀತ ಶಿಖರವನ್ನು ತಲಪಿದವನು ಮಹಾಕವಿ ಜಗನ್ನಾಥನು ಮಾತ್ರ. ಆಗ ಅವನಿಗೆ ಸಮಾನರೆನಿಸುವ ಕಲಾವಿದರೇ ಇರಲಿಲ್ಲ. ಶಹಾಜಹಾನ್ ತನ್ನ ಹೃದಯವನ್ನೇ ತೆರೆದು ಅವನಿಗೆ ತನ್ನನ್ನೇ ಅರ್ಪಿಸಿಕೊಂಡಿದ್ದ. ಸಂಗೀತ ಕಲೆಯಲ್ಲಿ ತಾನಸೇನನ ನಂತರದ ಸ್ಥಾನ ಜಗನ್ನಾಥನದೇ."

'ರಾಗದರ್ಪಣ'ದಲ್ಲಿ ಶಹಾಜಹಾನನ ಕಾಲದ ಹೆಸರಾಂತ ಸಂಗೀತ ಕಲಾವಿದರ ವಿವರವಾದ ಉಲ್ಲೇಖವಿದೆ. ಸಂಗೀತವನ್ನು ಉಚ್ಚ ಸ್ತರ-



ಕ್ಕೇರಿಸುವಲ್ಲಿ ಇವರೆಲ್ಲರೂ ಬಹುವಾಗಿ ಶ್ರಮಿಸಿದವರು.

ತುಲಸೀರಾಮ ಕಲಾವಂತ ಮತ್ತು ಧರ್ಮದಾಸ ಕಲಾವಂತರು ಧ್ರುಪದ ಗಾಯಕಿಯ ಶ್ರೇಷ್ಠ ಗಾಯಕರಾಗಿದ್ದರು. ಇದೇ ಗಾಯಕಿಯಲ್ಲಿ ಇವರಿಗೆ ಸಮಸಮೀಪ ಬರಬಲ್ಲ ಇನ್ನಿಬ್ಬರೆಂದರೆ ಮೋಹಬಖಾನ್ ಹಾಗು ಬಾಜೇಬಖಾನ. 'ನಾಯಕ ಅಫಜಲ್' ಎಂಬ ಗೌರವ ಪಡೆದಿದ್ದ ಗುಣಸೇನ ಇನ್ನೊಬ್ಬ ಪ್ರಖ್ಯಾತ ಸಂಗೀತಗಾರ. ವಲಿ ಥಾಡಿ, ರಹೀಮದಾದ ಥಾಡಿ ಮತ್ತು ಗೋಪಾಲಚಂದ್ರ ಥಾಡಿ ಒಳ್ಳೆಯ ಗಾಯಕರಾಗಿದ್ದರು. ರೋಜಾ ಮತ್ತು ಅಕಬರ್ ಪ್ರಸಿದ್ಧ ಕವ್ವಾಲಿ ಹಾಡುಗಾರರು; ಬಹಾವುದ್ದೀನ್ ಎಂಬ ಸಂತ ಕುಶಲ ಸಂಗೀತಗಾರನೂ ಆಗಿದ್ದ. ಗೀತ, ದ್ರುಪದ ಹಾಗು ತರಾನಾದಲ್ಲಿ ಇವನು ಹೊಸ ಹೊಸ ಆವಿಷ್ಕಾರ ಮಾಡಿದ್ದನು. ಶಹಾಜಹಾನನ ಆಸ್ಥಾನದಲ್ಲಿಷ್ಟು ಜನ ಸಂಗೀತ ವಿದ್ವಾಂಸರಿದ್ದ ಸಂಗತಿಯನ್ನು ಗಮನಿಸಿದಾಗ ಅವನ ಸಂಗೀತಪ್ರೇಮ ಸ್ಪಷ್ಟವಾಗುವುದು.

ಶಹಾಜಹಾನನ ಮಗಳು ಜಹಾಂಆರಾ ಒಮ್ಮೆ ಸುಟ್ಟ ಗಾಯಗಳಿಂದ ಅಸ್ವಸ್ಥಳಾದಳು; ಅವಳು ಪೂರ್ತಿ ಗುಣಹೊಂದಿದ ನಂತರ ಬಾದಶಹನಿಗೆ ಅದೆಷ್ಟು ಆನಂದವಾಯಿತೆಂದರೆ ಅವನು ಅದಕ್ಕಾಗಿ ವಿಶೇಷ ದರ್ಬಾರನ್ನೇ ನಡೆಯಿಸಿದ. ಹರ್ಷ, ಸಮಾಧಾನಗಳೇ ಮೈವೆತ್ತಂತಿದ್ದ ಆ ದರ್ಬಾರಿನಲ್ಲಿ ಶಹಾಜಹಾನನು ಅಗ್ರ ಗೌರವ ನೀಡಿದ್ದು ಸಂಗೀತಗಾರರಿಗೆ. ಅಂದು ಅವರ ಗಾಯನ ವಾದನ ಪ್ರದರ್ಶನದಿಂದ ಸಭೆಯೆಲ್ಲ ರೋಮಾಂಚಿತವಾಯಿತು. ಶಹಾಜಹಾನನಂತೆಯೇ ಅವನ ರಾಣಿಯರು ಮತ್ತು ಅಂದಿನ ಜನಸಾಮಾನ್ಯ ಸಂಗೀತದಲ್ಲಿ ಅದ್ಭುತ ಆಸ್ಥೆಯುಳ್ಳವರೂ ಅದರ ತಿಳುವಳಿಕೆಯುಳ್ಳವರೂ ಆಗಿದ್ದರೆಂದು 'ರಾಗದರ್ಪಣ' ಕಾರ ಹೇಳುತ್ತಾನೆ.

ಆ ಕಾಲದ ಇನ್ನು ಕೆಲವು ಖ್ಯಾತ ಸಂಗೀತ

ಅವಳಿಯಿಂದಾದ ಅವಾಂತರ

ಫ್ರಾನ್ಸಿನ ಪಿಪ್ಪೆ ಎಂಬ ಹಳ್ಳಿಯಲ್ಲಿದ್ದ ಫಿಲಿಪ್ ಮತ್ತು ಗಿಲ್ಬರ್ಟ್ ಅವಳೀ ಸೋದರರು; ಫಿಲಿಪ್ ಎಷ್ಟು ಸಂಭಾವಿತನೋ ಗಿಲ್ಬರ್ಟ್ ಅಷ್ಟೇ ಉಡಾಳ. ಹೀಗಾಗಿ ಚಿಕ್ಕಂದಿನಲ್ಲಿ ಗಿಲ್ಬರ್ಟ ಮಾಡಿದ ತಪ್ಪಿಗೆ ಫಿಲಿಪ್ ಶಿಕ್ಷೆ ಅನುಭವಿಸುತ್ತಿದ್ದ.

ದೊಡ್ಡವರಾದಂತೆ ಫಿಲಿಪ್, ಗಿಲ್ಬರ್ಟರ ಒಳ್ಳೆಯ ಮತ್ತು ಕೆಟ್ಟ ಗುಣಗಳೂ ಬೆಳೆಯುತ್ತ ಹೋದವು; ಫಿಲಿಪ್ ಹೊಟ್ಟೆಪಾಡಿಗಾಗಿ ಲಾರಿ ಡ್ರೈವರ್ ವೃತ್ತಿಗೆ ಸೇರಿದ; ಗಿಲ್ಬರ್ಟ್ ಯಥಾ ಪ್ರಕಾರ ಉಡಾಳತನದಲ್ಲೇ ಕಾಲ ಕಳೆಯತೊಡಗಿದ; ಆಗಲೂ ಗಿಲ್ಬರ್ಟ್ ತಪ್ಪುಗಳಿಗೆ ಫಿಲಿಪ್ ಶಿಕ್ಷೆಯನ್ನನುಭವಿಸುವುದು ತಪ್ಪಿರಲಿಲ್ಲ;

ಒಂದು ದಿನ ಗಿಲ್ಬರ್ಟ್, ಹೋಟೆಲಲ್ಲಿ ಸ್ನೇಹಿತರಿಗೆ ಸಿಕ್ಕಾಪಟ್ಟೆ ತಿನಿಸಿದ. ಕೊನೆಯಲ್ಲಿ ಹೋಟೆಲ್ ಮ್ಯಾನೇಜರರೆದುರು ಸಂಭಾವಿತನಂತೆ ನಟಿಸಿ, ಹಣ ಮನೆಯಲ್ಲೇ ಬಿಟ್ಟು ಬಂದಿರುವುದಾಗಿಯೂ, ತೆಗೆದುಕೊಂಡು ಬಂದು ಕೊಡುವುದಾಗಿಯೂ ಹೇಳಿ ಗೆಳೆಯರೊಂದಿಗೆ ಹೊರಬಿದ್ದ.

ಹಣಬಾರದ್ದರಿಂದ ಹೋಟೆಲ್ ಮ್ಯಾನೇಜರ್ ಪೋಲೀಸರಿಗೆ ದೂರಿತ್ತ; ಪೋಲೀಸರ ಕೈಗೆ ಸಿಕ್ಕವನು ನತದೃಷ್ಟ ಫಿಲಿಪ್. ಆತ ಮರುಮಾತಾಡದೆ ಹೋಟೇಲ್ ಮಾಲೀಕನಿಗೆ ಹಣ ತೆತ್ತು ಮನೆಗೆ ಬಂದು ಗಿಲ್ಬರ್ಟನ ಈ ದುಷ್ಕೃತ್ಯಗಳು ಹೀಗೆಯೇ ಮುಂದುವರೆಯಗೊಡಬಾರದೆಂದು ಅಂದೇ ನಿರ್ಧರಿಸಿದ. ಮುಂದೆ ಕೆಲವೇ ದಿನಗಳಲ್ಲಿ ಗಿಲ್ಬರ್ಟನನ್ನು ಕೊನೆಗೊಳಿಸಿ ತನ್ನ ಹುಟ್ಟಿನ ಜತೆಗೆ ಗಂಟುಬಿದ್ದ ಪೀಡೆಯನ್ನು ಕಳೆದುಕೊಂಡ. ✡

ವಿಧ್ವಾಂಸರೆಂದರೆ ಮುಂಗಲಖಾನ್ ಮತ್ತು ಹುಸಾಮುದ್ದೀನಖಾನ್. ಮುಲ್ಲಾ ಅಬ್ದುಲ್-ಸಲಾಂ ಲಾಹೋರಿ ಕೂಡ ಸಂಗೀತ ಸಾಧನೆಯಲ್ಲಿ ಬಹು ದೂರ ಹೋದವನು. ಆ ಕಾಲದ ಲೇಖಕ ಶೇರಖಾನ್ ಲೋದಿ ತನ್ನ ಗ್ರಂಥ 'ಮುರಾತುಲಖ್ಯಾಲ'ದಲ್ಲಿ ಭಾರತೀಯ ಸಂಗೀತಕ್ಕೆ ಒಂದು ಅಧ್ಯಾಯವನ್ನು ಮೀಸಲಿಟ್ಟಿದ್ದಾನಲ್ಲದೆ ಅದನ್ನು ಮುಕ್ತಕಂಠದಿಂದ ಪ್ರಶಂಸೆ ಮಾಡಿದ್ದಾನೆ. 'ಬಾದಶಾಹನಾಮಾ' ಬರೆದ ಅಬ್ದುಲ್‌ಮಜೀದ್ ಲಾಹೋರಿಯು ಮಾತಿನಲ್ಲಿ ಹೇಳುವುದಾದರೆ, "ಸಂಗೀತ ಹೃದಯಸ್ಪರ್ಶಿಯಾಗಿರುವಂತೆಯೇ ಶೀರ ಕಠಿಣ ವಿಷಯವೂ ಆಗಿದೆ. ಭಾರತೀಯ ಸಂಗೀತ ಕಲೆಯ ಶಿಖರವನ್ನೇರುವುದು ನಮಗೆ ಕಲ್ಪನೆಯಿಂದ ಕೂಡ ಅಶಕ್ಯ, ಅದರ ಧ್ವನಿಯಲ್ಲಿ ಕೋಮಲತೆಯಿದೆ, ಮಾಧುರ್ಯವಿದೆ, ಹೃದಯವನ್ನು ತಟ್ಟುವಂಥ ಆಕರ್ಷಣ ಶಕ್ತಿಯಿದೆ. ಪ್ರತಿಯೊಂದು ದೇಶದಲ್ಲೂ ಸಂಗೀತ ಕಲೆ ಪ್ರಚಲಿತವಿದೆ; ಆದರೆ ಈ ಗಾಂಭೀರ್ಯ, ಸೌಂದರ್ಯ, ಕೋಮಲತೆ, ಮೋಹಕತೆ ಹಾಗೂ ಸೂಕ್ಷ್ಮತೆ ಭಾರತೀಯ ಸಂಗೀತದಲ್ಲಿರುವುದರ ಹತ್ತರಲ್ಲೊಂದು ಪಾಲು ಅಲ್ಲ, ಸಾವಿರದಲ್ಲೊಂದು ಪಾಲು ಸಹ ಬೇರಾವ ದೇಶದ ಸಂಗೀತದಲ್ಲೂ ಇಲ್ಲ"

ಆ ಕಾಲದ ಇನ್ನೊಬ್ಬ ಸಂಗೀತಗಾರ ಫಕೀರುಲ್ಲಾ ಸೇಫಖಾನ್. ಅವನು ಭಾರತೀಯ ಸಂಗೀತದ ಅಧ್ಯಯನವನ್ನು ಆಳವಾಗಿ ಮಾಡಿದನಲ್ಲದೆ ರಾಜಾ ಮಾನಸಿಂಹನ ಗ್ರಂಥ 'ಮಾನಕೋತೂಹಲ'ವನ್ನು ಪರ್ಶಿಯನ್ ಭಾಷೆಗೆ ಅನುವಾದಿಸಿ ಅದಕ್ಕೆ 'ರಾಗದರ್ಪಣ' ಎಂದು ಹೆಸರಿಟ್ಟನು. ಆದರೆ ಹೀಗೆ ಮಾಡುವಾಗ ಅವನು ಮಾಡಿದ್ದು ಬರಿ ಭಾಷಾಂತರವನ್ನಷ್ಟೆ. 'ಮಾನಕೋತೂಹಲ'ದಲ್ಲಿ ಸಾಮಾನ್ಯ ಓದುಗರಿಗೆ ಅಸ್ಪಷ್ಟವಾಗಿ ಉಳಿದಿದ್ದ ಅನೇಕ ಅಂಶಗಳನ್ನು ವಿವರವಾಗಿ ತಿಳಿಯಾಗಿ ಅರ್ಥವಾಗುವಂತೆ ಬರೆದನು. ಭಾರತೀಯ ಸಂಗೀತದಲ್ಲಿ ಯಾವ ಯಾವ ರಾಗಗಳು ಯಾವ ಯಾವ ರಾಗಗಳ ಮಿಶ್ರಣದಿಂದ ಹುಟ್ಟಿವೆಯೆಂಬುದನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ, ಪ್ರತಿಯೊಂದು ರಾಗಕ್ಕೂ ರಾಗಿಣಿ (ಸ್ತ್ರೀ)ಯೂ ಇರುತ್ತದೆ; ಅಲ್ಲದೆ ಪ್ರತಿ ರಾಗಿಣಿಗೂ ಬೇರೆ ಬೇರೆ ಪುತ್ರ ರಾಗಗಳೂ ಇರುತ್ತವೆಯೆಂಬ ಅಂಶವನ್ನು ಮೊಟ್ಟಮೊದಲ ಬಾರಿಗೆ ಇಲ್ಲಿ ಬಹು ಮನವರಿಕೆಯಾಗುವ ರೀತಿಯಲ್ಲಿ ವಿವರಿಸಲಾಗಿದೆ. ಷಹಜಹಾನನ ಕಾಲ ಭಾರತೀಯ ಸಂಗೀತ ಸಾಮ್ರಾಜ್ಯದಲ್ಲಿ ಅಕ್ಷರಶಃ ಸುವರ್ಣಯುಗವೆಂದು ಹೇಳಲು ಇಷ್ಟು ಸಾಕಲ್ಲವೆ? ★

ಎರಡು ಕವನಗಳು

ಪ್ರೇಮ

ಪ್ರಾಯದ ಹಕ್ಕಿಗೆ
ಮೋಹದ ರೆಕ್ಕೆ
ಬಲಿತಾಗ...
ಸಂಪ್ರದಾಯದ
ಕತ್ತಿ ಏಟು!
ಕ್ಷಣಕಾಲ
ರೆಕ್ಕೆ- ಮುರುಕನ
ಹಾರಾಟ
ಚೀರಾಟ...
ಬಳಿಕ
ನೀರವ.

–ಡಾ. ಎಂ. ಎಸ್. ಸುಬ್ಬಣ್ಣ

ನೆನಪು

ಒಂದು

ಹುಡುಗೀ,
ನೀ ಪೆಟ್ರೋಲಿನಂತೆ
ಹನಿಯಾಗಿ ಬಿದ್ದು
ನೆಲದಲ್ಲಿ, ಜಲದಲ್ಲಿ ಹಸರಿಸಿ
ಆವಿಯಾಗಿ
ಸಾಗಿ
ಮೂಗಿನಲ್ಲಿ
ದೇಹವನ್ನೆಲ್ಲ ವ್ಯಾಪಿಸುತ್ತೀಯು.

ಇನ್ನೊಂದು

ಅರಿವ ಮುಂಚೆಯೆ
ಕಣ ಕಣವ ಕೊರೆವ
ಔಷಧಿಗೆ ಬಗ್ಗದ
ಅರ್ಕೆಕೆಗೆ ತಗ್ಗದ
ಹಿಗ್ಗುವ
ಎಲ್ಲೆಡೆ ನುಗ್ಗುವ
ಕ್ಯಾನ್ಸರ್ ಕ್ರಿಮಿ ನಿನ್ನ ನೆನಪು.

–ಜಿ. ನಾರಾಯಣ

ಉದಾಹರಣೆಗೆ, ಛಾಯಾಗ್ರಹಣದಂಥ ಸಾಧನ ಹೊಂದಿದೆ. ಈ ಸಾಧನ ಕ್ಲುಪ್ತ ಕಾಲದವರೆಗೆ ವಾಚನ ವಸ್ತುವನ್ನು ಕಾಣಿಸಿ, ಕ್ಯಾಮರಾದ ಕವಾಟ ರಂಧ್ರವನ್ನು ಮುಚ್ಚುವಂತೆ, ಈ ಕ್ಲುಪ್ತಗೊಂಡ ಕಾಲ ಮುಗಿದ ಕೂಡಲೇ ಓದುವ ವಸ್ತುವನ್ನು ಮುಚ್ಚಿಬಿಡುತ್ತದೆ. ಅಷ್ಟರೊಳಗೆ ವಾಚಕ ವಿಷಯವನ್ನು ಓದಿ ಅದನ್ನು ಮನನ ಮಾಡಿಕೊಳ್ಳಬೇಕು. ಮತ್ತೊಂದು ಸಾಧನದಲ್ಲಿ ಮುದ್ರಿತ ವಾಚನ ವಿಷಯ ಗೊತ್ತುಪಡಿಸಿದ ವೇಗದಲ್ಲಿಹಾದು ಹೋಗುತ್ತಿರುತ್ತದೆ. ಈ ಚಲನೆಯ ವೇಗದಲ್ಲಿ ಪದಗಳು ಕಣ್ಮರೆಯಾಗುವುದರೊಳಗೆ ವಾಚಕ ವಾಕ್ಯಗಳನ್ನು ಓದಿ ವಿಷಯವನ್ನು ಗ್ರಹಿಸಬೇಕು. ಆದರೆ ಇಂಥ ಸಾಧನಗಳ

◆ ಜಿ. ಎಸ್. ಭಟ್ಟ

ವೇಗವಾಗಿ ಓದುವುದು ಹೇಗೆ?

ವಾಚಕ ಗ್ರಹಿಸಬೇಕಾದ ವಿಷಯಗಳು ಅಪಾರವಾಗಿರುವುದರಿಂದ ಮನಸ್ಸಿನ ಒತ್ತಡಕ್ಕೆ ಅವಕಾಶವುಂಟಾಗಬಹುದು. ದೊರಕಬಹುದಾದ ಎಲ್ಲ ವಿಷಯಗಳನ್ನೂ ತಲೆಯಲ್ಲಿ ತುಂಬಿಕೊಳ್ಳಲು ಯಾರೂ ಹೋಗುವುದಿಲ್ಲವಾದರೂ 'ಓದಬೇಕಾದ ವಿಷಯಗಳು ಎಷ್ಟೋ ಇವೆ. ನೂರು ವರ್ಷಗಳ ಹಿಂದೆ ಮಾನವನ ವಾಚನ ವೇಗ ನಿಮಿಷಕ್ಕೆ ೧೫೦ ರಿಂದ ೨೦೦ ಪದಗಳಾಗಿದ್ದುವು; ದುರದೃಷ್ಟವಶಾತ್ ಈಗ ಈ ವೇಗ ಬಹುಮಟ್ಟಿಗೆ ಕಡಿಮೆಯಾಗಿದೆ.

ವೇಗವಾಗಿ ಓದಿ, ಓದಿದ ವಿಷಯಗಳನ್ನು ಗ್ರಹಿಸಲು ಹೇಗೆ ಸಾಧ್ಯ? ವಿದೇಶೀತಜ್ಞರು ಈ ಬಗ್ಗೆ ವಿವಿಧ ವಿಧಾನಗಳನ್ನು ಕಂಡುಹಿಡಿದಿದ್ದಾರೆ. ಮೂಲಕವಾದ ವಾಚನದಿಂದ ಗ್ರಹಿಸಿದ ವಿಷಯ ಕ್ಷಣಕಾಲ ಮನಸ್ಸಿನಲ್ಲಿದ್ದು ಅಳಿಸಿಹೋಗುತ್ತದೆ.

ವಾಚನ ಸಮಸ್ಯೆಯ ಬಗ್ಗೆ ಎಂ ಎಸ್‌ಸಿ (ಎಂಜಿನಿಯರಿಂಗ್) ಪದವೀಧರ ಓಲೆಗ್ ಕುಪ್‌ನ್‌ಟ್‌ಸೊವ್ ಎಂಬಾತನ ನಾಯಕತ್ವದಲ್ಲಿ ಮಾಸ್ಕೋ ನಗರದ ವಿಜ್ಞಾನಿಗಳು ಕಳೆದ ಐದು ವರ್ಷಗಳಿಂದ ಸಂಶೋಧನೆ ನಡೆಸಿದ್ದಾರೆ. ರಷ್ಯನ್ ಭಾಷೆಯ ವೈಶಿಷ್ಟ್ಯ, ವಾಚನ ಮನೋವಿಜ್ಞಾನ ಹಾಗೂ ವಿಷಯಗ್ರಾಹಕ ಶಕ್ತಿಗೆ ಸಂಬಂಧಿಸಿದ ಮನಶ್ಶಾಸ್ತ್ರ ಇವುಗಳ ಅಧ್ಯಯನದ ನೆರವಿನಿಂದ ಅವರು ಯಾವ ಸಾಧನಗಳನ್ನೂ ಬಳಸದೆ ವೇಗವಾಗಿ ಓದುವ ತಂತ್ರವನ್ನು ಕಂಡುಹಿಡಿದಿದ್ದಾರೆ, ವಾಚನ ಪ್ರಕ್ರಿಯೆಯನ್ನು

ಸ್ಥಾಪಿಸಿ ವಾಚನಕ್ಕೆ ಕುಂದನ್ನುಂಟುಮಾಡುವ ದುರಭ್ಯಾಸಗಳನ್ನು ವಾಚಕ ತೊರೆಯುವಂತೆಯೂ ಹಾಗೂ ಅವನಲ್ಲಿ ಉಪಯುಕ್ತ ಅಭ್ಯಾಸಗಳುಂಟಾಗುವಂತೆಯೂ ಅವನಿಗೆ ಶಿಕ್ಷಣ ನೀಡಿ ಈ ದಿಸೆಯಲ್ಲಿ ಉತ್ತಮ ಫಲಿತಾಂಶಗಳನ್ನು ಸಾಧಿಸಲಾಗಿದೆ. ಇದರಿಂದ ವಾಚನದ ವೇಗ ನಿಮಿಷಕ್ಕೆ ೧೦೦೦ ಪದಗಳಿಗೆ ಹೆಚ್ಚಿ ಓದಿದ ವಿಷಯವನ್ನು ಮನದಟ್ಟು ಮಾಡಿಕೊಳ್ಳುವಂತೆಯೂ ಆಗಿದೆ. ಅಂದರೆ, ವಾಚನ ವೇಗ ಈ ಪದ್ಧತಿಯಿಂದ ಐದು ಪಟ್ಟು ಹೆಚ್ಚಿದಂತಾಯಿತು.

ಕುಪ್‌ನೆಟ್ಸ್‌ಸೋವ್ ಹೇಳುವಂತೆ, "ಜನರಲ್ಲಿ ಅನೇಕರು ತಮಗೆ ಅನುಕೂಲವಾದಾಗ ಮಾತ್ರ ಓದುತ್ತಾರೆ. ಮನೆಯಲ್ಲಿ ಸಾಮಾನುಗಳ ಪಟ್ಟಿಯನ್ನು ಮರೆತು, ಸೂಪರ್ ಬಜಾರಿನ ಸರಕುಗಳ ಸಾಲುಗಳ ನಡುವೆ ಸಾಗುತ್ತಾ, ಅಲ್ಲಿನ ಅರೆಗಳಲ್ಲಿರುವ ವಸ್ತುಗಳಲ್ಲಿ ಯಾವವನ್ನು ಕೊಳ್ಳಬೇಕೆಂದು ಜ್ಞಾಪಿಸಿಕೊಳ್ಳುವ ವ್ಯಕ್ತಿಗೆ ಈ ಪದ್ಧತಿಯನ್ನು ಹೋಲಿಸಬಹುದು. ಹೀಗೆ ತನಗೆ ಬೇಕಾದ ವಿಷಯವನ್ನು ಸಂಗ್ರಹಿಸಲು ಗ್ರಂಥದ ಪ್ರತಿ ಸಾಲನ್ನೂ ಓದಿಕೊಂಡು ಹೋಗುವ ವಾಚಕ ಬಹು ಸಮಯವನ್ನು ಸುಮ್ಮನೆ ಕಳೆಯುತ್ತಾನೆ. ಭಾಷಾಶಾಸ್ತ್ರಜ್ಞರ ಪ್ರಕಾರ ಆಧುನಿಕ ಗ್ರಂಥಗಳಲ್ಲಿ ಶೇಕಡಾ ೭೫ರಷ್ಟು ವಿಷಯಗಳು ಅನಗತ್ಯವಾಗಿರುವುದೇ ಹೆಚ್ಚು; ಈ ಅನಗತ್ಯವಾದ ವಿಷಯಗಳು ವಾಚಕನಿಗೆ ಈಗಾಗಲೇ ತಿಳಿದ ವಿಷಯಗಳಾಗಿರುತ್ತವೆ ಇಲ್ಲವೆ ನಿರುಪಯುಕ್ತವಾಗಿರುತ್ತವೆ. ವೇಗ ವಾಚನದಲ್ಲಿ ವಿಷಯವನ್ನು ಬದಲಾಯಿಸುತ್ತಾ ಹೋಗಬೇಕಾದುದು ಅಗತ್ಯ.

ವಾಚನ ಮೂರು ಹಂತಗಳ ಜಟಿಲ ಪ್ರಕ್ರಿಯೆ; ಪ್ರಥಮತಃ, ವ್ಯಕ್ತಿಯು ವೀಕ್ಷಣೆಯಿಂದ ಗ್ರಂಥದ ಒಂದು ಭಾಗವನ್ನು ವಾಚನಕ್ಕೆ 'ಹಿಡಿದು ನಿಲ್ಲಿಸುತ್ತಾನೆ.' ತರುವಾಯ ಆ ಭಾಗದ ವಿಷಯವನ್ನು ಮಾನಸಿಕವಾಗಿ 'ವಾಚಿಸುತ್ತಾನೆ.' ಈ ವಾಚನವನ್ನು 'ಆಲಿಸಿದಾಗ' ಮಾತ್ರ ಅವನು ತನ್ನ ಮನಸ್ಸಿಗೆ 'ಪುನಃ ಓದು' ಅಥವಾ 'ವಾಚನವನ್ನು ಮುಂದುವರಿಸು' ಎಂಬ ಆಜ್ಞೆಯನ್ನು ನೀಡುತ್ತಾನೆ. ಈ ಮೂರು ಹಂತಗಳನ್ನು ದಾಟುವಷ್ಟರಲ್ಲಿ ವಾಚನದ ವೇಗ ಕನಿಷ್ಟ ಪ್ರಮಾಣಕ್ಕೆ ಇಳಿದು ಹೋಗಿರುತ್ತದೆ. ಈ ಮೂರು ಹಂತಗಳಲ್ಲಿ ಒಂದನ್ನು ಬಿಟ್ಟರೆ ಏನಾಗುತ್ತದೆ? ಯಾವ ಹಂತವನ್ನು ಬಿಡಬಹುದು? ದೀರ್ಘಕಾಲಿಕವಾದ 'ಆಲಿಸುವ' ಹಂತವನ್ನು ಬಿಡಬಹುದು.

ಮಾನಸಿಕ ವಾಚನವನ್ನು – ಸದ್ದಿಲ್ಲದ ಉಚ್ಚಾರವನ್ನು– ಆದಷ್ಟು ಕನಿಷ್ಟ ಪ್ರಮಾಣಕ್ಕೆ ಇಳಿಸಬಹುದು. ಆಗ ಎಲ್ಲ ಶಬ್ದಗಳು ಕೇಳದಿದ್ದರೂ ಕೆಲವು ಶಬ್ದಗಳು ಮಾತ್ರ ಕೇಳಿಸುತ್ತವೆ, ಈ ಸಂದರ್ಭದಲ್ಲಿ ವಾಚಕ ತಾನು ಓದುವ ವಿಷಯದ ಅರ್ಥವನ್ನು ತ್ವರಿತವಾಗಿ ಗ್ರಹಿಸಿ ವಾಚನದ ವೇಗವನ್ನು ಹೆಚ್ಚಿಸಿಕೊಳ್ಳಬಹುದು. ಈ ಅಭ್ಯಾಸವನ್ನು ಸಾಧಿಸುವುದು ಕಷ್ಟ. ಸದ್ದಿಲ್ಲದೆ ಉಚ್ಚರಿಸುವ ಅಭ್ಯಾಸ ಬಾಲ್ಯದಿಂದಲೇ ಬರತಕ್ಕದಾಗಿದೆ.

"ಪ್ರಪಂಚದಲ್ಲಿ ಅತ್ಯಂತ ಕಷ್ಟಕರವಾದುದು



ದೇಶದಲ್ಲಿ "ನೀರಿನಂಶ ತುಂಬಾ ಹೆಚ್ಚಾಗಿದೆ. ಈಗಿನ ಜನತಾ ಕಾಫಿಯೇ ಕುಡೀತೀರೇನು ?"

ಯಾವುದು?" "ನಮ್ಮ ಮುಂದಿರುವುದನ್ನು ನಮ್ಮ ಸ್ವಂತ ಕಣ್ಣುಗಳಿಂದ ನೋಡುವುದು" ಎಂದು ಗಯಟೆ ಹೇಳಿದ್ದಾನೆ. ನೋಡಿದ ಮಾತ್ರಕ್ಕೆ ವೀಕ್ಷಿಸಿದಂತಾಗುವುದಿಲ್ಲ. ವಾಚನ ಪ್ರಕ್ರಿಯೆಯಲ್ಲಿ ನಯನಗಳು ಚಲಿಸಬಹುದು ಇಲ್ಲವೇ ತಟಸ್ಥವಾಗಿ ನಿಲ್ಲಬಹುದು. ನೋಟ ಅಚಲವಾಗಿ ನಿಂತಾಗ ವಿಷಯವನ್ನು ಅಥವಾ ವಸ್ತುವನ್ನು ನಯನ ಗ್ರಹಿಸುತ್ತದೆ. ನಯನದ ಚಲನೆಯಿಂದ ಅದರ ಗ್ರಹಣದ ಘಟ್ಟಗಳು ಬದಲಾಗುತ್ತವೆ. ಗ್ರಹಿಕೆಯ ಹಂತದಲ್ಲಿ ಮಾತ್ರ ವ್ಯಕ್ತಿ ತಾನು ಕಾಣುವುದನ್ನು ನೋಡುತ್ತಾನೆ ಅಥವಾ ವೀಕ್ಷಿಸುತ್ತಾನೆ. ಆಶ್ಚರ್ಯವೆಂದರೆ, ದಿನದಲ್ಲಿ ನಯನದ ೧೦೦,೦೦೦ ಗ್ರಹಿಕೆಯ ನಿಲುಗಡೆಗಳ ಪೈಕಿ ಬಹು ಪ್ರಮಾಣದ ಸಿಲುಗಡೆಗಳಲ್ಲಿ ವಿಷಯವಾಗಲಿ ವಸ್ತುವಾಗಲಿ ಸಂಗ್ರಹವಾಗುವುದಿಲ್ಲ. ನಯನದ ಚಲನೆಗಳು ಪ್ರಜ್ಞಾಹೀನವಾಗಿರುವುದೇ ಇದಕ್ಕೆ ಕಾರಣ. ಆದ್ದರಿಂದ ನೋಟದ ಯುಕ್ತ ಸಮಯದಲ್ಲಿ ಅಗತ್ಯವಾದ ವಿಷಯವನ್ನು ನಮ್ಮ ನಯನಗಳು ಗ್ರಹಿಸಬೇಕಾಗಿದೆ.

ನಾವು ಒಂದು ಶಬ್ದವನ್ನು ಅಕ್ಷರಗಳಲ್ಲಿ ಅಥವಾ ಕಾಗುಣಿತದಲ್ಲಿ ಓದಿಕೊಳ್ಳಬಹುದು. ಕೆಲವರು ಇಡೀ ಶಬ್ದಗಳನ್ನೇ ಓದುತ್ತಾರೆ, ಕೊನೆಗೆ, ಗ್ರಂಥದಿಂದ ಮೂಲಶಬ್ದಗಳನ್ನು ಆಯ್ಕೆ ಮಾಡಿದಾಗ ಅತ್ಯಂತ 'ಚುರುಕು' ವಾಚನ ಚಿಂತನೆಯ ಸಂಯೋಜನೆಯ ಸಹಿತ ಕೇವಲ ಭಾವನೆಗಳಿಂದ ಮಾತ್ರವೇ ಸಾಗುತ್ತದೆ. ಒಂದು ವಾಕ್ಯದ ಕೊನೆಯಿಂದ ಮತ್ತೊಂದು ವಾಕ್ಯದ ಪ್ರಾರಂಭದ ವರೆಗೆ ನಯನದ ನಿರುಪಯುಕ್ತ ನಿಲುಗಡೆ ಹಾಗೂ ನಯನದ ಚಲನೆಯ ಬಗ್ಗೆ ಕಾಲವನ್ನಾಗಲಿ ಅಥವಾ ನರಗಳ ಶಕ್ತಿಯನ್ನಾಗಲಿ ವ್ಯಯಿಸದೆ ಓದುವುದನ್ನು ಕಲಿಯುವುದು ಬಹು ಮುಖ್ಯ. ಇದರಿಂದ ನಯನದ ಚಲನೆಯು ಪುಟದ ಮೊದಲಿನಿಂದ ಕೊನೆಯವರೆಗೆ ಒಂದೇ ರೀತಿ ಹರಿದು ವಾಚನವನ್ನು ತ್ವರಿತಗೊಳಿಸುತ್ತದೆ.

ಪೂರ್ಣವಾಗಿ ಅರ್ಥವಾಗದ ಶಬ್ದಗಳ ಹಾಗೂ ವಾಕ್ಯಗಳ ಕಡೆ ನೋಟವು ಮತ್ತೆ ಹಿಂದಿರುಗುವುದರಿಂದ ಕಾಲ ಹೆಚ್ಚಾಗಿ ಕಳೆದುಹೋಗುವುದು. ಹಾಗೆ ಮಾಡಲು ಪ್ರಯತ್ನಿಸಬೇಡಿ. ಅವುಗಳ ಅರ್ಥ, ಗ್ರಂಥದ ಮುಂದಿನ ಭಾಗದಲ್ಲಿ ನಿಮಗೆ ದೊರಕಬಹುದು. ಪುನರ್ವಾಚನ ಕೆಟ್ಟ ಅಭ್ಯಾಸ. ಇದನ್ನು ತಿಳಿಯದೆಯೇ, ಅನೇಕ ಮಂದಿ ಸುಲಭವಾಗಿರಲಿ ಅಥವಾ ಕ್ಲಿಷ್ಟವಾಗಿರಲಿ ಯಾವ ಗ್ರಂಥವನ್ನಾಗಲಿ ಎರಡು ಬಾರಿ ಓದುತ್ತಾರೆಂಬುದು ಸಂಶೋಧನೆಗಳಿಂದ ತಿಳಿದುಬಂದಿದೆ. ಪುಸ್ತಕವನ್ನು ಮೊದಲ ಸಲ ಕೊನೆಯವರೆಗೂ ಓದಿದ್ದರೆ ಮಾತ್ರ ಅದನ್ನು ಪುನರ್ವಾಚಿಸಬಹುದೆಂದು ವೇಗ ವಾಚನ ವಿಧಾನವು ಸೂಚಿಸುವುದಾಗಿದೆ.

ಇಷ್ಟು ವೇಗದಲ್ಲಿ ಓದುವಾಗ ಓದುಗ ಗ್ರಂಥದಲ್ಲಿನ ವಿಷಯವನ್ನು ವಿಮರ್ಶಾತ್ಮಕವಾಗಿ ಗ್ರಹಿಸಬಲ್ಲನೆ ಎಂಬ ಪ್ರಶ್ನೆ ಇದೆ. ವೇಗವಾಚನವೆಂದರೆ ಗ್ರಹಿಸಿದ ವಿಷಯವನ್ನು ಅರ್ಥ ಮಾಡಿಕೊಂಡು ಜ್ಞಾಪಕದಲ್ಲಿಟ್ಟುಕೊಳ್ಳುವುದು ಎಂಬುದೇ ಈ ವೇಗವಾಚನ ತಂತ್ರವನ್ನು ಕಂಡುಹಿಡಿದ ತಜ್ಞರ ಅಭಿಪ್ರಾಯ. ಮಾಸ್ಕೋ ನಗರದ ವಿದ್ಯುತ್ ಎಂಜನಿಯರಿಂಗ್ ಸಂಸ್ಥೆಯ ವಿದ್ಯಾರ್ಥಿಳ ಮೇಲೆ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಮೇಲೆ ನಡೆಸಿದ ಸಂಶೋಧನಗಳಲ್ಲಿ ವಾಚನವನ್ನು ನಿಧಾನಿಸುವ ಅಭ್ಯಾಸವನ್ನು ತೊಡೆದು ಹಾಕುವುದರಿಂದ ಬುದ್ಧಿಸಾಮರ್ಥ್ಯವು ಹೆಚ್ಚುವುದಲ್ಲದೆ ಬುದ್ಧಿ ಚುರುಕಾಗುವುದೆಂದು ತಿಳಿದುಬಂದಿದೆ.

ಓದಿದ ವಿಷಯವು ಮನಸ್ಸಿನಲ್ಲಿ ಹೇಗೆ ನಿಲ್ಲುತ್ತದೆ? ಯಾಂತ್ರಿಕವಾಗಿ ಮನಸ್ಸಿನಲ್ಲಿ ವಿಷಯವನ್ನು ಉಳಿಸಿಕೊಳ್ಳುವುದಕ್ಕಿಂತ ಪ್ರಜ್ಞಾಪೂರ್ಣವಾಗಿ ಅದನ್ನು ಗ್ರಹಿಸಿ ಮನಸ್ಸಿನಲ್ಲಿ ಉಳಿಸಿಕೊಳ್ಳುವ ಪ್ರಕ್ರಿಯೆ ೨೦ ಪಾಲು ಹೆಚ್ಚು ಫಲದಾಯಕವಾದದ್ದು. ಗ್ರಂಥವನ್ನು ಭಾವನಾಪೂರ್ಣವಾಗಿ ಗ್ರಹಿಸಿದಷ್ಟು ನಿಮಗನ ಗ್ರಹಿಕೆ ಬಲಯುತವೆಂಬುದು ಸಹ ಈ ತಜ್ಞರ ಸಂಶೋಧನೆಗಳಿಂದ ತಿಳಿದು ಬಂದಿದೆ. ★

(ಆಧಾರ: 'ಸ್ಪುಟ್ನಿಕ್')

ನಿಮ್ಮ ಶಬ್ದಭಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ.

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಪರಿಪ್ರಶ್ನ

(ಅ) ಪಾಟೀ ಸವಾಲು (ಆ) ಸಂದೇಹ (ಇ) ಸರಿಯಾದುದನ್ನು ತಿಳಿದುಕೊಳ್ಳಲು ಬಲ್ಲವರನ್ನು ಕೇಳುವುದು (ಈ) ಪರೀಕ್ಷೆ

೨. ಪರಿಕ್ರಮಣ

(ಅ) ಸುತ್ತು ಹಾಕುವುದು (ಆ) ಗಿರಿಗಿಟಿ (ಇ) ಶೌರ್ಯ (ಈ) ಎದುರು ಬೀಳುವುದು

೩. ಪರಿಸ್ತರಣ

(ಅ) ದಾಟಿ ಹೋಗುವುದು (ಆ) ಬದಲಾಗುವುದು (ಇ) ಸುತ್ತ ಹರಹುವುದು (ಈ) ಈಸುವುದು

೪. ಪರಿಕ್ಷೇಪ

(ಅ) ರಾತ್ರಿಯಾಗುವುದು (ಆ) ಸುತ್ತ ಬೀರುವಿಕೆ (ಇ) ಹುಗಿದಿಡುವುದು (ಈ) ಬಹಳ ಬೇಗ

೫. ಎರಕಲು

(ಅ) ಕೂಡಿಕೆ (ಆ) ಇಳಿಜಾರು (ಇ) ಬೇಡಿ ತಂದದ್ದು (ಈ) ಜಲಪಾತ

೬. ಕೊರಕಲು

(ಅ) ಹೊಲಸು (ಆ) ತಗ್ಗು (ಇ) ಬೇಸರ (ಈ) ಕಲ್ಲು ದೋಣಿ

೭. ಅವ್ವಲು

(ಅ) ಉತ್ಕೃಷ್ಟ (ಆ) ಮೂಲಧನ (ಇ) ಬೆಟ್ಟಗೆ (ಈ) ಕೊನೆ

೮. ಸುಯ್ಯಲು

(ಅ) ಹಾಸಿಗೆ (ಆ) ಹೊಟ್ಟೆಕಿಚ್ಚು (ಇ) ಉಸಿರು (ಈ) ಕಸೂತಿ

೯. ಕೂಟಪ್ರಶ್ನ

(ಅ) ಬಿಡಿಸಲಾರದ ಸಮಸ್ಯೆ (ಆ) ಜ್ಯೋತಿಷ್ಯ ಕೇಳುವುದು (ಇ) ಜಾತಕ ಹೊಂದಿಸುವುದು (ಈ) ಕೊನೆಯ ಸವಾಲು

೧೦. ಕೂಟ ಸಾಕ್ಷ್ಯ

(ಅ) ಮದುವೆಯ ದಾಖಲೆ (ಆ) ಕದ್ದು ಕೇಳುವುದು (ಇ) ಫಿತೂರಿ (ಈ) ಸುಳ್ಳು ಸಾಕ್ಷ್ಯ

೧೧. ಗೆಬರು

(ಅ) ಕೆದರಿ ಬಾಚು (ಆ) ಚೆಲ್ಲು (ಇ) ಮುಚ್ಚು (ಈ) ದೋಣಿ ನಡೆಸು

೧೨. ದೊಗಳೆ

(ಅ) ಚರ್ಮ (ಆ) ಎದೆ (ಇ) ವಾಚಾಳಿ ಹೆಣ್ಣು (ಈ) ಸಡಿಲು

೧. **ಪರಿಪ್ರಶ್ನೆ** (ಇ) ಸರಿ ತಪ್ಪು ತಿಳಿಯಲು ಬಲ್ಲವರನ್ನು ಪ್ರಶ್ನಿಸುವುದು, ಕೇಳಿ ತಿಳಿದುಕೊಳ್ಳುವುದು. ಉದಾ– ಜ್ಞಾನಿಗಳಿಂದ ಪರಿಪ್ರಶ್ನೆ ಮೂಲಕ ತಿಳಿದುಕೋ. [ಸಂಸ್ಕೃತ–ಪರಿ= ಸುತ್ತಲೂ, ಪ್ರಶ್ನೆ = ಕೇಳುವುದು.]

೨. **ಪರಿಕ್ರಮಣ** (ಅ) ಸುತ್ತು ಹಾಕುವುದು, ಸುತ್ತು ಬರುವುದು, ಪರಂಪರೆ ಉದಾ– ಸೂರ್ಯನ ವಾರ್ಷಿಕ ಪರಿಕ್ರಮಣ. [ಸಂಸ್ಕೃತ– ಪರಿ = ಸುತ್ತಲೂ, ಕ್ರಮಣ= ಸಾಗುವಿಕೆ.]

೩. **ಪರಿಸ್ತರಣ** (ಇ) ಸುತ್ತ ಹರಡುವುದು, ಮುಚ್ಚುವುದು ಮುಸುಕು. ಉದಾ– ಹುಲ್ಲಿನ ಪರಿಸ್ತರಣದ ಮೇಲೆ ಮಲಗಿದ. [ಸಂ. ಪರಿ= ಸುತ್ತಲೂ, ಸ್ತರಣ= ಹರಡುವಿಕೆ.]

೪. **ಪರಿಕ್ಷೇಪ** (ಅ) ದಿಕ್ಕುದಿಕ್ಕಿಗೆ ಬೀರುವುದು; ಹರಹು, ವಿಸ್ತಾರ. ಉದಾ– ದೃಷ್ಟಿಯ ಪರಿಕ್ಷೇಪದಲ್ಲಿ ಒಂದೂ ಮರವಿಲ್ಲ. [ಸಂ. ಪರಿ = ಸುತ್ತಲೂ, ಕ್ಷೇಪ = ಚೆಲ್ಲುವಿಕೆ.]

೫. **ಎರಕಲು** (ಅ) ಜಲಪಾತ, ದಬಧಬೆ, ಅಬ್ಬಿ. [ದೇಶ್ಯ—ಎರೆ= ನೀರು ಹೊಯ್ಯು.]

೬. **ಕೊರಕಲು** (ಅ) ಪ್ರವಾಹ, ಗಾಳಿ ಮೊದಲಾದವುಗಳ ಚಲನೆಯಿಂದಾದ ತಗ್ಗು. ಉದಾ–ರಸ್ತೆಯಲ್ಲೆಲ್ಲ ಕೊರಕಲು [ದೇಶ್ಯ–ಕೊರೆಯಿಂದ.]

೭. **ಅವ್ವಲು** (ಅ) ಉತ್ಕೃಷ್ಟ, ಉತ್ತಮ, ಬೆರಕೆ ಇಲ್ಲದ; ಶ್ರೇಷ್ಠ. ಉದಾ–ಅವ್ವಲ್ ಸಕ್ಕ, ಅವ್ವಲ್ ಕಮೀಶನರ್. [ಅರಬ್ಬಿ–ಹಿಂದುಸ್ತಾನಿ.]

೮. **ಸುಯ್ಯಲು** (ಇ) ಉಸಿರು, ನಿಟ್ಟುಸಿರು, ದೀರ್ಘಶ್ವಾಸ; ಸಿಳ್ಳೆ. ಉದಾ–ವಿರಹದ ಸುಯ್ಯಲು. ಕಾಳಿಂಗನಾಗನ ಸುಯ್ಯಲು, [ದೇಶ್ಯ–ಸುಯ್= ಉಸಿರು ಬಿಡು.]

೯. **ಕೂಟಪ್ರಶ್ನೆ** (ಅ) ಬಿಡಿಸಲಾರದ ಪ್ರಶ್ನೆ. ಮೋಸದ ಪ್ರಶ್ನೆ. ಉದಾ–ಜೀವನವೇ ಒಂದು ಕೂಟಪ್ರಶ್ನೆ, ಕೂಟಪ್ರಶ್ನೆಗಳಿಂದ ವಿದ್ಯಾರ್ಥಿ ಕಂಗಾಲಾದ. [ಸಂ.–ಕೂಟ= ಮೋಸವುಳ್ಳ, ಪ್ರಶ್ನೆ.]

೧೦. **ಕೂಟಸಾಕ್ಷ್ಯ** (ಈ) ಸುಳ್ಳು ಸಾಕ್ಷ್ಯ, ಕೃತಕ ಸಾಕ್ಷ್ಯ. ಉದಾ–ಕೂಟಸಾಕ್ಷ್ಯಗಳನ್ನು ಸೃಷ್ಟಿಸಿ. [ಸಂ.–ಕೂಟ= ಮೋಸದ, ಸಾಕ್ಷ್ಯ.]

೧೧. **ಗೆಬರು** (ಅ) ಕೆದರಿ ಬಾಚು, ಕೆರೆ, ಗೀರು. ಉದಾ–ಕೈಗೆ ಸಿಕ್ಕಿದ್ದನ್ನು ಗೆಬರಿಕೊಂಡು ಹೋದ. [ಕನ್ನಡ.]

೧೨. **ದೊಗಳೆ** (ಈ) ಸಡಿಲು, ತನ್ನ ಅಳತೆಗಿಂತ ದೊಡ್ಡದಾದ. ಉದಾ–ದೊಗಳೆ ಅಂಗಿ. [ದೇಶ್ಯ–ಡೊಂಗರು = ಪೊಳ್ಳು.]


ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ ... ಸಾಧಾರಣ
೯—೧೦ " ... ಉತ್ತಮ
೧೧—೧೨ " ... ಅತ್ಯುತ್ತಮ

ಭಾರತೀಯ ಮಹಿಳೆಯ ದಕ್ಷಿಣ ಧ್ರುವದ ಸಾಹಸಯಾತ್ರೆ

ಮೂಲ: ಮಿಸ್ ಮೆಹರ್
ಸಂಗ್ರಹ: ಟಿ. ಎಂ. ಸುಬ್ಬರಾಯ
ಟಿ. ಎಂ. ರಮೇಶ್



ಭಾರತೀಯ ಮಹಿಳೆಯ ದಕ್ಷಿಣ ಧ್ರುವದ ಸಾಹಸಯಾತ್ರೆ

'ಏರ್ ಇಂಡಿಯಾ'ದ ಪ್ರವಾಸೋದ್ಯಮ ಇಲಾಖೆಯಲ್ಲಿ ಅಧಿಕಾರಿಗಳಾಗಿರುವ ಶ್ರೀಮತಿ ಮೆಹರ್ ಅವರು ಕಳೆದ ವರ್ಷ ಅಂಟಾರ್ಕ್ಟಿಕವನ್ನು ಸಂದರ್ಶಿಸಿ ದಕ್ಷಿಣ ಧ್ರುವದಲ್ಲಿ ಕಾಲಿರಿಸಿದ ಪ್ರಥಮ ಭಾರತೀಯ ಮಹಿಳೆಯೆನಿಸಿದರು. ಅವರು 'ಇಲ. ಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ'ದಲ್ಲಿ ಬರೆದ ಅನುಭವಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.


ಉರುಳುವ ತೆರೆಗಳ ಪರಿಧಿಯಾಚೆ, ಪ್ರಪಂಚದ ದಕ್ಷಿಣದ ತುತ್ತ ತುದಿಯಲ್ಲಿ, ಹಿಮ ಮತ್ತು ಮಂಜುಗಡ್ಡೆಗಳಿಂದ ಆವೃತವಾದ ಭೂಪ್ರದೇಶವೊಂದಿದೆ. ಯುರೋಪ್ ಹಾಗೂ ಅಮೇರಿಕಗಳೆರಡನ್ನೂ ಸೇರಿಸಿದರೆ ಆಗುವಷ್ಟು ವಿಸ್ತಾರವಾಗಿರುವ ಇದು ಪ್ರಪಂಚದ ಕೊನೆಯ ಖಂಡ. ಇದುವೇ ಅಂಟಾರ್ಕ್ಟಿಕ. ಇದನ್ನು ಕುರಿತು ಕೇಳಿದವರು ಹಲವಾರು ಜನ. ಆದರೆ ನೋಡಿದವರು ಮಾತ್ರ ಬಹು ವಿರಳ.

ಅಂಟಾರ್ಕ್ಟಿಕದ ಚರಿತ್ರೆ ಧೀಮಂತ ನಾಯಕರ ಕತೆಗಳಿಂದ ತುಂಬಿದೆ. ಒಂದು ಕಾಲಕ್ಕೆ ಬರಡಾಗಿ, ಅನುಪಯುಕ್ತವಾಗಿ, ಅತಿ ದುರ್ಗಮವೆನ್ನಿಸಿದ್ದ ಈ ಪ್ರದೇಶ ಇತ್ತೀಚಿತ್ತಲಾಗಿ ಭೂಗೋಳದಲ್ಲಿ ಉತ್ತಮ ಸ್ಥಾನವನ್ನು ಪಡೆದುಕೊಂಡಿದೆ. ಇಂದು ಈ ನೆಲ ಬರಡಲ್ಲ, ಈ ನೆಲದ ಮೇಲೆ ಕೃಷಿ ಸಾಧ್ಯವಾಗದಿದ್ದರೂ ಇಲ್ಲಿನ ಸಂಶೋಧನಾಲಯಗಳಲ್ಲಿ ವಿಜ್ಞಾನದ ಕೃಷಿ ಚೆನ್ನಾಗಿ ನಡೆಯುತ್ತಿದ್ದು ತತ್ಫಲವಾಗಿ ಮಾನವನಿಗೆ ಉಪಯುಕ್ತವಾದ ಸಂಶೋಧನೆಗಳು ಹೊರಬರುತ್ತಿವೆ.

ಈ ಹಿಮಾಚ್ಛಾದಿತ ಭೂಖಂಡದ ಮೇಲೆ ಕಾಲಿಟ್ಟ ಪ್ರಥಮ ಭಾರತೀಯ ಮಹಿಳೆ ಏರ್-ಇಂಡಿಯಾದ ಪ್ರವಾಸೋದ್ಯಮ ಇಲಾಖೆಯಲ್ಲಿ ಪ್ರಮೋಷನ್ ಆಫೀಸರಳಾಗಿ ಕಾರ್ಯ ನಿರ್ವಹಿಸುತ್ತಿರುವ ಮಿಸ್ ಮೆಹರ್ ಹಿರೋಯ್ಸ್ ಮೂಸ್. ಸಾಹಸೀ ಪ್ರವೃತ್ತಿಯ ಮೆಹರ್ ಉತ್ತರ ಧ್ರುವ ಪ್ರದೇಶವನ್ನು ಸುತ್ತಿ ಬಂದಿದ್ದು, ದಕ್ಷಿಣದ ಈ ಭೂಖಂಡವನ್ನೂ ಕಾಣುವ ಆಸೆ ಆಕೆಗೆ ಸ್ವಾಭಾವಿಕವಾಗಿಯೇ ಇತ್ತು. ಅವಳ ಆಸೆ ಪೂರ್ಣಗೊಂಡದ್ದು ಎರಡು ವರ್ಷಗಳ ಹಿಂದೆ.

ಅಂಟಾರ್ಕ್ಟಿಕದ ಪ್ರವಾಸ ಕೈಕೊಳ್ಳುವ ಯೋಗ ಆಕೆಗೆ ಒದಗಿಬಂದದ್ದು ಬಹು ಆಕಸ್ಮಿಕವಾಗಿಯೇ. ೧೯೭೭ರ ಅಕ್ಟೋಬರ್ ತಿಂಗಳು. ಪ್ರವಾಸೋದ್ಯಮಿಗಳಿಗಾಗಿ ಶ್ರೀನಗರದಲ್ಲೊಂದು ಸೆಮಿನಾರ್ ಇತ್ತು, ಅದನ್ನು ಏರ್ಪಡಿಸಿದವರು ಅನುಭವಿಕ ಪ್ರವಾಸೋದ್ಯಮಿ ಲಾರ್ಸ್ ಎರಿಕ್ ಲಿಂಡ್‌ಬ್ಲಾಡ್, ಮೆಹರಳಿಗೂ ಅದರಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿತ್ತು, ಭೂಗೋಳದ ದೂರ ಮೂಲೆಗಳ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ "ಮಿಸ್, ಮೆಹರ್, ಈ ಕ್ರಿಸ್‌ಮಸ್‌ನಲ್ಲಿ ನೀವು ಅಂಟಾರ್ಕ್ಟಿಕಕ್ಕೆ ಭೆಟ್ಟಿ ಇತ್ತರೆ ಹೇಗಿರುತ್ತೆ? ಹೇಗೂ, ನನ್ನ ಹಡಗು ಡಿಸೆಂಬರ್ ಇಪ್ಪತ್ತರಂದು ಕೇಪ್‌ಟೌನ್‌ನಿಂದ ಹೊರಡಲಿದೆ, ನೀವು 'ಎಂ. ಎಸ್, ಲಿಂಡ್‌ಬ್ಲಾಡ್ ಎಕ್ಸ್‌ಪ್ಲೋರರ್'ನ ಅತಿಥಿಗಳಾಗ-

ಬಹುದಲ್ಲಾ!" ಎಂದು ಲೀಡ್‌ಬ್ಲಾಡ್ ಮೆಹರಳನ್ನು ಕುರಿತು ಒಮ್ಮೆಗೇ ಕೇಳಿದರು. ಅಮೇರಿಕದ ಅಂತರಿಕ್ಷಯಾನ ಕೇಂದ್ರ ಅನಿರೀಕ್ಷಿತವಾಗಿ ಚಂದ್ರಲೋಕ ಪ್ರವಾಸಕ್ಕೆ ಆಹ್ವಾನಿಸಿದರೆ ಆಗುವಷ್ಟೇ ಸಂತೋಷ ಮೆಹರಳಿಗೆ ಈ ಆಹ್ವಾನದಿಂದ ಉಂಟಾಗಿತ್ತು. ಆದರೂ ಅವಳು ಅನುಮಾನದಿಂದ, "ಲಾರ್, ನೀವು ಜೋಕ್ ಮಾಡುತ್ತಿಲ್ಲವಷ್ಟೇ!" ಎಂದಳು. ಆದರೆ, ಲಾರ್ ತಮಾಷೆ ಮಾಡಿರಲಿಲ್ಲ. "ಇನ್ನು ಎರಡು ತಿಂಗಳ ಅವಧಿಯೂ ಇಲ್ಲ. ಪಯಣಕ್ಕೆ ಎಲ್ಲಾ ಅಣಿ ಮಾಡಿಕೊಳ್ಳಿ" ಎಂದರವರು. ಸೂರ್ಯನ ತಾಪದಿಂದ ಬೆವರಿಳಿಸಿಕೊಳ್ಳುತ್ತಿದ್ದ ಬೊಂಬಾಯಿಯಲ್ಲಿ, ಫರ್‌ಕೋಟು, ಮಂಜುಕನ್ನಡಕ, ಹಿಮ ಪಾದರಕ್ಷೆ, ಸ್ಕೀಪ್ಯಾಂಟ್ಸ್, ವಿಂಡ್‌-ಚೀಟರ್ಸ್ ಮುಂತಾದ ಚಳಿ ತಡೆಯುವ ವಸ್ತುಗಳನ್ನು ಸಂಗ್ರಹಿಸತೊಡಗುವುದು ಈ ಬಗ್ಗೆ ಗೊತ್ತಿಲ್ಲದ ಜನರಿಗೆ ಹಾಸ್ಯಾಸ್ಪದವಾಗಿ ಕಾಣುವ ಸಂಗತಿಯಾಗಿತ್ತು. ಆದರೆ ಅಲ್ಲಿಗೆ ಹೋಗಬೇಕೆಂದರೆ ಅವೆಲ್ಲ ಅಗತ್ಯ ತಾನೆ! ಅದೃಷ್ಟವಶಾತ್ ಭಾರತೀಯ ಪರ್ವತಾರೋಹಿಗಳ ಸಂಸ್ಥೆ, ಹಿಮಾಲಯ ಪರ್ವತಾರೋಹಿಗಳ



ಹಿಮನಾಯಿಗಳ ಸಾರೋಟು

ಸಂಸ್ಥೆ ಹಾಗೂ ಕ್ಲೈಂಬರ್ಸ್ ಕ್ಲಬ್‌ಗಳು ಅವಳ ಸಹಾಯಕ್ಕೆ ಬಂದು ಅವಶ್ಯಕ ಸಾಮಗ್ರಿಯನ್ನು ಒದಗಿಸಲು ಸಿದ್ಧವಾದವು; ಹಿಮರಕ್ಷಕ ವಸ್ತುಗಳ ಸಂಗ್ರಹದ ಸಮಸ್ಯೆ ಇಷ್ಟು ಸುಲಭವಾಗಿ ಪರಿಹಾರವಾದೀತೆನ್ನುವ ಕಲ್ಪನೆ ಸ್ವತಃ ಮೆಹರಳಿಗೇ ಇರಲಿಲ್ಲ. ಈ ಸಮಸ್ಯೆ ಪರಿಹಾರವಾಗುತ್ತಿದ್ದಂತೆ ಅವಳ ಮನಸ್ಸು ಡಿಸೆಂಬರ್ ಇಪ್ಪತ್ತಕ್ಕಾಗಿ ತುಡಿಯ ತೊಡಗಿತು; ಮಧ್ಯಂತರದ ದಿನಗಳನ್ನು ಆಕೆ ವ್ಯರ್ಥವಾಗಿ ಕಳೆಯಬಯಸಲಿಲ್ಲ. ಹೆಪ್ಪುಗಟ್ಟಿದ ದಕ್ಷಿಣ ಧ್ರುವಪ್ರದೇಶದ ಬಗ್ಗೆ ಸಾಕಷ್ಟು ವಿವರಗಳನ್ನು ಸಂಗ್ರಹಿಸಲೆಂದು ಆಕೆ ಕುಕ್, ರಾಸ್, ಪಾಮರ್ ವೆಡೆಲ್, ಸ್ಕಾಟ್, ಅಮುಂಡ್‌ಸೆನ್, ಶಾಕಲ್ಟನ್, ಬೈರ್ಡ್, ಪಿಜ್ನ್, ಹಿಲ್ಲೇರಿ ಮುಂತಾದವರ ಬರವಣಿಗೆಗಳನ್ನು ಓದಿ ಅರಗಿಸಿಕೊಂಡಳು.



ರಾಕ್ ಹಾಪರ್ ಪೆಂಗ್ವಿನ್

ಮೆಹರಳ ದಕ್ಷಿಣ ಧ್ರುವ ಪ್ರದೇಶದ ಪ್ರವಾಸ ತೊಂದರೆಗಳ ಶೃಂಖಲೆಯಿಂದಲೇ ಆರಂಭವಾಯಿತೆನ್ನಬೇಕು. ಆಕೆ ಪಯಣಿಸುತ್ತಿದ್ದ ವಿಮಾನದಲ್ಲಿ ಅನಿರೀಕ್ಷಿತ ಯಾಂತ್ರಿಕ ತೊಂದರೆ ಉಂಟಾಗಿ ಅವಳಿಗೆ ಸರಿಯಾದ ಸಮಯಕ್ಕೆ ಮಡಗಾಸ್ಕರ್ ತಲುಪಲಾಗಲಿಲ್ಲ, ಅದರಿಂದಾಗಿ ಮಡಗಾಸ್ಕರಿನಿಂದ ಕೇಪ್‌ಟೌನಿಗೆ ಹೊರಟಿದ್ದ ಹಡಗಿನಲ್ಲಿ ಪಯಣಿಸುವುದು ಮೆಹರಳಿಗೆ ಸಾಧ್ಯವಾಗಲಿಲ್ಲ. ದಕ್ಷಿಣ ಆಫ್ರಿಕದ ವೀಸಾ ಇಲ್ಲದೆ ತುಂಬಾ ಬವಣೆಪಡುತ್ತಾ ದಾರ್-ಎ-ಸಲಾಮ್ ಹಾಗೂ ಮಾರಿಟೀಸ್‌ನಲ್ಲಿ ಮುಂದಿನ ಯಾನ ಸೌಲಭ್ಯ ಅರಸುತ್ತಾ ಎಂಟು ದಿನ ಕಳೆಯಬೇಕಾಯಿತು; ಧೃತಿಗೆಡದ ಮೆಹರ್, ಕಷ್ಟಪಟ್ಟು ಕೇಪ್‌ಟೌನ್ ತಲುಪಿ, ತನ್ನ ಸಹಪ್ರಯಾಣಿಕರು ಉಳಿದಿದ್ದ ಹೀರೆನ್‌ಗ್ರಾಟ್ಚ್ ಹೋಟೆಲನ್ನು ಸೇರಿ, ಸಮಾಧಾನದ ನಿಟ್ಟುಸಿರು ಬಿಟ್ಟಳು.

ದಕ್ಷಿಣ ಭೂಖಂಡಕ್ಕೆ ಹೊರಟ ಆ ಗುಂಪಿನಲ್ಲಿ ಹದಿನೆಂಟರಿಂದ ಎಂಭತ್ತೆರಡರ ವರೆಗಿನ ೮೦ ಉತ್ಸಾಹಿಗಳಿದ್ದರು. ಅವರೆಲ್ಲೆಲ್ಲಾ ಹಿರಿಯ ವ್ಯಕ್ತಿ ಎಂದರೆ ಕ್ಲೀವ್‌ಲ್ಯಾಂಡಿನಿಂದ ಆಗಮಿಸಿದ್ದ ಅಮೇರಿಕನ್ ಮಹಿಳೆ. ಆಕೆ ಧೀರ ಶೋಧಕಿ ಮಾತ್ರವಲ್ಲ, ದಕ್ಷಿಣ ಧ್ರುವದ ಸಾಹಸ ಯಾತ್ರೆಯ ನಂತರ ನಡೆದ ಈಸ್ಟರ್ ಐಲ್ಯಾಂಡ್ ಮತ್ತು ಮಚ್ಚುಪಿಚ್ಚು ದಿಬ್ಬಗಳ ಯಾತ್ರೆಯಲ್ಲಿಯೂ ಪಾಲ್ಗೊಂಡಿದ್ದಳು. ದಕ್ಷಿಣ ಧ್ರುವ ಸಾಹಸಯಾತ್ರೆ ಕೈಗೊಂಡ ಈ ಪಂಗಡದ ಮುಂದಿನ ಗುಂಪಿನಲ್ಲಿ ವಿಶ್ವದ ಖ್ಯಾತ ಪಕ್ಷಿತಜ್ಞ ಹಾಗೂ ಚಿತ್ರಕಾರ ರೋಜರ್ ಟೋರಿ ಪೀಟರ್‌ಸನ್, ಬ್ರಿಟಿಶ್ ಅಂಟಾರ್ಕ್ಟಿಕ ಸರ್ವೇಕ್ಷಣದ ಅನುಭವೀ ಹಿರಿಯ ಜಾನ್ ಗ್ರೀನ್, ಜಲ ಪರ್ಯಟನದಲ್ಲಿ [illegible] ಗಳಿಸಿದ ಕ್ಯಾಪ್ಟನ್ ಇರ್ವಿಂಗ್ ಜಾನ್‌ಸನ್,

ನಂತಹ ಘಟಾನುಘಟಿಗಳೇ ಇದ್ದರೂ, ಈ ಸಾಹಸ ಯಾತ್ರೆಯ ನಾಯಕತ್ವವನ್ನು ವಹಿಸಿದಾತ ಅರ್ಜೆಂಟಿನಾದ ಸಾಹಸೀ ಯುವಕ ಫ್ರಾನ್ಸಿಸ್ ಎರೀಸ್. ಖ್ಯಾತ ಶೋಧಕ ಸರ್ ಅರ್ನೆಸ್ಟ್ ಶಾಕಲ್ಟನ್‌ನ ಮೊಮ್ಮಗನಾದ ಕೀತ್ ಶಾಕಲ್ಟನ್ ಇವನ ಸಹಾಯಕನಾಗಿದ್ದ. ಹಡಗಿನ ಕ್ಯಾಪ್ಟನ್ ಸ್ವೀಡಿಶ್ ಅಮೇರಿಕನ್ ಲೈಸೆನ್ಸ್ ಕ್ಯಾಪ್ಟನ್ ಜೆಲ್ ಸ್ಪಿಟರ್‌ಬರ್ಗ್. ಅವನೊಬ್ಬ ಉತ್ತಮ ಕಮಾಂಡರ್; ಸ್ವಭಾವದಿಂದ ತೀರಾ ಸಮಾಧಾನಿ. ತನ್ನ ಕುತೂಹಲವನ್ನು ಇಂಗಿಸಿಕೊಳ್ಳಲು ಮೆಹರ್ ಕೇಳುತ್ತಿದ್ದ ಎಲ್ಲ ಪ್ರಶ್ನೆಗಳಿಗೂ ತಾಳ್ಮೆಯಿಂದ ಉತ್ತರಿಸುತ್ತಿದ್ದ.

ಮೊದಲೆ ನಿರ್ಧರಿಸಿದಂತೆ ಡಿಸೆಂಬರ್ ಇಪ್ಪತ್ತರಂದು ಲೀಡ್‌ಬ್ಲಾಡ್‌ನ ೨,೫೦೦ ಟನ್ನಿನ 'ಫ್ಯಾಂಟಮ್' ಹಡಗು ಕೇಪ್‌ಟೌನ್ ಬಿಟ್ಟಿತು. ದೂರ ದೂರ ಸರಿಯುತ್ತಿದ್ದಂತೆಯೇ ಘನಮೇಘಗಳು ಪರ್ವತವನ್ನಾವರಿಸಿಬಿಟ್ಟಿದ್ದರಿಂದ ಟೇಬಲ್ ಮೌಂಟನ್ನಿನ ಕೊನೆಯ ನೋಟ ಕಾಣುವ ಮೆಹರಳ ಆಸೆ ಫಲಿಸದಾಯಿತು. ಆದ್ದರಿಂದ ಅವಳು ಗುಡ್‌ಹೋಪ್ ಭೂಶಿರವನ್ನು ಒಂದು ಬಾರಿ ಪ್ರದಕ್ಷಿಣೆ ಮಾಡುವುದರಲ್ಲಿಯೇ ತೃಪ್ತಿ ಪಟ್ಟುಕೊಳ್ಳಬೇಕಾಯಿತು.

ನೆಲವನ್ನು ಹಿಂದೆ ಬಿಟ್ಟು ಫ್ಯಾಂಟಮ್ ಸಾಗತೊಡಗಿತು. ಕುಳಿರ್ಗಾಳಿ ಬೀಸತೊಡಗಿತ್ತು. ದಕ್ಷಿಣ ದಿಕ್ಕಿನತ್ತ, ಸಾಹಸೀ ಮನೋವೃತ್ತಿಯನ್ನು ಹೊತ್ತ ಮಹಾನೌಕೆ ಸಾಗಲಾರಂಭಿಸಿತು.

ಪಯಣ ಪ್ರಾರಂಭವಾಗಿ ನಾಲ್ಕು ಗಂಟೆಗಳಾಗಿದ್ದವಷ್ಟೆ. ಮೆಹರ್ ತನ್ನ ಸಂಗಡಿಗರೊಂದಿಗೆ ಅನಂತ ನೀಲ ನಭವನ್ನೂ ಅದ್ಭುತ ಸಾಗರದ ವ್ಯಾಪ್ತಿಯನ್ನೂ ಸವಿಯುತ್ತಾ ಡೆಕ್ಕಿನ ಮೇಲೆ ನಿಂತಾಗ ಇದ್ದಕ್ಕಿದ್ದಂತೆಯೇ ಹವಾಮಾನ ಕೆಟ್ಟಿತು. ಅಲ್ಲಿ ನಿಲ್ಲಲು ಸಾಧ್ಯವಾಗದೆ ಎಲ್ಲರೂ ಕ್ಯಾಬಿನ್ನಿನೊಳಗೆ ಸೇರಿಕೊಂಡರು. ಮತ್ತೆ ಮುಂದೆ ಐದು ದಿನಗಳವರೆಗೆ ಹೊರಬಂದು ಡೆಕ್ಕಿನ ಮೇಲೆ ನಿಲ್ಲಲು ಒಮ್ಮೆಯೂ ಮೆಹರ್‌ಗೆ ಸಾಧ್ಯವಾಗಲಿಲ್ಲ; ಹಡಗನ್ನು ಸುತ್ತುವುದರಲ್ಲಿ, ಸಹಪ್ರಯಾಣಿಕರನ್ನು ಪರಿಚಯಿಸಿಕೊಳ್ಳುವುದರಲ್ಲಿ, ವಿಜ್ಞಾನಿಗಳ ಸಂಶೋಧನಾ ಕೊಠಡಿಗಳನ್ನು ಸಂದರ್ಶಿಸಿ ಮಾಹಿತಿ ಪಡೆಯುವುದರಲ್ಲಿ ಆ ಐದು ದಿನಗಳು ಸರಿದುಹೋದದ್ದೇ ಅವಳಿಗೆ ಗೊತ್ತಾಗಲಿಲ್ಲ. ಹಡಗಿನಲ್ಲಿ ಹನ್ನೆರಡು ಮಂದಿ ಜಲಯಾನದಲ್ಲಿ ನಿಷ್ಣಾತರಾದ ಉಪನ್ಯಾಸಕರಿದ್ದರು, ಪ್ರತಿನಿತ್ಯ ಸಮುದ್ರಯಾನಕ್ಕೆ ಸಂಬಂಧಿಸಿದ ವಿಷಯವೊಂದರ ಬಗೆಗೆ ಅವರಲ್ಲೊಬ್ಬರ ಉಪನ್ಯಾಸವಿರುತ್ತಿತ್ತು : ಅಂಟಾರ್ಕ್ಟಿಕದ ಸಂಶೋಧನೆಯ ಇತಿಹಾಸ ದಕ್ಷಿಣ ಸಮುದ್ರದಲ್ಲಿ ಲಭ್ಯವಾಗುವ ವಸ್ತುಗಳು, ಸಮುದ್ರಶಾಸ್ತ್ರ, ಸಮುದ್ರ ಪಕ್ಷಿಗಳನ್ನು ಗುರುತಿಸುವ ಬಗೆ,



ರಾಜ ಪೆಂಗ್ವಿನ್

ತಿಮಿಂಗಿಲ, ಪೆಂಗ್ವಿನ್ ಮುಂತಾದವುಗಳ ಗುಣ ಸ್ವಭಾವಗಳು ಇತ್ಯಾದಿ ಕುತೂಹಲಕರ ಹಾಗೂ ಬೋಧಕ ವಿಷಯಗಳನ್ನು ಕುರಿತು ಅವರು ಉಪನ್ಯಾಸ ನೀಡುತ್ತಿದ್ದರು. ಊಟವಾದ ನಂತರ ಕೆಲವು ಕುತೂಹಲಮಯ ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸುವ ಏರ್ಪಾಡೂ ಅಲ್ಲಿತ್ತು.

'ಎಂ. ಎಸ್ ಲಿಂಡ್‌ಬ್ಲಾಡ್ ಎಕ್ಸ್‌ಪ್ಲೋರರ್'ನಲ್ಲಿ ಎಲ್ಲರ ಆಸಕ್ತಿಯ ಕೇಂದ್ರವಾಗಿ ಒಂದು ಪುಸ್ತಕ ಭಂಡಾರವೂ ಇತ್ತು. ಪುಸ್ತಕ ಪ್ರೇಮಿಗಳು ಅಲ್ಲಿ ಮುತ್ತುತ್ತಿದ್ದರು. ಸಾಹಸ ಯಾತ್ರೆ ಕುರಿತು ಹಲವರು ಬರೆದ ದೊಡ್ಡ ದೊಡ್ಡ ಹೊತ್ತಿಗೆಗಳು, ಜಗತ್ತಿನ ಮೂಲೆ ಮೂಲೆಯಲ್ಲಿ ಹರಡಿಕೊಂಡ ದ್ವೀಪಸ್ತೋಮಗಳ ನಕಾಶೆಗಳು, ಇಪ್ಪತ್ತನೇ ಶತಮಾನದ ಸಂಶೋಧನಾ ವಿಷಯಗಳನ್ನು ಕುರಿತ ಮಾದರಿ ನಕಾಶೆಗಳು, ಶೋಧಕ ಮಹಾನುಭಾವರ ಇತಿವೃತ್ತ, ಆತ್ಮವೃತ್ತಾಂತಗಳು ಮುಂತಾದ ಹಲವು ಸಂಗ್ರಹಗಳು ಅಲ್ಲಿದ್ದವು.

ಹಡಗಿನಲ್ಲಿ ಮಾಣಿಯು ರುಚಿಕಟ್ಟಾದ ಅಡುಗೆ ಒದಗಿಸಿ, ಎಲ್ಲರನ್ನೂ ತುಷ್ಟರನ್ನಾಗಿಸುತ್ತಿದ್ದ. ಮೆಹರ್ ಆ ಕುರಿತು ಹೇಳುತ್ತಾಳೆ: "ನಾವು ಕೂಡ ಆ ದಿನಗಳಲ್ಲಿ ಅಲ್ಲಿನ ಊಟೋಪಚಾರಗಳಿಂದಾಗಿ 'ತಿನ್ನಲಿಕ್ಕಾಗಿಯೇ ಬದುಕು'



ಸೀಲ್ ಪ್ರಾಣಿಗಳ ಆಟ

ಎನ್ನುವ ಭೋಗತತ್ವದ ಅವಲಂಬಿಗಳಾಗಿದ್ದೆವು. ಒಂದು ತಿಂಗಳ ಅವಧಿಯಲ್ಲಿ ಒಮ್ಮೆ ಮಾಡಿದ ಖಾದ್ಯವನ್ನು ಮತ್ತೊಮ್ಮೆ ಮಾಡದಷ್ಟು ಭಕ್ಷ್ಯಗಳನ್ನು ಮೆನ್ಯೂ ಒಳಗೊಂಡಿರುತ್ತಿತ್ತು" ತನಗೆ ಇಷ್ಟವಾದ ತಿಂಡಿಗಳು ಈ ದಿನ ಯಾವುದೆಂಬ ಆತುರದಿಂದ ಮೆಹರ್ ಪ್ರತಿನಿತ್ಯ ಮುಂಜಾನೆ ನೋಟೀಸ್ ಬೋರ್ಡ್ ನೋಡುತ್ತಿದ್ದಳಂತೆ. ಮತ್ತು 'ಅವನ್ನು ತಿನ್ನಲಿಕ್ಕಾಗಿ ಆರೋಗ್ಯವನ್ನು ಚೆನ್ನಾಗಿಟ್ಟುಕೊಳ್ಳಲು ಯತ್ನಿಸುತ್ತಿದ್ದಳಂತೆ!

ದಕ್ಷಿಣ ಅಟ್ಲಾಂಟಿಕ್ ಮಹಾ ವಾರಿಧಿಯು ಉಬ್ಬಿದ ತೆರೆಗಳನ್ನು ತಳ್ಳುತ್ತಾ ಸರಾಸರಿ ಗಂಟೆಗೆ ಹದಿನಾಲ್ಕು ನಾಟ್ ವೇಗದಲ್ಲಿ (ಸುಮಾರು ಹದಿನೇಳು ಮೈಲುಗಳು) 'ಎಂ. ಎಸ್.' ಸಾಗಿ ಅಗ್ನಿದೇವನ ದ್ವೀಪವೆನ್ನಿಸಿದ ಟ್ರಿಸ್ಟನ್-ಡ-ಕುನ್ಹಾ ದ್ವೀಪವನ್ನು ಕ್ರಿಸ್‌ಮಸ್ಸಿನ ಮುಂಜಾನೆ ತಲುಪಿತು. ನಾಲ್ಕಾರು ದಿನಗಳಿಂದ ನೆಲವನ್ನೇ ಕಾಣದಿದ್ದ ಅವರಿಗೆ ಆ ನೆಲವನ್ನು ಕಂಡಾಗ ನೋಹಾನನಿಗೆ ತನ್ನ ನೌಕೆ ಆರ್ಕ್ ಅರಾರತ್ ಪರ್ವತದ ಬಳಿ ವಿಶ್ರಾಂತಿಗಾಗಿ ನಿಂತಾಗ ಆದಷ್ಟು ಸಮಾಧಾನವಾಯಿತು. ಹಡಗಿನ 'ಡಿಂಗಿ'ಗಳ ಮೂಲಕ ಹನ್ನೆರಡು ಜನರು ಒಂದೊಂದು ಗುಂಪಾಗಿ ದಡ ತಲುಪಿದ ಅವರು ಸಂತೋಷದಿಂದ ತೀರವನ್ನೆಲ್ಲಾ ಸುತ್ತಿದರು; ಬೇಕಾದ ಹಾಗೆ ಓಡಾಡಿದರು!

೩೭° ದಕ್ಷಿಣ ಅಕ್ಷಾಂಶದಲ್ಲಿ ದಕ್ಷಿಣ ಆಫ್ರಿಕದಿಂದ ೧,೫೫೦ ಮೈಲಿಗಳ ದೂರದಲ್ಲಿರುವ ಟ್ರಿಸ್ಟನ್-ಡ-ಕುನ್ಹಾ ಗ್ರೇಟ್ ಬ್ರಿಟನ್ನಿನ ಅಧೀನಕ್ಕೆ ಸೇರಿರುವ ಐದು ದ್ವೀಪಗಳ ಸಮೂಹ. ನೆಪೋಲಿಯನ್ ಚಕ್ರವರ್ತಿ ತನ್ನ ಕೊನೆಯ ದಿನಗಳನ್ನು ಕಳೆದ ಸೇಂಟ್ ಹೆಲೆನಾ ದ್ವೀಪ ಇದಕ್ಕೆ ತೀರಾ ಹತ್ತಿರದಲ್ಲಿದೆ. ೧೬ ನೆಯ ಶತಮಾನದಲ್ಲಿ ಪೋರ್ಚುಗೀಜ್ ಅಡ್ಮಿರಲ್ ಒಬ್ಬನಿಂದ ಕಂಡುಹಿಡಿಯಲ್ಪಟ್ಟ ಈ ದ್ವೀಪ ಸಮೂಹದಲ್ಲಿ ಜನವಸತಿ ಆರಂಭವಾದದ್ದು

೧೮೧೬ ರ ನಂತರವೇ ! ಈ ದ್ವೀಪ ಸಮೂಹ ಹಲವಾರು ಹಡಗುಗಳ ದುರಂತಕ್ಕೆ ಸಾಕ್ಷಿಯಾಗಿ ನಿಂತಿದೆ.

ಟ್ರಿಸ್ಟನ್-ಡಿ ಕುನ್ಹಾ ಮೊದಲು ನಿರ್ಜನವಾಗಿತ್ತಂತೆ. ಇಲ್ಲಿ ಜನವಸತಿ ಆರಂಭವಾದ ಬಗ್ಗೆ ಒಂದು ಕತೆ ಪ್ರಚಲಿತವಾಗಿದೆ. ಒಮ್ಮೆ ಒಂದಾನೊಂದು ಹಡಗು ಒಡೆದುಹೋದಾಗ ಅದರಲ್ಲಿದ್ದವರಲ್ಲಿ ಐದು ಜನ ಹೇಗೆ ಹೇಗೋ ಈ ದ್ವೀಪವನ್ನು ತಲುಪಿದರಂತೆ. ಕೆಲವು ಕಾಲದ ಬಳಿಕ ಅವರಿಗೆ ಅಲ್ಲಿಯ ಒಂಟಿ ಬದುಕು ಅಸಹನೀಯವಾದಾಗ ಕೆಲವು ಹೆಂಗಸರನ್ನು ತಮ್ಮ ಬಳಿ ಕಳುಹಿಸಿ ಎಂದು ಅವರು ದೂರದಲ್ಲಿ ಹೋಗುತ್ತಿದ್ದ ಹಡಗುಗಳಲ್ಲಿದ್ದವರಿಗೆ ಮೊರೆ ಇಟ್ಟರಂತೆ. ಅವರಲ್ಲಿ ಒಬ್ಬನಾದ ಮಿಸ್ಟರ್ ಗ್ಲಾಸ್ ಎನ್ನುವಾತ, ಆ ಭೂಮಿಯ ಮೇಲೆ ಪ್ರಥಮವಾಗಿ ಹೆಜ್ಜೆ ಇಡುವಾಕೆಯನ್ನು ತಾನು ಮದುವೆಯಾಗುವುದಾಗಿ ಘೋಷಿಸಿದ. ಎರಡು ಮಕ್ಕಳ ತಾಯಿ ಸ್ಥೂಲಕಾಯದ ನೀಗ್ರೋ ಮಹಿಳೆಯೊಬ್ಬಳು ಅಲ್ಲಿ ಕಾಲಿಟ್ಟಾಗ ತಾನು ಮಾಡಿದ ಪ್ರಮಾಣದಂತೆ ಗ್ಲಾಸ್ ಅವಳನ್ನೇ ಮದುವೆಯಾಗಿ, ಡಜನ್ನಿಗೂ ಹೆಚ್ಚು ಮಕ್ಕಳ ತಂದೆಯಾದ ! ಅವನ ಪ್ರಥಮ ಶಿಶು ತನ್ನ ಜನ್ಮದಿನದಂದು ನೂರು ಕೋಳಿ ಮೊಟ್ಟೆಗಳನ್ನೂ ಇಪ್ಪತ್ತು ಬಾತು ಮೊಟ್ಟೆಗಳನ್ನೂ ಕೆಲವು ಪೆಂಗ್ವಿನ್ ಪಕ್ಷಿಗಳನ್ನೂ ಕಾಣಿಕೆಯಾಗಿ ಸ್ವೀಕರಿಸಿತು ಎಂದು ಆ ದ್ವೀಪದ ದಾಖಲೆ ಸಾರುತ್ತದೆ !

ಈ ಪ್ರದೇಶದ ಪಟ್ಟಣ ಎನ್ನಬಹುದಾದ ಎಡಿನ್‌ಬರ್ಗ್‌ನಲ್ಲಿ ಇನ್ನೂರಾ ಅರವತ್ತು ಮಂದಿ ವಾಸಿಸುತ್ತಿದ್ದಾರೆ. ಅದು ಅಲ್ಲಿಯ ಜನನಿಬಿಡ ಪಟ್ಟಣ. ಈ ಇನ್ನೂರಾ ಅರವತ್ತು ಮಂದಿ ಗ್ಲಾಸ್, ಗ್ರೀನ್, ಹಾಗನ್, ಲಾವರೆಲೋ, ರೋಜಲ್ ಮತ್ತು ರೆಪೆಟ್ಟೋ ಎನ್ನುವ ಆರು ಅಡ್ಡ ಹೆಸರುಗಳ ಪೈಕಿ ಒಂದನ್ನು ಹೊತ್ತವರೇ ಎನ್ನುವುದು ವಿಚಿತ್ರ. ಇಲ್ಲಿ ಓರ್ವ ಚೀಫ್ ಮ್ಯಾಜಿಸ್ಟ್ರೇಟ್ ಇದ್ದಾನೆ. ಆತ ಕಾನೂನು ಹಾಗೂ ಸುವ್ಯವಸ್ಥೆಯ ಪಾಲಕ. ಆತನ ನೇಮಕವಾದದ್ದು ಬ್ರಿಟನ್ನಿನಿಂದ. ವೈದ್ಯರು, ದಾದಿಯರು, ಶಿಕ್ಷಕರು, ಪಾದ್ರಿಗಳು ಎಲ್ಲರೂ ಬ್ರಿಟನ್‌ನಿಂದ ಬಂದವರೇ. ಆಲೂಗಡ್ಡೆ ಬೆಳೆಯುವುದು ಹಾಗೂ ಕ್ರೇ ಮೀನುಗಳನ್ನು ಸಂಗ್ರಹಿಸಿ ರವಾನಿಸುವುದೇ ಇಲ್ಲಿಯ ನಿವಾಸಿಗಳ ಪ್ರಮುಖ ಉದ್ಯೋಗ. 'ಎಂ.ಎಸ್.' ಹಡಗು ಟ್ರಿಸ್ಟನ್-ಡಿ-ಕುನ್ಹಾದ ಬಳಿ ಹೋದಾಗ ಅದನ್ನು ಎದುರುಗೊಳ್ಳಲು ಬಹಳ ಮಂದಿ ದಡದ ಬಳಿ ಹೋಗಿದ್ದರು. ಆಗಾಗ ಹೊಸ ಮುಖಗಳನ್ನು ಕಾಣುತ್ತಿರುವುದು ಅವರಿಗೆ ಖುಷಿ ಕೊಡುತ್ತಿದೆಯಂತೆ ! ಟ್ರಿಸ್ಟನ್-ಡಿ-ಕುನ್ಹಾದಲ್ಲಿ ದ್ವೀಪವನ್ನು ದಾಟಿದವರು ಕೆಲವೇ ಜನ. ಆದಾಗ್ಯೂ ಹೊರಗಿನಿಂದ ಬರುವ ಮೀನುಗಾರರೋ ಪ್ರವಾಸಿಗಳೋ ವ್ಯಾಪಾರಿಗಳೋ ಇಲ್ಲಿಗೆ ತರುವ ಹೊಸ ಬಗೆಯ ಬಟ್ಟೆಬರೆಗಳು, ಆಧುನಿಕ ವಸ್ತುಗಳು, ಪಾಪ್ ರೆಕಾರ್ಡುಗಳು, ಚಲನಚಿತ್ರ ಪತ್ರಿಕೆಗಳು ಮುಂತಾದವುಗಳಿಂದ ಅಲ್ಲಿಯ ಯುವಕರಿಗೆ ಬಾಹ್ಯ ಪ್ರಪಂಚದ ಪರಿಚಯ ಮಾಡಿಕೊಂಡಿದ್ದಾರೆ. ಈ ದ್ವೀಪದ ನಿವಾಸಿಗಳ ಮೈಕಟ್ಟು ಎತ್ತರ, ಬಣ್ಣ ತಿಳಿ ಕಂದು. ತಮ್ಮ ತಮ್ಮಲ್ಲಿಯೇ ಸಂಬಂಧ ಬೆಳೆಸಿ,



ಮಾರ್ಕೋನಿ ಪೆಂಗ್ವಿನ್

ವಿವಾಹವಾಗುತ್ತಾರೆ. ಸಾಮಾನ್ಯವಾಗಿ ಅವರನ್ನು ಕಾಡುವ ಕಾಯಿಲೆಗಳೆಂದರೆ : ದಂತಕ್ಷಯ ಮತ್ತು ಅಸ್ತಮಾ.

ಮೆಹರ್ ಹಾಗೂ ಆಕೆಯೊಂದಿಗಿನ ಗುಂಪು ಅಲ್ಲಿಯ ದೇವಾಲಯಗಳನ್ನೂ ಆಸ್ಪತ್ರೆಗಳನ್ನೂ ಶಾಲೆಗಳನ್ನೂ ದೊಡ್ಡ ಅಂಗಡಿ ಹಾಗೂ ಕೆಲವರ ಮನೆಗಳನ್ನೂ ಸಂದರ್ಶಿಸಿತು. ೧೯೬೧ ರಲ್ಲಿ ಬಾಯಿ ತೆರೆದು ತನ್ನ ಪ್ರತಾಪ ತೋರಿದ್ದ ದೊಡ್ಡದೊಂದು ಅಗ್ನಿಪರ್ವತವನ್ನೂ ಅವರು ಸಂದರ್ಶಿಸಿದರು.

ಮರಗಳು ಈ ದ್ವೀಪದಲ್ಲಿ ಅತಿ ವಿರಳವಾಗಿರುವುದರಿಂದ ಕಟ್ಟಿಗೆ ಇಲ್ಲಿ ದುರ್ಲಭ. ಇಲ್ಲಿ ಬೆಳೆಯುವುದು ಅಡ್ಡಾದಿಡ್ಡಿ ಪೊದೆಗಳು ಮಾತ್ರ. ಸುಮಾರು ಐವತ್ತು ಕುರಿ ಹಾಗೂ ಇನ್ನೂರೈವತ್ತು ದನಕರುಗಳನ್ನು ಸಾಕುತ್ತಿರುವ ಈ ಪ್ರದೇಶದ ಜನ ಆಹಾರಕ್ಕಾಗಿ ದಕ್ಷಿಣ ಆಫ್ರಿಕವನ್ನವಲಂಬಿಸಿದ್ದಾರೆ !


ಬ್ರಿಟನ್ನಿನ ಸಂರಕ್ಷಣೆಗೆ ಒಳಪಟ್ಟ ಈ ದ್ವೀಪದ ಜನ ವರಮಾನ ತೆರಿಗೆ ಕೊಡುತ್ತಾರೆ. ಮೊದಲು 'ಸರ್ವಸಮಾನತೆ'ಯನ್ನು ಸಮರ್ಥಿಸುವ ಲಿಖಿತ ಸಂವಿಧಾನ ಈ ಜನರಿಗಿತ್ತು. ಆದರೆ ಸಮಾನತೆ ಕೇವಲ ಪುರುಷವರ್ಗಕ್ಕೆ ಮಾತ್ರ ಸೀಮಿತವಾದದ್ದು !

ಒಂದು ಸಂಜೆ ಮೆಹರ್ ಹಾಗೂ ಸಂಗಡಿಗರು ನೈಟಿಂಗೇಲ್ ದ್ವೀಪಕ್ಕೆ ಭೇಟಿಯಿತ್ತರು. ಈ ದ್ವೀಪದಲ್ಲಿ ಜನವಸತಿ ಇಲ್ಲ. ಬದಲಿಗೆ, ಲಕ್ಷಗಟ್ಟಲೆ ಪೆಟ್ರೆಲ್ ಪಕ್ಷಿಗಳು ಬೀಡು ಬಿಟ್ಟಿವೆ. ನೈಟಿಂಗೇಲ್ ದ್ವೀಪದ ಸಮೀಪವೇ ಹಲವು ಚಿಕ್ಕಪುಟ್ಟ ದ್ವೀಪಗಳಿವೆ. ಇವುಗಳು ಅಲ್ಲಲ್ಲಿ ನುಗ್ಗಿದ ಸಮುದ್ರಗಳಿಂದ ತುಂಡು ತುಂಡಾಗಿವೆ.

ಈ ದ್ವೀಪ ಸಮುದಾಯಕ್ಕೆ ವಿದಾಯ ಹೇಳಿ 'ಎಂ. ಎಸ್.' ದಕ್ಷಿಣದತ್ತ ಮತ್ತೆ ಮುಂದೆ ಸಾಗಿತು. ಸುಮಾರು ೫೫೦ ಅಕ್ಷಾಂಶದ ಸಮೀಪಕ್ಕೆ ಬರುತ್ತಿದ್ದಂತೆಯೇ. ಅಟ್ಲಾಂಟಿಕ್ ಸಾಗರದ ಬಿಸಿ ನೀರು ಅಂಟಾರ್ಕ್ಟಿಕದ ತಣ್ಣೀರಿನ ಪ್ರವಾಹದೊಡನೆ ಸೇರಿ ಉಂಟಾದ ಆಕಲನದ ಪರಿಣಾಮವಾಗಿ ಬೃಹತ್ ತೆರೆಗಳು ಉದ್ಭವಗೊಂಡು ಹಡಗನ್ನು ಧ್ರುವವಲಯ (Polar zone) ದತ್ತ ನೂಕತೊಡಗಿದವು. ಮುಂದಿನ ಎರಡು ದಿನಗಳು ಅವರ ಪಾಲಿಗೆ ಭೀಕರವಾಗಿದ್ದವು. ಬರ್ತ್‌ನಲ್ಲಿ ನಿಂತು ಸಮುದ್ರ ಶಾಂತವಾಗಲಿ ದೇವರೇ ಎಂದು ಎಲ್ಲರೂ ಬೇಡಿಕೊಳ್ಳತೊಡಗಿದರು. ಹಾಸಿಗೆಯಲ್ಲಿ ಕುಳಿತುಕೊಳ್ಳುವುದೇ ಕಷ್ಟವಾಯಿತು. ಝಂಝಾವಾತ ಅವಿರತವಾಗಿದ್ದುದರಿಂದ ಮಾನಸಿಕ ಹಾಗೂ ದೈಹಿಕ ದೃಢತೆಯೆಲ್ಲ ಅಸ್ತವ್ಯಸ್ತಗೊಂಡಿತು.

ಅಂತೂ ಮೂರನೆಯ ದಿನ ಹಡಗು ದಕ್ಷಿಣ ಜಾರ್ಜಿಯವನ್ನು ತಲುಪಿತು.

ಮೂರನೇ ಜಾರ್ಜ್ ಚಕ್ರವರ್ತಿಯ ನಾಮಾಂಕಿತದಿಂದ ಕರೆಯಲ್ಪಡುವ ಈ ದ್ವೀಪ ೧೭೭೫ರಲ್ಲಿ ಕ್ಯಾಪ್ಟನ್ ಜೇಮ್ಸ್ ಕುಕ್‌ನಿಂದ ಇಂಗ್ಲೆಂಡಿನ ಕೈವಶವಾಯಿತು. ಎಲಿಫಂಟ್ ದ್ವೀಪದಲ್ಲಾದ ಆಘಾತದಿಂದ ತೊಂದರೆಗೀಡಾದ ತನ್ನ ಸಂಗಡಿಗರನ್ನು ರಕ್ಷಿಸಲು ಅರ್ನೆಸ್ಟ್ ಶಾಕಲ್ಟನ್ ಬಹು ಪರಿಶ್ರಮದಿಂದ ಈ ನೆಲದಲ್ಲಿ ತನ್ನ ರಕ್ಷಣಾಕಾರ್ಯವನ್ನಾರಂಭಿಸಿದ. ಅಂದಿನಿಂದ ಈ ಭಾಗ ಚಾರಿತ್ರಿಕ ಪ್ರಸಿದ್ಧಿಯನ್ನು ಪಡೆಯಿತು. ವಿಶೇಷವೆಂದರೆ, ಯಾವ ನೆಲ ಒಮ್ಮೆ ಶಾಕಲ್ಟನ್‌ನನ್ನೂ ಅವನ ಜನರನ್ನೂ ಉಳಿಸಿತ್ತೋ ಅದೇ ನೆಲದಲ್ಲಿ ಆತ ತೀರಿಕೊಂಡ ! ಗ್ರೈಟ್‌ವಿಕೆನ್‌ನಲ್ಲಿ ಆತನ



ಅಲ್ಬಟ್ರೋಸ್ ಪಕ್ಷಿ

ಸಮಾಧಿ ಇದೆ,

ಫಾಕ್‌ಲ್ಯಾಂಡಿನ ಆಧಿಪತ್ಯಕ್ಕೊಳಪಟ್ಟಿರುವ ದಕ್ಷಿಣ ಜಾರ್ಜಿಯಾ ನೂರಾಹತ್ತು ಮೈಲು ಉದ್ದ ಹಾಗೂ ಹದಿನೈದು ಮೈಲು ಅಗಲವಾದ ಭೂಭಾಗ. ಒಂದು ಕಾಲದಲ್ಲಿ ತಿಮಿಂಗಿಲ ಬೇಟೆಗಾರರ ಸ್ವರ್ಗಧಾಮವಾಗಿತ್ತು ಈ ಪ್ರದೇಶ. ತಿಮಿಂಗಿಲ ಬೇಟೆಗಾರರು ಬಳಸುತ್ತಿದ್ದ ದೊಡ್ಡ ಪೆಟ್ಟಿಗೆಗಳು, ಕಬ್ಬಿಣದ ವಿವಿಧ ಸಾಧನಗಳು, ಯಂತ್ರಗಳು, ಸಪಾಟುಗಳು ಈಗ ದ್ವೀಪದಲ್ಲಿ ಅನಾಥವಾಗಿ ಬಿದ್ದುಕೊಂಡಿವೆ.

ಹಡಗು ಈ ದ್ವೀಪದ ಸನಿಹ ನಿಂತಾಗ ಆಗಾಗ ಸಮುದ್ರದತ್ತ ನೋಡಬೇಕೆಂದು ಕಮಾಂಡರನ ಆದೇಶ ಬರುತ್ತಿತ್ತು. ಡೆಕ್ಕಿಗೇರಿ ಪಯಣಿಗರು ನಿಂತು ದೃಷ್ಟಿ ಹರಿಸಿದರೆ, ತಿಮಿಂಗಿಲಗಳು ನೀರಿನ ರಾಶಿಯೊಂದಿಗೆ ಮೇಲೇರಿ ಬರುವುದು ಕಾಣಿಸುತ್ತಿತ್ತು. ಮಗು ಮತ್ತು ತಾಯಿ ತಿಮಿಂಗಿಲಗಳ ಚೇಷ್ಟೆ, ಸಂತಸದ ಆಟಗಳು ಪ್ರವಾಸಿಗಳಿಗೆಲ್ಲ ಅಪರೂಪದ ದೃಶ್ಯಗಳಾಗಿದ್ದವು. ಕೆಲವು ತಿಮಿಂಗಿಲಗಳು ಧೈರ್ಯ ಮಾಡಿ ಹಡಗಿನ ತೀರಾ ಸಮೀಪಕ್ಕೆ ಧಾವಿಸಿ, ಬಾಲವನ್ನು ಗಾಳಿಯಲ್ಲಿ ತೇಲಿಸಿ,ಮೋರೆಯನ್ನು ಕೆಳಗೆ ಮುಳುಗಿಸಿ, ಒಮ್ಮೆಲೇ ನೀರಿನಲ್ಲಿ ಧುಮುಕಿ ಮಾಯವಾಗುತ್ತಿದ್ದವು.

ಸಮುದ್ರ ಶಾಂತವಾದ ಪ್ರಯೋಜನವನ್ನು ಎಂ. ಎಸ್. ಸಾಹಸೀ ತಂಡ ಪಡೆದುಕೊಳ್ಳದೆ ಇರಲಿಲ್ಲ, ಆರುದಿನಗಳ ವರೆಗೆ ದಕ್ಷಿಣ ಜಾರ್ಜಿಯದ ಆಸುಪಾಸಿನಲ್ಲಿ ತಳವೂರುತ್ತಾ, ತಳವೂರಿದಲ್ಲೆಲ್ಲಾ ಕೆಲವು ಗಂಟೆಗಳನ್ನು ಕಳೆದು ಮುಂದುವರಿಯುತ್ತಾ ಡಿಸೆಂಬರ್ ಮೂವತ್ತೊಂದರಂದು 'ರಾಯಲ್ ಕೊಲ್ಲಿ'ಯ ಸನಿಹದ ಮಾಲ್ಕ್ಯ ಬಂದರಿನಲ್ಲಿ ಎಂ. ಎಸ್. ಲಂಗರು ಹಾಕಿತು. ಇಲ್ಲಿಂದ, ಸೀಲ್‌ಗಳೂ ಪೆಂಗ್ವಿನ್‌ಗಳೂ ಅವರ ಸಂಗಾತಿಗಳಾದವು.

ಅನಿರೀಕ್ಷಿತವಾಗಿ ಮಳೆ ಸುರಿಯಲಾರಂಭಿಸಿದ್ದರಿಂದ 'ಮಾಲ್ಕ್ಯ' ಭೂಭಾಗವನ್ನು ಸಂದರ್ಶಿಸಲು ಶಕ್ಯವಾಗದೆ 'ಎಂ. ಎಸ್.' ಮುಂದೆ ಹೊರಡಬೇಕಾಯಿತು. ೧೯೭೭ರ ಜನವರಿ ಒಂದನೇ ತಾರೀಖು ಕಂಬರ್ ಲ್ಯಾಂಡ್ ಆಖಾತದ ಬಂದರೊಂದನ್ನು 'ಎಂ. ಎಸ್.' ತಲುಪಿತು, ಆ ದ್ವೀಪದಲ್ಲಿ ಕಾಲಿಡುತ್ತಿದ್ದಂತೆ ಒಬ್ಬ ಬ್ರಿಟಿಶ್ ಅಧಿಕಾರಿ ಹಾಜರಾದ. ಎಲ್ಲರ ಬಳಿಯಲ್ಲಿದ್ದ ಪಾಸ್‌ಪೋರ್ಟನ್ನೂ ಪರಿಶೀಲಿಸಿ ಸ್ಟಾಂಪ್ ಒತ್ತಿ ತನ್ನ ಸಹಿ ಹಾಕಿ ಮರಳಿಸಿದನಾತ. ಭೂಗೋಲದ ಆ ಮೂಲೆಯಲ್ಲಿಯೂ ಹೀಗೆ! ಬ್ರಿಟನ್ನಿನಿಂದ ಆತ ನೇಮಕಗೊಂಡು ಇಲ್ಲಿ ಚೆಕಿಂಗ್ ಆಫೀಸರನಾಗಿದ್ದಾನಂತೆ. ಪ್ರತಿ ಬೇಸಿಗೆಯಲ್ಲಿ ಬ್ರಿಟನ್ನಿನ ಬಿಸ್ಕೋವ್ ಹಾಗೂ ಟ್ರಾನ್ಸ್‌ಫೀಲ್ಡ್ ಹಡಗುಗಳು ಸರಕು ಹೊತ್ತು ಈ ಮಾರ್ಗದಲ್ಲಿ ಬರುತ್ತವೆ. ಅವುಗಳನ್ನು ತಪಾಸಿಸಲೆಂದೆ ಅವನ ನೇಮಕ. ತನ್ನ ಬಂದರಕ್ಕೆ ಬಂದಿದ್ದ 'ಎಂ. ಎಸ್.' ಹಡಗನ್ನೂ ತಪಾಸಿಸದೆ ಬಿಡುವುದು ತನ್ನ ಹುದ್ದೆಗೆ ಸಲ್ಲದ್ದೆಂದು ಅನ್ನಿಸಿರಬೇಕು ಆತನಿಗೆ.

ಇಲ್ಲಿ ಶಾಕಲ್ಟನ್ ಹೆಸರಿನ ಸಂಶೋಧನಾಲಯವೊಂದಿದ್ದು ಅದರಲ್ಲಿ ಇಪ್ಪತ್ತೈದು ಜನ ಕಾರ್ಯನಿರತರಾಗಿದ್ದಾರೆ. ಹೊಸ ವರುಷದ ಮೊದಲ ದಿನದಂದು ಅವರೊಂದಿಗೆ ಮೆಹರ್ ಹಾಗೂ ಅವಳ ಸಂಗಡಿಗರು ಕಳೆದರು. ಜೊತೆಗೇ ಊಟವಾಯಿತು. ರಾತ್ರಿ ಬಹುಹೊತ್ತಿನವರೆಗೆ ನರ್ತನ ವಿನೋದಗಳಿಂದ ಸಮಯ ಕಳೆದರು.

ಆ ರಾತ್ರಿಯೇ ಅಲ್ಲಿಂದ ನೈಋತ್ಯ ದಿಕ್ಕಿನತ್ತ ಹಡಗು ಪುನಃ ಮುಂದುವರಿಯಿತು. 'ತಿಮಿಂಗಿಲದ ಮನೆ' ಎಂದು ಖ್ಯಾತವಾಗಿದ್ದ ಅಲ್‌ಬಟ್ರಾಸ್ ನಡುಗಡ್ಡೆಯನ್ನು ಹಡಗು ಮುಂಜಾನೆ ತಲುಪಿತು. ಆಲ್‌ಬಟ್ರಾಸ್ ಎನ್ನುವ ವಿಶೇಷ ಪಕ್ಷಿಗಳ ಆವಾಸಸ್ಥಾನವಿದು. ಇಪ್ಪತ್ತೆಂಟು ಇಂಚಿನಿಂದ ಐವತ್ತಮೂರು ಇಂಚುಗಳಷ್ಟು ಉದ್ದವಿರುವ ಈ ಪಕ್ಷಿಗಳು ಸಹಸ್ರಗಟ್ಟಲೆಯಲ್ಲಿ ಗುಂಪು ಗುಂಪಾಗಿ ಜೀವಿಸುತ್ತವೆ. ಆಲ್‌ಬಟ್ರಾಸ್ ನಡುಗಡ್ಡೆಯ ಸಮೀಪ ಗ್ರೇಸ್ ಹಾಗೂ ಲ್ಯೂಕಾಸ್ ನಡುಗಡ್ಡೆಗಳಿವೆ. ಪರ್ವತಾರೋಹಿ

ಜಾನ್ ಗ್ರೀನ್ ಹಾಗೂ ಹಿಮವಿಜ್ಞಾನಿ ಡಾ. ಪಾಲ್ ಪೇವಿಸ್ಕಿಯವರನ್ನೊಳಗೊಂಡ ಚಿಕ್ಕ ತಂಡ ಈ ಪ್ರದೇಶವನ್ನು ಸುತ್ತಾಡಿಬರಲು ಹೊರಟಿತು. ಮೆಹರ್ ಕೂಡ ಅದರಲ್ಲಿ ಪಾಲ್ಗೊಂಡಳು. ಮುಂದೆ ಹೋದವರ ಹೆಜ್ಜೆಯ ಕುರುಹನ್ನು ಹಿಮದಲ್ಲಿ ಅರಸುತ್ತ, ಜಾರುವ ಮಂಜಿನ ತುಂಡುಗಳ ಮೇಲೆ ತುಂಬಾ ಎಚ್ಚರಿಕೆಯಿಂದ ಕಾಲಿಡುತ್ತ ಸಾಗುವುದು ಬಹು ರೋಮಾಂಚಕ ಅನುಭವ; ಭಯಾನಕವೂ ಹೌದು ಎಂದು ಬರೆಯುತ್ತಾಳೆ ಮೆಹರ್. ಇನ್ನೂರು ಅಡಿ ಆಳಕ್ಕೂ ಮಿಗಿಲಾಗಿ ಉಂಟಾಗಿರುವ ಹಿಮದ ಪ್ರಪಾತವನ್ನು ಆಕೆ ಅಲ್ಲಿ ಕಂಡಳು.

ಒಂದು ಹಿಮಗಡ್ಡೆಯಿಂದ ಇಳಿದು ಮತ್ತೊಂದನ್ನು ಏರುವ ಸಾಹಸ ಅವರದಾಗಿತ್ತು. ದೂರದಿಂದ ದೊಡ್ಡದಾಗಿ ಕೇಳಿಬರುವ ಹಿಮಪಾತದ ಸದ್ದು, ಯಾವ ಕ್ಷಣದಲ್ಲಾದರೂ ಹಿಮದ ತುಂಡು ತೇಲಿಬರುವ ಸಾಧ್ಯತೆಯನ್ನು ಸ್ಪಷ್ಟಗೊಳಿಸುತ್ತಿದ್ದುದರಿಂದ ಅವಸರವಸರವಾಗಿ ಸಾಗಬೇಕಿತ್ತು. ಆದರೆ ಅವಸರದಿಂದ, ಅಜಾಗರೂಕತೆಯಿಂದ ಅನಾಹುತವಾಗುವುದೂ ಸಾಧ್ಯವಿತ್ತು.

ಮಾರನೆಯ ದಿನ ಎಲ್‌ಸೆಹುಲ್ ಬಂದರನ್ನು 'ಎಂ. ಎಸ್' ತಲುಪಿತು. ಮೆಹರ್ ಇಲ್ಲಿ ಕಂಡ ಆಲ್‌ಬಟ್ರಾಸ್ ಪಕ್ಷಿಗಳ ಕುರಿತು, "ಕಪ್ಪು ಪುಬ್ಬಿನ, ಬಿಳುಪು ತೊಡಿಗೆಯ ಈ ಪಕ್ಷಿಗಳು ಚೂಪುಗಲ್ಲಿನ ಮೇಲೆ ಕುಳಿತು ಕಾವು ಕೊಡುತ್ತಿದ್ದ ದೃಶ್ಯವನ್ನು ನೋಡುತ್ತಾ ನಾನು ಸಂತಸಪಟ್ಟೆ" ಎಂದು ಬರೆಯುತ್ತಾಳೆ.

ಈ ಭೂಭಾಗ ಜವುಗಾಗಿದೆ. ಜಿಗಳೆ ಜಾತಿಯ 'ಫರ್‌ಸೀಲ್ಸ್'ಗಳು ಈ ಜವುಳು ನೆಲದ ಮೇಲೆ ಬೆಳೆದ ಹುಲ್ಲಿನ ಮೇಲೆ ಇರುತ್ತವೆ. ಅವುಗಳು ಮನುಷ್ಯನ ಮೇಲೂ ಆಕ್ರಮಣ ನಡೆಸುವ ಸಾಧ್ಯತೆ ಇದ್ದುದರಿಂದ ತುಂಬಾ ಎಚ್ಚರಿಕೆಯಿಂದ ಸಾಗುವುದು ಅನಿವಾರ್ಯವಾಗಿತ್ತು. ಮಧ್ಯಾಹ್ನ 'ಮಕರೋನಿ ಪೆಂಗ್ವಿನ್ ಕಾಲೋನಿ'ಗೆ ಮೆಹರ್ ಹಾಗೂ ಸಂಗಡಿಗರು ಭೇಟಿಯಿತ್ತರು. ಇದು ನೂರು ಅಡಿ ಎತ್ತರದ ಪುಟ್ಟ ಹಿಮಪರ್ವತ. ಇದನ್ನೇರುವುದು ತುಂಬಾ ಪರಿಶ್ರಮದ ಕೆಲಸ. ದಪ್ಪವಾದ ಹಗ್ಗ ಹಿಡಿದು, ಎರಡೆರಡು ಮಂದಿ ಸಹಾಯಕರೊಂದಿಗೆ ಹಿಮಪ್ರವಾಹದಲ್ಲಿ ಜಾರಿಬೀಳದಂತೆ ಎಚ್ಚರಿಕೆಯಿಂದ ಸಾಗಬೇಕಿತ್ತು. ಹೀಗೆ ಸಾಗಿದ ಮೆಹರ್ 'ಮಕರೋನಿ ಪೆಂಗ್ವಿನ್'ಗಳನ್ನು ಅತಿ ಹತ್ತಿರದಿಂದ ಕಂಡು, ಅವುಗಳ ಹತ್ತಾರು ಭಂಗಿಗಳ ಫೋಟೋ ತೆಗೆದುಕೊಂಡಳು.

ಅಂದು ಸಂಜೆ ನೀರಿನ ಮೇಲೆ ತೇಲುವ ಮಂಜುಗಡ್ಡೆಗಳನ್ನು ದೂಡುತ್ತಾ ಹಡಗು ದಕ್ಷಿಣದತ್ತ ಮುಂದುವರಿಯಿತು. "ನಮ್ಮ ಮುಂದಿನ ಗುರಿ ಆರ್ಕ್ನಿ ಹಾಗೂ ದಕ್ಷಿಣ ಶೆಟ್‌ಲ್ಯಾಂಡ್ ತಲುಪುವುದಾಗಿತ್ತು." ಎಂದು ಬರೆಯುತ್ತಾ ಮೆಹರ್ ತನ್ನ ಪ್ರವಾಸಕಥನದ ಮೊದಲ ಭಾಗ ಮುಗಿಸುತ್ತಾಳೆ.

೨

"ಭೂಮಿಯ ಮೇಲೆ ನಡುರಾತ್ರಿಯ ಸೂರ್ಯ ತನ್ನ ಮೋಹಕ ಕಿರಣಗಳನ್ನೂ ಆಕರ್ಷಕ ನೆರಳುಗಳನ್ನೂ ಹರಹಿದ ಚಂದ; ಅದಕ್ಕೆ ದ್ವಿಗುಣಿತವಾಗಿ ಮನಸೆಳೆಯುವುದು ಗುಲಾಬಿ ಛಾಯೆಯ ಮಂಜಿನ ಶಿಲೆಯ ಪರ್ವತ. ಮಸಿ ನೀಲಿ ಬಣ್ಣದ ನೀರಿನ ಮೇಲೆ ತೇಲಿ ಹೋಗುವ ಘನಾಕಾರದ ಮಂಜಿನ ತುಂಡುಗಳನ್ನು ಕಾಣುವಾಗ ಬೇರೆ ಎಲ್ಲಿಯೂ ಯಾವ ಸೌಂದರ್ಯವೂ ಪ್ರಕೃತಿಯ ಈ ಸೌಂದರ್ಯಕ್ಕಿಂತ ಹೆಚ್ಚಿನದಲ್ಲ ಎನಿಸುತ್ತದೆ. ಬರಿದಾದ, ಶಾಶ್ವತ ಚಳಿಯಿಂದ ಯಿಂದ ಕೂಡಿದ ಈ 'ಮಂಜು ಮರುಭೂಮಿ' ತನ್ನ ಅಸಂಬದ್ಧತೆಯನ್ನು ಎತ್ತಿ ತೋರಿಸುವಂತೆ ಬೇಸಿಗೆಯಲ್ಲಿ ಇಪ್ಪತ್ತುನಾಲ್ಕು ಗಂಟೆಗಳ ಕಾಲವೂ ಸೂರ್ಯನ ಬಿಸಿಲಿನಿಂದ ಕಂಗೊಳಿಸುತ್ತದೆ. ಹಡಗಿನ ಧಕ್ಕೆಯ ಮೇಲೆ ಪುಸ್ತಕವೊಂದನ್ನು ಹಿಡಿದು, ಈ ಪ್ರಕೃತಿಯ ಇದಿರು ಕುಬ್ಜಳಾಗಿ ಕುಳಿತಿದ್ದ ನನಗೆ ಒಮ್ಮೆಲೆ ಮುಂದಿನ ಗುರಿ ನೆನಪಾಯಿತು. ಕೇವಲ ಒಂದು ವಾರದಲ್ಲಿ ಅಂಟಾರ್ಕ್ಟಿಕ್ ವೃತ್ತವನ್ನು ದಾಟಲಿದ್ದೇನೆ!" ಎನ್ನುತ್ತಾ ಮೆಹರ್ ತನ್ನ ದಕ್ಷಿಣ ಧ್ರುವ ಸಾಹಸಯಾತ್ರೆಯ ಎರಡನೇ ಅಧ್ಯಾಯವನ್ನಾರಂಭಿಸುತ್ತಾಳೆ.

ಹಡಗಿನ ಪಯಣದ ಮುಂದಿನ ಗುರಿ ದಕ್ಷಿಣ ಆರ್ಕ್ನಿ ಹಾಗೂ ಫಾಕ್‌ಲ್ಯಾಂಡ್ ದ್ವೀಪಗಳು. ಇವು 'ಸ್ಕ್ರೀಮಿಂಗ್ ಕ್ವೀನ್'ನ ಸನಿಹ

ಇರುವ ಸ್ಕೋಟಿಯಾ ಸಮುದ್ರದೊಳಗಿರುವ ಹಲವು ದ್ವೀಪಗಳ ಸಮೂಹ. ಕೊರೋನೇಷನ್, ಲಾರಿಯ್, ಸಿಗ್ನಿ, ಪಾವೆಲ್ ಇವು ತುಸು ದೊಡ್ಡ ದ್ವೀಪಗಳು. ಅಸಂಖ್ಯಾತ ಸಣ್ಣಪುಟ್ಟ ನಡುಗಡ್ಡೆಗಳೂ ಇವೆ. ದಕ್ಷಿಣ ಜಾರ್ಜಿಯದಿಂದ ಈ ಪ್ರದೇಶವು ಐನೂರು ಮೈಲಿ ದೂರದಲ್ಲಿದೆ. ಅಮೇರಿಕದ ಕ್ಯಾಪ್ಟನ್ ನಥೇನಿಯಲ್ ಪಾಮರ್, ಬ್ರಿಟಿಷ್ ಕ್ಯಾಪ್ಟನ್ ಜಾರ್ಜ್ ಪಾವೆಲ್ಲನ ಸಹಕಾರದಿಂದ ೧೮೨೧ರ ಸುಮಾರಿಗೆ ಈ ದ್ವೀಪ ಸಮುದಾಯವನ್ನು ಕಂಡುಹಿಡಿದ. ಪಾವೆಲ್ಲನ ಹೆಸರಿನಿಂದ ಕರೆಯಲ್ಪಡುವ ದ್ವೀಪವೊಂದಿಲ್ಲಿದೆ, ಅಂಟಾರ್ಕ್ಟಿಕದ ಉತ್ತರದಲ್ಲಿನ ಪರ್ಯಾಯ ಭಾಗವೊಂದಕ್ಕೆ ಪಾಮರನ ಹೆಸರನ್ನಿಡಲಾಗಿದೆ. ಈ ದ್ವೀಪಗಳನ್ನು ಶೋಧಿಸಿದವರ ಹೆಸರುಗಳನ್ನೇ ಬಹುತರವಾಗಿ ಇಲ್ಲಿನ ದ್ವೀಪಗಳಿಗೆ ಇಡಲಾಗಿದೆ. ಆದರೆ ಅನ್ವೇಷಕರ, ಪ್ರೋತ್ಸಾಹಕರ ಇಲ್ಲವೆ ದೊರೆಗಳ ಹೆಸರನ್ನು ಹೊತ್ತ ದ್ವೀಪಗಳೂ ಸಾಕಷ್ಟಿವೆ, ಸಂಶೋಧಕರು ತಮ್ಮ ಸಂಶೋಧನೆಗೆ ನೆರವಾದವರಿಗೆ ಕೃತಜ್ಞತೆಯನ್ನು ಸೂಚಿಸುವ ವಿಧಾನ ಇದಾಗಿರಬೇಕು. ವಿಕ್ಟೋರಿಯಾ ಲ್ಯಾಂಡ್, ಕ್ವೀನ್ ಮೌಡ್ ಲ್ಯಾಂಡ್, ಜಾರ್ಜ್ V ಕೋಸ್ಟ್, ಎಡ್ವರ್ಡ್ VII ಪೆನಿನ್ಸುಲಾ, ಪೀಟರ್ I ಐಲ್ಯಾಂಡ್, ಪ್ರಿನ್ಸ್ ಗಸ್ತಾವ್ ಚಾನಲ್‌ದ ಉದ್ದಕ್ಕಿರುವ ರಾಕ್‌ಫೆಲ್ಲರ್ ಪ್ರಸ್ಥಭೂಮಿ, ಹಾರ್ಲಿಕ್ಸ್ ಪರ್ವತಶ್ರೇಣಿ, ವಾಲ್‌ಗ್ರೀನ್ ತೀರ ಪ್ರದೇಶಗಳು ಇದಕ್ಕೆ ಉದಾಹರಣೆಯಾಗಿ ನಿಲ್ಲುತ್ತವೆ. ಹೊಸ ಪ್ರದೇಶವನ್ನು ಕಂಡ ಆನಂದದಲ್ಲಿ ಅಥವಾ ಸೋತ ಖಿನ್ನತೆಯಲ್ಲಿ ಹೊರಡುವ ಉದ್ಗಾರವೇ ಆಯಾ ಪ್ರದೇಶದ ಹೆಸರಾಗಿರುವುದೂ ಉಂಟು: ಬಿಡುಗಡೆಯ ಬಿಂದು, ವೇಗ ನ್ಯೂನಾಟಕ್, ಉದ್ರೇಕ ಕೊಳ್ಳಿ, ನಿರಾಶಾ ಶಿಲೆ, ನಿರಾಶಾ ಭೂಶಿರ, ಇತ್ಯಾದಿ. ಕೆಲವು ತರುಣ ಉತ್ಸಾಹೀ ನಾವಿಕರು ಸಮುದ್ರವನ್ನೂ ಭೂಮಿಯನ್ನೂ ಹಿಮ ಪ್ರದೇಶವನ್ನೂ ಪರ್ವತ ಶಿಖರಗಳನ್ನೂ ಅಲ್ಲದೇ ಪೆಂಗ್ವಿನ್ ಪಕ್ಷಿಗಳನ್ನು ಕೂಡ ತಮ್ಮ ಅರ್ಧಾಂಗಿಯರ ಅಥವಾ ಪ್ರೇಯಸಿಯರ ಹೆಸರಿನಿಂದ ಕರೆದಿರುವುದುಂಟು. ಇಲ್ಲಿಯ ಸಿಗ್ನಿ ದ್ವೀಪ ಬ್ರಿಟಿಶ್ ಆಡಳಿತಕ್ಕೆ ಒಳಪಟ್ಟಿದೆ; ಲಾರೈನದು ಅರ್ಜೆಂಟಿನಾದ ಆಡಳಿತ.

ಲಾರೈ ದ್ವೀಪವನ್ನು ಮೆಹರ್ ಹಾಗೂ

ಆಕೆಯು ಸಂಗಾತಿಗಳು ಸಂದರ್ಶಿಸಿದರು. ಈ ದ್ವೀಪದಲ್ಲಿ ವಾಯುದಳದ ಅಧಿಕಾರಿಗಳ ಅಂಕಿತಕ್ಕೊಳಪಟ್ಟ ಪವನಶಾಸ್ತ್ರ ಕೇಂದ್ರವೊಂದಿದೆ. ಬೇಸ್ ಕಮಾಂಡರ್ ಮತ್ತು ಅವನ ಸಹಾಯಕರು ಇವರನ್ನು ಕಂಡು ಅಪಾರ ಸಂತಸವನ್ನು ವ್ಯಕ್ತಪಡಿಸಿದರು. ತಮ್ಮ ಸ್ಥಳ ನಿವೇಶನಗಳನ್ನು ತೋರಿಸುವುದರಿಂದಾರಂಭಿಸಿ ಅಲ್ಲಿಯ ಶ್ರೇಷ್ಠ ಆಹಾರವೆನ್ನುವ ಅರ್ಜೆಂಟಿನಾದ ದನದ ಮಾಂಸವನ್ನು ಅರ್ಪಿಸುವ ವರೆವಿಗೂ ಇವರನ್ನವರು ಉಪಚರಿಸಿದರು.

ಅಲ್ಲಿಯ ಆಕಾಶವಾಣಿ ಕೇಂದ್ರ, ವಿದ್ಯುತ್ ಸಂಗ್ರಾಹಕ ಕೋಣೆ, ಜಲಸಂಗ್ರಾಹಕ ಟ್ಯಾಂಕ್, ನಿವಾಸಗಳು ಮುಂತಾದವುಗಳನ್ನು ಈ ಗುಂಪು ಸಂದರ್ಶಿಸಿತು. ಅರ್ಜೆಂಟಿನಾದ ಪಾನೀಯದ ಸವಿ ನೋಡಲು ಇವರನ್ನು ವಾಯುದಳದ ಅಧಿಕಾರಿಗಳು ಅತಿಥಿಗೃಹಕ್ಕೆ ಆಹ್ವಾನಿಸಿದರು. "ಸುತ್ತ-ಮುತ್ತ ಮಂಜು ಹರಡಿದ್ದಾಗಲೂ ಇಲ್ಲಿ ನೀರು ಅಪರೂಪದ ವಸ್ತುವಾಗಿದೆ" ಎಂದು ಅವರು ಹೇಳಿದರು. ಅಂಥ ಜನವಿರಳ ಪ್ರದೇಶದಲ್ಲಿ, ತಮ್ಮ ನಾಡಿನಿಂದ ಸಹಸ್ರಾವಧಿ ಮೈಲುಗಳ ದೂರದಲ್ಲಿ ವಾಸಿಸುವ ಆ ಅಧಿಕಾರಿಗಳಿಗೆ ಯಾವ ಬಗೆಯ ಅನುಕೂಲಗಳು ದೊರೆಯುತ್ತಿವೆಯೆನ್ನುವ ಅರಿವು ಮೆಹರಳಿಗೆ ಬಂದದ್ದು ಆಗಲೇ. ಶುಚಿಗೊಳಿಸಿದ ಆಹಾರ ವಿಶೇಷ ರೀತಿಯಿಂದ ರಕ್ಷಿಸಲ್ಪಟ್ಟಿದ್ದವು. ಅತಿಥಿಗಳಿಗೆಂದೇ ಬೇಯಿಸಿದ ಬ್ರೆಡ್ಡುಗಳನ್ನು ಕಾದಿರಿಸಿದ್ದರು. ಸಂರಕ್ಷಿಸಿಟ್ಟಿದ್ದ ಮಾಂಸವನ್ನು ಇವರಿಗೆ ಕೊಟ್ಟು, ರುಚಿ ನೋಡಲು ಆದರದಿಂದ ಒತ್ತಾಯಿಸಿದರು. ಅವರಿಗೆ ಇಷ್ಟವಾದದ್ದೆಂದರೆ "ದಪ್ಪವಾದ ಸಿಹಿ ಕ್ರೀಮ್ ತರಹದ 'ಡೋಲ್ಸ್ ಡಿ ಲೇಚೆ' ಎನ್ನುವ ಆಹಾರ. ಸುಮಾರಾಗಿ ಹೆಪ್ಪುಗಟ್ಟಿದ ಕಂದುಬಣ್ಣದ ಹಾಲಿನಂತಿರುವ ಇದರ ರುಚಿಯನ್ನು ನಾವೂ ಸವಿದೆವು," ಎನ್ನುತ್ತಾಳೆ ಮೆಹರ್.

ಸುಮಾರು ಹತ್ತು ಅಡಿಗಳಷ್ಟು ಉದ್ದವಿರುವ ಒಂಬೈನೂರು ಪೌಂಡು ತೂಗುವ, ಒಂದು ವರ್ಷದ ಅವಧಿಯಲ್ಲಿ ಸುಮಾರು ಒಂದು ಟನ್ ಮೀನನ್ನೂ ಅಷ್ಟೇ ಸ್ಕ್ವಿಡ್ ಜಾತಿ (ಕಟ್ಲ್)ಯ ಮೀನನ್ನೂ ಭಕ್ಷಿಸುವ ವೆಡೆಲ್ ಸೀಲ್‌ಗಳನ್ನು ಮೆಹರ್ ಇಲ್ಲಿ ಕಂಡಳು;

ದಕ್ಷಿಣ ಧ್ರುವದೆಡೆ ಕಾಣದ ಸಾರವಾರದತ್ತ ೭೪ ಡಿಗ್ರಿ ದಕ್ಷಿಣ ಅಕ್ಷಾಂಶವನ್ನು ತಲುಪಲು ಪಯಣಿಸಿದ ಸ್ಕಾಟ್ಲೆಂಡಿನ ಧೀರ ಯುವಕ ಜೇಮ್ಸ್ ವೆಡೆಲ್ಲನ ಹೆಸರನ್ನೇ ಅವಕ್ಕಿಡಲಾಗಿದೆ; ಅವನ ಜ್ಞಾಪಕಾರ್ಥವಾಗಿ ಈ ಸಮುದ್ರಪ್ರದೇಶವನ್ನು 'ವೆಡೆಲ್ ಸೀ' ಎಂದೇ ಕರೆಯಲಾಗುತ್ತಿದೆ. ಭೀಕರವಾಗಿ ಹಿಮಗಟ್ಟಿರುವ ನೀರನ್ನುಳ್ಳ ಈ ಪ್ರದೇಶದಲ್ಲಿ ವರ್ಷದ ಯಾವ ಕಾಲದಲ್ಲಿಯೂ ಜಲಯಾನ ಅಸಾಧ್ಯವಾದುದೇ !

ಪ್ರಾಣಿಶಾಸ್ತ್ರದಲ್ಲಿ 'ಸೀಲ್'ಗಳಿಗೆ Carnivara Pinnepesia [ಈಜುಪಾತದ ಸಸ್ತನಿ] ಎನ್ನಲಾಗುತ್ತದೆ. ಹೆಚ್ಚಾಗಿ ಅಂಟಾರ್ಕ್ಟಿಕದಲ್ಲಿ ಎಲಿಫೆಂಟ್ ಸೀಲ್, ಫರ್ ಸೀಲ್, ವೆಡಲ್ ಸೀಲ್, ರಾಸ್, ಕಬ್ ಈಟರ್ ಹಾಗೂ ಲಿಯೋಪಾರ್ಡ್ ಸೀಲ್ ಜಾತಿಪ್ರಭೇದಗಳು ಕಾಣಬರುತ್ತವೆ. ಲಿಯೋಪಾರ್ಡ್ ಸೀಲ್ ಹಾವಿನ ತರಹದ ತಲೆಯುಳ್ಳ ಉದ್ದ ಕತ್ತಿನ ಪ್ರಾಣಿ. ಪೆಂಗ್ವಿನ್ನುಗಳು ಇದರ ಆಹಾರ. 'ಹತ್ತು ಅಡಿ ಉದ್ದದ ಸ್ನಾಯು ಪಟ್ಟಿ' ಎಂದು ಹೆಸರಾದ ಇವು ಮಾನವನ ಮೇಲೂ ಆಕ್ರಮಣ ನಡೆಸುವಂತಹ ಅಪಾಯಕರ ಕಡಲ ಪ್ರಾಣಿಗಳು.

ಮೆಹರ್ ತನ್ನ ಈ ಪ್ರವಾಸ ಕಾಲದಲ್ಲಿ ಬಹಳಷ್ಟು ಎಲಿಫೆಂಟ್ ಸೀಲ್‌ಗಳನ್ನು ಕಂಡಳು; ಸಾಮಾನ್ಯವಾಗಿ ಬಿಸಿಲು ಕಾಯಿಸುತ್ತ, ಹೆಣ್ಣು ಸಸ್ತನಿಗಳ ಅಂತಃಪುರದ ನಡುವೆ ಇರಬೇಕೆನ್ನಿಸಿ, ಅಲ್ಲಿಯೇ ಹೊರಳಾಡುತ್ತ ಇವು ದಿನಗಳೆಯುತ್ತವೆ, ಸದಾ ತಣ್ಣಗಿನ ಪ್ರದೇಶದಲ್ಲಿಯೇ ಇರಬೇಕಾದುದರಿಂದ, ದೇಹದ ಶಾಖ ರಕ್ಷಣೆಗೆ ಮೀನಿನ ಕೊಬ್ಬಿನ ತರಹದ ಹೊರ ಕವಚ ಇವಕ್ಕಿವೆ, ಸಣ್ಣ ಫರ್ ಸೀಲ್‌ಗಳಷ್ಟು ಇವು

ದುಡುಕಿನ ಪ್ರಾಣಿಗಳಲ್ಲ. ತೀರಾ ಸಮಾಧಾನ ಸ್ವಭಾವ ಇವುಗಳದು; ಮೂಕ ಪ್ರಾಣಿಗಳೆಂದೇ ಕೆಲವರು ಇವನ್ನು ಕರೆದಿದ್ದಾರೆ. ಅವುಗಳ ಸಮೀಪ ಹೋದರೆ, ದೊಡ್ಡದಾದ, ಉರುಳುವ ಹೊಳೆಯುವ ಕೆಂಪು ಬಣ್ಣದ ಕಣ್ಣುಗಳನ್ನು ನೋಡಿ ಕುಡುಕನೊಬ್ಬನನ್ನು ಕಂಡಂತಾಗುತ್ತದೆ. ವಿಶಿಷ್ಟ ತೆರನಾದ ದುರ್ಗಂಧವನ್ನು ಗುಲಾಬಿ ಬಣ್ಣದ ಬಾಯಿಯಿಂದ ಇವು ಹೊರಸೂಸುತ್ತವೆ. ಅವುಗಳ ಮೂಗಿನ ಹೊರಳೆಗಳು ಒದ್ದೆಯಾಗಿದ್ದು ನೀರು ತೊಟ್ಟಿಕ್ಕುತ್ತಿರುತ್ತದೆ ಮತ್ತು ಕಣ್ಣು, ಮೂಗು ಬಾಯಿಗಳ ಬದಿಗೆ ಉಪ್ಪು ಹರಳಾಗಿ ಕುಳಿತಿರುತ್ತದೆ. ಅವು ಬೇರೆ ಗಂಡು 'ಫರ್'ಗಳಿಂದ ತಿಕ್ಕಲ್ಪಟ್ಟಾಗ ಜಗಳಕ್ಕಾಗಿ ಸಿಟ್ಟಿನಿಂದ ಘುಸುಗುಟ್ಟುತ್ತಾ ಪೆಂಡ್ಯುಲಮ್ಮಿನಂತೆ ಆ ಕಡೆ ಈ ಕಡೆ ದೇಹವನ್ನು ತೂಗಾಡಿಸುತ್ತಾ ಹೋಗುವ ದೃಶ್ಯ ತುಂಬಾ ಸೊಗಸು.

ದಕ್ಷಿಣ ಆರ್ಕ್ಟಿಯಿಂದ 'ಲಿಂಡಬ್ಲಾಡ್' ಬೀಳ್ಕೊಂಡಿತು. ಅದರ ಮುಂದಿನ ಗುರಿ ಎಲಿಫೆಂಟ್ ಐಲ್ಯಾಂಡ್. ೧೯೧೬ರಲ್ಲಿ ಶೆಕಲ್ಟನ್ನನ 'ಎಂಡ್ಯೂರನ್ಸ್' ಹಡಗು ಒಡೆದಾಗ, ಶೆಕಲ್ಟನ್ನನಿಗೂ ಅವನ ಸಂಗಡಿಗರಿಗೂ ಕೆಲ ಕಾಲ ಆಶ್ರಯವಿತ್ತ ದ್ವೀಪ ಇದು. ಇದರ ಸಮೀಪದಲ್ಲಿ ಅಪ್ಸಲ್ಯಾಂಡ್ ದ್ವೀಪವಿದೆ.

'ಬ್ರಿಟಿಶ್ ಕಂಬೈನ್ಡ್ ಸರ್ವೀಸಸ್' ಆಗಾಗ ಈ ಪರಿಸರವನ್ನು ಅಭ್ಯಸಿಸಲು ಪರಿಣತರ ತಂಡವನ್ನು ಕಳುಹಿಸುತ್ತಿರುತ್ತದೆ. ಆ ಕಾರಣದಿಂದಾಗಿ ಈ ಮೊದಲೇ ಅಪ್ಸಲ್ಯಾಂಡಿನಲ್ಲಿ ಬಂದು ಪ್ರಯೋಗನಿರತರಾಗಿದ್ದ ಹದಿನಾರು ಮಂದಿಯಲ್ಲಿ ಎಂಟು ಜನರನ್ನು ಲಿಂಡ್‌ಬರ್ಗ್‌ನಲ್ಲಿ ಕೊಂಡೊಯ್ದು ಗಿಬ್ ದ್ವೀಪದಲ್ಲಿ ಇಳಿಸಬೇಕೆಂದು ನಿಶ್ಚಯಿಸಲಾಗಿತ್ತು. ಅಂತೆಯೇ ಸ್ವಲ್ಪ ವೇಳೆ ಲಿಂಡ್‌ಬರ್ಗ್ ಅಪ್ಸಲ್ಯಾಂಡಿನ ಬಳಿ ನಿಂತಿತು.

ಅಂಟಾರ್ಕ್ಟಿಕಾ ಸಮೀಪವಾಗುತ್ತಿದ್ದ ಹಾಗೆ, ಮೊಹರಳಿಗೆ ಏನೋ ಒಂದು ಬಗೆಯ ಉದ್ವೇಗ, ಕುತೂಹಲ, ಆನಂದ.

ಬಲವಾಗಿ ಹಿಮದ ಗಾಳಿ ಬೀಸುತ್ತಿತ್ತು. ಮೈ ಕೊರೆಯುವ ಚಳಿ ಬೇರೆ. ವಾತಾವರಣ ಹದಗೆಡುವ ಸೂಚನೆಯೇನೂ ಇರಲಿಲ್ಲವಾದರೂ ಅಂಥಾ ಪ್ರದೇಶದಲ್ಲಿ ಹೀಗೆಂದು ಸ್ಪಷ್ಟವಾಗಿ ಹೇಳಲೂಬಾರದು. ಹಡಗು ನಿಧಾನವಾಗಿ, 'ಹೋಪ್‌ವೇ'ಯ 'ಎಸ್ಪಿರಾಂಜಾ'ದ ಬಳಿ ಭಾನುವಾರ, ೧೯೭೭ರ ಜನವರಿ ಒಂಭತ್ತರಂದು ಲಂಗರು ಹಾಕಿತು.

"ವೈಯಕ್ತಿಕವಾಗಿ ಇದು ನನಗೆ ಚಾರಿತ್ರಿಕ

ಸಮಯವಾಗಿತ್ತು. ಏಕೆಂದರೆ ಆ ಪ್ರದೇಶದಲ್ಲಿ ಕಾಲಿಟ್ಟ ಕೂಡಲೇ ನಾನು, ಏಳನೆಯ ಖಂಡದಲ್ಲಿ ಕಾಲಿಟ್ಟ ಪ್ರಪ್ರಥಮ ಭಾರತೀಯ ಮಹಿಳೆಯಾಗಲಿದ್ದೆ," ಎಂದು ಆ ಸಮಯವನ್ನು ನೆನೆಸಿಕೊಂಡು ಮೆಹರ್ ಬರೆಯುತ್ತಾಳೆ. ತಾನು ಅಲ್ಲಿ ತಲುಪಿದ ಗುರುತಾಗಿ ಕ್ಯಾಪ್ಟನ್ ಕಾರ್ಲೋಸ್ ಫರ್ನಾಂಡೀಸರಿಗೆ ಭಾರತದ ರಾಷ್ಟ್ರಧ್ವಜವನ್ನೂ ಏರ್ ಇಂಡಿಯಾದ ಮಹಾರಾಜಾ ಪ್ರತಿಮೆಯನ್ನೂ ಮೆಹರ್ ಕಾಣಿಕೆಯಾಗಿ ಅರ್ಪಿಸಿದಳು.

ಅಂಟಾರ್ಕ್ಟಿಕದ ಕ್ಷೇತ್ರ ವಿಸ್ತಾರ ೫,೫೦೦,೦೦೦ ಚದುರ ಮೈಲಿಗಳಷ್ಟು. ಇದರ ತೀರ ಪ್ರದೇಶ ೧೪,೦೦೦ ಮೈಲಿಗಳೆಂದು ಗುರುತಿಸಲಾಗಿದೆ. ಈ ಭೂಭಾಗದ ಸರಾಸರಿ ಎತ್ತರ ೬,೫೦೦ ಅಡಿಗಳಷ್ಟು, ಇಲ್ಲಿ ಕೆಲವು ಎಡಿದಾದ ಪರ್ವತಗಳೂ ಇವೆ. ಅವುಗಳಲ್ಲಿ ಅತಿ ಎತ್ತರದದ್ದೆಂದರೆ ೧೬,೯೦೦ ಅಡಿ ಎತ್ತರದ 'ಮೌಂಟ್ ವಿನ್‌ಸನ್.' ಪ್ರಪಂಚದ ಒಂಬತ್ತನೇ ಒಂದು ಭಾಗಕ್ಕಿಂತ ಹೆಚ್ಚು ಹಿಮ ಇಲ್ಲಿ ಹರಡಿದೆ. ಇಲ್ಲಿರುವ ಹಿಮ, ಒಂದು ವೇಳೆ ನೀರಾಗಿ ಪರಿವರ್ತಿತವಾದರೆ ಪ್ರಪಂಚದ ಸಮುದ್ರಗಳೆಲ್ಲಾ ಒಮ್ಮೆಲೇ ಐವತ್ತೊಂಭತ್ತು ಮೀಟರುಗಳಷ್ಟು ಮೇಲಕ್ಕೇರುತ್ತವೆ ಎಂಬುದೊಂದು ಅಂದಾಜು. ಇಲ್ಲಿ ದಾಖಲಾದ ಕನಿಷ್ಠ ಉಷ್ಣತೆ '-೯೧° C' (ಅಥವಾ ಋಣ ೧೩೨° ಫ್ಯಾರನ್‌ಹೈಟ್) ಮೆತ್ತನೆಯ ಹಸಿರು ಪಾಚಿ, ಕಾಗದದಷ್ಟು ತೆಳುವಾದ ಕಲ್ಲು ಹೂಗಳು, ಕ್ಯಾಲಾಬಂತಾಸ್ ಎನ್ನುವ ಹೆಸರಿನ ಮುಡಿ ತರಹದ ಹುಲ್ಲುಗಳು ಮಾತ್ರ ಅಂಟಾರ್ಕ್ಟಿಕದ ಹೆಸರಿಸಬಹುದಾದ ಸಸ್ಯಗಳು. ಸಸ್ಯಶಾಸ್ತ್ರಜ್ಞರ ಪ್ರಕಾರ ಅಲ್ಲಿ ಸುಮಾರು ಎಪ್ಪತ್ತೈದು ಜಾತಿಯ ಅಣಬೆಗಳು, ನಲವತ್ತು ಬಗೆಯ ಶಿಲಾವಲ್ಕಗಳು, ನೂರೈವತ್ತು ರೀತಿಯ ಹಾವಸೆಗಳು ಮತ್ತು ಕೇವಲ ಎರಡು ಜಾತಿಯ ಹೂ ಬಿಡುವ ಸಸ್ಯಗಳು ಮಾತ್ರ ಇವೆ.

ಅಂಟಾರ್ಕ್ಟಿಕದ ಆಸುಪಾಸಿನ ಸಮುದ್ರ ಹಲ ಬಗೆಯ ಸಮುದ್ರಜೀವಿಗಳ ಆವಾಸ ಸ್ಥಾನವಾದರೆ ಒಳ ಪ್ರದೇಶ ಈ ದೃಷ್ಟಿಯಿಂದ ಬರಡು. ಇಲ್ಲಿ ಕಾಣಸಿಗುವ ಕ್ರಿಮಿ ಕೀಟಗಳೆಂದರೆ ಎಂಟು ಕಾಲಿನ ಬೇಡರ ಹುಳುಗಳು, ಸಣ್ಣ ಪರಪುಷ್ಟ ಕೀಟಗಳು, ಹಾರು ಬಾಲದ ಹಿಮಕೀಟಗಳು ಮತ್ತು ಚಳಿಯ ವಿರುದ್ಧ ತಮ್ಮನ್ನು ರಕ್ಷಿಸಿಕೊಳ್ಳಲು 'ಗ್ಲೈಸರೋಲ'ನ್ನು ಹೊಂದಿರುವ ಕಾಲು ಇಂಚಿನ, ರೆಕ್ಕೆಯಿಲ್ಲದ ಕೀಟಗಳು.

ಅಂಟಾರ್ಕ್ಟಿಕದ ಆಸುಪಾಸಿನ ಸಮುದ್ರದಲ್ಲಿ ಬೇಕಾದಷ್ಟು ಸಮುದ್ರಪಾಚಿಗಳು, ಸ್ಕ್ವಿಡ್

ಮೀನುಗಳು ಹಾಗೂ ಸಮುದ್ರ ಜೇಡಗಳು ಇವೆ; ಈ ಪ್ರದೇಶದ ವಿಶೇಷ ಪ್ರಾಣಿಯೆಂದರೆ ಐದು ಅಡಿ ಉದ್ದದ ವಿಕಾರವಾದ ಮೀನು ಹಾಗೂ ಮಸಕು ಬೂದು ವರ್ಣದ ಹಿಮ ಮೀನು.

ಅಪಾರ ಖನಿಜ ಸಂಪತ್ತು ಅಂಟಾರ್ಕ್ಟಿಕದಲ್ಲಿ ಅಡಗಿದೆ ಎಂದು ನಂಬಲಾಗಿದೆ. ಈಗಾಗಲೇ ವಿಜ್ಞಾನಿಗಳು, ಭೂಗರ್ಭಶಾಸ್ತ್ರಜ್ಞರು, ಉತ್ಪನ್ನ ಪರಿಣತರು, ಪಾಮರ್ ಪರ್ಯಾಯ ದ್ವೀಪದ ಅಥವಾ ಬ್ರಿಟಿಶರು ಗ್ರಹಾಂಲ್ಯಾಂಡ್ ಎಂದು ಕರೆಯುವ ಸುಮಾರು ಏಳುನೂರು ಮೈಲುಗಳ ಉದ್ದಕ್ಕೂ ಇರುವ ನೆಲದಲ್ಲಿ ಪಳೆಯುಳಿಕೆಗಳನ್ನು ಶೋಧಿಸಿ ಪರಿಶೀಲಿಸುತ್ತಿದ್ದಾರೆ.

ಎಸ್ಪೆರಂಜಾದಲ್ಲಿ ಹಡಗು ಲಂಗರು ಹಾಕಿತಷ್ಟೆ. ಹೊಸ ಅನ್ವೇಷಕರೆನ್ನಿಸಿದ ಅವರೆಲ್ಲರಿಗೂ ಅದು ಮೊದಲ 'ಕಾರ್ಯಕ್ಷೇತ್ರ ದಿನ'. ಸಾಂಪ್ರದಾಯಿಕವಾಗಿ ಬೇಸ್ ಲೀಡರ್‌ಗೆ, ಕ್ಯಾಪ್ಟನ್ ಆಲ್ಬರ್ಟೋ ಫರ್ನಾಂಡೀಸ್ ಹಾಗೂ ಮತ್ತವರ ಸಿಬ್ಬಂದಿಗೆ ಮೆಹರ್ ಆದಿಯಾಗಿ ಉಳಿದೆಲ್ಲರೂ ಪರಿಚಯವನ್ನೊಪ್ಪಿಸಿದರು. ಬಳಿಕ ಶ್ರೇಷ್ಠ ಫ್ರೆಂಚ್ ಕಾಗ್ನ್ಯಾಕ್ ಮದ್ಯವನ್ನು ಸೇವಿಸಿದರು. ಆಸುಪಾಸಿನ ಪಠಾರಗಳನ್ನೂ ವೀಕ್ಷಿಸಿ, ಸ್ಥೂಲಪರಿಚಯ ಮಾಡಿಕೊಂಡರು. ಎಸ್ಪೆರಂಜಾ ಅರ್ಜೆಂಟಿನಾದ ಗಡಿ ಕಾವಲು ಕೇಂದ್ರವಾಗಿ ೧೯೫೨ರಲ್ಲಿ ನಿರ್ಮಾಣಗೊಂಡಿತು. ಆದರೆ ಇದರ ಚರಿತ್ರೆ ಮಾತ್ರ ಅದಕ್ಕಿಂತ ಹಿಂದಿನದು. ೧೯೦೧ರಲ್ಲಿ ಸ್ವೀಡನ್ನಿನ ಡಾ. ಒಟ್ಟೋ ನಾರ್ಡನ್‌ಶೀಲ್ಡ್‌ನಿಂದ ನಿರ್ದೇಶಿಸಲ್ಪಟ್ಟ ದಕ್ಷಿಣ ಧ್ರುವ ಶೋಧಕ ತಂಡವೊಂದು ಪ್ರಪ್ರಥಮವಾಗಿ ಎಸ್ಪೆರಂಜಾವನ್ನು ಗುರುತಿಸಿತು. ಹೆಪ್ಪುಗಟ್ಟಿದ್ದ ಮಂಜಿನಿಂದಾಗಿ ಅವರ ಹಡಗು ಮುಂದೆ ಚಲಿಸಲಾಗದ್ದರಿಂದ ಆ ವರ್ಷದ ಚಳಿಗಾಲವನ್ನು ಅವರಿಲ್ಲಿ ಕಳೆಯಬೇಕಾಯಿತು. ಆ ಬಳಿಕ, ೧೯೪೫ ರಲ್ಲಿ ಬ್ರಿಟಿಶರು ಇಲ್ಲಿ ಕಾವಲು ಕೇಂದ್ರವನ್ನಾರಂಭಿಸಿದರು; ಆದರೆ ೧೯೬೪ರಲ್ಲಿ ಅವರು ತಮ್ಮ ಕೇಂದ್ರವನ್ನು ಸನಿಹದ 'ಟ್ರಿನಿಟಿ'ಗೆ ಸ್ಥಳಾಂತರಿಸಿದರು; ೧೯೫೭ರಲ್ಲಿ ಉದ್ಘೋಷಿತವಾದ 'ಭೌಗೋಳಿಕ ವರ್ಷ'ದ ಪರಿಣಾಮವಾಗಿ 'ಅಂಟಾರ್ಕ್ಟಿಕಾ ಒಡಂಬಡಿಕೆ' ಜಾರಿಗೆ ಬಂತು. ಹದಿನಾರು ರಾಷ್ಟ್ರಗಳು ಈ ಒಡಂಬಡಿಕೆಗೆ ಸಹಿ ಮಾಡಿ, ಈ ಪ್ರದೇಶದಲ್ಲಿ ಪರಸ್ಪರರ ಸಹಕಾರದಿಂದ ಸಂಶೋಧನೆ ಕೈಗೊಳ್ಳಲು ಒಪ್ಪಿದವು, ಪರಿಣಾಮವಾಗಿ ಇಲ್ಲೀಗ ಎರಡು ಡಜನ್ನುಗಳಿಗಿಂತ ಹೆಚ್ಚು ಮುಖ್ಯ ಸ್ಥಾವರಗಳು ಕಟ್ಟಲ್ಪಟ್ಟಿವೆ.

ಹಿಮಗಾಡಿಗಳ ಮೂಲಕ ಇಲ್ಲಿಯ ಒಂದು ಸ್ಥಾವರದಿಂದ ಇನ್ನೊಂದು ಸ್ಥಾವರಕ್ಕೆ ತುಸು ಪರಿಶ್ರಮ ವಹಿಸಿ ಸಾಗಬೇಕು. ಮೆಹರ್ ಹಾಗೂ ಮತ್ತೆ ಹನ್ನೆರಡು ಮಂದಿ ಹಿಮನಾಯಿಗಳಿಂದ ಎಳೆಯಲ್ಪಡುವ ಗಾಡಿಗಳನ್ನೇರಿ ಟ್ರಿನಿಟಿಗೆ ಹೋದರು.

ಹಿಮನಾಯಿಗಳುಳ್ಳ ಕೆಲವೇ ಕೇಂದ್ರಗಳಲ್ಲಿ ಎಸ್ಪೆರಂಜಾವೂ ಒಂದು, ಹಿಮನಾಯಿಗಳು ಗ್ರೀನ್‌ಲ್ಯಾಂಡ್ ಹಾಗೂ ಆರ್ಕ್ಟಿಕ್ ಪ್ರದೇಶಗಳಲ್ಲಿ ಅಮೂಲ್ಯವಾದವುಗಳೆಂದು ಪರಿಗಣಿಸಲ್ಪಟ್ಟಿವೆ. ಒಂದು ದಿನ ಬೆಳಗ್ಗೆ ಇಲ್ಲಿ ಹಿಮನಾಯಿಗಳ ಪ್ರದರ್ಶನವನ್ನೇರ್ಪಡಿಸಲಾಗಿತ್ತು. ದೊಡ್ಡದಾದ, ಬಿಳಿ ಜೋಲುಗೂದಲಿನ ಮುದ್ದಾದ ಹನ್ನೆರಡು ಹಿಮನಾಯಿಗಳ ಪ್ರದರ್ಶನವಾಗಿತ್ತದು. ಆಕಾರದಲ್ಲಿ ಅವು ಬಹು ದೊಡ್ಡವಾಗಿದ್ದರೂ ಹಿಮನಾಯಿಗಳು ತುಂಬಾ ವಿಧೇಯವಾದವುಗಳು. ಹಾಗೆಂದು, ಎಚ್ಚರದಪ್ಪಿ ಸನಿಹ ಹೋದರೆ ಕೆರಳಿತು, ಮೈಮೇಲೆ ಜಿಗಿದು ಇದುರಿರುವವರನ್ನು ಸುಲಭವಾಗಿ ಉರುಳಿಸಿಬಿಡುತ್ತವೆ. ಇವು ಬೊಗಳಿದರೆ ಪೆಂಗ್ವಿನ್ ನಾಪತ್ತೆಯಾಗಿಬಿಡುತ್ತವೆ ಅಕಸ್ಮಾತ್ತಾಗಿ ಪೆಂಗ್ವಿನ್ ಪಕ್ಷಿಯ ಮೇಲೆ ನೆಗೆದರೂ ಸಾಕು, ಪೆಂಗ್ವಿನ್ನಿನ ಕತೆ ಮುಗಿದಂತೆಯೇ!

ಹೆಚ್ಚು ಜನಪ್ರಿಯವಾದ ನಾಯಿಗಾಡಿ

'ನ್ಯಾನ್‌ಸೆನ್.' ಇದು ಒಂದೆ ಸಲಕ್ಕೆ ಇಪ್ಪತ್ತು ಜನರನ್ನು ಅವರ ಸಾಮಾನು ಸರಂಜಾಮು ಗಳೊಂದಿಗೆ ಸುಮಾರು ಇಪ್ಪತ್ತು ದಿನಗಳವರೆಗೆ ಎಡೆಬಿಡದೆ ಸಾಗಿಸಬಲ್ಲದು. ಈ ಗಾಡಿಗೆ ಒಂಟಿ ನಾಯಿ ಇಲ್ಲವೇ ಕೆಲವು ಬಾರಿ ಜೋಡಿ ಹಿಮ-ನಾಯಿಗಳನ್ನು ಕಟ್ಟುವುದೂ ಉಂಟು.

ಊಟ ಮುಗಿಸಿದ ತರುವಾಯ ಪಕ್ಷಿಧಾಮ ಅಡಿಲೈ ಕಾಲೋನಿಯನ್ನು ಸಂದರ್ಶಿಸುವ ಏರ್ಪಾಟಾಗಿತ್ತು. ನೂರೈವತ್ತು ವರುಷಗಳ ಹಿಂದಿನ ಜುರಾಸಿಕ್ ಕಾಲದ ಪಳೆಯುಳಿಕೆಗಳನ್ನು ಅನ್ವೇಷಿಸಲು ವೆರ್ಮಂಟ್ ಫ್ಲೋರಾದತ್ತ ಹೊರಟ ಗುಂಪಿನೊಂದಿಗೆ ಮೆಹರ್ ಸೇರಿಕೊಂಡಳು, ಹಾಗಾಗಿ ಅಡಿಲೈ ಕಾಲೋನಿಯ ಸಂದರ್ಶನಕ್ಕೆ ಹೊರಟ ತಂಡವನ್ನು ಸೇರಿಕೊಳ್ಳಲು ಮೆಹರಳಿಗೆ ಸಾಧ್ಯವಾಗಲಿಲ್ಲ.

ಮಾರನೆಯ ದಿನ ಹಡಗು ಎಸ್ಪೆರಂಜಾ ತೀರದಿಂದ ಹೊರಟು ಕಿಂಗ್ ಜಾರ್ಜ್ ದ್ವೀಪದ 'ಪಾಟರ್ಸ್ ಕೋವ್'ನಲ್ಲಿ ಲಂಗರ ಹಾಕಿತು. ಕಿಂಗ್‌ಜಾರ್ಜ್ ದ್ವೀಪ ನಲವತ್ತು ಮೈಲು ಉದ್ದವಾಗಿದೆ; ಹದಿನೈದು ಮೈಲಿ ಅಗಲ-ವಾಗಿದೆ, ಇಲ್ಲಿಯೇ ವಿಶಾಲವಾದ ಕೊಲ್ಲಿ-ಅಡ್ಮಿರಾಲ್ಟಿ–ಇದೆ, ಪಾಟರ್ಸ್ ಕೋವ್ ಅರ್ಜೆಂಟಿನಾದ ಹೊಸ ಕೇಂದ್ರವಾಗಲಿದೆ, ಇಲ್ಲಿ ಇಳಿದ ಮೆಹರ್ ತನ್ನ ಸಂಗಡಿಗರೊಂದಿಗೆ ದಪ್ಪ ಮಂಜಿನ ಮೇಲೆ ಸಾಗುತ್ತಾ ಕಡಿದಾದ ಬೆಟ್ಟ-ವನ್ನೇರಿ, ರಾಕ್ಷಸಾಕಾರದ ಪೆಟ್ರೆಲ್‌ಗಳು ಮರಿ-ಗಳಿಗೆ ಕಾವು ಕೊಡುತ್ತಿರುವ ಅದ್ಭುತ ದೃಶ್ಯ-ವನ್ನು ಕಂಡಳು. ಈ ಬೆಟ್ಟವನ್ನೇರಿದರೆ 'ಥ್ರೀ ಬ್ರದರ್ಸ್' ಎಂದು ಕರೆಯಲಾಗುತ್ತಿ-ರುವ ಅಗ್ನಿಪರ್ವತ ಗೋಚರಿಸುತ್ತದೆ. ಮೆಹರ್ ಆ ದೃಶ್ಯವನ್ನು ಕಣ್ತುಂಬ ನೋಡಿದಳು. ಮರಳಿ ಬಂದ ಮೆಹರ್, ಹಡಗಿನ ಸುತ್ತಲೂ ಸುತ್ತುತ್ತಿದ್ದ ಗೂಡುಡೆನ್ಗ್ವಿನ್‌ಗಳ ಚಿಮ್ಮಂಗಿಲವನ್ನು ಕ್ಯಾಮರಾದಲ್ಲಿ ಸೆರೆಹಿಡಿದಳು. ಲಂಗರು ತೆಗೆದು ಪುನಃ ಹಡಗು ಹನ್ನೆರಡು ಮೈಲು ದೂರದ ಒಳ ಪ್ರದೇಶದತ್ತ ಹೊರಟು ಅದೇ ದ್ವೀಪದ ಪಶ್ಚಿಮ ತೀರ ಫಿಲ್ಡೆಸ್ ಪರ್ಯಾಯ ದ್ವೀಪ-ದತ್ತ ಸಾಗಿತು.

ಫಿಲ್ಡೆಸ್ ಪರ್ಯಾಯ ದ್ವೀಪದಲ್ಲಿ ನೂರಾ ಅರುವತ್ತು ಗಜಗಳ ಅಂತರದಲ್ಲಿ ಚಿಲಿ ಹಾಗೂ ರಶಿಯದ ಸಂಶೋಧನ ಕೇಂದ್ರಗಳಿವೆ. ವಿಚಿತ್ರ-ವೆಂದರೆ, ತಮ್ಮ ದೇಶದ ಸಮಯವನ್ನೆ ಈ ಎರಡೂ ರಾಷ್ಟ್ರಗಳ ಕೇಂದ್ರಗಳು ಅನುಸರಿಸು-ತ್ತಿವೆ. ಆದ್ದರಿಂದ ಆಗ ರಶಿಯಾ ಕೇಂದ್ರದಲ್ಲಿ ಮಧ್ಯಾಹ್ನ ಮೂರು ಗಂಟೆಯಾಗಿದ್ದರೆ ಚಿಲಿ ಕೇಂದ್ರದಲ್ಲಿ ಬೆಳಗಿನ ಎರಡು ಗಂಟೆಯಾಗಿತ್ತು. ಇಲ್ಲಿ ರಶಿಯನ್ನರು ಅಂಗಡಿಗಳನ್ನು ತೆರೆದಿದ್ದಾರೆ. ಚಿಲಿ ಮಕ್ಕಳು ಅಂಚೆ ಚೀಟಿಗಳ ವಿನಿಮಯದಲ್ಲಿ ನಿರತರಾಗಿದ್ದಾರೆ.

"ಜನವರಿ ೧೧, ೧೯೭೭ ಮಂಗಳವಾರ, ಪ್ರವಾಸದಲ್ಲಿಯೇ ನನಗೆ ಅತಿ ಪ್ರೀತಿಯ ದಿನ. ಏಕೆಂದರೆ 'ಡಿಸೆಪ್ಶನ್ ದ್ವೀಪ'ದ ಅನುಪಮವಾದ ದೃಶ್ಯಗಳನ್ನು ನಾನು ಕಂಡದ್ದು ಆ ದಿನವೆ." ಎನ್ನುತ್ತಾ ಮೆಹರ್ ಆ ಅದ್ಭುತ ದೃಶ್ಯವನ್ನು ಬಣ್ಣಿಸುತ್ತಾಳೆ.

೬೩°ದಕ್ಷಿಣ ಅಕ್ಷಾಂಶದಲ್ಲಿರುವ, ಒಂಭತ್ತು ಮೈಲುಗಳ ವ್ಯಾಸದ 'ವಾಲ್ಕ್ಯಾನೋ ರಿಂಗ್' ಮೂರು ಬಾರಿ ಬಾಯಿ ತೆರೆದು ತನ್ನ ಪ್ರತಾಪ ತೋರಿದೆ, (೧೯೬೭, ೧೯೬೯ ಮತ್ತು ೧೯೭೦ ರಲ್ಲಿ) ಮೂರನೆಯ ಬಾರಿ ತನ್ನ ಹತ್ತಿರದ ಎಲ್ಲ-ವನ್ನೂ ಸ್ಫೋಟವಾಗಿ, ಪ್ರದೇಶವನ್ನೆಲ್ಲಾ ಕಪ್ಪು ಲಾವಾದ ಮತ್ತು ಇಜ್ಜಲಿನ ಹಚ್ಚಡದಿಂದ ಮುಚ್ಚಿಬಿಟ್ಟಿತು! ಮೊದಲು ನಾವೇ ದೇಶದ-ವರು ಇಲ್ಲಿ ಸಂಶೋಧನಾ ಕೇಂದ್ರವನ್ನಾರಂಭಿ-ಸಿದ್ದರು. ತರುವಾಯ ಮೂರು ರಾಷ್ಟ್ರಗಳು ಇಲ್ಲಿ ತಮ್ಮ ಸ್ಥಾವರಗಳನ್ನು ಸ್ಥಾಪಿಸಿದವು. ಆದರೆ, ಈ ಆಸ್ಫೋಟನೆಯ ಕಾರಣದಿಂದಾಗಿ ಅವೆಲ್ಲ ಇಲ್ಲಿಂದ ತಮ್ಮ ಕೇಂದ್ರಗಳನ್ನು ಬೇರೆಡೆ ವರ್ಗಾಯಿಸಿದವು.

ಮೂರನೆಯ ದಿನ ಪ್ರಶಾಂತವಾದ ವಾತಾ-



ಗೋದ್ರೆಜ್‌ನ
ಹೊಸ
ಶಕ್ತಿಶಾಲೀ
ಕೀ
ಕೀ ಡಿಟರ್ಜೆಂಟ್
ವಾಶಿಂಗ್ ಪೌಡರ್
ಅಧಿಕ ಕಾರ್ಯಶೀಲವಾದ
ಉಜ್ವಲಗೊಳಿಸುವ
ಘಟಕ ಸಹಿತ
New Super Action
KEY
GODREJ SOAPS LIMITED
30%
ಅಧಿಕ
ಸ್ವಚ್ಛಕಾರಕ—ಬಟ್ಟೆಗಳನ್ನು
ಅಧಿಕ ಬೆಳ್ಳಗೆ, ಹಾಗೂ
ಅಧಿಕ ಉಜ್ವಲಗೊಳಿಸಲು
ಆದರೂ ಇತರ ಪ್ರಮುಖ
ಡಿಟರ್ಜೆಂಟ್‌ಗಳಿಗಿಂತ 30% ಕಡಿಮೆ ಬೆಲೆ
ಗೋದ್ರೆಜ್
ತಯಾರಿಕೆ
CHAITRA-G-78 KN

ವರಣವಿತ್ತು. ಚಳಿಯು ಸಹ ಅಷ್ಟೇನೂ ಹೇಳಿಕೊಳ್ಳುವಂತಿರಲಿಲ್ಲ. ಹಡಗು ಡಿಸೆಪ್ಶನ್ ದ್ವೀಪದಿಂದ ಹೊರಟು ಬೇ ಆಫ್ ವೇಲ್ಸ್‌ನತ್ತ ಸಾಗಿ, ಅಲ್ಲಿ ಲಂಗರು ಹಾಕಿತು. ಮುಂಜಾನೆಯ ಸಮಯವನ್ನೆಲ್ಲ ಪಿಂಟಾಡೋ ಹಾಗೂ ಪೆಟ್ರೆಲ್ಸ್‌ಗಳ ಬೇಟೆಯಲ್ಲಿ ಕಳೆಯಿತು. ಊಟದ ಬಳಿಕ ದ್ವೀಪದ ಮಧ್ಯ ಪ್ರದೇಶವಾದ 'ಟೆಲಿಫೋನ್ ಬೇ'ಯತ್ತ ಮೆಹರ್ ಹಾಗೂ ಆವಳ ಸಂಗಡಿಗರು ಹೊರಟರು. ಅಲ್ಲಿ ಮೂರು ಅಗ್ನಿಪರ್ವತಗಳನ್ನವರು ಕಂಡರು. ಈ ಅಗ್ನಿಕುಂಡಗಳ ಎತ್ತರ ಸಾವಿರ ಅಡಿಗಳಷ್ಟು! ಇಲ್ಲಿಯ ಒಂದು ಅಗ್ನಿಕುಂಡ ಶಂಕುವಿನಾಕೃತಿಯದಿದ್ದು ಹಿಮನೀಲಿಯ ಮೇಲ್ಪದರ ಅದಕ್ಕಿದೆ. ಗಂಧಕದ ವಾಸನೆಯ ಹೊಗೆಯನ್ನು ಇದು ಉಗುಳುತ್ತಿದೆ. ಇವಿನ್ನೂ ಜೀವಂತ ಜ್ವಾಲಾಮುಖಿಗಳು! ಈ ಕುಂಡದಿಂದ ಬಿಸಿ ನೀರಿನ ಆವಿಯೂ ಆಗಾಗ ಹೊರಚಿಮ್ಮುತ್ತದೆ; ಬಿಸಿ ನೀರು ತಗ್ಗು ಪ್ರದೇಶಕ್ಕೆ ಹರಿದುಬರುತ್ತದೆ. ಧೈರ್ಯಶಾಲಿಗಳಾದ ಕೆಲವರು ಆ ಬಿಸಿ ಉಗಿ ನೀರಿನಲ್ಲಿ ಈಜುವ ಬಯಕೆಯನ್ನೂ ವ್ಯಕ್ತಪಡಿಸುತ್ತಾರೆ.

ಮನಸ್ಸಿಲ್ಲದ ಮನಸ್ಸಿನಿಂದ ಡಿಸೆಪ್ಶನ್ ದ್ವೀಪಕ್ಕೆ ವಿದಾಯ ಹೇಳಿದ ಮೆಹರ್, ೧೫೧ ಮೈಲು ದೂರದಲ್ಲಿದ್ದ ಅನ್ವರ್ಸ್ ದ್ವೀಪದತ್ತ ಪ್ರಯಾಣ ಬೆಳೆಸಿದಳು.

ಆಕೆ ಹೇಳುವಹಾಗೆ, "ಬೆಳಗಿನ ಏಳು ಗಂಟೆಯ ಹೊತ್ತಿಗೆ ನಾವು ಆಕರ್ಷಕ ಹಾಗೂ ಕಿರಿದಾದ ನ್ಯೂ ಮೆಯೆರ್ ಕಾಲುವೆಯ ಮುಖಾಂತರ ಮುಂದುವರಿದೆವು. ಬೀಸುತ್ತಿರುವ ಚಳಿ ಗಾಳಿಯಲ್ಲಿ ಹೊರಗೆ ಅವ್ಯಾಹತವಾಗಿ ಬದಲಾಗುತ್ತಿರುವ ರಮಣೀಯ ದೃಶ್ಯವನ್ನು ಸವಿಯುತ್ತಾ ಸಾಗಿದೆವು. ಗಂಟೋ ಪೆಂಗ್ವಿನ್ನುಗಳು, ಕಲ್ಲುಗಳ ಮೇಲೆ ಕುಳಿತ ನೀಲಿ ಕಣ್ಣುಗಳ ಶೇಸ್‌ಗಳನ್ನು ಕಾಣುತ್ತಾ ಸಾಗುತ್ತಿದ್ದೆವು. ದಡದೆಡೆಗಳಲ್ಲಿ ತಿಮಿಂಗಿಲಗಳ ಎಲುಬುಗಳನ್ನು ಕಂಡು ಹೇಸಿಕೆಯ ಜೊತೆಗೆ ಭೀತಿಯೂ ಉತ್ಪನ್ನವಾಯಿತು."

ಪೆಂಗ್ವಿನ್ನುಗಳು ದಕ್ಷಿಣ ಧ್ರುವ ಪ್ರದೇಶದ ವಾತಾವರಣಕ್ಕೆ ಹೊಂದಿಕೊಂಡು ಜೀವಿಸುವ ಹಾರಲಾರದ ಸಮುದ್ರ ಪಕ್ಷಿಗಳು. ಸಮಭಾಜಕ ವೃತ್ತದ ಸಮೀಪವಿರುವ ಗಲಪಾಗೋಸ' ದ್ವೀಪದಿಂದ ಅಂಟಾರ್ಕ್ಟಿಕ್ ಮುಖ್ಯ ಭೂಪ್ರದೇಶದ ವರೆವಿಗೂ ಇರುವ ವಿಸ್ತಾರವಾದ ಪ್ರದೇಶದಲ್ಲಿ ಇವು ಕಾಣಸುತ್ತವೆ. ಪೆಂಗ್ವಿನ್ನುಗಳಲ್ಲಿ ಹದಿನೇಳು ಪ್ರಭೇದಗಳಿವೆ. ಮೆಹರ್ ಇದರಲ್ಲಿ ಆರು ಪ್ರಭೇದಗಳನ್ನು ಗುರುತಿಸಿಕೊಂಡಿದ್ದಾಳೆ: ಟ್ರಿಸ್ಟಾನ್‌ನ ರಾಕ್ ಹಾಪರ್, ಹಳದಿಕೂದಲಿನ ಮಕರೋನಿ, ಮುಗ್ಧ ಚಿನ್‌ಸ್ಟ್ರಾಪ್, ನಾಚಿಕೆಯ ಗೆಂಟು ಮತ್ತು ಅಡೆಲಿ. ಹಾಗೂ ಎಲ್ಲಕ್ಕಿಂತ ಎತ್ತರವಾಗಿರುವ 'ಕಿಂಗ್'.

ಪೆಂಗ್ವಿನ್ನಗಳು ಏಕಪತ್ನೀವ್ರತಸ್ಥವಾದ ಪಕ್ಷಿಗಳು. ಜೊತೆಗೆ ತುಂಬಾ ಜಗಳಗಂಟ ಸ್ವಭಾವದವು. "ನಾನು ಯಾವಾಗಲೂ ಇವಕ್ಕಿಂತ ಹೆಚ್ಚಿನ ಜಗಳಗಂಟ ಪ್ರಾಣಿಗಳನ್ನು ನೋಡಿಯೇ ಇಲ್ಲ," ಎನ್ನುತ್ತಾಳೆ ಮೆಹರ್. ಆದರೂ ಅವು ಕೆಲವು ಒಳ್ಳೆಯ ಅಭ್ಯಾಸವನ್ನಿರಿಸಿಕೊಂಡಿವೆ: ಕೆಲವು ಮರಿಗಳ ತಂದೆತಾಯಿಗಳು ಸಮುದ್ರದಲ್ಲಿದ್ದಾಗ ಉಳಿದವು ಶಿಶುವಿಹಾರವನ್ನು ಸ್ಥಾಪಿಸಿ, ಮರಿಗಳ ಪಾಲನೆ, ಪೋಷಣೆಗಳನ್ನು ನೋಡಿಕೊಳ್ಳುತ್ತಿರುತ್ತವೆ!

ಪೆಂಗ್ವಿನ್ನುಗಳಿರುವಲ್ಲೆಲ್ಲ ಸಾಮಾನ್ಯವಾಗಿ 'ಸ್ಕೂಅಸ್' ಹದ್ದುಗಳಿರುತ್ತವೆ. ಕಂದುಬಣ್ಣದ ಪುಕ್ಕಗಳ ಇವು ಪೆಂಗ್ವಿನ್ನುಗಳ ಮೇಲೆ ರಭಸದಿಂದ ಎರಗಿ, ಅವುಗಳೊಡನೆ ಹೋರಾಡಿ, ನಾಶಪಡಿಸುತ್ತವೆ.

ಅಂಟಾರ್ಕ್ಟಿಕದ ಇತರ ಸಮುದ್ರ ಪಕ್ಷಿಗಳೆಂದರೆ ಗಾರ್ನೆಟ್ಸ್, ಪ್ರಿಯನ್ಸ್, ಶೀರ್‌ವಾಟರ್ಸ್, ಎಲ್ಸನ್ ಸ್ಟಾರ್ಮ್ ಪೆಟ್ರೆಲ್ಸ್, ಡೈವಿಂಗ್ ಪೆಟ್ರಲ್ಸ್, ಶೀತ್‌ಬಿಲ್ಸ್ ಇತ್ಯಾದಿ.

ಅಮೇರಿಕದ ಅಂಕಿತದಲ್ಲಿರುವ 'ಪಾಮರ್'ಗೆ ಹಡಗು ಬಂತು. ಅಲ್ಲಿ ಹೊಸ ಹೊಸ ಮನೆಗಳನ್ನು,



ಬೆನ್ನು ನೋವೇ?
ಅಯೊಡೆಕ್ಸ್
ಗುಣಪಡಿಸುವ
ಮುಲಾಮು ಹಚ್ಚಿರಿ
ಬೇರೆ ಮುಲಾಮುಗಳು ನೋವನ್ನು ಉಪಶಮನಗೊಳಿಸಬಹುದು. ಆದರೆ ಅಯೊಡೆಕ್ಸ್ ಉಪಶಮನಗೊಳಿಸುತ್ತಲೇ ನೋವನ್ನು ಗುಣಪಡಿಸುತ್ತದೆ. ಏಕೆಂದರೆ ಅದರಲ್ಲಿ ಅಯೋಡಿನ್ ಇದೆ.
ಸ್ನಾಯು ಮತ್ತು ಸಂಧು ನೋವುಗಳಿಗೆ ಏಕಮಾತ್ರ ಮುಲಾಮು—ಅಯೊಡೆಕ್ಸ್
IODINE OINTMENT
IODEX
cum Methyl Salicylate
3273
ಅಯೊಡೆಕ್ಸ್ ಹಚ್ಚಿರಿ, ಮತ್ತೆ ಓಡಾಡಿರಿ.
ಲಿಂಟಾಸ್ IODEX.1-73 KN

ಕಟ್ಟಲಾಗುತ್ತಿದೆ. ಅಂಗಡಿ ಮಳಿಗೆ, ಆಸ್ಪತ್ರೆ, ಕಿರಾಣಿ ಅಂಗಡಿ, ಬಾರ್, ಗ್ರಂಥಾಲಯ ಮುಂತಾದ ಆಧುನಿಕ ಸೌಲಭ್ಯಗಳೆಲ್ಲ ಇರುವ ಆ ಪ್ರದೇಶ ಅಂಟಾರ್ಕ್ಟಿಕದ ಮುಂದುವರಿದ ಭೂಭಾಗ.

ಪಾಮರ್ ದಾಟಿದ ಹಡಗು ಅದೇ ಸಂಜೆ ೬೬.೩೩°ದಕ್ಷಿಣ ಅಕ್ಷಾಂಶ ಮತ್ತು ೬೭.೩೩° ಪಶ್ಚಿಮ ರೇಖಾಂಶದಲ್ಲಿ ಅಂಟಾರ್ಕ್ಟಿಕ ರೇಖೆಯನ್ನು ದಾಟಿತು. ಗಾಳಿ ಜೋರಾಗಿತ್ತು ಹೊರನೋಟ ತೀರ ಅಸ್ಪಷ್ಟವಾಗಿತ್ತು. ಮಾರ್ಥಾ ಕೊಲ್ಲಿಯ ಮೂಲಕ ಹಾಯ್ದು ಹಡಗು ಬಿಸ್ಕೋವ್ ದ್ವೀಪದತ್ತ ಸಾಗಿತ್ತು.

ಅಂದಿನ ಸಂಜೆ ಒಂದು ಪುಟ್ಟ ಔಪಚಾರಿಕ ಸಭೆ: ಜನೆವರಿಯಂಥ ವೇಳೆಯಲ್ಲಿ, ಯಾವ ಹಿಮ ಸಮಸ್ಯೆಗಳಿಗೂ ನಿಲುಕಿಕೊಳ್ಳದೆ ದಕ್ಷಿಣ ಧ್ರುವದಲ್ಲಿ ಯಾನ ಮಾಡಿದ ಲಿಂಡ್‌ಬ್ಲಾಡ್‌ನ ಹಾಗೂ ಹಾಗೂ ಆದರ ಸಾಹಸೀ ಪಯಣಿಗರನ್ನು ಶ್ಲಾಘಿಸಿ ಅರ್ಹತಾಪತ್ರ ವಿತರಣಾ ಸಮಾರಂಭ ಅದು. ಮೆಹರಳ ಪಾಲಿಗಂತೂ ಆ ಸಭೆ ತುಂಬಾ ಸಂತೋಷವನ್ನುಂಟುಮಾಡಿತು, ಮರುದಿನ ಲಿಮೈಯರ್ ಕಾಲುವೆಯ ಮೂಲಕ ಹಡಗು ಪಯಣ ಮುಂದುವರಿಸಿತು.

ಅರ್ಜೆಂಟಿನಾಕ್ಕೆ ಸೇರಿದ್ದ 'ಅಲ್ಮರೆಂಟೇ ಟ್ರಾನ್' ಕೇಂದ್ರ ಸಂದರ್ಶನವೇ ಈ ಸಾಹಸೀಯಾತ್ರೆಯ ಕೊನೆಯ ಹಂತ. ಅಲ್ಲಿಗೆ ತಲುಪುವಾಗ ಯಾವ ವಿಧವಾದ ನೈಸರ್ಗಿಕ ಅಡಚಣೆಯೂ ಲಿಂಡ್‌ಬ್ಲಾಡ್‌ಗೆ ಒದಗಿಬರಲಿಲ್ಲ. ತೇಲುತ್ತಿರುವ ನೀರ್ಗಲ್ಲ ಬಂಡೆ, ಮಂಜಿನ ತುಣುಕುಗಳನ್ನು ದಬ್ಬುತ್ತಾ, ಸರಿಸುತ್ತಾ, ಕೆಲವೊಮ್ಮೆ ಜೊತೆಜೊತೆಯಾಗಿ ಲಿಂಡ್‌ಬ್ಲ್ಯಾಡ್ ಅಲ್ಮರೆಂಟೇ ಟ್ರಾನ್ ತಲುಪಿತು.

'ಅಲ್ಮರೆಂಟಾ ಟ್ರಾನ್' ನಲ್ಲಿ ಕಳೆದ ದಿನವೇ ಅವರ ಆ ಪ್ರವಾಸದ ಕೊನೆಯ ದಿನ. ಹಡಗು ಮರಳಿ ತನ್ನ ಯಾನ ಆರಂಭಿಸಿತು.

ಕೇಪ್ ಹಾರ್ನ್ ಸುತ್ತುವರಿದು, ಬೀಗಲ್ ಚಾನಲ್ ಮೂಲಕ ಹಾದು ಉಶೂಯಿಯಾಕ್ಕೆ ಹಡಗು ಪಯಣಿಸಿತು.

ಮೆಹರ್ ಅಂಟಾರ್ಕ್ಟಿಕದ ಬಗ್ಗೆ ಹೀಗೆ ಬರೆಯುತ್ತಾ ತನ್ನ ಪ್ರವಾಸ ಕಥನವನ್ನು ಮುಕ್ತಾಯಗೊಳಿಸುತ್ತಾಳೆ.

"ಅಂಟಾರ್ಕ್ಟಿಕದ ಅನುಪಮ ಸೌಂದರ್ಯ ಪರ್ಯಟಕರ ಮನಸ್ಸಿನ ಮೇಲೆ ಅಳಿಯಲಾರದ ಮುದ್ರೆಯನ್ನೊತ್ತಿದೆ. ಜನನಿಬಿಡ ಪ್ರದೇಶಗಳಿಂದ ಅತಿ ದೂರವಿರುವ ಧ್ರುವ ಪ್ರದೇಶದ ಈ ಬರಡು ಭೂಮಿಯ ಆಹ್ವಾನವನ್ನು ಮಾನವ ಎಂದೋ ಅಂಗೀಕರಿಸಿದ್ದಾನೆ. ಅದರ ಅಭೇದ್ಯ ಗಡಿಯನ್ನು ಅತಿಕ್ರಮಿಸಿ ಅಲ್ಲಿ ಹುದುಗಿಕೊಂಡಿರುವ ರಹಸ್ಯಗಳನ್ನರಿಯಲು ಹವಣಿಸಿದ್ದಾನೆ. ನಮ್ಮ ಪೂರ್ವಜರಲ್ಲಿ ಸಾಹಸಿಕರಾದವರು ಬಹು ಹಿಂದೆಯೇ ಈ ಕಾರ್ಯಕ್ಕೆ ಕೈಹಾಕಿದ್ದರು. ನಮ್ಮ ಕಾಲದವರೂ ಈ ಪರಂಪರೆಯನ್ನು ಉಳಿಸಿಕೊಂಡು ಬಾರದೆ ಇರಲಿಲ್ಲ. ಇಂಥವರ ಸಾಲಿಗೆ ಸೇರಿದವರು ನಾವು, ಧ್ರುವಪ್ರದೇಶದ ಆಕರ್ಷಣೆಯ ಸೆಳೆತಕ್ಕೊಳಗಾಗಿ ಪೃಥ್ವಿಯ ಆ ತುದಿಯನ್ನು ತಲುಪಿದಾಗ ಪುನರುತ್ಥಾನ ಪ್ರಾರಂಭವಾದ ಹಾಗೆ ಅನಿಸದಿರಲಿಲ್ಲ." ✡

Printed & published by P. S. Bhat for the Jayakarnataka News Printers Private Ltd. at the Samyukta Karnataka Press, Koppikar Road, Hubli. 580020- Rep: Bombay: V. Satyamurthy Phone: 522412; Calcutta: H. Muzamdar 46-4233; K. A. Madras: Subramaniam Phone: 611326, New Delhi: P. R. Chopra Phone: 224130.



ಒಂದು ಮಾತು ಹೇಳ್ತೇನೆ
ಕೇಳಿ—ನಮ್ಮ ಕಂಪನಿಗೆ
ಉಳಿತಾಯ ಮಾಡಿಸಿದೆ;
"ಏನು" ಅಂತೀರಾ—
ಇಮಲ್ಶನ್ ಪೇಂಟ್‌ನಿಂದಾಗಿ
20% ಉಳಿತಾಯ—
"ಅದು ಹೇಗೆ"
ಅಂತೀರಾ—
ಸೂಪರ್ ಡೆಕೋಪ್ಲಾಸ್ಟ್—
ಉತ್ತಮ ಇಮಲ್ಶನ್ ಫಿನಿಶ್
ತರುವ ಜಾಣ ಉಪಾಯ.
"ಆಫೀಸಿನಲ್ಲಿ ಪೇಂಟ್‌ನ ವಿಷಯ ಮಾತು ಹೊರಟಿತ್ತು.
ಆಗ ಇಮಲ್ಶನ್ ಪೇಂಟೇ ಆಗಬೇಕು ಎಂದು ನಾನು ಪಟ್ಟು ಹಿಡಿದೆ.
ಕಂಡಾಪಟ್ಟೆ ಖರ್ಚಾಗುತ್ತದೆ, ಅದು ಬೇಡ ಎಂದರು
ಸಹೋದ್ಯೋಗಿಗಳು. ನಾನು ಸುಮ್ಮನಿರಲಿಲ್ಲ. ಕಾಗದ ಪೆನ್ಸಿಲ್
ತೆಗೆದುಕೊಂಡು, ಸೂಪರ್ ಡೆಕೋಪ್ಲಾಸ್ಟ್‌ನ ಬೆಲೆ, ನಮ್ಮ ಆಫೀಸಿನ
ವಿಸ್ತಾರ— ಎಲ್ಲಾ ಲೆಕ್ಕ ಮಾಡಿ 20% ಉಳಿತಾಯ ತೋರಿಸಿದೆ.
ಆಗ ಎಲ್ಲರೂ ಒಪ್ಪಿದರು. ನನ್ನ ಮಾತು ಕೇಳಿ ನೀವು ಸುಮ್ಮನೆ ಕೂಡಬೇಡಿ.
ಉಪಯೋಗಿಸಿ ನೋಡಿರಿ. ಆಗ ಒಂದು ಮಾತು ನೀವು ಒಪ್ಪುವಿರಿ.
ಸೂಪರ್ ಡೆಕೋಪ್ಲಾಸ್ಟ್ ವಿಷಯದಲ್ಲಿ ನಿಮ್ಮ ಲೆಕ್ಕ ತಪ್ಪುವುದೇ ಇಲ್ಲ."
asian paints
SUPER DECOPLAST
ಏಶಿಯನ್ ಪೇಂಟ್ಸ್
ಸೂಪರ್
ಡೆಕೋಪ್ಲಾಸ್ಟ್

Registered with the Registrar of Newspapers for India under No. 3633/5

